ಮನುಷ್ಯ ಜಾತಿ
ತಾನೊಂದೆ ವಲಂ

ಕನ್ನಡ ನಾಡಿನ ಚರಿತ್ರೆ

ಭಾಗ-ಎರಡು

ಡಾ. ಎಸ್. ಸಿ. ನಂದೀಮಠ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಕನ್ನಡ ನಾಡಿನ ಚರಿತ್ರೆ

ಕರ್ನಾಟಕದ ಧರ್ಮಗಳು

(ಎರಡನೆಯ ಭಾಗ)

ಡಾ. ಎಸ್.ಸಿ. ನಂದೀಮಠ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೧೮

KANNADA NAADINA CHARITRE - Karnatakada Dharmagalu
History of Kannada Nadu - Religions of Karnataka by Dr. S.C. Nandimatha
and published by **Kannada Sahitya Parishattu,** Pampa Mahakavi Road,
Chamarajapete, Bengaluru - 560018 Pages : iv + 196 Price : 100=00; **2015**

ಮುದ್ರಣದ ವರ್ಷ : ೨೦೧೫

ಪ್ರತಿಗಳು : ೧೦೦೦
ಬೆಲೆ : ಒಂದು ನೂರು ರೂಪಾಯಿಗಳು

ಮುಖಪುಟ ವಿನ್ಯಾಸ : ಫ್ಲವರ್ ಗ್ರಾಫಿಕ್

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಕಾಶನೋದ್ಯಮ ಇಂದು ಹುಲುಸಾಗಿ ಬೆಳೆದಿದೆ. ವರ್ಷಕ್ಕೆ ಪ್ರಥಮಾವೃತ್ತಿಯ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ. ಅವಲ್ಲದೆ ಸಹಸ್ರಾರು ಮರುಮುದ್ರಣಗಳು ಹಾಗೂ ಲೆಕ್ಕಕ್ಕೆ ಬಾರದ ಇತರ ಸಾವಿರಾರು ಪುಸ್ತಕಗಳು ಪ್ರಕಟಣೆಯಾಗುತ್ತಿವೆ. ಈ ಉದ್ಯಮಕ್ಕೆ ಸಾರ್ವಜನಿಕ ಕ್ಷೇತ್ರದ ಕೊಡುಗೆಯೂ ಕಡಿಮೆಯಲ್ಲ. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು, ವಿವಿಧ ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ಸಾಹಿತ್ಯ ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳು ನಿರಂತರವಾಗಿ ಪುಸ್ತಕಗಳನ್ನು ಪ್ರಕಟಿಸುತ್ತಲಿವೆ. ಖಾಸಗಿ ಪ್ರಕಾಶನ ಸಂಸ್ಥೆಗಳಂತೂ ಪೈಪೋಟಿಯಿಂದಲೇ ಪುಸ್ತಕ ಪ್ರಕಾಶನದಲ್ಲಿ ತೊಡಗಿವೆ.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವದ ಹೊಸ್ತಿಲಲ್ಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಅಕ್ಷರ ಸೇವೆ ಮಾಡುತ್ತಿದ್ದೇವೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಗಿದೆ. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದು ಅನಿವಾರ್ಯವಾಗಿದೆ.

ಓದುಗರಿಂದ ಬೇಡಿಕೆ ಇರುವ ದೃಷ್ಟಿಯಿಂದ ಡಾ. ಎಸ್.ಸಿ. ನಂದೀಮಠ ಅವರ 'ಕನ್ನಡ ನಾಡಿನ ಚರಿತ್ರೆ' ಎರಡನೆಯ ಭಾಗವನ್ನು ಪುನರ್ ಮುದ್ರಿಸಲಾಗುತ್ತಿದೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೧೭-೦೪-೨೦೧೫

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಕರ್ನಾಟಕದ ಧರ್ಮಗಳು

(ಡಾ॥ ಎಸ್.ಸಿ. ನಂದಿಮಠ, ಎಂ.ಎ., ಪಿಎಚ್.ಡಿ., ಅವರಿಂದ)

ಅತಿ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಅನೇಕ ಧರ್ಮಗಳು ಮನೆಮಾಡಿಕೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳ ಚರಿತ್ರೆಯನ್ನು ಅರಿತುಕೊಳ್ಳುವುದೇ ಈ ಲೇಖನದ ಧ್ಯೇಯ. ಜಗತ್ತಿನಲ್ಲಿ ಈಗ ಪ್ರಚಾರದಲ್ಲಿರುವ ಮಹತ್ತ್ವದ ಧರ್ಮಗಳಲ್ಲಿ ಹಿಂದೂ, ಜೈನ, ಕ್ರೈಸ್ತ, ಇಸ್ಲಾಮ್ ಧರ್ಮಗಳು ಕರ್ನಾಟಕದಲ್ಲಿ ಪ್ರಚಾರದಲ್ಲಿರುವುವು. ಬೌದ್ಧಧರ್ಮ ಒಂದು ಕಾಲದಲ್ಲಿ ಸಾವಿರಾರು ವರ್ಷ ಇಲ್ಲಿ ನೆಲೆಸಿತ್ತು. ಕರ್ನಾಟಕದ ಧಾರ್ಮಿಕ ಇತಿಹಾಸವನ್ನು ಸಂಕಲಿಸುವವನು ಜಗತ್ತಿನೊಳಗಿನ ಮುಖ್ಯಧರ್ಮಗಳ ಇತಿಹಾಸವನ್ನು ಸಂಕಲಿಸಿದಂತಾಗುವುದೆಂದರೆ ಅತಿಶಯೋಕ್ತಿಯಾಗಲಾರದು. ಮೇಲೆ ವಿವರಿಸಿದ ಧರ್ಮಗಳಲ್ಲಿ ಒಂದೊಂದನ್ನು ಕ್ರಮವಾಗಿ ನಿರೀಕ್ಷಿಸುವ.

ಹಿಂದೂಧರ್ಮ

ಹಿಂದೂಸ್ಥಾನದಲ್ಲಿರುವ ಬಹುಸಂಖ್ಯಾತರು ಹಿಂದೂಧರ್ಮದ ಅನುಯಾಯಿಗಳು. ಹಿಂದೂ ಶಬ್ದ ಸಿಂಧು ಶಬ್ದದ ಅಪಭ್ರಂಶ. ಹಿಂದೂಸ್ಥಾನದ ವಾಯುವ್ಯ ದಿಕ್ಕಿನಿಂದ ಒಳನುಗ್ಗಿದ ಪರಕೀಯರು ಮೊದಲು ಸಿಂಧು ಮೊದಲಾದ ನದಿಗಳನ್ನು ದಾಟಬೇಕಾಯಿತು. ಆದುದರಿಂದ ಈ ದೇಶಕ್ಕೆ ಹಿಂದೂದೇಶವೆಂದು ಹೆಸರುಂಟಾಯಿತು. ಋಗ್ವೇದ ಸಂಹಿತೆಯಲ್ಲಿ ಸಿಂಧು ಶಬ್ದ ನದೀವಾಚಕವಿರುತ್ತದೆ.* ಬರಬರುತ್ತಾ ಅದನ್ನು ಬಲುದೊಡ್ಡದಾದ ಸಿಂಧೂನದಿಯ ಸಂಬಂಧದಲ್ಲಿ ಮಾತ್ರ ಉಪಯೋಗಿಸ ಹತ್ತಿದರು. ಸಾವಿರಾರು ವರ್ಷಗಳಿಂದ ನಮ್ಮ ಈ ದೇಶದ ಹೆಬ್ಬಾಗಿಲಿನಲ್ಲಿದ್ದುಕೊಂಡು ಪರಕೀಯರ ಧಾಳಿಗಳಿಂದ ನಮ್ಮನ್ನು ರಕ್ಷಿಸಲು ಕಾವಲು ಮಾಡುತ್ತಿರುವ ಸಿಂಧುವಿಗೂ ಕೂಡಾ ಪರಾಕ್ರಮಣವನ್ನು ತಡೆದು ನಿಲ್ಲಿಸುವುದಾಗಲಿಲ್ಲ. ಕ್ರಿ.ಪೂ. ನಾಲ್ಕನೆಯ ಶತಮಾನದಿಂದ

---

* ಋಗ್ವೇದ ಸಂಹಿತೆ : ಮಂಡಲ ೧೦; ಸೂ. ೭೫

ಹಿಂದೂಸ್ಥಾನವನ್ನು ಗ್ರೀಕರೂ, ಸಿಥಿಯನ್ನರೂ, ಪಾರ್ಥಿಯನ್ನರೂ, ಕುಶಾನರೂ, ಹೂಣರೂ, ಮುಸಲ್ಮಾನರೂ ಒಳನುಗ್ಗಿ ತಮ್ಮ ರಾಜ್ಯಸತ್ತೆಯನ್ನು ಇಲ್ಲಿ ಸ್ಥಾಪಿಸಿದರು.

ಅತಿ ಪ್ರಾಚೀನ ಕಾಲದಿಂದ ಇಲ್ಲಿಯ ನಿವಾಸಿಗಳೂ ಈ ದೇಶದ ಸೀಮೆಯನ್ನು ದಾಟಿ ಬಹುದೂರದವರೆಗೆ ಹೋಗಿ ಭಾರತ ಸಂಸ್ಕೃತಿಯನ್ನು ನೆಲೆಗೊಳಿಸಿದರು. ಹಿಂದೂದೇಶದ ಹೆಸರು ಇಜಿಪ್ಟ್, ಗ್ರೀಸ್ ಮೊದಲಾದ ದೇಶಗಳ ಜನರಿಗೆ ಗೊತ್ತಿತ್ತು. ಪರ್ಸಿ ಪೋಲೀಸ್ ಬಳಿಯಲ್ಲಿರುವ, ಡೇರಿಯಸ್ ಹಿಸ್ಟಾಸ್ಪಸ್* ಎಂಬುವವನು ಕ್ರಿ.ಪೂ. ೪೮೦ರಲ್ಲಿ ಕೊರೆಸಿದ ಶಾಸನದಲ್ಲಿ ಹಿಂದೂ ಶಬ್ದ ದೊರಕುವುದು. ಹೀಬ್ರೂ ಸಾಹಿತ್ಯದಲ್ಲಿಯೂ ಹೀರೋಡೋಟಸನ (ಕ್ರಿ.ಪೂ. ೪೪೦) ಗ್ರಂಥದಲ್ಲಿಯೂ ಹಿಂದೂ ಶಬ್ದದ ಪ್ರಯೋಗವಿದೆ. ಹಿಂದೂ ಹೆಂಗಸಿನ ಮತ್ತು ಗಂಡಸಿನ ಶಿಲಾಪ್ರತಿಮೆಗಳು ಮೆಂಫಿಸ್ ಎಂಬಲ್ಲಿ ದೊರೆತಿರುವುದೆಂದೂ, ಆದುದರಿಂದ ಅಲ್ಲಿ ಹಿಂದೂ ಜನರ ವಸತಿ ಇದ್ದಿರಬೇಕೆಂದೂ, ಭೂಮಧ್ಯ ಸಮುದ್ರದ ದಂಡೆಯ ಮೇಲೆ ಇದ್ದ ಹಿಂದೂ ಜನರ ಅವಶೇಷಗಳಲ್ಲಿ ಇವು ಮೊದಲನೆಯವೆಂದೂ ಫ್ಲಿಂಡರ್ಸ್ ಪೇತ್ರಿ ಎಂಬ ಪಂಡಿತರು ಅಭಿಪ್ರಾಯಪಡುತ್ತಾರೆ.+ ಈ ಎಲ್ಲ ಉದಾಹರಣೆಗಳಿಂದ ಹಿಂದೂ ಧರ್ಮದ ಸಂಸ್ಕೃತಿಯ ಪ್ರಸಾರ ಸುಮಾರು ಎರಡೂವರೆ ಸಾವಿರ ವರ್ಷಗಳಿಂದ ಆಗುತ್ತ ಬಂದಿದೆಯೆಂದು ಹೇಳಬಹುದು.

೧೯೩೧ನೆಯ ಜನಗಣನೆಯ ಪ್ರಕಾರ ಭರತಖಂಡದ ಜನಸಂಖ್ಯೆ ೩೫,೨೮,೩೭,೭೭೮. ಅವರಲ್ಲಿ ೨೩,೯೧,೯೫,೧೪೦ ಜನರು ಹಿಂದೂಧರ್ಮಾನುಯಾಯಿಗಳು. ಇವರ ಪರಿಮಾಣ ಸುಮಾರು ೧೦೦ಕ್ಕೆ ೬೭.೮೪ರಂತೆ ಬೀಳುವುದು.

ERE: Vol.VI, p.686.

+ These are the first remains of Indians known on the Mediterranean. Hitherto there have been no material evidences for that connection, which is stated to have existed both by embassies from Egypt and Syria to India, and by the great Buddhist Mission sent by Ashoka as far west as Greece and Cyrene. We seem now to have touched the Indian colony in Memphis, and we may hope for more light on that connection which seems to have been so momentous for Western thought.

W.M. Flinders Petrie: Man viii (1908) 123: ERE. Vol.VI, p. 687.

ಈ ಸಂಖ್ಯೆಯಲ್ಲಿ ಜೈನರ ಮತ್ತು ಸೀಖರ ಸಂಖ್ಯೆಯನ್ನು ಕೂಡಿಸಿಲ್ಲ. ಇದನ್ನೂ ಕೂಡಿಸಿದರೆ ೧೯೦೧ನೆಯ ಜನಗಣನೆಯ ಪ್ರಕಾರ ಜಗತ್ತಿನ ಬಹುಸಂಖ್ಯಾತ ಧರ್ಮಗಳೊಳಗೆ ಹಿಂದೂಧರ್ಮ ಮೂರನೆಯದಾಗಿದೆ. ಮೊದಲನೆಯದು ಕ್ರೈಸ್ತಮತ; ಎರಡನೆಯದು ಚೀನದ ಕಾಂಫ್ಯೂಶಿಯಸ್ಸಿನ ಮತ* ೧೯೩೧ನೆಯ ಜನಗಣನೆಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ ೧,೫೬,೧೧,೪೧೬. ಇವರಲ್ಲಿ ೧,೩೪,೨೫,೮೧೮ ಜನರು ಹಿಂದೂಗಳು. ಹಿಂದೂಗಳ ಸಂಖ್ಯೆಯಲ್ಲಿ ಜೈನರ ಸಮಾವೇಶವಾಗಿಲ್ಲ. ಹಿಂದೂಗಳ ಪರಿಮಾಣ ನೂರಕ್ಕೆ ೮೬ರಂತೆ ಬೀಳುವುದು.**

ಈಗಿನ ಹಿಂದೂಧರ್ಮಕ್ಕೂ ವೈದಿಕಧರ್ಮ ಅಥವಾ ಆರ್ಯಧರ್ಮಕ್ಕೂ ಬಹಳ ವ್ಯತ್ಯಾಸವಿದ್ದಾಗ್ಯೂ ಹಿಂದೂಧರ್ಮದ ಉಗಮವನ್ನು ವೇದಗಳಲ್ಲಿ ಕಾಣಬಹುದು. ವೇದಗಳ ಕಾಲ ನಿಶ್ಚಯವಾಗಿ ನಿರ್ಣಯವಾಗಿಲ್ಲವಾದರೂ ಪಾಶ್ಚಾತ್ಯ ಪಂಡಿತರ ಬಹುಮತ ಅದು ಸುಮಾರು ಕ್ರಿ.ಪೂ. ೧೫೦೦ ಆಗಿರಬೇಕು ಎಂಬುದು. ಸಿಂಧು ಪ್ರಾಂತದ ಉತ್ತರ ಮೇರೆಗೆ ಸಮೀಪವಾಗಿರುವ ಹರಪ್ಪಾ ಮತ್ತು ಮೊಹೆಂಜೊದಾರೊ ಮೊದಲಾದ ಸ್ಥಳಗಳಲ್ಲಿ ಪ್ರಾಕ್ತನವಸ್ತು ಸಂಶೋಧನ ಶಾಖೆಯವರು ಭೂಮಿಯನ್ನು ಅಗೆಯುವಾಗ ದೊರೆತ ಅನೇಕ ವಸ್ತುಗಳು ಆರ್ಯರು ಇಲ್ಲಿಗೆ ಬರುವುದಕ್ಕೂ ಮೊದಲು ಇಲ್ಲಿ ನೆಲೆಗೊಂಡಿದ್ದ ಜನರ ಧರ್ಮ ಸಂಸ್ಕೃತಿಗಳ ಬಗ್ಗೆ ಹೆಚ್ಚಿನ ಬೆಳಕನ್ನು ಬೀರುತ್ತವೆಯೆಂದು ತಜ್ಞರ ಮತ. ಆ ವಸ್ತುಗಳ ಕಾಲ ಏನಿಲ್ಲೆಂದರೂ ೫,೦೦೦ ವರ್ಷಗಳ ಹಿಂದೆ ಇರಬೇಕೆಂದು ಪಂಡಿತರು ತರ್ಕಿಸುವರು. ಆದರೆ ಆ ವಸ್ತುಗಳಲ್ಲಿ ಬಹುಭಾಗ ಇನ್ನೂ ಶೋಧಿಸಲ್ಪಟ್ಟಿಲ್ಲ. ಅವುಗಳ ಲಿಪಿಯನ್ನು ಓದಿ ಸರಿಯಾದ

---

* ERE: Vol.VI, p.686

** ಪ್ರಾಂತ	ಒಟ್ಟು	ಹಿಂದೂಗಳು
ಮೈಸೂರು ಸಂಸ್ಥಾನ	.... ೬೫,೫೭,೩೦೨	೫೬,೩೯,೨೭೦
ಮುಂಬೈ ಪ್ರಾಂತದ ಕನ್ನಡ ಭಾಗ	.... ೩೨,೮೮,೮೬೯	೨೮,೨೮,೪೨೭
ಮುಂಬಯಿ ಪ್ರಾಂತದ ಸಂಸ್ಥಾನಗಳ ಕನ್ನಡ ಭಾಗ	.... ೬,೮೧,೪೦೨	೫,೭೭,೪೦೬
ಮದರಾಸು ಪ್ರಾಂತದ ಕನ್ನಡ ಭಾಗ	.... ೨೭,೮೭,೬೦೯	೨೩,೯೭,೩೪೪
ಮದರಾಸು ಪ್ರಾಂತದ ಸಂಸ್ಥಾನಗಳ ಕನ್ನಡ ಭಾಗ	.... ೧೬,೦೯೩	೧೩,೮೪೩
ಹೈದರಾಬಾದು ಸಂಸ್ಥಾನದ ಕನ್ನಡ ಭಾಗ	.... ೧೮,೬೮,೫೮೭	೧೬,೦೬,೯೮೧
ಕೊಡಗು	.... ೧,೬೩,೩೨೭	೧,೪೦,೪೬೧

ಈ ಅಂಕೆಗಳನ್ನು ೧೯೩೧ನೆಯ ಜನಗಣನೆಯ ಪುಸ್ತಕ ೧, ಭಾಗ ೨ ಇದರಲ್ಲಿಯ ಕೋಷ್ಟಕಗಳನ್ನನುಸರಿಸಿ ಕೊಡಲಾಗಿದೆ. ಯಾವ ಜಿಲ್ಲೆಯಲ್ಲಿ ಕನ್ನಡಿಗರ ಸಂಖ್ಯೆ ೧೦೦ಕ್ಕೆ ೫೦ನ್ನು ಮೀರಿರುವುದೋ ಅಂತಹ ಜಿಲ್ಲೆ ಕರ್ನಾಟಕದ ಭಾಗವೆಂದು ಗಣಿಸಲಾಗಿದೆ.

ಅರ್ಥವನ್ನು ಕಂಡುಹಿಡಿಯುವವರೆಗೆ ನಾವು ವೇದಗಳನ್ನೇ ಹಿಂದೂಧರ್ಮದ ಮೂಲವನ್ನಾಗಿ ಹಿಡಿದು ಸಾಗಬೇಕಾಗಿರುವುದು.

ಋಗ್ವೇದ

ಈಗ ನಮಗೆ ಉಪಲಬ್ಧವಿರುವ ಪ್ರಾಚೀನ ಗ್ರಂಥಗಳಲ್ಲಿ ಋಗ್ವೇದ ಸಂಹಿತೆ ಮೊದಲನೆಯದು.* ಆರ್ಯರು ದೇಶವನ್ನು ಪ್ರವೇಶಿಸಿ ಈಗಿನ ಪಂಜಾಬದಲ್ಲಿ ವಾಸವಾಗಿದ್ದ ಕಾಲದಲ್ಲಿ ಇದನ್ನು ರಚಿಸಿರಬೇಕು. ಇದರಲ್ಲಿ ಹತ್ತು ಮಂಡಲಗಳೂ ಅವುಗಳಲ್ಲಿ ಒಟ್ಟು ೧,೦೨೮ ಸೂತ್ರಗಳೂ ಇದ್ದು ಋಕ್ಕುಗಳ ಸಂಖ್ಯೆ ೧೦,೪೧೭ ಆಗುತ್ತದೆ.** ಅದರಲ್ಲೂ ೨ ರಿಂದ ೭ರ ವರೆಗಿನ ೬ ಮಂಡಲಗಳು ಅತಿ ಪ್ರಾಚೀನವಾದವುಗಳು. ಅವುಗಳನ್ನು ಕಂಡುಕೊಂಡ ದ್ರಷ್ಟಾರರು ಕ್ರಮವಾಗಿ ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭರದ್ವಾಜ ಮತ್ತು ವಸಿಷ್ಠ ಋಷಿಗಳು. ಎಂಟನೆಯ ಮಂಡಲವನ್ನು ಕಂಡವರು ಕಣ್ವರು. ಮೊದಲನೆಯ ಮಂಡಲದ ಉತ್ತರಾರ್ಧವನ್ನು ಕಂಡವರು ಸವ್ಯ, ನೋಧಸ್, ಪರಾಶರ, ಗೋತಮ, ಕುತ್ಸ, ಕಕ್ಷಿವಾನ್, ಪರುಚ್ಛೇಪ, ದೀರ್ಘತಮಸ್ ಮತ್ತು ಅಗಸ್ತ್ಯ ಋಷಿಗಳು. ೯ನೆಯ ಮಂಡಲವನ್ನು ಕಂಡವರು ಮೇಲಿನ ಎಲ್ಲ ಸೂತ್ರಗಳ ಋಷಿಗಳು. ಈ ಮಂಡಲದೊಳಗಿನ ಸೂಕ್ತಗಳು ಸೋಮ-ಪವಮಾನನ ಪರವಾಗಿರುತ್ತವೆ. ಈ ಎಲ್ಲ ಮಂಡಲಗಳು ಪ್ರಚಾರದಲ್ಲಿ ಬಂದು ಕೆಲಕಾಲ ಗತಿಸಿದ ಮೇಲೆ ಆರ್ಯರು ಯಮುನಾ ನದಿಯವರೆಗಿನ ಪ್ರದೇಶವನ್ನು ಆಕ್ರಮಿಸಿದ ಮೇಲೆ ಮೊದಲನೆಯ ಮಂಡಲದ ಪೂರ್ವಾರ್ಧವೂ ಹತ್ತನೆಯ ಮಂಡಲವೂ ಹುಟ್ಟಿದುವು. ಈ ಎಲ್ಲ ಮಂಡಲಗಳನ್ನು ಕಂಡುಕೊಳ್ಳಬೇಕಾದರೆ ಆರ್ಯರಿಗೆ ಏನಿಲ್ಲೆಂದರೂ ಸಾವಿರ ವರ್ಷಗಳಾದರೂ ಹಿಡಿದಿರಬೇಕು. ಋಗ್ವೇದದಲ್ಲಿ ದೇವತೆಗಳ ವರ್ಣನೆ ಮತ್ತು ಅವರ ಪ್ರಾರ್ಥನೆಗಳಿವೆ. ಋಗ್ವೇದದೊಳಗಿನ ಮುಖ್ಯ ದೇವತೆಗಳನ್ನು ಯಾಸ್ಕಾಚಾರ್ಯರು ಮೂರು ಗುಂಪುಗಳಾಗಿ ವಿಂಗಡಿಸುವರು. ಅವರಾರೆಂದರೆ-೧. ಪೃಥ್ವಿಸ್ಥಾನ ದೇವತೆಗಳು: ಅಗ್ನಿ, ಸೋಮ; ೨. ಅಂತರಿಕ್ಷಸ್ಥಾನ ದೇವತೆಗಳು: ಇಂದ್ರ, ಮರುತ್, ರುದ್ರ, ಪರ್ಜನ್ಯ, ವಾಯು, ಋಭು; ೩. ದ್ಯೌಃಸ್ಥಾನ ದೇವತೆಗಳು: ವಿಷ್ಣು, ಸೂರ್ಯ, ಸವಿತೃ, ಪೂಷನ್, ಅಶ್ವಿನೀ, ಉಷಸ್, ಅದಿತಿ, ವರುಣ, ಮಿತ್ರ, ಆರ್ಯಮನ್. ಇವರಲ್ಲದೆ ಇನ್ನೂ ಅನೇಕ ದೇವತೆಗಳಿರುವರು. ನದಿ, ನೀರು, ಪರ್ವತ ಮತ್ತು ಯಾಗದ ಉಪಕರಣಗಳನ್ನು ದೇವತೆಗಳೆಂದು ಕಲ್ಪಿಸಿ

---

* *Winternitz: History of Indian Literature, Vol.1. p 57.*

** *ಬಾಷ್ಕಲ ಶಾಲೆಯಲ್ಲಿ ೧೭.೫೮೧ ಮಂತ್ರಗಳೂ, ಶಾಕಲ ಶಾಖೆಯಲ್ಲಿ ೧೦,೪೧೭ ಮಂತ್ರಗಳೂ ಉಂಟು. Bloomfield: Rigveda Repetitions-Introduction p.4, Footnote 2 ನೋಡಿರಿ.*

ಪ್ರಾರ್ಥಿಸಿದ್ದಾರೆ. ಈ ಎಲ್ಲ ದೇವತೆಗಳಲ್ಲಿ ಮುಖ್ಯರಾದ ಕೆಲವರ ಸ್ವರೂಪವನ್ನು ನಿರೀಕ್ಷಿಸುವ.

* **ಇಂದ್ರ** : ಋಗ್ವೇದದ ಮಂತ್ರಗಳಲ್ಲಿ ನಾಲ್ಕರಲ್ಲಿ ಒಂದು ಭಾಗ ಇಂದ್ರನಿಗೆ ಸಂಬಂಧಿಸಿದೆ. ಇಷ್ಟು ಮಂತ್ರಗಳಿಂದ ಸ್ತುತಿಸಲ್ಪಟ್ಟ ದೇವತೆ ವೇದದಲ್ಲಿ ಮತ್ತೊಂದು ಕಂಡುಬರುವುದಿಲ್ಲ. ಈತನು ವೈದಿಕ ಯುಗದಲ್ಲಿ ಜನರ ಪ್ರೀತಿಯ ಇಷ್ಟ ದೇವತೆಯಾಗಿದ್ದನು. ಮುಖ್ಯವಾಗಿ ಈತನು ಮೇಘರಾಜನು. ವೃತ್ರನನ್ನು ಕೊಂದು ನೀರನ್ನೂ ಪ್ರಕಾಶವನ್ನೂ ಜನರಿಗೆ ಒದಗಿಸಿಕೊಡತಕ್ಕವನು. ಈತನು ಯುದ್ಧದ ಅಧಿದೇವತೆ. ದಸ್ಯುಗಳನ್ನು ಸೋಲಿಸಿ ಆರ್ಯರಿಗೆ ಜಯವನ್ನುಂಟುಮಾಡಿ ಕೊಡುವವನು. ಈತನ ಶರೀರದ ಮತ್ತು ಸ್ವಭಾವದ ವರ್ಣನೆಗಳು ವಿಪುಲವಾಗಿವೆ. ಸೋಮರಸವನ್ನು ಕುಡಿದು ಗಡ್ಡವನ್ನೂ ದವಡೆಗಳನ್ನೂ ಉಲುಕಾಡಿಸುವನು. ಈತನ ಹೊಟ್ಟೆ ದೊಡ್ಡದಿದ್ದು ಬೇಕಾದಷ್ಟು ಸೋಮರಸವನ್ನು ಹಿಡಿಸುವುದು. ಸೋಮರಸದ ಮೇಲೆ ಈತನಿಗೆ ಬಹಳ ಪ್ರೀತಿ. ಸೋಮರಸ ದೊರಕಿದರೆ ಎಂತಹ ಮಹತ್ತ್ವದ ಕೆಲಸಗಳನ್ನಾದರೂ ಮರೆತುಬಿಡುವನು. ಆದುದರಿಂದ ಇವನಿಗೆ ಸೋಮಪಾ ಎಂಬ ಬಿರುದಿದೆ. ಯುದ್ಧಕ್ಕೆ ಹೊರಡಬೇಕಾದರೆ ಈತನಿಗ ಮೊದಲು ಸೋಮರಸ ಬೇಕೇಬೇಕು. ವೃತ್ರನ ಸಂಗಡ ಯುದ್ಧಕ್ಕೆ ಹೊರಡುವ ಮೊದಲು ಮೂರು ಕೆರೆಗಳು ತುಂಬುವಷ್ಟು ಸೋಮವನ್ನು ಕುಡಿದನಂತೆ. ಈತನು ಸೋಮವನ್ನು ಕುಡಿದು ಎಚ್ಚರದಪ್ಪಿ ಆತ್ಮಪೌರುಷವನ್ನು ಮಾರಿಕೊಂಡ ಉದಾಹರಣೆಗಳುಂಟು.

ಈತನ ಶರೀರದ ಕಾಂತಿ ಹರಿತವರ್ಣದ್ದು. ಈತನ ಗಡ್ಡ ಮೀಸೆ ಜಡೆಗಳಾದರೂ ಇದೇ ಬಣ್ಣದವು. ಈತನ ಮುಖ್ಯ ಆಯುಧ ವಜ್ರ. ಇದನ್ನು ಈತನಿಗಾಗಿ ತ್ವಷ್ಟಾರನು ಅನೇಕ ಧಾತುಗಳಿಂದ ಎರಕಹೊಯ್ದನು. ಈತನು ಬಿಲ್ಲು ಬಾಣಗಳನ್ನೂ ಉಪಯೋಗಿಸುತ್ತಾನೆ. ಒಮ್ಮೊಮ್ಮೆ ಅಂಕುಶವನ್ನು ಉಪಯೋಗಿಸುವನು. ಈತನ ರಥ ಬಂಗಾರದ್ದು. ಅದಕ್ಕೆ ಹರಿತ ವರ್ಣದ ಕುದುರೆಗಳನ್ನು ಹೂಡುವನು. ಅಗ್ನಿ ಮತ್ತು ಪೂಷಣರು ಈತನ ಬಂಧುಗಳು. ಇಂದ್ರಾಣಿ ಹೆಂಡತಿ. ಈತನ ಮಿತ್ರರೂ ಯುದ್ಧದಲ್ಲಿ ಸಹಾಯ ಮಾಡುವವರೂ ಮರುತ್ ದೇವತೆಗಳು. ಈತನ ಶಕ್ತಿ ಅತಿಶಯವಾದುದು. ಈತನನ್ನು ಸರಿಗಟ್ಟುವವರು ದೇವಮರ್ತ್ಯರೊಳಗೆ ಯಾರೂ ಇಲ್ಲ. ಆದುದರಿಂದ ಈತನಿಗೆ ಶಕ್ರ, ಶಚೀವಂತ, ಶಚೀಪತಿ, ಶತಕ್ರತು ಎಂಬ

---

* A.A. Macdonell, Vedic Mythology p.54. Vedic Reader pp. 41-44.

ಹೆಸರುಗಳಿವೆ. ಈತನು ಮಾಡಿದ ಘನಕೃತ್ಯಗಳಲ್ಲಿ ವೃತ್ರವಧೆ ಮಹತ್ತ್ವವಾದುದು. ವೃತ್ರನು ಅಥವಾ ಅಹಿ ಒಬ್ಬ ರಾಕ್ಷಸನು. ಆಕಾಶದಲ್ಲಿ ಮೋಡಗಳನ್ನು ತಡೆದು ಮಳೆಯಾಗದಂತೆ ಮಾಡುವನು. ಪರ್ವತದ ಮೇಲೆ ಮಲಗಿ ಪ್ರಕಾಶ ಬರದಂತೆ ತಡೆಯುವನು. ಇಂದ್ರನು ವಿಪುಲವಾಗಿ ಸೋಮವನ್ನು ಕುಡಿದು ಮರುತ್ ದೇವತೆಗಳನ್ನು ಕೂಡಿಕೊಂಡು ಯುದ್ಧಕ್ಕೆ ಹೋಗಿ ತನ್ನ ತೀಕ್ಷ್ಣವಾದ ಆಯುಧಗಳಿಂದ ವೃತ್ರನನ್ನು ವಧಿಸುವನು. ಅನಂತರ ನೀರೂ ಪ್ರಕಾಶವೂ ಬರುವುವು. ಈ ಪ್ರಸಂಗ ಇಂದ್ರನಿಗೆ ಮೇಲಿಂದ ಮೇಲೆ ಬರುವುದು. ಮಳೆಯಾಗುವುದಕ್ಕೆ ಮೊದಲು ಕಂಡು ಬರುವ ಸಿಡಿಲು ಮಿಂಚುಗಳಿಂದ ಇಂದ್ರ–ವೃತ್ರಯುದ್ಧ ಜೋರಿನಿಂದ ನಡೆದಿದೆಯೆಂದು ಆರ್ಯರು ಊಹಿಸಿದ್ದರು. ಮಳೆಯಾಗಿ ಆಕಾಶ ಸ್ವಚ್ಛವಾಗಿ ಸೂರ್ಯನ ಪ್ರಕಾಶ ಕಾಣಹತ್ತಲು ಇಂದ್ರನು ವೃತ್ರನನ್ನು ಕೊಂದು ನೀರನ್ನೂ ಸೂರ್ಯನನ್ನೂ ಮುಕ್ತ ಮಾಡಿದನೆಂದು ತಿಳಿಯುತ್ತಿದ್ದರು. ಇಂದ್ರನು ಅಹಿಯನ್ನು ಸಂಹರಿಸಿ ಆತನಿಂದ ಬಂಧಿಸಲ್ಪಟ್ಟ ಗೋವುಗಳನ್ನು ಬಿಡಿಸಿದನು. ಇಲ್ಲಿ ಗೋ ಎಂದರೆ ಕಿರಣಗಳೆಂದರ್ಥ.

ಇಂದ್ರನು ವಿಶ್ವಕ್ಕೆ ಸಂಬಂಧಿಸಿದ ಅನೇಕ ಮಹತ್ಕಾರ್ಯಗಳನ್ನು ಮಾಡಿರುವನು. ಹೊಯ್ದಾಡುವ ಪರ್ವತಗಳನ್ನು ಒಂದೇ ಸ್ಥಳದಲ್ಲಿ ನೆಟ್ಟನು. ಭೂಮಿಯನ್ನೂ ಆಕಾಶವನ್ನೂ ಚಾಪೆಯನ್ನು ಹಾಸುವಂತೆ ಹಾಸಿದನು ಮತ್ತು ಅವುಗಳನ್ನು ಬೇರ್ಪಡಿಸಿದನು. ದಸ್ಯುಗಳನ್ನು ನಿಗ್ರಹಿಸಿ ಆರ್ಯರಿಗೆ ಭೂಮಿಯನ್ನು ದೊರಕಿಸಿಕೊಟ್ಟು ಅವರನ್ನು ರಕ್ಷಿಸಿದನು. ಈತನು ಇತರ ದೇವತೆಗಳ ಸಂಗಡವೂ ಆಗಾಗ ಹೊಡೆದಾಡುತ್ತಿದ್ದನು. ಉಷಾದೇವಿಯ ರಥವನ್ನು ಪುಡಿಪುಡಿ ಮಾಡಿದನು. ಅದು ವಿಪಾಶ್ ನದಿಯ ದಂಡದ ಮೇಲೆ ಬಿದ್ದಿರುವುದು. ಸೂರ್ಯನ ಕುದುರೆಗಳನ್ನು ತಡೆದು ಆತನ ರಥದ ಒಂದು ಗಾಲಿ ಇಲ್ಲದಂತೆ ಮಾಡಿದನು. ದೇವಶುನಿಯಾದ ಸರಮೆಯ ಸಹಾಯದಿಂದ ಪಣಿಗಳಿಂದ ನಿರ್ಬಂಧಿಸಲ್ಪಟ್ಟ ಗೋವುಗಳನ್ನು ಬಿಡಿಸಿದನು. ಅರಸಾದ ಸುದಾಸನ ಪರವಾಗಿ ಯುದ್ಧಮಾಡಿ ಆತನ ವೈರಿಗಳನ್ನು ಸೋಲಿಸಿದನು. ಸಾಮಾನ್ಯವಾಗಿ ಇಂದ್ರನು ತನ್ನ ಭಕ್ತರ ರಕ್ಷಕನೂ ಸಹಾಯಕನೂ ಮಿತ್ರನೂ ಎಂದು ಪ್ರತೀತಿಯಿದೆ. ಈತನು ಅವರಿಗೆ ವಿಪುಲವಾಗಿ ಐಶ್ವರ್ಯವನ್ನು ಕೊಡುವನು. ಆದುದರಿಂದ ಈತನಿಗೆ ಮಘವನ್ ಎಂದು ಹೆಸರಿದೆ. ಈತನು ಉತ್ಸಾಹಿಯೂ ಹಿಡಿದ ಕಾರ್ಯವನ್ನು ಕಡೆಗಾಣಿಸುವವನೂ ಅಜೇಯ ವೀರನೂ ತನ್ನ ಜನರಿಗೆ ಮಿತಿಯಿಲ್ಲದ ಐಶ್ವರ್ಯವನ್ನು ಕೊಡುವವನೂ ಆಗಿರುವುದಲ್ಲದೆ, ಆಗಾಗ ಕುಡುಕನೂ ವಿಷಯೋಪಭೋಗಿಯೂ ಕ್ರೂರನೂ ಅನೀತಿಯಿಂದ ನಡೆಯುವವನೂ ಕೂಡ ಆಗಿರುವನು.

* ಅಗ್ನಿ: ಯಜ್ಞಕ್ಕುಪಯುಕ್ತನಾದುದರಿಂದ ಅಗ್ನಿದೇವನ ಮಹತ್ತ್ವ ಋಗ್ವೇದದಲ್ಲಿ ಬಹಳವಾಗಿದೆ. ಇಂದ್ರನ ತರುವಾಯ ಈತನೇ ಮಹತ್ತ್ವದ ದೇವತೆ. ಈತನನ್ನು ಸುಮಾರು ಇನ್ನೂರು ಸೂಕ್ತಗಳಿಂದ ಸ್ತುತಿಸಿರುವರು. ಈತನ ಅವಯವಗಳ ವರ್ಣನೆ ಅಲ್ಲಲ್ಲಿ ಬಂದಿದೆ. ಈತನ ಬೆನ್ನು ಬೆಣ್ಣೆಯಿಂದಾದುದು. ಕೂದಲು ಉರಿಯಿಂದಾದುದು. ದವಡೆಗಳು ಹದನಾದವು. ಈತನಿಗೆ ಬಂಗಾರದ ಹಲ್ಲುಗಳುಂಟು, ಈತನ ನಾಲಗೆಯಿಂದ ದೇವತೆಗಳು ಹವಿಯನ್ನು ಸ್ವೀಕರಿಸುವರು. ಪ್ರಜ್ವಲಿಸುವ ಶೀರ್ಷದಿಂದ ಸರ್ವತ್ರ ನೋಡುವನು. ಈತನನ್ನು ಡುರುಕೆ ಹೊಡೆಯುವ ಹೋರಿಗೆ ಹೋಲಿಸಿರುವರು. ದೇವತೆಗಳನ್ನು ಯಜ್ಞಕ್ಕೆ ಕರೆತರುವನು ಮತ್ತು ಅವರ ಪಾಲನ್ನು ಅವರಿಗೆ ಮುಟ್ಟಿಸುವನು. ಈತನು ಸ್ವರ್ಗದ ಪಕ್ಷಿ; ಆಕಾಶದ ಗರುಡನು; ನೀರಿನಲ್ಲಿ ನೀರುಗೋಳಿಯಂತಿರುವನು. ಈತನಿಗೆ ರೆಕ್ಕೆಗಳುಂಟು. ಗಿಡದ ಮೇಲೆ ಪಕ್ಷಿ ಕೂಡುವಂತೆ ಕುಳಿತು ಅರಣ್ಯವನ್ನೆಲ್ಲಾ ತನ್ನ ವಶಮಾಡಿಕೊಳ್ಳುವನು. ಈತನ ಆಹಾರ ಸೌದೆ ಮತ್ತು ತುಪ್ಪ. ಈತನು ದಿನಕ್ಕೆ ಮೂರು ಸಾರಿ ಊಟ ಮಾಡುವನು. ಆಗಾಗ್ಗೆ ಸೋಮವನ್ನು ಕುಡಿಯುವನು. ರಾತ್ರಿಯಲ್ಲಿಯೂ ಸೂರ್ಯನಂತೆ ಹೊಳೆಯುವನು. ಕತ್ತಲೆಯನ್ನು ಹೊಡೆದೋಡಿಸುವನು. ಕ್ಷೌರಿಕನು ಗಡ್ಡವನ್ನು ಬೋಳಿಸುವಂತೆ ಭೂಮಿಯನ್ನು ಸ್ವಚ್ಛ ಮಾಡುವನು. ಈತನ ಜ್ವಾಲೆಗಳು ಸಮುದ್ರದ ತೆರೆಗಳಂತೆಯೂ ಈತನ ಧ್ವನಿ ಸ್ವರ್ಗದ ಗುಡುಗಿನಂತೆಯೂ ಈತನ ಧೂಮ ಆಕಾಶವನ್ನು ಎತ್ತಿ ಹಿಡಿದ ಕಂಬದಂತೆಯೂ ತೋರುವುವು. ಈತನನ್ನು ಧೂಮಕೇತುವೆಂದು ಕರೆಯುವರು. ಈತನಿಗೆ ಬಂಗಾರದ ರಥವುಂಟು. ಅದನ್ನು ಎರಡು ಅಥವಾ ಹೆಚ್ಚು ಹರಿತವರ್ಣದ ಕುದುರೆಗಳು ಎಳೆಯುವುವು. ದೇವತೆಗಳನ್ನು ಇದೇ ರಥದಿಂದ ಯಜ್ಞಕ್ಕೆ ಕರೆತರುವನು. ತನ್ನ ರಥಕ್ಕೆ ತಾನೇ ಸಾರಥಿಯಾಗಿರುವನು. ಈತನು ದ್ಯಾವಾಪೃಥಿವಿಯ ಮಗುವೆಂದೂ, ದ್ಯೌಃಸೂನುವೆಂದೂ, ಅಪಾಮ್‌ನಪಾತನೆಂದೂ, ಪ್ರಕಾಶಕ್ಕೋಸುಗ ದೇವತೆಗಳು ಈತನನ್ನು ಹುಟ್ಟಿಸಿದರೆಂದೂ ಈತನ ಜನನದ ಬಗ್ಗೆ ಉಲ್ಲೇಖಗಳಿವೆ. ಈತನು ಪೃಥ್ವಿ, ಅಂತರಿಕ್ಷ ಆಕಾಶಗಳಲ್ಲಿ ವಾಸಿಸುವನು. ಪ್ರತಿ ದಿವಸ ಯಜ್ಞಕ್ಕಾಗಿ ಅರಣಿಗಳಿಂದ ಮಥಿಸಿ ಬೆಂಕಿಯನ್ನುಂಟು ಮಾಡುವುದರಿಂದ ಅರಣಿಗಳು ಈತನ ಜನನಿಯರೆಂದು ಹೇಳಿದೆ. ಒಣಗಿದ ಕಟ್ಟಿಗೆಯಿಂದ ಜೀವಂತ ಅಗ್ನಿ ಜನಿಸಿದ ಕೂಡಲೆ ತನ್ನ ಜನಕರನ್ನು ನುಂಗುವನು. ಬೆಂಕಿಯನ್ನು ಮಾಡಲು ಬಹಳ ಶಕ್ತಿ ಬೇಕಾಗುವುದರಿಂದ ಈತನಿಗೆ ಸಹಸಃಸೂನು ಎಂಬ ಹೆಸರಿದೆ. ಈತನು

**A.A. Macdonell: Vedic Mythology p.88: Vedic Reader pp.1-3.*

ಮೊದಲು ಸ್ವರ್ಗದಲ್ಲಿ ಜನಿಸಿದನು. ಅನಂತರ ಮಾತರಿಶ್ವನು ಈತನನ್ನು ಭೂಮಿಗೆ ತಂದನು. ದೇವತೆಗಳು ಈತನನ್ನು ಮೂರು ಭಾಗವಾಗಿ ಮಾಡಿದರು. ಈತನಿಗೆ ಮೂರು ತಲೆಗಳು, ಮೂರು ಶರೀರಗಳು, ಮೂರು ಸ್ಥಳಗಳು. ಅಗ್ನಿಯ ಈ ಮೂರು ಪ್ರಕಾರದ ಸ್ವಭಾವ ಪೌರಾಣಿಕ ಯುಗದ ತ್ರಿಮೂರ್ತಿಗಳಾಗಿ ಪರಿಣಮಿಸಿರಬಹುದು. ಅಗ್ನಿಯ ಜನ್ಮ ದ್ಯಾವಾಪೃಥ್ವಿಯಲ್ಲಿರುವುದರಿಂದ ಈತನಿಗೆ ದ್ವಿಜನ್ಮನೆಂದೂ ಮಾನವರಿಗೆ ಪ್ರತಿದಿವಸ ಈತನ ನಿಕಟ ಸಂಬಂಧವಿರುವುದರಿಂದ ಈತನಿಗೆ ಗೃಹಪತಿಯೆಂದೂ ಅತಿಥಿಯೆಂದೂ ಹೆಸರು. ಈತನು ಸ್ವತಃ ಅಮರನಾಗಿದ್ದಾಗ್ಯೂ ಮರಣಧರ್ಮಿಗಳಾದ ಮಾನವರ ಸಂಗಡ ವಾಸಿಸುವನು. ಮನುಷ್ಯರಿಗೆ ಸಮೀಪದ ಆಪ್ತನು. ಈತನನ್ನು ಪೂಜಿಸುವವರಿಗೆ ತಂದೆಯಂತೆಯೂ ಬಂಧುವಿನಂತೆಯೂ ಮಗನಂತೆಯೂ ನಡೆದುಕೊಳ್ಳುವನು. ಮನುಷ್ಯರ ಬಲಿಗಳನ್ನು ದೇವತೆಗಳಿಗೆ ಮುಟ್ಟಿಸುವುದರಿಂದಲೂ ದೇವತೆಗಳನ್ನು ಯಜ್ಞ ಯಾಗಾದಿಗಳಿಗೆ ಕರೆತರುವುದರಿಂದಲೂ ಈತನಿಗೆ ದೂತನೆಂದೂ ಋತ್ವಿಜ, ಪುರೋಹಿತ, ಹೋತೃ, ಅಧ್ವರ್ಯು, ಬ್ರಹ್ಮನ್ ಎಂದೂ ಕರೆಯುವರು. ಈತನು ದೊಡ್ಡ ಆಚಾರ್ಯನು; ಎಲ್ಲ ಬಲ್ಲಿದನೂ ಆಗಿರುವನು. ಜನಿಸಿದ ಎಲ್ಲ ಪ್ರಾಣಿಗಳನ್ನು ಬಲ್ಲವನಾದುದರಿಂದ ಈತನಿಗೆ ಜಾತವೇದಸ್ ಎಂಬೂ ಹೆಸರುಂಟು.

* **ಸೋಮ** : ಅಗ್ನಿಯ ತರುವಾಯ ಬಹಳ ಸೂಕ್ತಗಳಿಂದ ಪ್ರಾರ್ಥಿತನಾದ ದೇವನು ಸೋಮನು. ಈತನ ಬಗ್ಗೆ ೧೨೦ ಸೂಕ್ತಗಳಿವೆ. ಸೋಮಯಾಗ ಋಗ್ವೇದದಲ್ಲಿ ಮಹತ್ತ್ವವಾದುದು. ಒಂಬತ್ತನೆಯ ಮಂಡಲ ಸಂಪೂರ್ಣವಾಗಿ ಇವನ ಪರವಾಗಿದೆ. ಈತನು ಹದಿನಾರು ಆಯುಧಗಳನ್ನು ಧರಿಸುವನು. ಈತನ ರಥ ದೈವಿಕ. ಇಂದ್ರನ ರಥದಲ್ಲಿ ಕುಳಿತು ಹವಿಸ್ಸನ್ನು ಸ್ವೀಕರಿಸಲು ಬರುವನು. ಇಂದ್ರ, ಪೂಷನ್, ರುದ್ರ, ಮರುತ್ ದೇವತೆಗಳ ಸಂಗಡಿಗನು.

ಸೋಮರಸಕ್ಕೆ ಮಧುವೆಂದೂ ಇಂದುವೆಂದೂ ಹೆಸರು. ಇದರ ಬಣ್ಣ ಕಂದಿ (ಬಭ್ರು), ಕೆಂಪು (ಅರುಣ), ಅಥವಾ ಹರಿತ. ಸೋಮಪಾನ ಉತ್ಸಾಹ ವನ್ನುಂಟು ಮಾಡುವುದಲ್ಲದೆ ಅಮರತ್ವವನ್ನು ಕೊಡುವುದು. ಎಲ್ಲ ದೇವತೆಗಳು ಅಮರ ರಾಗಬೇಕೆಂದು ಇದನ್ನು ಕುಡಿಯುವರು. ಮಾನವರು ಕುಡಿದರೂ ಅಮರರಾಗುವರು. ಆದುದರಿಂದ ಇದಕ್ಕೆ ಅಮೃತವೆಂದು ಹೆಸರು. ಇದರಲ್ಲಿ ವ್ಯಾಧಿಗಳನ್ನು ಗುಣಪಡಿಸುವ

---

* *A.A. Macdonell, Vedic Mythology p. 104. Vedic Reader pp. 152-153.*

ಶಕ್ತಿಯಿದೆ. ಇದನ್ನು ಕುಡಿದವರ ಬೇನೆಗಳು ಹೋಗುವುವು; ಕುರುಡರಿಗೆ ಕಣ್ಣು ಬರುವುದು; ಕುಂಟರು ನಡೆಯಹತ್ತುವರು; ವಾಕ್‌ಶಕ್ತಿ ಹೆಚ್ಚುವುದು; ಬುದ್ಧಿ ತೀಕ್ಷ್ಣ ವಾಗುವುದು.

* ವರುಣ : ವೇದಕಾಲದ ಪ್ರಾರಂಭದಲ್ಲಿ ವರುಣನು ವೈದಿಕ ದೇವತೆಗಳಲ್ಲಿ ಮೊದಲನೆಯವನಾಗಿದ್ದು ಅತೀ ಮಹತ್ತ್ವದ ಸ್ಥಾನದಲ್ಲಿದ್ದನು. ಆದರೆ ಬರಬರುತ್ತ ಇಂದ್ರನ ವರ್ಚಸ್ಸು ಬೆಳೆದು ಈತನು ಹಿಂದೆ ಬಿದ್ದನು. ಈತನ ಬಗ್ಗೆ ಸುಮಾರು ೧೨ ಸೂಕ್ತಗಳಿವೆ. ಈತನನ್ನೂ ಮಿತ್ರನನ್ನೂ ಕೂಡಿ ಪ್ರಾರ್ಥಿಸಿದ ಸೂಕ್ತಗಳೂ ಹಲವುಂಟು. ಈತನ ಆಕೃತಿಯ ವರ್ಣನೆ ಸಾಕಷ್ಟು ಬಂದಿದೆ. ಈತನ ಕಣ್ಣು, ಮುಖ, ಭುಜ, ಕೈಕಾಲುಗಳ ಉಲ್ಲೇಖವಿದೆ. ಈತನು ನಡೆಯಬಲ್ಲನು, ಕೂಡಬಲ್ಲನು. ಊಟ ಮಾಡಬಲ್ಲನು ಮತ್ತು ಕುಡಿಯಬಲ್ಲನು. ಮನುಷ್ಯರನ್ನು ನೋಡುವ ಈತನ ಕಣ್ಣೇ ಸೂರ್ಯನು. ಈತನು ದೂರದರ್ಶಿಯಾಗಿದ್ದಾನೆ. ಯಜ್ಞಕ್ಕೆ ಬಂದಾಗ ಹುಲ್ಲಿನ ಗದ್ದುಗೆಯ ಮೇಲೆ ಕೂಡುವನು. ಈತನು ತೇಜಃಪುಂಜವಾದ ಅಂಗಿಯನ್ನು ತೊಟ್ಟುಕೊಂಡು ಬಂಗಾರದ ಮೇಲುಹೊದಿಕೆಯನ್ನು ಧರಿಸುವನು. ಈತನ ರಥ ಸೂರ್ಯನಂತೆ ಪ್ರಕಾಶಮಾನವಾಗಿದ್ದು ಉತ್ತಮವಾದ ಕುದುರೆಗಳನ್ನು ಅದಕ್ಕೆ ಹೂಡಿರುವರು. ಈತನು ತನ್ನ ಮನೆಯಲ್ಲಿ ಕುಳಿತುಕೊಂಡು ಜನರ ಕೃತಿಗಳನ್ನೆಲ್ಲ ನಿರೀಕ್ಷಿಸುವನು. ಈತನ ಗುಪ್ತಚರರು (ಸ್ಪಶಾಃ) ಸರ್ವತ್ರ ಸಂಚರಿಸಿ ಜನರ ಕೃತಿಗಳ ವರದಿಯನ್ನು ಈತನಿಗೆ ಒಪ್ಪಿಸುವರು. ವರುಣನನ್ನು ರಾಜಾ ಎಂದು ಕರೆಯುವರು. ಈತನು ಸಾಮ್ರಾಟನಾಗಿರುವನು. ಈತನಿಗೆ ಅಸುರನೆಂದು ಹೆಸರಿದ್ದು ಈತನ ಅಧಿಪತ್ಯಕ್ಕೆ ಕ್ಷತ್ರ ಎಂದೆನ್ನುವರು. ಮಾಯಾ ಎಂಬುದು ಈತನ ದೈವಿಕ ಸಾಮ್ರಾಜ್ಯ ದ್ಯೋತಕ. ಈತನಿಗೆ ಮಾಯಿನ್ ಎಂಬ ಹೆಸರೂ ಉಂಟು. ಈತನು ನೈತಿಕ ಮತ್ತು ಪ್ರಾಕೃತಿಕ ಕಟ್ಟಳೆಗಳ ರಕ್ಷಕನು. ಈತನು ಪೃಥಿವೀ ಮತ್ತು ಅಂತರಿಕ್ಷಗಳನ್ನು ಉಂಟುಮಾಡಿ ಅವುಗಳನ್ನು ಬೇರ್ಪಡಿಸಿದನು. ಸೂರ್ಯನೆಂಬ ಬಂಗಾರದ ಹೊಳೆಯುವ ಚೆಂಡನ್ನುಂಟುಮಾಡಿ ಆಕಾಶದಲ್ಲಿ ಅದನ್ನು ತೂಗಾಡಲಿಕ್ಕೆ ಹಚ್ಚಿದನು. ಸೂರ್ಯನಿಗೆ ವಿಸ್ತಾರವಾದ ಮಾರ್ಗವನ್ನು ಕಟ್ಟಿಸಿಕೊಟ್ಟನು. ನೀರಿನಲ್ಲಿ ಅಗ್ನಿಯನ್ನೂ ಆಕಾಶದಲ್ಲಿ ಸೂರ್ಯನನ್ನೂ ಕಲ್ಲುಬಂಡೆಗಳಲ್ಲಿ ಸೋಮನನ್ನೂ ಇಟ್ಟನು. ಆಕಾಶದಲ್ಲಿ ಸಪ್ಪಳ ಮಾಡುವ ಗಾಳಿ ಈತನ ಉಸಿರು. ಈತನ ಅಪ್ಪಣೆಯ ಪ್ರಕಾರ ಚಂದ್ರನೂ

---

* *A.A. Macdonell, Vedic Mythology, pp. 22-28 Vedic Reader pp. 134-35.*

ನಕ್ಷತ್ರಗಳೂ ರಾತ್ರಿಯಲ್ಲಿ ಪ್ರಕಾಶಮಾನವಾಗಿ ತಿರುಗುವುವು. ಈತನು ರಾತ್ರಿ ಹಗಲು ಪ್ರಕಾಶಗಳ ಅಧಿಪತಿ. ಪೃಥ್ವಿಯ ಮೇಲಿನ ಜಲವನ್ನು ತನ್ನ ಅಧೀನದಲ್ಲಿಟ್ಟು ಕೊಂಡಿರುವನು. ನದಿಗಳನ್ನು ಹರಿಯಲಿಕ್ಕೆ ಹಚ್ಚಿದನು. ಈತನ ಅಪ್ಪಣೆಯಿಂದಲೇ ಅವು ಸಮುದ್ರವನ್ನು ಕೂಡಿದರೂ ಅದನ್ನು ತುಂಬುವುದಿಲ್ಲ. ಈತನ ಕಟ್ಟಳೆಗಳು ಗಟ್ಟಿಮುಟ್ಟಾಗಿರುವುದರಿಂದ ಈತನಿಗೆ ಧೃತವ್ರತನೆಂದು ಹೆಸರು. ಹಾರಾಡುವ ಪಕ್ಕಿಗಳಾಗಲಿ ಹರಿಯುವ ಹೊಳೆಗಾಗಲಿ ಈತನ ಅಧಿಪತ್ಯವನ್ನು ಮುಟ್ಟಲಾರವು. ಈತನು ವಿಶ್ವವ್ಯಾಪಿ, ಸರ್ವಜ್ಞ. ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಹಾದಿಯನ್ನೂ ಸಮುದ್ರದಲ್ಲಿ ಸಂಚರಿಸುವ ಹಡಗುಗಳ ದಾರಿಯನ್ನೂ ಬಹುದೂರದವರೆಗೆ ಬೀಸುವ ಗಾಳಿಯ ಮಾರ್ಗವನ್ನೂ ಬಲ್ಲನು. ಗುಪ್ತವಾದ ಎಲ್ಲ ವಸ್ತುಗಳನ್ನೂ ಮನುಷ್ಯರ ಸತ್ಯಾಸತ್ಯತೆಯನ್ನೂ ಅರಿಯಬಲ್ಲನು. ಈತನಿಗೆ ಗೊತ್ತಿಲ್ಲದೆ ಎಂತಹ ಸಣ್ಣ ಪ್ರಾಣಿಯಾದರೂ ಕಣ್ಣು ಪಿಳಕಿಸಲಾರದು. ವರುಣನು ನೀತಿಯನ್ನು ರಕ್ಷಿಸುವವ ನಾಗಿರುವುದರಿಂದ ವೈದಿಕ ದೇವತೆಗಳಲ್ಲಿ ಈತನ ಸ್ಥಾನ ಉಚ್ಚತರವಾದುದು. ಈತನ ಕಟ್ಟಳೆಗಳನ್ನು ಮುರಿಯುವುದರಿಂದ ಈತನು ಕೋಪಿಸಿ ಅಪರಾಧಿಯನ್ನು ದಂಡಿಸುವನು. ಪಾಪಿಗಳನ್ನು ದಂಡಿಸಲು ಈತನ ಹತ್ತಿರ ಪಾಶವುಂಟು. ತನ್ನನ್ನು ಪೂಜಿಸುವವರಿಗೂ ಪಶ್ಚಾತ್ತಾಪಪಟ್ಟವರಿಗೂ ದಯೆಯನ್ನು ತೋರಿಸಿ ಪಾಪದಿಂದ ಬಿಡುಗಡೆ ಮಾಡುವನು.

***ಉಷಾದೇವಿ** : ಸುಮಾರು ಇಪ್ಪತ್ತೈದು ಸೂಕ್ತಗಳಲ್ಲಿ ಉಷಾದೇವಿಯ ಪ್ರಾರ್ಥನೆ ಇದೆ. ಈಕೆಯ ಶರೀರವರ್ಣನೆ ಅಷ್ಟು ಸ್ಪಷ್ಟವಾಗಿಲ್ಲ. ನಟಿಯಂತೆ ಸುಂದರ ವಸ್ತ್ರಗಳನ್ನು ಧರಿಸಿ ಪ್ರಕಾಶಮಯಳಾಗಿ ಪೂರ್ವದಿಕ್ಕಿನಲ್ಲಿ ತನ್ನ ಬೆಡಗನ್ನು ಬೀರುವಳು; ಅದೇ ಸ್ನಾನಮಾಡಿ ಹೊರಬಿದ್ದಂತೆ ಪ್ರಕಾಶದಿಂದೊಡಗೂಡಿ ಕತ್ತಲೆಯನ್ನು ದೂರ ಮಾಡುತ್ತ ರಾತ್ರಿಯ ಕಪ್ಪು ಹೊದಿಕೆಯನ್ನು ಸರಿಸುತ್ತ ಬರುವಳು. ಅತಿ ಪ್ರಾಚೀನಳಾದಾಗ್ಯೂ ಪುನಃ ಪುನಃ ಹುಟ್ಟುವುದರಿಂದ ತರುಣಿಯಾಗಿರುವಳು. ಈಕೆ ಎಚ್ಚೆತ್ತ ಕೂಡಲೆ ಆಕಾಶದಲ್ಲಿ ಬೆಳಕನ್ನು ಬೀರುವಳು. ಸ್ವರ್ಗದ ಬಾಗಿಲನ್ನು ತೆರೆಯುವಳು. ಈಕೆ ದುಃಸ್ವಪ್ನಗಳನ್ನೂ ದುಷ್ಟಭೂತಗಳನ್ನೂ ಕತ್ತಲೆಯನ್ನೂ ದೂರ ಮಾಡುವಳು; ಮರೆಯಾದ ಸಂಪತ್ತನ್ನು ದೊರಕಿಸಿ ಅದನ್ನು ತನ್ನ ಭಕ್ತರಲ್ಲಿ ಹಂಚಿಕೊಡುವಳು. ಈಕೆ ಜನರನ್ನು ಎಬ್ಬಿಸಿ ಯಜ್ಞಯಾಗಾದಿಗಳನ್ನು ಮಾಡಹಚ್ಚುವುದರಿಂದ ದೇವತೆಗಳಿಗೆ ಉಪಯುಕ್ತಳಾಗಿರುವಳು. ಉಷಾದೇವಿಗೂ ಸೂರ್ಯನಿಗೂ ನಿಕಟ ಸಂಬಂಧವುಂಟು.

---

* *A.A. Macdonell, Vedic Mythology pp.48-49, Vedic Reader p. 92.*

ಆತನಿಗೆ ದಾರಿಯನ್ನು ಮಾಡಿಕೊಟ್ಟಿರುವಳು. ರಾತ್ರಿಯ ಅಕ್ಕನೆಂದೂ ಆಕಾಶದಲ್ಲಿ ಹುಟ್ಟಿರುವುದರಿಂದ ದಿವೋದುಹಿತಾ ಎಂದೂ ಆಕೆಗೆ ಹೆಸರುಗಳುಂಟು. ಅಗ್ನಿ ಆಕೆಯ ಪ್ರಿಯನೆಂದು ಹೇಳುವರು. ಅಶ್ವಿನೀದೇವತೆಗಳ ಕೂಡ ಈಕೆಯ ಸಂಬಂಧವಿದೆ. ಈಕೆ ತನ್ನ ಅರ್ಚಕರಿಗೆ ಧನವನ್ನೂ ಮಕ್ಕಳನ್ನೂ ರಕ್ಷಣೆಯನ್ನೂ ದೀರ್ಘಾಯುಷ್ಯವನ್ನೂ ಕೊಡುವಳು. ಸ್ವಭಾವತಃ ಈಕೆ ಮಘೋನಿ.

***ಅಶ್ವಿನೀಕುಮಾರರು** : ಸುಮಾರು ಐವತ್ತು ಸಂಪೂರ್ಣ ಸೂಕ್ತಗಳಲ್ಲಿ ಮತ್ತು ಅನೇಕ ಸೂಕ್ತಗಳಲ್ಲಿ ಅಲ್ಲಲ್ಲಿ ಇವರ ಪ್ರಾರ್ಥನೆಯಿದೆ. ಇಂದ್ರ ಅಗ್ನಿ ಸೋಮದೇವತೆಗಳ ತರುವಾಯ ಇವರ ಮಹತ್ತ್ವವೇ ಹೆಚ್ಚು. ಇವರು ಅವಳಿ-ಜವಳಿಯಾಗಿದ್ದು ಯಾವಾಗಲೂ ಕೂಡೇ ಇರುವರು. ಪ್ರಾಚೀನರಾದಾಗ್ಯೂ ತರುಣರು. ಪ್ರಕಾಶಮಾನರೂ ಪ್ರಕಾಶದ ಅಧಿಪತಿಗಳೂ ಬಂಗಾರದ ಪ್ರಭೆಯುಳ್ಳವರೂ ಸುಂದರರೂ ಆಗಿದ್ದು ಕಮಲದ ಮಾಲೆಯನ್ನು ಧರಿಸುವರು. ಬಲವಂತರೂ ಚಪಲರೂ ಬುದ್ಧಿವಂತರೂ ಸಿದ್ಧಿವಂತರೂ ಆಗಿರುವರು. ದಸ್ರಾ ಮತ್ತು ನಾಸತ್ಯ ಎಂಬಿವು ಇವರ ಹೆಸರುಗಳು. ಇವರು ಮಧು ಭಕ್ಷಕರು. ಇವರ ಹತ್ತಿರ ಮಧುವಿನ ಸಂಗ್ರಹವಿದೆ. ಸೋಮರಸಪಾನಕ್ಕೆ ಇವರಿಗೆ ಆಗಾಗ ಉಷಾದೇವಿ ಸೂರ್ಯರಿಂದ ಆಮಂತ್ರಣವಿರುವುದು. ಸೋಮರಸವನ್ನು ಪ್ರೀತಿಯಿಂದ ಕುಡಿಯುವರು. ಇವರ ರಥ ಸೂರ್ಯನಂತೆ ಇದ್ದು ಅದರ ಪ್ರತಿಯೊಂದು ಅವಯವವೂ ಬಂಗಾರದಿಂದ ಮಾಡಲ್ಪಟ್ಟಿದೆ. ಅದಕ್ಕೆ ಮೂರು ಗಾಲಿಗಳುಂಟು. ಅದರ ವೇಗ ಮನಸ್ಸಿಗಿಂತಲೂ ತೀವ್ರವಾಗಿದೆ. ಅದನ್ನು ಮಾಡಿದವರು ಋಭುಗಳು. ಆ ರಥವನ್ನು ಕುದುರೆಗಳು, ಪಕ್ಷಿಗಳು, ರೆಕ್ಕೆಗಳುಳ್ಳ ಕುದುರೆಗಳು, ಎಮ್ಮೆಗಳು ಅಥವಾ ಒಂದೇ ಕತ್ತೆ (ರಾಸಭ) ಎಳೆಯುವುವು. ಪೃಥಿವೀ ಮತ್ತು ದಿವವನ್ನು ಒಂದೇ ದಿವಸದಲ್ಲಿ ಸುತ್ತುಹಾಕುವರು. ಐದು ದೇಶಗಳನ್ನು ದಾಟಿಹೋಗುವರು. ಇವರ ವಾಸಸ್ಥಳ ಯಾರಿಗೂ ಗೊತ್ತಿಲ್ಲ. ಇವರು ದಿವದಿಂದ, ಅಂತರಿಕ್ಷದಿಂದ, ಪೃಥಿವಿಯಿಂದ ಅಥವಾ ಸಮುದ್ರದಿಂದ ಬರುವರು. ಇವರು ಬರುವ ವೇಳೆ ಅರುಣೋದಯ ಮತ್ತು ಸೂರ್ಯೋದಯದ ಮಧ್ಯ ಉಷಾದೇವಿ ಇವರನ್ನು ಎಬ್ಬಿಸುವಳು. ಇವರು ರಥವನ್ನು ಹತ್ತಿಕೊಂಡು ಆಕೆಯನ್ನು ಅನುಸರಿಸುವರು. ತಮ್ಮ ಅರ್ಚಕರ ನೈವೇದ್ಯವನ್ನು ಸ್ವೀಕರಿಸಲು ಪೃಥ್ವಿಗೆ ಬರುವರು. ಇವರು ಮಧ್ಯಾಹ್ನದಲ್ಲಿಯೂ ಸೂರ್ಯಾಸ್ತವಾದ ನಂತರವೂ ಬರುವರು. ಇವರು ದಿವದ ಮಕ್ಕಳು. ಮತ್ತೊಂದೆಡೆಯಲ್ಲಿ ವಿವಸ್ವಂತ ಮತ್ತು ತ್ವಷ್ಟಾರನ ಮಗಳಾದ ಸರಣ್ಯುವಿನ ಮಕ್ಕಳೆಂದು ಹೇಳಿದೆ. ಪೂಷಣನು ಇವರ ಮಗನಂತೆ. ಇವರು ಸೂರ್ಯಾದೇವಿಯು

---

* *A.A. Macdonell, Vedic Mythology p. 49, Vedic Reader p. 128.*

ಪತಿಗಳು. ಮದುವೆಯ ಸೂಕ್ತಗಳಲ್ಲಿ ವಧುವನ್ನು ಸುರಕ್ಷಿತವಾಗಿ ತಮ್ಮ ರಥದಲ್ಲಿ ಒಯ್ಯಬೇಕೆಂದೂ, ಆಕೆಗೆ ಮಕ್ಕಳಾಗುವಂತೆ ಹರಸಬೇಕೆಂದೂ ಇವರನ್ನು ಕುರಿತು ಪ್ರಾರ್ಥನೆ ಇದೆ. ಅಶ್ವಿನೀಕುಮಾರರು ಬಹಳ ಸಹಾಯಮಾಡುವ ದೇವತೆಗಳು. ಕಷ್ಟದಿಂದ ತೀವ್ರವಾಗಿ ಪಾರುಮಾಡುವರು. ಇವರು ವೈದ್ಯದೇವತೆಗಳು. ಬೇನೆಯನ್ನು ಗುಣಮಾಡುವರು. ಕಣ್ಣುಗಳನ್ನೂ ಊನವಾದ ಅವಯವಗಳನ್ನೂ ಸರಿಪಡಿಸುವರು. ಭುಜ್ಯ, ಅತ್ರಿ, ಜಾಯುಷ, ಪೇದು, ಚ್ಯವಾನ ಮೊದಲಾದವರಿಗೆ ಸಹಾಯಮಾಡಿ ಅವರನ್ನು ಸಂಕಟದೊಳಗಿಂದ ಪಾರು ಮಾಡಿರುವರು. ಇವರು ಮಾಡಿದ ಆಶ್ಚರ್ಯಕರವಾದ ಕೃತಿಗಳ ಬಗ್ಗೆ ಅನೇಕ ಕಥೆಗಳುಂಟು.

***ಸವಿತೃ** : ಸುಮಾರು ೧೧ ಸೂಕ್ತಗಳಲ್ಲಿ ಈತನ ಸ್ತೋತ್ರವಿದೆ. ಈತನಿಗೆ ಸಂಬಂಧಿಸಿದ ಪ್ರತಿಯೊಂದು ವಸ್ತುವೂ ಬಂಗಾರದಿಂದ ಮಾಡಿದುದು. ಈತನು ಸೂರ್ಯನ ಒಂದು ಪ್ರಕಾರ.

****ಪೂಷನ್** : ಸುಮಾರು ಎಂಟು ಸೂಕ್ತಗಳಲ್ಲಿ ಇವನ ಸ್ತುತಿ ಇದೆ. ಇವನ ರಥವನ್ನು ಆಡುಗಳು ಎಳೆಯುವುವು. ಈತನ ಆಹಾರ ಕರಂಭ. ಈತನು ಎಲ್ಲ ಪ್ರಾಣಿಗಳನ್ನೂ ನೋಡುವನು. ಮಾರ್ಗಗಳಲ್ಲಿಯ ತೊಂದರೆಗಳನ್ನು ದೂರಮಾಡಿ ಮಾರ್ಗಗಳನ್ನು ರಕ್ಷಿಸುವನು. ಈತನಿಗೆ ವಿಮುಚೋನಪಾತ್ ಎಂದು ಹೆಸರುಂಟು. ಈತನು ದನಗಳನ್ನು ರಕ್ಷಿಸುವನು; ಮನೆಗೆ ಹೊಡೆತರುವನು; ಕಳೆದವುಗಳನ್ನು ಹುಡುಕಿಕೊಡುವನು. ಈತನು ಸೂರ್ಯನಿಗೆ ಸಂಬಂಧಿಸಿದವನಿದ್ದು ಸೂರ್ಯನ ಒಂದು ಭಾಗವಾಗಿರುವನು.

***** ಸೂರ್ಯ** : ಹತ್ತು ಸೂಕ್ತಗಳಿಂದ ಸ್ತುತಿಸಲ್ಪಟ್ಟಿದ್ದಾನೆ. ಈತನು ದೂರದರ್ಶಿ ಸರ್ವದರ್ಶಿಯಾಗಿದ್ದು ಜಗತ್ತಿನ ಜನರನ್ನೂ ಅವರು ಮಾಡುವ ಉಚ್ಚನೀಚ ಕಾರ್ಯಗಳನ್ನೂ ನೋಡುವನು. ಈತನು ಚರಾಚರ ವಸ್ತುಗಳ ರಕ್ಷಕನು. ಈತನ ರಥಕ್ಕೆ ಏತಶ ಎಂಬ ಹೆಸರಿನ ಒಂದೇ ಕುದುರೆಯನ್ನಾಗಲಿ ಹಾರಿತ ಎಂಬ ಏಳು ಕುದುರೆಗಳನ್ನಾಗಲಿ ಹೂಡಿರುವರು. ಈತನಿಗೆ ಆದಿತ್ಯನೆಂದು ಮತ್ತೊಂದು ಹೆಸರುಂಟು. ಈತನ ತಾಯಿ ಅದಿತಿ. ತಂದೆ ದ್ಯೌಃಪಿತರ್. ಸಮುದ್ರದಲ್ಲಿ ಅಡಗಿಕೊಂಡ ಈತನನ್ನು ದೇವತೆಗಳು ಆಕಾಶದಲ್ಲಿ ಇಟ್ಟರು.

---

* *A.A. Macdonell: Vedic Mythology p. 32, Vedic Reader p.10.*

** *A.A. Macdonell: Vedic Mythology p.35, Vedic Reader p. 111.*

*** *A.A. Macdonell: Vedic Mythology p. 30, Vedic Reader p. 124.*

*ವಿಷ್ಣು : ವೇದದಲ್ಲಿ ಈತನ ಸ್ಥಾನ ತೀರ ಸಣ್ಣದು. ಐದಾರು ಸೂಕ್ತಗಳಲ್ಲಿ ಈತನ ವರ್ಣನೆಯಿದೆ. ಈತನು ಮೂರು ಹೆಜ್ಜೆಗಳಲ್ಲಿ ಪೃಥ್ವಿ, ಅಂತರಿಕ್ಷ ಆಕಾಶಗಳನ್ನು ಆಕ್ರಮಿಸುವನು. ಈತನಿಗೆ ಉರುಗಾಯ ಉರುಕ್ರಮ ಎಂಬ ಹೆಸರುಗಳುಂಟು. ವಿಷ್ಣು ನಾಲ್ಕು ಋತುಗಳನ್ನೂ ೩೬೦ ದಿವಸಗಳನ್ನೂ ಚಕ್ರದಂತೆ ತಿರುಗಿಸುವನು.

ಸವಿತೃ, ಪೂಷನ್, ಸೂರ್ಯ, ವಿಷ್ಣು, ಮಿತ್ರ, ಭಗ, ಅರ್ಯಮನ್ ಈ ಎಲ್ಲಿ ದೇವತೆಗಳೂ ಸೂರ್ಯನ ಅಂಶಗಳು. ವೇದದಲ್ಲಿ ಅವರು ದೇವತೆಗಳ ಸ್ವರೂಪದಿಂದ ಸ್ತುತಿಸಲ್ಪಟ್ಟಿದ್ದಾರೆ.

**ರುದ್ರ : ಋಗ್ವೇದದಲ್ಲಿ ರುದ್ರನ ಸ್ಥಾನ ಸಣ್ಣದು. ಮೂರೇ ಸೂಕ್ತಗಳಲ್ಲಿ ಈತನ ಪ್ರಾರ್ಥನೆ ಇದೆ. ಈತನ ಕೈ, ಭುಜ, ಅವಯವಗಳ ಉಲ್ಲೇಖವಿದೆ. ಈತನು ಜಟಾಧಾರಿ. ಈತನ ಬಣ್ಣ ಕಂದು. ಆಕೃತಿ ಪ್ರಕಾಶಮಾನ. ಬಂಗಾರದ ಆಭರಣಗಳನ್ನೂ ಪುತ್ಥಳಿ ಸರವನ್ನೂ ಧರಿಸುವನು. ಈತನು ಮರುತ್ ದೇವತೆಗಳ ತಂದೆ. ಬಲು ಭೀಕರನು. ಬಲವುಳ್ಳವನೂ ಚಪಲನೂ ಆಗಿದ್ದು, ಶಕ್ತಿಯಲ್ಲಿ ಈತನನ್ನು ಯಾರೂ ಸರಿಗಟ್ಟಲಾರರು. ಈತನು ಯಾವಾಗಲೂ ತರುಣನಾಗಿರುವನು. ಈತನು ಈಶಾನನು; ಜಗತ್ತಿನ ತಂದೆ; ಜನರು ಮತ್ತು ದೇವತೆಗಳು ಮಾಡುವುದನ್ನೆಲ್ಲ ಅರಿಯುವನು. ಈತನು ಸುಂದರನೂ (ಮೀಢ್ವಾಂಸ) ಶಿವನೂ ಬಹು ದೊಡ್ಡವೈದ್ಯನೂ ಆಗಿರುವನು. ಭಕ್ತರ ರೋಗಗಳನ್ನು ನಿವಾರಿಸುವುದರಿಂದ ಈತನಿಗೆ ಜಲಾಷ, ಜಲಾಷಭೇಷಜ ಎಂಬ ಹೆಸರುಗಳುಂಟು.

***ಮರುತ್ ದೇವತೆಗಳು : ಋಗ್ವೇದದಲ್ಲಿ ಮಹತ್ತ್ವದ ಸ್ಥಾನವನ್ನು ಇವರು ಪಡೆದಿರುವರು. ಸುಮಾರು ೪೦ ಸೂಕ್ತಗಳಲ್ಲಿ ಇವರ ಸ್ತುತಿ ಇವೆ. ಇವರು ಯಾವಾಗಲೂ ಗುಂಪು ಗುಂಪಾಗಿ ಸಂಚರಿಸುವುದರಿಂದ ಇವರಿಗೆ ಮರುತ್ ಗಣವೆಂದು ಹೆಸರು. ಇವರ ಸಂಖ್ಯೆ ಮೂರು–ಅರವತ್ತು ಅಥವಾ ಮೂರು–ಏಳು. ಇವರು ರುದ್ರನ ಮಕ್ಕಳು. ತ್ರಿದಿವದಲ್ಲಿ ವಾಸಿಸುವರು. ಬಂಗಾರದ ವರ್ಣದವರು. ಬೆಂಕಿಯಂತೆ ಪ್ರಕಾಶಮಾನರು; ವಿದ್ಯುತ್ತಿಗೆ ವಿಶೇಷವಾಗಿ ಸಂಬಂಧಿಸಿದವರು. ಇವರ ಆಯುಧಗಳು ಬಿಲ್ಲು ಬಾಣ. ಹೂವಿನ ಮಾಲೆಗಳನ್ನೂ ಬಂಗಾರದ ಹೊದಿಕೆಯ ಆಭರಣಗಳನ್ನೂ

---

* *A.A. Macdonell: Vedic Mythology, p. 37, Vedic Reader p. 30.*

** *A.A. Macdonell: Vedic Mythology, p. 74, Vedic Reader p. 56.*

*** *A.A. Macdonell: Vedic Mythology, p.77, Vedic Reader p. 21.*

ಶಿರಸ್ತ್ರಾಣಗಳನ್ನೂ ಧರಿಸುವರು. ತರುಣರು, ಬಲಶಾಲಿಗಳು, ಭೀಕರರು, ಆದರೂ ಚಿಕ್ಕ ಬಾಲಕರಂತೆ ಆಟಗಳಲ್ಲಿ ಪ್ರಿಯರು.

***ಬೃಹಸ್ಪತಿ** : ಸುಮಾರು ೧೧ ಸೂಕ್ತಗಳಲ್ಲಿ ಈ ದೇವತೆಯ ಸ್ತೋತ್ರವಿದೆ. ಈತನಿಗೆ ಬ್ರಹ್ಮಣಸ್ಪತಿ ಎನ್ನುವರು. ಬಿಲ್ಲು ಬಾಣಗಳನ್ನು ಧರಿಸುವನು. ಈತನ ಆಯುಧಗಳು ಬಂಗಾರದ ಸುತ್ತಿಗೆ ಅಥವಾ ಕಬ್ಬಿಣದ ಕೊಡಲಿ. ಈತನ ರಥದ ಕುದುರೆಗಳು ಪಿಶಾಚಿಗಳನ್ನು ನಾಶಮಾಡುವುವು. ಈತನು ದೇವತೆಗಳ ಪಿತನು. ಸ್ತೋತ್ರಗಳನ್ನು ಕಲ್ಪಿಸಿದವನು. ಈತನನ್ನು ಬಿಟ್ಟು ಯಾವ ಯಾಗವೂ ಸಾಧ್ಯವಿಲ್ಲ. ಈತನು ಇಂದ್ರನ ಸಂಗಡ ಯುದ್ಧಕ್ಕೆ ಹೋಗುವನು. ಈತನ ಹಾಡುಗಳನ್ನು ಕೇಳಿ ಉತ್ಸಾಹಿತನಾದ ಇಂದ್ರನು ವಲನೆಂಬ ದೈತ್ಯನನ್ನು ಸಂಹರಿಸಿದನು.

ಪ್ರಕೃತಿಯ ಶಕ್ತಿಗಳೇ ಆಕಾರವನ್ನು ಹೊಂದಿ ಋಗ್ವೇದದ ದೇವತೆಗಳಾಗಿರುವರು. ಸೋಮರಸ ಅಥವಾ ಹವಿಸ್ಸನ್ನು ದೇವತೆಗಳಿಗೆ ಅರ್ಪಣೆ ಮಾಡುವಾಗ ಸ್ತುತಿಗೋಸುಗ ಸೂಕ್ತಗಳನ್ನು ರಚಿಸಿದ್ದಾರೆ. ದೇವತೆಗಳು ೩೩ ಎಂದು ಋಗ್ವೇದದಲ್ಲಿ ಹೇಳಿದೆ. ಇದರಲ್ಲಿ ಮರುತ್ ಮೊದಲಾದ ಗುಂಪುಗಳಾಗಿರುವ ದೇವತೆಗಳು ಸಮಾವೇಶವಾಗಿಲ್ಲ. ವೇದಕಾಲದ ಋಷಿಗಳು ದೇವತೆಗಳು ಶ್ರೇಷ್ಠ ಮನುಷ್ಯರಂತೆ ಕಾಣುವರು ಮತ್ತು ಹಾಗೆ ವರ್ಣಿಸುವರು. ಸೂರ್ಯನ ಕೈಗಳೆಂದರೆ ಕಿರಣಗಳು. ಅಗ್ನಿಯ ನಾಲಗೆ ಮತ್ತು ಅವಯವಗಳೆಂದರೆ ಉರಿ. ಕೆಲವು ದೇವತೆಗಳು ಯುದ್ಧಮಾಡುವವರಾದರೆ ಕೆಲವರು ಯಜ್ಞಯಾಗಾದಿಗಳನ್ನು ಮಾಡುವ ಆಚಾರ್ಯರು. ಎಲ್ಲರೂ ಆಕಾಶ ಗಮನಶಕ್ತಿಯುಳ್ಳವರು. ಮನುಷ್ಯರ ಉತ್ತಮವಾದ ಆಹಾರವನ್ನು ದೇವತೆಗಳು ಸ್ವೀಕರಿಸುವರು. ಒಳ್ಳೆಯ ಪ್ರೀತಿಯಿಂದ ಸೋಮರಸವನ್ನು ಕುಡಿಯುವರು. ಇವರ ವಾಸ ತ್ರಿದಿವದಲ್ಲಿ. ಅಲ್ಲಿ ಸಂಪೂರ್ಣವಾಗಿ ಸುಖಿಗಳಾಗಿರುವರು. ಎಲ್ಲರೂ ಬಲವಂತರು. ವಿಶ್ವದ ಸ್ಥಿತಿಗತಿಗಳನ್ನು ಸರಿಯಾಗಿಡುವರು. ಪ್ರತಿಯೊಂದು ವ್ಯಕ್ತಿಯೂ ಇವರ ಇಚ್ಛೆಗೆ ಅಧೀನವಾಗಿರಲೇಬೇಕು. ಮಾನವರಿಗೆ ಕಲ್ಯಾಣವನ್ನು ಮಾಡುವರು. ದುಷ್ಟರನ್ನು ದಂಡಿಸುವರು. ಶಿಷ್ಟರನ್ನು ಪಾಲಿಸುವರು.

ಯಜುರ್ವೇದ

ಇದು ಅಧ್ವರ್ಯುವಿನ ಕೈಪಿಡಿ. ಇದರಲ್ಲಿ ೧೦೧ ಶಾಖೆಗಳಿರುವುವೆಂದು ಪತಂಜಲಿ ಹೇಳುತ್ತಾನೆ. ಆದರೆ ಈಗ ನಮಗೆ ೫ ಸಂಹಿತೆಗಳೂ ೫ ಶಾಖೆಗಳೂ ಗೊತ್ತಾಗಿವೆ. ಅವು ಯಾವುವೆಂದರೆ: ೧. ಕಾಠಕ, ೨. ಕಪಿಷ್ಠಲ, ೩. ಮೈತ್ರಾಯಣಿ,

---

* *A.A. Macdonell: Vedic Mythology, p.101, Vedic Reader p. 83.*

೪. ತೈತ್ತಿರೀಯ. ೫. ವಾಜಸನೇಯ. ಇವುಗಳಲ್ಲಿ ಮೊದಲಿನ ನಾಲ್ಕು ಒಂದಕ್ಕೊಂದು ಹೋಲುವುವು. ಅವುಗಳಿಗೆ ಕೃಷ್ಣ ಯಜುರ್ವೇದವೆಂದು ಹೆಸರು. ಐದನೆಯದು ಶುಕ್ಲ ಯಜುರ್ವೇದ. ಕೃಷ್ಣ ಮತ್ತು ಶುಕ್ಲ ಯಜುರ್ವೇದಗಳಲ್ಲಿಯ ಮುಖ್ಯ ಭೇದಗಳು ಇಷ್ಟು: ಶುಕ್ಲ ಯಜುರ್ವೇದದಲ್ಲಿ ಮಂತ್ರಗಳಿವೆ. ಈ ಮಂತ್ರಗಳು ಪ್ರಾರ್ಥನೆಗಳನ್ನೂ ಯಾಗಾದಿಗಳ ನಿಯಮಗಳನ್ನೂ ಒಳಗೊಂಡಿವೆ. ಕೃಷ್ಣ ಯಜುರ್ವೇದದಲ್ಲಿ ಈ ಮಂತ್ರಗಳಲ್ಲದೆ ಯಾಗಗಳನ್ನು ಹೇಗೆ ಮಾಡಬೇಕೆಂಬ ಪದ್ಧತಿಗಳೂ ಅವುಗಳ ಬಗ್ಗೆ ಸಂವಾದಗಳೂ ಇವೆ. ಋತ್ವಿಜರಿಗೆ ಇವುಗಳ ಅಂತರದ ಮಹತ್ತ್ವವಿದ್ದರೂ ಸಾಮಾನ್ಯರಿಗೆ ಶುಕ್ಲ ಯಜುರ್ವೇದದ ವಿಷಯ ತಿಳಿದರೆ ಸಾಕು. ಶುಕ್ಲ ಯಜುರ್ವೇದಕ್ಕೆ ವಾಜಸನೇಯ ಸಂಹಿತೆಯೆಂದು ಕರೆಯುವರೆಂಬುದನ್ನು ಮೇಲೆಯೇ ಹೇಳಿದೆ. ಇದರಲ್ಲಿ ೪೦ ಭಾಗಗಳಿವೆ. ಮೊದಲನೆಯ ೨೫ ಭಾಗಗಳು ಮಹಾಯಜ್ಞಗಳಲ್ಲಿ ಉಪಯೋಗಿಸುವ ಪ್ರಾರ್ಥನೆಯಿಂದೊಡಗೂಡಿವೆ. ಮೊದಲನೆಯ ಎರಡು ಭಾಗಗಳಲ್ಲಿ ದರ್ಶಪೂರ್ಣಮಾಸ, ಪಿಂಡಪಿತೃ ಯಜ್ಞಗಳಿವೆ. ಮೂರನೆಯದರಲ್ಲಿ ಅಗ್ನಿಹೋತ್ರ ಚಾತುರ್ಮಾಸ್ಯಾದಿಗಳಿಗೆ ಸಂಬಂಧಿಸಿದ ಮಂತ್ರಗಳಿವೆ. ೪ರಿಂದ ೮ರ ವರೆಗೆ ಸೋಮಯಾಗ ಮತ್ತು ಅದಕ್ಕೆ ಸಂಬಂಧಿಸಿದ ಪಶುಯಾಗಗಳ ವರ್ಣನೆಯಿದೆ. ೯, ೧೦ರಲ್ಲಿ ವಾಜಪೇಯ ಮತ್ತು ರಾಜಸೂಯ ಯಾಗಗಳ ಮಂತ್ರಗಳಿವೆ. ೧೧ರಿಂದ ೧೮ರ ವರೆಗೆ ಅಗ್ನಿಚಯನದ ಮಂತ್ರಗಳಿವೆ. ೧೯, ೨೦, ೨೧ರಲ್ಲಿ ಸೌತ್ರಾಮಣಿ ಯಾಗದ ಮಂತ್ರಗಳಿವೆ. ಜಯವನ್ನು ಇಚ್ಛಿಸುವ ಬ್ರಾಹ್ಮಣನೂ, ಕಳೆದುಕೊಂಡ ರಾಜ್ಯವನ್ನು ಮತ್ತೆ ಸಂಪಾದಿಸಲು ಇಚ್ಛಿಸುವ ರಾಜನ್ಯನೂ. ಯುದ್ಧದಲ್ಲಿ ಜಯವನ್ನು ಸಂಪಾದಿಸಲು ಇಚ್ಛಿಸುವ ಕ್ಷತ್ರಿಯನೂ, ವ್ಯಾಪಾರದಲ್ಲಿ ವಿಪುಲವಾದ ಧನವನ್ನು ದೊರಕಿಸಲು ಇಚ್ಛಿಸುವ ವೈಶ್ಯನೂ ಈ ಯಾಗವನ್ನು ಮಾಡಬೇಕು. ೨೨ರಿಂದ ೨೫ರ ವರೆಗೆ ಅಶ್ವಮೇಧಯಾಗದ ಮಂತ್ರಗಳಿವೆ. ೨೬ರಿಂದ ೨೯ರ ವರೆಗೆ ಮಂತ್ರಗಳೂ ಪ್ರಾರ್ಥನೆಗಳೂ ಇವೆ. ೩೦ರಲ್ಲಿ ಪುರುಷಮೇಧಯಜ್ಞದ ಸಂಪೂರ್ಣ ವಿವರಣೆಯಿದೆ. ೩೧ರಲ್ಲಿ ಪುರುಷಸೂಕ್ತವಿದೆ. ೩೨ರಿಂದ ೩೪ರ ವರೆಗೆ ಸರ್ವಮೇಧ ಯಜ್ಞದ ವಿವರಣೆಯಿದೆ. ೩೪ನೆಯದರಲ್ಲಿ ಶಿವ ಸಂಕಲ್ಪೋಪನಿಷತ್ತಿದೆ. ೩೫ರಲ್ಲಿ ಸ್ಮಶಾನವಿಧಿಯ ಮಂತ್ರಗಳಿವೆ. ೩೬ರಿಂದ ೩೯ರ ವರೆಗೆ ಪ್ರವರ್ಗವಿಧಿಯಿದೆ. ೪೦ರಲ್ಲಿ ಈಶಾವಾಸ್ಯೋಪನಿಷತ್ತಿದೆ. ಯಜುರ್ವೇದ ದಲ್ಲಿರುವ ಮಂತ್ರಗಳು ಮತ್ತು ಪ್ರಾರ್ಥನೆಗಳು ಗದ್ಯದಲ್ಲಿಯೂ ಪದ್ಯದಲ್ಲಿಯೂ ಇವೆ. ಪದ್ಯ ಋಚೆಗಳು; ಗದ್ಯಗಳಿಗೆ ಯಜುಸ್ಸುಗಳೆನ್ನುವರು.

ಸಾಮವೇದ

ಇದರಲ್ಲಿ ಅರ್ಚಕವೆಂದೂ ಉತ್ತರಾರ್ಚಕವೆಂದೂ ಎರಡು ಭಾಗಗಳಿವೆ. ಇದರೊಳಗಿನ ಬಹುತರ ಎಲ್ಲ ಮಂತ್ರಗಳನ್ನೂ ಋಗ್ವೇದದಿಂದಲೇ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಸುಮಾರು ೧೮೧೦ ಸಾಮಗಳಿವೆ. ಇದು ಉದ್ಗಾತೃವಿನ ಪುಸ್ತಕ. ಅರ್ಚಕರಲ್ಲಿ ೫೮೫ ಋಚೆಗಳೂ ಉತ್ತರಾರ್ಚಕದಲ್ಲಿ ೧೨೦೦ ಋಚೆಗಳೂ ಇವೆ. ಈ ಎಲ್ಲ ಋಚೆಗಳನ್ನು ಮುಖ್ಯ ಯಾಗಗಳ ಪ್ರಕಾರ ಸಂಕಲ್ಪಿಸಿದ್ದಾರೆ. ಇವುಗಳನ್ನು ರಾಗಬದ್ಧವಾಗಿ ಅನ್ನುವರು.

ಅಥರ್ವಾಂಗಿರಸವೇದ ಅಥವಾ ಅಥರ್ವಣವೇದ

ಇದರಲ್ಲಿ ೭೩೧ ಸೂಕ್ತಗಳಿವೆ. ಅವುಗಳಲ್ಲೆಲ್ಲಾ ಸುಮಾರು ೬೦೦೦ ಮಂತ್ರಗಳಿವೆ. ಅವುಗಳನ್ನೆಲ್ಲಾ ೨೦ ಅಧ್ಯಾಯಗಳಲ್ಲಿ ಸಂಕಲಿಸಿದ್ದಾರೆ. ಛಂದಸ್ಸಿನಲ್ಲೂ ಭಾಷೆಯಲ್ಲೂ ಋಗ್ವೇದವನ್ನು ಹೋಲುವುದು. ಇದರಲ್ಲಿ ಉಚ್ಚತರದ ವಿಚಾರಗಳಿಲ್ಲ. ಯಂತ್ರಗಳೂ ಮಂತ್ರಗಳೂ ಮೋಡಿಮಾಡುವ ವಿದ್ಯೆಗಳೂ ಇವೆ. ಈ ವಿಷಯಗಳು ಪ್ರಾಚೀನವಾಗಿರುವಂತೆ ತೋರುವುದು. ಆಡಲ್ಬರ್ಟ್ ಕೂಹ್ನ ಎಂಬುವನು ಅಥರ್ವವೇದದ ಕೆಲವು ಯಂತ್ರಮಂತ್ರಗಳು ಜರ್ಮನಿ, ಲಿತುವೇನಿಯಾ, ರಷ್ಯಾ ದೇಶಗಳಲ್ಲಿ ಪ್ರಚಾರದಲ್ಲಿರುವ ಯಂತ್ರಮಂತ್ರಗಳಿಗೆ ಸರಿಹೋಲುವುದೆಂದು ಹೇಳುವನು[1]. ರೋಗಾದಿಗಳು ದುಷ್ಟ ಭೂತಗಳಿಂದ ಉಂಟಾಗುವುವೆಂದೂ ಅವುಗಳನ್ನು ಮಂತ್ರ ತಂತ್ರಗಳಿಂದ ಕಡಿಮೆಮಾಡಲು ಬರುವುದೆಂದೂ ಅಥರ್ವವೇದ ಹೇಳುವುದಲ್ಲದೆ ಅಂತಹ ಮಂತ್ರತಂತ್ರಗಳು ಅದರ ಮಹತ್ತ್ವದ ಭಾಗಗಳಾಗಿವೆ. ಇವಕ್ಕೆ ಭೈಷಜ್ಯಾನಿ ಎಂದು ಹೇಳುವರು. ಇವುಗಳಲ್ಲದೆ ಬೆಳೆಗಳಿಗೆ ಫಲಗಳಾಗದಂತೆ ಮಾಡುವುದು, ಗಂಡ ಹೆಂಡಿರ ಪ್ರೇಮವನ್ನು ಬೆಳೆಸುವುದು, ವೈರಿಗಳನ್ನು ದಂಡಿಸುವುದು ಮುಂತಾದ ವಿಷಯಗಳನ್ನು ಅಥರ್ವವೇದ ಒಳಗೊಂಡಿರುವುದು. ಇದಕ್ಕೆ ಉಳಿದ ವೇದಗಳಿಗೆ ಇರತಕ್ಕಷ್ಟು ಪ್ರಾಮಾಣ್ಯವಿಲ್ಲ.

ಋಗ್ವೇದದ ಕಾಲದಲ್ಲಿ ಯಜ್ಞಯಾಗಾದಿಗಳು ಮೂರ್ತಸ್ವರೂಪವನ್ನು ಹೊಂದಿದ್ದಿಲ್ಲ. ಆಗಿನ ಪ್ರಾರ್ಥನೆಗಳೆಂದರೆ ದೇವತೆಗಳ ಸ್ತೋತ್ರ. ವರ್ಣಾಶ್ರಮ ಧರ್ಮ ಹತ್ತನೆಯ ಮಂಡಲದ ಪುರುಷ ಸೂಕ್ತದಲ್ಲಿ ಬಂದಿದೆ.[2] ಯಜುರ್ವೇದದ

---

1. M. Winternitz: A Hist. of Ind. Litt, Vol.1.p. 135.

2 ಋಗ್ವೇದ ೧೦ : ೯೦ : ೧೨

ಕಾಲದಲ್ಲಿ ಋಗ್ವೇದದೊಳಗಿನ ದೇವತೆಗಳ ಮಹತ್ತ್ವ ಕಡಿಮೆಯಾಗಿ ಯಾಗಗಳ ಮಹತ್ತ್ವ ಬೆಳೆಯಿತು. ವರ್ಣಾಶ್ರಮ ಧರ್ಮ ಸಂಪೂರ್ಣಸ್ಥಿತಿಗೆ ಮುಟ್ಟಿತು. ಈ ಕಾಲದಲ್ಲಿ ಆರ್ಯರು ಕುರುಕ್ಷೇತ್ರ ಪಾಂಚಾಲ ಮೊದಲಾದ ದೇಶಗಳನ್ನು ಪವಿತ್ರ ವಸತಿಗಳನ್ನಾಗಿ ಮಾಡಿಕೊಂಡರು. ಋಗ್ವೇದದ ಕಾಲದಲ್ಲಿ ಮೂಲನಿವಾಸಿಗಳು ಸಂಪೂರ್ಣ ಆರ್ಯರ ವಶವಾಗಿದ್ದಿಲ್ಲ. ಯಜುರ್ವೇದದ ಕಾಲದಲ್ಲಿ ಮೂಲ ನಿವಾಸಿಗಳಲ್ಲಿ ಅನೇಕರು ಆರ್ಯರ ದಾಸ್ಯವನ್ನು ವಹಿಸಿದರು.

ಬ್ರಾಹ್ಮಣಗಳು

ಮೇಲೆ ಹೇಳಿದ ನಾಲ್ಕೂ ವೇದಗಳಿಗೆ ಸಂಹಿತೆಗಳೆನ್ನುವರು. ಸಂಹಿತೆಗಳ ಕಾಲವಾದ ಮೇಲೆ ಬಂದ ಬ್ರಾಹ್ಮಣಕಾಲದಲ್ಲಿ ಆರ್ಯರ ನಂಬುಗೆ ಯಜ್ಞಯಾಗಾದಿಗಳ ಮೇಲೆ ವಿಶೇಷವಾಗಿ ಬಲಪಟ್ಟಿತು. ತಮ್ಮ ವಾಂಛಿತಗಳನ್ನು ಸಾಧಿಸಲು ಯಾಗಗಳನ್ನು ಮಾಡಿ ದೇವತೆಗಳನ್ನು ತೃಪ್ತಿಪಡಿಸುವುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡರು. ಅನೇಕ ಪ್ರಕಾರದ ಯಾಗಗಳೂ ಅವಾಂತರ ಭೇದಗಳೂ ಉಂಟಾದುವು. ಅವುಗಳನ್ನೆಲ್ಲಾ ಕ್ರಮಬದ್ಧವಾಗಿ ಮಾಡಲು ಯೋಜನೆಗಳನ್ನೊಳಗೊಂಡ ಪುಸ್ತಕಗಳಿಗೆ ಬ್ರಾಹ್ಮಣಗಳೆನ್ನುವರು. ಇವು ಪ್ರತಿಯೊಂದು ವೇದಶಾಖೆಗಳಿಗೆ ಸಂಬಂಧಿಸಿರುವುವು. ಇವುಗಳಲ್ಲಿ ಅನೇಕ ಬ್ರಾಹ್ಮಣಗಳು ಈಗ ಉಪಲಬ್ಧವಿಲ್ಲ. ಮಹತ್ತ್ವದ ಬ್ರಾಹ್ಮಣಗಳು ಕೆಳಗಿನವು:–

(೧) ಋಗ್ವೇದ

೧. **ಐತರೇಯ ಬ್ರಾಹ್ಮಣ** : ಇದರಲ್ಲಿ ೪೦ ಅಧ್ಯಾಯಗಳಿವೆ: ಇದನ್ನು ಮಹೀದಾಸ ಐತರೇಯರು ರಚಿಸಿದರು. ಇದರಲ್ಲಿ ಸೋಮಯಾಗ, ಅಗ್ನಿಹೋತ್ರ ಮತ್ತು ರಾಜಸೂಯಯಾಗಗಳನ್ನು ಹೇಗೆ ಮಾಡಬೇಕೆಂಬ ಕ್ರಮಗಳಿವೆ.

೨. **ಕೌಷೀತಕಿ ಬ್ರಾಹ್ಮಣ ಅಥವಾ ಶಾಂಖಾಯನ ಬ್ರಾಹ್ಮಣ** : ಇದರಲ್ಲಿ ೩೦ ಅಧ್ಯಾಯಗಳಿವೆ. ಮೊದಲಿನ ೬ರಲ್ಲಿ ಅಗ್ನಿಹೋತ್ರ,, ದಶಪೂರ್ಣಮಾಸ, ಚಾತುರ್ಮಾಸ್ಯಯಾಗಗಳಿವೆ. ಉಳಿದ ಅಧ್ಯಾಯಗಳಲ್ಲಿ ಸೋಮಯಾಗವಿದೆ.

(೨) ಯಜುರ್ವೇದ

೧. **ತೈತ್ತಿರೀಯ ಬ್ರಾಹ್ಮಣ** : ಇದು ತೈತ್ತಿರೀಯ ಸಂಹಿತೆಯ ಮುಂದಿನ ಭಾಗ. ಇದರಲ್ಲಿ ಪುರುಷಮೇಧದ ವರ್ಣನೆಯಿದೆ.

೨. **ಶತಪಥ ಬ್ರಾಹ್ಮಣ** : ಇದರಲ್ಲಿ ನೂರು ಅಧ್ಯಾಯಗಳಿವೆ. ಬ್ರಾಹ್ಮಣಗಳಲ್ಲೆಲ್ಲಾ ಇವರ ಮಹತ್ತ್ವ ಹೆಚ್ಚು. ಇದರಲ್ಲಿ ಅಗ್ನಿಚಯ, ಉಪನಯನ, ಅಶ್ವಮೇಧ,

ಪುರುಷಮೇಧ, ಸರ್ವಮೇಧ ಯಾಗಗಳ ವರ್ಣನೆಯಿದೆ. ಅಂತ್ಯದಲ್ಲಿ ಬೃಹದಾರಣ್ಯಕೋಪನಿಷತ್ತಿದೆ. ಇದರಲ್ಲಿ ಯಾಜ್ಞವಲ್ಕ್ಯನ ಮತ್ತು ಶಾಂಡಿಲ್ಯನ ಉಲ್ಲೇಖವಿದೆ.

(೩) ಸಾಮವೇದ

೧. **ತಾಂಡ್ಯಮಹಾಬ್ರಾಹ್ಮಣ ಅಥವಾ ಪಂಚವಿಂಶ ಬ್ರಾಹ್ಮಣ** : ಇದರಲ್ಲಿ ೨೫ ಅಧ್ಯಾಯಗಳಿವೆ. ಇದು ಬಹಳ ಪ್ರಾಚೀನವಾದುದು. ಇದರಲ್ಲಿ ಮಹತ್ತ್ವದ ಹಳೆಯ ಕಥೆಗಳಿವೆ. ವ್ರಾತ್ಯಸ್ತೋಮದ ವಿವರಣೆಯಿದೆ. **ಷಡ್ವಿಂಶ ಬ್ರಾಹ್ಮಣ** ಇದರ ಮುಂದಿನ ಭಾಗ. ಇದರ ಕಡೆಯ ಭಾಗಕ್ಕೆ **ಅದ್ಭುತ ಬ್ರಾಹ್ಮಣ** ಎನ್ನುವರು.

೨. **ಜೈಮಿನೀಯ ಬ್ರಾಹ್ಮಣ**

(೪) ಅಥರ್ವವೇದ

೧. **ಗೋಪಥ ಬ್ರಾಹ್ಮಣ**

ಎಲ್ಲ ಬ್ರಾಹ್ಮಣಗಳ ವಿಷಯ ಒಂದೇ ಆಗಿದೆ. ಆದಾಗ್ಗೂ ಋಗ್ವೇದ ಬ್ರಾಹ್ಮಣಗಳು ಹೋತಾರನ, ಸಾಮವೇದ ಬ್ರಾಹ್ಮಣಗಳು ಉದ್ಗಾತಾರನ, ಯಜುರ್ವೇದ ಬ್ರಾಹ್ಮಣಗಳು ಅಧ್ವರ್ಯುವಿನ ಕಾರ್ಯಗಳನ್ನು ಒತ್ತಿ ಹೇಳುತ್ತವೆ. ಸಂಹಿತೆಗಳ ನಂತರ ಬ್ರಾಹ್ಮಣಗಳು ಪೂರ್ಣಸ್ವರೂಪವನ್ನು ಹೊಂದಲು ನೂರಾರು ವರ್ಷಗಳು ಗತಿಸಿರಬೇಕು. ಬ್ರಾಹ್ಮಣ ಕಾಲದ ಅಂತ್ಯದಲ್ಲಿ ಆರ್ಯರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗಳಲ್ಲಿ ಬದಲಾವಣೆಯಾದಂತೆ ಕಂಡುಬರುತ್ತದೆ. ಅವರು ಬರಬರುತ್ತ ಹೆಚ್ಚು ಹೆಚ್ಚು ಪ್ರದೇಶವನ್ನು ಆಕ್ರಮಿಸಹತ್ತಿದರು. ಈ ಕಾಲದಲ್ಲಿ ಅವರು ಬ್ರಹ್ಮಾವರ್ತದಲ್ಲೆಲ್ಲ ನೆಲೆಸಿದ್ದರು. ಗಂಗಾ-ಯಮುನಾದಿಗಳ ನಡುವಿನ ಮತ್ತು ದಿಲ್ಲಿಯಿಂದ ಮಧುರೆಯವರೆಗೆ ಇರುವ ಫಲವತ್ತಾದ ದೇಶಕ್ಕೆ ಬ್ರಹ್ಮಾವರ್ತವೆನ್ನುವರು. ಈ ಯುಗದಲ್ಲಿ ಋಗ್ವೇದದಲ್ಲಿ ಅಷ್ಟು ಮಹತ್ತ್ವದ ದೇವತೆಗಳಲ್ಲದ ವಿಷ್ಣು-ರುದ್ರರು ಹೆಚ್ಚು ಮಹತ್ತ್ವದ ಸ್ಥಾನಕ್ಕೆ ಏರಿದರು. ಯಾಗಗಳಲ್ಲಿ ಸಣ್ಣ ವಿಷಯಗಳಿಗೂ ಕೂಡ ಬಹಳ ಮಹತ್ತ್ವ ಬಂದಿತು. ಅರ್ಚಕರ ಮಹತ್ತ್ವ ಬೆಳೆದು ಅವರು ಪ್ರತಿಷ್ಠೆಯ ಸ್ಥಾನವನ್ನು ಹೊಂದಿ ಭೂದೇವರಾದರು. ಬ್ರಾಹ್ಮಣಗಳಲ್ಲಿ ಯಜ್ಞಯಾಗಾದಿಗಳ ವರ್ಣನೆಯಲ್ಲದೆ ಅಲ್ಲಲ್ಲಿ ಆಖ್ಯಾನಗಳೂ ಇತಿಹಾಸಗಳೂ ವೇದದ ಶಬ್ದಗಳಿಗೆ ವ್ಯುತ್ಪತ್ತಿಗಳೂ ಇವೆ. ಆದುದರಿಂದ ಸಾಮಾನ್ಯರಿಗೆ ದುರ್ಬೋಧವೂ ಬೇಸರವನ್ನುಂಟುಮಾಡುವಂಥವೂ ಆದರೂ ಇವು ಬಹಳ ಮಹತ್ತ್ವದ ಗ್ರಂಥಗಳಾಗಿವೆ. ಪುನರ್ಜನ್ಮದ ನಂಬುಗೆ ಬ್ರಾಹ್ಮಣಗಳಲ್ಲಿ ಬಂದಿದೆ.

ಆರಣ್ಯಕಗಳು ಮತ್ತು ಉಪನಿಷತ್ತುಗಳು

ಬ್ರಾಹ್ಮಣಗಳ ಉತ್ತರಾರ್ಧಕ್ಕೆ ಆರಣ್ಯಕಗಳೆನ್ನುವರು. ಇವುಗಳಲ್ಲಿ ಗುಪ್ತವಿದ್ಯೆ ಇದೆ. ಈ ವಿದ್ಯೆಯನ್ನು ಊರಲ್ಲಿ ಕಲಿಸುವುದೂ ಕಲಿಯುವುದೂ ಯೋಗ್ಯವಲ್ಲದುದರಿಂದ ಅರಣ್ಯಗಳಲ್ಲಿ ಅವುಗಳ ಅಭ್ಯಾಸ ನಡೆಯುತ್ತಿದ್ದುದಕ್ಕಾಗಿ ಆರಣ್ಯಕಗಳೆಂಬ ಹೆಸರಾಯಿತು. ಆಶ್ರಮಧರ್ಮ ಪ್ರಚಾರದಲ್ಲಿ ಬಂದ ಮೇಲೆ ಆರಣ್ಯಕಗಳು ವಾನಪ್ರಸ್ಥರು ಅಭ್ಯಾಸ ಮಾಡತಕ್ಕ ಪುಸ್ತಕಗಳಾದುವು. ಇವುಗಳ ಉತ್ತರ ಭಾಗಕ್ಕೆ **ಉಪನಿಷತ್ತುಗಳೆನ್ನು**ವರು. ಇವುಗಳಿಗೆ ವೇದಾಂತಗಳೆಂದೂ ಹೆಸರು. ಐತರೇಯಾರಣ್ಯಕ, ಐತರೇಯೋಪನಿಷತ್ತು, ಕೌಷೀತಕೀ, ಆರಣ್ಯಕ-ಕೌಷೀತಕೀ ಉಪನಿಷತ್ತುಗಳು ಋಗ್ವೇದಕ್ಕೆ ಸಂಬಂಧಿಸಿದುವು. ತೈತ್ತಿರೀಯಾರಣ್ಯಕ-ತೈತ್ತಿರೀಯೋಪನಿಷತ್ತು,ಮಹಾನಾರಾಯಣೋಪನಿಷತ್ತು, ಬೃಹದಾರಣ್ಯಕೋಪನಿಷತ್ತುಗಳು ಯಜುರ್ವೇದಕ್ಕೆ ಸಂಬಂಧಿಸಿದುವು. ಛಾಂದೋಗ್ಯೋಪನಿಷತ್ತು, ಕೇನೋಪನಿಷತ್ತು, ಜೈಮಿನೀಯ ಉಪನಿಷದ್ ಬ್ರಾಹ್ಮಣ ಇವು ಸಾಮವೇದಕ್ಕೆ ಸಂಬಂಧಿಸಿದುವು.

ಮೇಲೆ ಹೇಳಿದ ಐತರೇಯ, ಬೃಹದಾರಣ್ಯಕ, ಛಾಂಧೋಗ್ಯ, ತೈತ್ತಿರೀಯ, ಕೌಷೀತಕಿ ಮತ್ತು ಕೇನೋಪನಿಷತ್ತುಗಳು ಬಹಳ ಹಳೆಯವು. ಅವು ಶುದ್ಧ ವೇದಾಂತ ತತ್ತ್ವವನ್ನು ಬೋಧಿಸುವುವು. ಕಠ, ಶ್ವೇತಾಶ್ವತರ, ಈಶ, ಮುಂಡಕ ಪ್ರಶ್ನ, ಮಹಾನಾರಾಯಣ ಉಪನಿಷತ್ತುಗಳಲ್ಲಿ ಸಾಂಖ್ಯಯೋಗದ ತತ್ತ್ವಗಳಿವೆ. ಇವು ಬೌದ್ಧಯುಗಕ್ಕಿಂತ ಮೊದಲಿನವು. ಮತ್ತು ಮೇಲೆ ಹೇಳಿದ ಉಪನಿಷತ್ತುಗಳಾದ ಮೇಲೆ ಹುಟ್ಟಿದವು. ಮಾಂಡೂಕ್ಯ ಮತ್ತು ಮೈತ್ರಾಯಿಣಿ ಉಪನಿಷತ್ತುಗಳನ್ನು ಬೌದ್ಧಯುಗದಲ್ಲಿ ರಚಿಸಿರಬೇಕು. ಉಪನಿಷತ್ತುಗಳ ಸಂಖ್ಯೆ ಬಲು ದೊಡ್ಡದಿದೆ. ನಮಗೆ ಏನಿಲ್ಲೆಂದರೂ ೨೦೦ಕ್ಕಿಂತ ಹೆಚ್ಚು ಗ್ರಂಥಗಳು ದೊರೆಯುತ್ತವೆ. ಇವೆಲ್ಲ ಪ್ರಾಚೀನವಾದವುಗಳಲ್ಲ. ಇವುಗಳಲ್ಲಿ ಕೆಲವು ತೀರ ಇತ್ತೀಚಿನವು. ಇವುಗಳನ್ನು ವಿಷಯಾನುಸಾರ ಕೆಳಗಿನಂತೆ ಗುಂಪು ಮಾಡಬಹುದು: ೧. ವೇದಾಂತ, ೨. ಯೋಗ, ೩. ಸಂನ್ಯಾಸ, ೪. ಶೈವ, ೫. ವೈಷ್ಣವ, ೬. ಶಾಕ್ತ.

ಇವು ಗದ್ಯ ಪದ್ಯಗಳಲ್ಲಿವೆ. ಉಪನಿಷತ್ತುಗಳಲ್ಲಿ ಕಂಡುಬರುವ ಮುಖ್ಯ ತತ್ತ್ವಗಳು: ಸರ್ವಜ್ಞನೂ ಸರ್ವೇಶ್ವರನೂ ಆದ ಪರಬ್ರಹ್ಮನು ಘಟ ಮತ್ತು ಆಭರಣಗಳಿಗೆ ಮಣ್ಣು ಮತ್ತು ಸುವರ್ಣ ಉಪಾದಾನವಾಗಿರುವಂತೆ ವಿಶ್ವದ ಉತ್ಪತ್ತಿಗೆ ಉಪಾದಾನ ಕಾರಣನು; ಮಾರಾಟಗಾರನು ತನ್ನ ಮಾಯಾಶಕ್ತಿಯಿಂದ ಮಾಟವನ್ನು ತಡೆದು ಹಿಡಿಯುವಂತೆ ನಿಯಂತ್ರಣ ಶಕ್ತಿಯಿಂದ ಉತ್ಪನ್ನವಾದ ವಿಶ್ವದ ಸ್ಥಿತಿಗೆ ಕಾರಣನಾಗಿರುವನು; ಭೂಮಿ ನಾಲ್ಕು ಪ್ರಕಾರದ ಭೂತಗ್ರಾಮಗಳನ್ನು ತನ್ನಲ್ಲಿ ಉಪಸಂಹರಿಸಿಕೊಳ್ಳುವಂತೆ

ಪ್ರಸಾರಿತವಾದ ಜಗತ್ತನ್ನು ತನ್ನೊಳಗೆ ಲಯಮಾಡಿಕೊಳ್ಳುವನು. ಈತನೇ ಸರ್ವ ಪ್ರಾಣಿಗಳಲ್ಲಿ ಆತ್ಮರೂಪದಿಂದ ವಾಸಿಸುವನು. ಈತನು ಶಾಶ್ವತನು. ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆಗಿದ್ದು ಪರಮಾತ್ಮನಾಗಿ ವಿಶ್ವದಲ್ಲಿ, ಜೀವಾತ್ಮನಾಗಿ ಜೀವಿಗಳ ಶರೀರದಲ್ಲಿ, ವಾಸಿಸುವನು. ಮಹಾವಾಕ್ಯಗಳಾದ "ಸರ್ವಂ ಖಲ್ವಿದಂ ಬ್ರಹ್ಮ," "ಅಯಮಾತ್ಮಾ ಬ್ರಹ್ಮ," "ತತ್ತ್ವಮಸಿ" ಮೊದಲಾದುವು ಇದೇ ಅರ್ಥದಲ್ಲಿ ಬೋಧಿಸುವುವು. ಇದೇ ಆರಣ್ಯಕ ಉಪನಿಷತ್ತುಗಳಲ್ಲಿರುವ ಗುಪ್ತವಿದ್ಯೆ.

ಬ್ರಾಹ್ಮಣಯುಗದಲ್ಲಿ ಪುರೋಹಿತರ ಕೈಯಲ್ಲಿ ಜ್ಞಾನದ ಕೀಲಿಕೈ ಇತ್ತು. ಆಗಿನ ಕಾಲದ ಜ್ಞಾನವೆಂದರೆ ಯಜ್ಞಯಾಗಾದಿಗಳನ್ನು ಮಾಡುವುದು. ಅದರಿಂದಲೇ ಮಾನವನ ಶ್ರೇಯಸ್ಸುಂಟೆಂದು ನಂಬುಗೆಯಿತ್ತು. ಆದರೆ ಆರಣ್ಯಕ ಮತ್ತು ಉಪನಿಷತ್ತುಗಳ ಕಾಲದಲ್ಲಿ ಈ ಕಲ್ಪನೆ ಅಳಿಸಿಹೋಗಿ, ಯಜ್ಞಯಾಗಾದಿಗಳ ಮಹತ್ತ್ವ ಕಡಮೆಯಾಯಿತು. ಬ್ರಾಹ್ಮಣರು ಕರ್ಮಗಳಿಗೆ ಮಹತ್ತ್ವ ಕೊಟ್ಟರು; ಕ್ಷತ್ರಿಯಾದಿಗಳು ಜ್ಞಾನಕ್ಕೆ ಕೊಡಹತ್ತಿದರು. ಕೌಷೀತಕೀ ಬ್ರಾಹ್ಮಣದಲ್ಲಿ ಪ್ರತರ್ದ ರಾಜನು ಪುರೋಹಿತರ ಸಂಗಡ ಯಾಗಗಳ ಬಗ್ಗೆ ಚರ್ಚಿಸುವನು[1]. ಶತಪಥ ಬ್ರಾಹ್ಮಣದಲ್ಲಿ ವಿದೇಶದ ಅರಸನಾದ ಜನಕನು ಶ್ವೇತಕೇತು, ಸೋಮಶುಷ್ಮ, ಯಾಜ್ಞವಲ್ಕ್ಯರನ್ನು ಅಗ್ನಿಹೋತ್ರದ ಬಗ್ಗೆ ಪ್ರಶ್ನೆ ಕೇಳುವನು[2]. ಯಾರೂ ಆತನಿಗೆ ಸಮರ್ಪಕವಾದ ಉತ್ತರವನ್ನು ಹೇಳಲಿಲ್ಲ. ಅಯಸ್ಥೂಣನು ತನ್ನ ಋತ್ವಿಜನಾದ ಸೌಲ್ವಾಯನನಿಗೆ ಉಪದೇಶ ಮಾಡುವನು. ಈತನು ಬ್ರಾಹ್ಮಣನಲ್ಲ. ಉಪನಿಷತ್ತುಗಳಲ್ಲಿ ಹೆಂಗಸರೂ ಕೂಡ ಬ್ರಹ್ಮಜ್ಞಾನಿಗಳಾಗಿದ್ದ ಉದಾಹರಣೆಗಳಿವೆ. ಯಾಜ್ಞವಲ್ಕ್ಯನನ್ನು ಗಾರ್ಗಿವಾಚಕ್ನವಿ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳುವಳು[3]. ಮೈತ್ರೇಯಿ ಅದೇ ಯಾಜ್ಞವಲ್ಕ್ಯನಿಂದ ಬ್ರಹ್ಮಜ್ಞಾನವನ್ನು ಪಡೆದಳು[4]. ಬಂಡಿಯ ಕೆಳಗೆ ಕುಳಿತು ಕಜ್ಜಿಯನ್ನು ಕೆರೆಯುತ್ತಿರುವ ರೈಕ್ವಸಯುಗ್ವನು ಜಾನಶ್ರುತಿ ಪೌತ್ರಾಯಣನಿಗೆ ಸಂವರ್ಗ ವಿದ್ಯೆಯನ್ನು ಬೋಧಿಸುವನು.[5] ಸತ್ಯಕಾಮಜಾಬಾಲನು ತನ್ನ ಉತ್ಪತ್ತಿಯನ್ನು ಸತ್ಯವಾಗಿ ಹೇಳಿ ಗೌತಮ

---

1. *ಕೌಷೀತಕೀ ಬ್ರಾಹ್ಮಣ 26 : 5*
2. *ಶತಪಥ ಬ್ರಾಹ್ಮಣ 11 : 6 : 2, 1.*
3. *ಬೃಹದಾರಣ್ಯಕೋಪನಿಷತ್ 3 : 8 : 1–13.*
4. *ಬೃಹದಾರಣ್ಯಕೋಪನಿಷತ್ 2 : 4 : 3.*
5. *ಛಾಂದೋಗ್ಯೋಪನಿಷತ್ 4.*

ಹಾರಿದ್ರುಮತನಿಂದ ವಿದ್ಯೆಯನ್ನು ಕಲಿತನು.[1] ಬ್ರಾಹ್ಮಣರು ಕ್ಷತ್ರಿಯರಿಂದ ಉಚ್ಚತತ್ತ್ವ ಜ್ಞಾನಗಳನ್ನು ಕಲಿತ ಉದಾಹರಣೆಗಳು ಉಪನಿಷತ್ತುಗಳಲ್ಲಿ ಅನೇಕವುಂಟು. ಶ್ವೇತಕೇತುವಿನ ತಂದೆಯಾದ ಗೌತಮನ ಪ್ರವಾಹಣ ಜೈವಲಿಯು ಕಡೆಯಿಂದ ಪುನರ್ಜನ್ಮ ವಿದ್ಯೆಯನ್ನು ಕಲಿತನು.[2] ಆತ್ಮವಿದ್ಯೆಯನ್ನು ಬ್ರಾಹ್ಮಣರು ಕಲಿತರು. ಐವರು ವಿದ್ವಾಂಸರಾದ ಬ್ರಾಹ್ಮಣರು ಅಶ್ವಪತಿ ಕೈಕಯನ ಕಡೆಗೆ ಹೋಗಿ ಆತನಿಂದ ಆತ್ಮವಿದ್ಯೆಯನ್ನು ಕಲಿತರೆಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿದೆ.[3] ಬ್ರಾಹ್ಮಣರು ಯಜ್ಞಯಾಗಾದಿಗಳಲ್ಲಿ ನಿರತರಾದಾಗ ಉಳಿದವರು ಉಪನಿಷತ್ತುಗಳಲ್ಲಿ ಕಂಡುಬರುವ ಶ್ರೇಷ್ಠಜ್ಞಾನದ ಸಂಪಾದನೆಗಾಗಿ ಸಂನ್ಯಾಸ ಮತ್ತು ವಾನಪ್ರಸ್ಥ ಧರ್ಮಗಳನ್ನು ಸ್ವೀಕರಿಸಿ ಅತ್ತಿತ್ತ ಅಲೆದಾಡುತ್ತಿದ್ದರು. ಇಂಥವರು ಬೇರೆ ಬೇರೆ ಪಂಥಗಳನ್ನು ನಿರ್ಮಿಸಿ ಸ್ವತಂತ್ರ ರೀತಿಯಿಂದ ವಿಚಾರಶಕ್ತಿಯನ್ನು ಬೆಳಸಿ, ಜೈನ. ಬೌದ್ಧಧರ್ಮಗಳ ಉತ್ಪತ್ತಿಗೆ ಕಾರಣರಾದರೆಂದು ಊಹಿಸಬಹುದು. ಉಪನಿಷತ್ತುಗಳು ಹಿಂದೂಸ್ಥಾನದ ಪ್ರಾಚೀನ ಗ್ರಂಥಗಳಲ್ಲಿ ಅತ್ಯುಚ್ಚಸ್ಥಾನವನ್ನು ಪಡೆಯುವುವು. ಆಧ್ಯಾತ್ಮಿಕ ದೃಷ್ಟಿಯಿಂದ ಇವುಗಳ ಮಹತ್ತ್ವವನ್ನು ಇಷ್ಟೇಯೆಂದು ನಿರ್ಣಯಿಸುವುದು ಬಲು ಕಠಿನ. ಇವು ಸಂಸಾರ ತಾಪದಿಂದ ಬಳಲಿದ ಮಾನವರಿಗೆ ಶಾಂತಿಯನ್ನು ಒದಗಿಸಿಕೊಡುವುವು. ಉಚ್ಚ ತಮಗತಿಯ ಆಧ್ಯಾತ್ಮಿಕ ಜ್ಞಾನವನ್ನು ತಿಳಿಸಿಕೊಡುವುವು. ಇವುಗಳನ್ನು ತತ್ತ್ವಜ್ಞಾನಿಯಾದ ಶೋಪೆನ್‌ಹೂಯರನು (Schopenhauer) ಬಹುವಾಗಿ ಪ್ರೀತಿಸುತ್ತಿದ್ದನು. ಆತನು ಮಲಗಿದಾಗ, ಊಟ ಮಾಡುವಾಗ, ತಿರುಗಾಡುವಾಗ ಇವುಗಳನ್ನು ಬಿಟ್ಟಿರುತ್ತಿರಲಿಲ್ಲ. ಇವುಗಳ ಬಗ್ಗೆ ಆತನು "ಅವುಗಳ ಓದು ಎಂದರೆ ಈ ಲೋಕದಲ್ಲಿ ಸಾಧ್ಯವಾಗುವ ಅತ್ಯಂತ ತೃಪ್ತಿಕರವೂ ಉದ್ಧಾರಕವೂ ಆದ ಅಧ್ಯಯನ. ಅದು ನನ್ನ ಜೀವನದಲ್ಲಿ ಆಶ್ರಯವಾಗಿ ನೆರವಾಗಿರುವಂತೆ ಸಾವಿನಲ್ಲಿ ಕೂಡ ನೆರವಾಗುವುದು" ಎಂದು ಅಂದಿರುವನು.[4] ಉಪನಿಷತ್ತುಗಳ ಕಾಲ ಬೌದ್ಧಯುಗಕ್ಕಿಂತ ಅಂದರೆ ಕ್ರಿ.ಪೂ. ೬ನೆಯ ಶತಕಕ್ಕಿಂತ ಮೊದಲಿನದು. ಉಪನಿಷತ್ತುಗಳ ಅಂತ್ಯಕಾಲದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಆರ್ಯರ ವರ್ಚಸ್ಸು ನಡೆಯುತ್ತಿತ್ತು. ಆರ್ಯರು ಬಹು ದೂರದವರೆಗಿನ ಪ್ರದೇಶವನ್ನು

---

1. *ಛಾಂದೋಗ್ಯೋಪನಿಷತ್ ೪ : ೪ : ೧–೫.*
2. *ಛಾಂದೋಗ್ಯೋಪನಿಷತ್ ೫ : ೩–೯.*
3. *" ೫ : ೧೧–೨೪.*

4. *'It is the most satisfying and elevating reading which is possible in the world : it has been the solace of my life and it will be solace of My death' M. Winternitz. Hist. of Ind. Litt. Vol. 1. P. 267.*

ತಮ್ಮ ಅಧೀನದಲ್ಲಿ ತಂದುಕೊಂಡು ಮೂಲನಿವಾಸಿಗಳ ಆಚಾರ ವಿಚಾರಗಳನ್ನು ತಮ್ಮೊಳಗೆ ಬೆರಸಿಕೊಳ್ಳಹತ್ತಿದ್ದರು. ಅಗಸ್ತ್ಯಮಹರ್ಷಿಯ ಸಂಗಡ ಆರ್ಯರದೊಂದು ಗುಂಪು ವಿಂಧ್ಯಪರ್ವತವನ್ನು ದಾಟಿ ದಕ್ಷಿಣಕ್ಕೆ ಬಂದು ನೆಲಸಿತು. ದಕ್ಷಿಣಾಪಥ ಆರ್ಯರ ವಶವಾದುದು ಜನಕ ವೈದೇಹನ ಅಳಿಯನಾದ ಶ್ರೀರಾಮಚಂದ್ರನ ಕಾಲದಲ್ಲಿ; ಅಂದರೆ ಉಪನಿಷತ್ತುಗಳ ಪ್ರಾರಂಭಕಾಲದಲ್ಲಿ ಎಂದು ಕಲ್ಪಿಸಬಹುದು. ಉಪನಿಷತ್ತುಗಳ ಅಂತ್ಯಕಾಲದಲ್ಲಿ ಮೂರು ಧಾರ್ಮಿಕ ಮಾರ್ಗಗಳು ಸ್ಪಷ್ಟವಾಗಿ ಕಾಣಹತ್ತಿದುವು.

೧. **ಕರ್ಮಮಾರ್ಗ :** ಇದು ಯಜ್ಞಯಾಗಾದಿಗಳಿಗೆ ಬಹು ಮಹತ್ತ್ವ ಕೊಡುವುದು. ಈ ಮಾರ್ಗದವರು ಯಜ್ಞ ಯಾಗಾದಿಗಳನ್ನು ಕ್ರಮಬದ್ಧ ಮಾಡಲು ಬರಬೇಕೆಂಬ ಉದ್ದೇಶದಿಂದ ಕಲ್ಪಸೂತ್ರಗಳನ್ನು ನಿರ್ಮಿಸಿದರು. ಇವುಗಳಲ್ಲಿ ಬ್ರಾಹ್ಮಣಗಳಲ್ಲಿ ಹೇಳಿದ ಯಜ್ಞ ಯಾಗಾದಿ ಕರ್ಮಗಳನ್ನು ಕ್ರೋಡೀಕರಿಸಿ ಕ್ರಮಬದ್ಧವಾಗಿ ವಿಂಗಡಿಸಿ ಹೆಚ್ಚಿನ ವಿಷಯಗಳನ್ನು ಕೂಡಿಸಿ ಹೆಚ್ಚು ಉಪಯುಕ್ತವಾದುವುಗಳನ್ನಾಗಿ ಮಾಡಿದರು. ಕಲ್ಪಸೂತ್ರಗಳಲ್ಲಿ ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರಗಳೆಂದು ಮೂರು ಭಾಗಗಳುಂಟು. ಶ್ರೌತಸೂತ್ರದಲ್ಲಿ ಶ್ರುತಿಗಳಲ್ಲಿದ್ದ ಯಜ್ಞ ಯಾಗಾದಿಗಳನ್ನು ಮಾಡುವ ಕ್ರಮಗಳನ್ನೂ ಗೃಹ್ಯಸೂತ್ರದಲ್ಲಿ ಗೃಹಸ್ಥರು ಮಾಡತಕ್ಕ ನಿತ್ಯನೈಮಿತ್ತಿಕ ಕರ್ಮಗಳನ್ನೂ ಧರ್ಮಸೂತ್ರಗಳಲ್ಲಿ ಆತನು ಅನುಸರಿಸತಕ್ಕ ನಿಯಮಗಳನ್ನೂ ವಿವರಿಸಿರುವರು. ಧರ್ಮಸೂತ್ರಗಳೇ ಬೆಳೆದು ಈಗಿನ ಹಿಂದೂಧರ್ಮಶಾಸ್ತ್ರಕ್ಕೆ ಮೂಲವಾಗಿರುವುವು.

೨. **ಸಂನ್ಯಾಸಮಾರ್ಗ :** ತಪಸ್ಸು ಮಾಡಿ ಶರೀರವನ್ನು ಸಣ್ಣಿಸಿ ವಾಂಛಿತ ಫಲಗಳನ್ನೂ ಸುಖಸಂಪತ್ತನ್ನೂ ಪಡೆಯುವುದು ಈ ಮಾರ್ಗದ ಧ್ಯೇಯ. ಇದನ್ನು ಸಂನ್ಯಾಸ ಮಾರ್ಗ, ಪರಿವ್ರಾಜಕ ಮಾರ್ಗ ಅಥವಾ ಯೋಗಮಾರ್ಗವೆಂದು ಕರೆಯಬಹುದು. ಕಾಯವನ್ನು ದಂಡಿಸುವುದರಿಂದ ಆತ್ಮಶುದ್ಧವಾಗಿ ದೈವಿಕ ಶಕ್ತಿ ಬೆಳೆಯುವುದು. ಧರ್ಮಾರ್ಜನೆಗೆ ಕ್ರಮಬದ್ಧವಾದ ನಡತೆ ಅಗತ್ಯವಿದೆ. ಶಾರೀರಿಕ ಸುಖಗಳು ಆಧ್ಯಾತ್ಮೋನ್ನತಿಗೆ ವಿಘ್ನಕಾರಿಗಳಾಗಿವೆ. ಪವಿತ್ರವಾದ ಆಚರಣೆ ಮತ್ತು ಐಹಿಕ ವಸ್ತುಗಳಲ್ಲಿ ನಿರಿಚ್ಛೆಗಳು ಆತ್ಮೋನ್ನತಿಯ ಸಾಧನಗಳಾಗಿವೆ. ಹೆಚ್ಚು ಹೆಚ್ಚು ಕಠೋರವಾದ ತಪಸ್ಸನ್ನಾಚರಿಸಿದರೆ ಹೆಚ್ಚು ಹೆಚ್ಚು ಶಕ್ತಿ ಪ್ರಾಪ್ತವಾಗಿ ವಿಶ್ವವನ್ನು ವಶಪಡಿಸಿಕೊಳ್ಳಬಹುದು. ಮತ್ತು ಪರಮಾತ್ಮನ ಅಗಾಧ ಲೀಲೆಯನ್ನು ತಿಳಿಯಬಹುದು.

೩. **ಜ್ಞಾನಮಾರ್ಗ :** ಜ್ಞಾನದಿಂದ ಮುಕ್ತಿ ಸಾಧ್ಯವೆಂಬುದು ಈ ಮಾರ್ಗದವರ ನಂಬುಗೆ. ದೇವರನ್ನು ತಿಳಿದವನು ದೇವನಾಗುವನು. ಜ್ಞಾನಿಯೇ ದೇವರನ್ನು ತಿಳಿಯಲು ಶಕ್ತನಾದುದರಿಂದ ಸರ್ವಶ್ರೇಷ್ಠನು. ಕರ್ಮ ಮತ್ತು ತಪಸ್ಸು ಜ್ಞಾನಪ್ರಾಪ್ತಿಗೆ ಸಾಧನಗಳು.

ಈ ಮಾರ್ಗಕ್ಕೆ ಪುಷ್ಟಿ ದೊರೆತಂತೆ ವಿಚಾರ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವುಂಟಾಗಿ ಅನೇಕ ದರ್ಶನಗಳು ಹುಟ್ಟಿದುವು. ಅವುಗಳಲ್ಲಿ ಕೆಲವು ಆಸ್ತಿಕ, ಕೆಲವು ನಾಸ್ತಿಕ. ಆಸ್ತಿಕ ದರ್ಶನಗಳಲ್ಲಿ : ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ ಮತ್ತು ವೇದಾಂತ ಎಂಬುವು ಮುಖ್ಯವಾದವು.

ಜೈನ ಬೌದ್ಧಧರ್ಮಗಳು ಉದ್ಭವಿಸಿದ ತರುವಾಯ ಜನರ ವಿಚಾರದಲ್ಲಿ ಕ್ರಾಂತಿಯಾಗಿ ಆರ್ಯಧರ್ಮ ತತ್ತರಿಸಹತ್ತಿತು. ಬೌದ್ಧಧರ್ಮ ಹುಟ್ಟಿದ ಇನ್ನೂರು ಮುನ್ನೂರು ವರ್ಷಗಳಲ್ಲಿ ಬಹಳ ಪ್ರಬಲವಾಗಿ ಹಿಂದೂಸ್ಥಾನವನ್ನೆಲ್ಲ ಆಕ್ರಮಿಸಿ ಹೊರಗೆ ಕಾಲುಚಾಚಹತ್ತಿತು. ಬೌದ್ಧಧರ್ಮದ ಓಘವನ್ನು ತಡೆದು ಆರ್ಯಧರ್ಮವನ್ನು ಪ್ರತಿಷ್ಠಾಪಿಸಲು ಆರ್ಯಧರ್ಮಾಭಿಮಾನಿಗಳು ಚಿಂತಿಸಹತ್ತಿದರು. ತೀವ್ರ ಆರ್ಯಧರ್ಮ ಸಂಪೂರ್ಣವಾಗಿ ಮಾರ್ಪಾಟನ್ನು ಹೊಂದಿ ಈಗಿನ ಹಿಂದೂಧರ್ಮವಾಗಿ ಪರಿಣಮಿಸಿತು. ಬೌದ್ಧಧರ್ಮದೊಳಗಿನ ಉತ್ತಮೋತ್ತಮ ಮತ್ತು ಮಾನ್ಯವಾದ ತತ್ತ್ವಗಳನ್ನು ಹಿಂದೂಧರ್ಮದಲ್ಲಿ ಸೇರಿಸಿ ಸಾಮಾನ್ಯರ ಚಿತ್ತವನ್ನೆಳೆಯುವಂತಹ ಧಾರ್ಮಿಕ ಸಾಹಿತ್ಯವನ್ನು ನಿರ್ಮಿಸಿದರು. ಆರ್ಯಧರ್ಮದೊಳಗಿನ ಜನರ ಮನಸ್ಸಿಗೆ ಬಾರದಂತಹ ಹಲಕೆಲವು ವಿಷಯಗಳನ್ನು ತೆಗೆದುಹಾಕಿದರು. ಕರ್ಮಮಾರ್ಗದ ಮುಖ್ಯ ವಿಷಯವಾದ ಯಜ್ಞ ಯಾಗಾದಿಗಳಿಗೆ ಈ ಹೊಸಧರ್ಮದಲ್ಲಿ ಸ್ಥಾನ ದೊರೆಯಲಿಲ್ಲ. ಮಹಾಭಾರತ ರಾಮಾಯಣ ಪುರಾಣಗಳು ಮತ್ತು ತಂತ್ರಗಳು ಹಿಂದೂಧರ್ಮದ ಪುನರುದ್ಧಾರಕ್ಕೆ ಬಹಳ ಸಹಾಯ ಮಾಡಿ ವೇದಗಳಿದ್ದ ಮಹತ್ತ್ವದ ಸ್ಥಾನವನ್ನು ಆಕ್ರಮಿಸಿದವು.

ಅಶೋಕ ಚಕ್ರವರ್ತಿಯ ಕಾಲದಲ್ಲಿ ಅತ್ಯುಚ್ಚಸ್ಥಿತಿಗೆ ಮುಟ್ಟಿದ ಬೌದ್ಧಮತ ಕ್ರಿ.ಪೂ. ೧೫೦ರಿಂದ ಹಿಂದೆ ಬೀಳಹತ್ತಿತು. ಬೌದ್ಧಧರ್ಮದ ಹೀನದೆಶೆಯೆಂದರೆ ಹಿಂದೂ ಧರ್ಮದ ಉನ್ನತಿ. ಆದುದರಿಂದ ಕ್ರಿ.ಪೂ. ೧೫೦ಕ್ಕೂ ಮೊದಲು ನೂರಾರು ವರ್ಷ ಗಳಿಂದ ಹಿಂದೂಧರ್ಮದ ಸಂಘಟನೆ ಜೋರಿನಿಂದ ನಡೆದಿರಬಹುದೆಂದು ಊಹಿಸಲು ಅವಕಾಶವಿದೆ. ಪಾಣಿನಿ ವ್ಯಾಕರಣ ಸೂತ್ರಗಳನ್ನು ಬರೆದು ಭಾಷೆಯನ್ನು ಸುಸಂಸ್ಕೃತವನ್ನಾಗಿ ಮಾಡಿದನು. ಕಪಿಲ, ಪತಂಜಲಿ, ಕಣಾದ, ಗೌತಮ, ಜೈಮಿನಿ, ಬಾದರಾಯಣಾದಿಗಳು ಧರ್ಮತತ್ತ್ವ ಜ್ಞಾನಗಳ ಪ್ರವರ್ತಕರಾದರು. ವ್ಯಾಸ, ವೈಶಂಪಾಯನ, ಸೂತಪುರಾಣಿಕರು ಲೋಕಪ್ರಿಯವೂ ಸಾಮಾನ್ಯರಿಗೂ ಉದ್ಬೋಧಕವೂ ಮನರಂಜಕವೂ ಆದ ಧಾರ್ಮಿಕ ಸಾಹಿತ್ಯವನ್ನು ಪ್ರಚಾರದಲ್ಲಿ ತಂದರು. ವೈದಿಕ ಕರ್ಮಗಳಿಂದ ಮತ್ತು ವರ್ಣಾಶ್ರಮ ಧರ್ಮಗಳ ಕಟ್ಟಳೆಗಳಿಂದ ಬೇಸತ್ತು ಜೈನ ಬೌದ್ಧಧರ್ಮಗಳನ್ನನುಸರಿಸಿದ ಬಹುಜನರು ತಿರುಗಿ ಹಿಂದೂಧರ್ಮವನ್ನು

ಆಶ್ರಯಿಸಿದರು. ಇವೆಲ್ಲ ಪ್ರಗತಿ ಆಗಲು ಕ್ರಿ.ಪೂ. ೨೦೦ರಿಂದ ಕ್ರಿ.ಶ. ೩೦೦ರ ವರೆಗೆ ಅಂದರೆ ಸುಮಾರು ೫೦೦ ವರ್ಷಗಳು ಬೇಕಾಗಿರುವುದು.

ಹಿಂದೂಧರ್ಮಕ್ಕೆ ಪ್ರೋತ್ಸಾಹವನ್ನು ಕೊಟ್ಟು ಅದರ ಬೆಳವಣಿಗೆಗೆ ಅನುಕೂಲವಾದ ರಾಜವಂಶಗಳು ಈ ಕಾಲದಲ್ಲಿ ಅನೇಕವಿದ್ದುವು.[1] ಕ್ರಿ.ಪೂ. ೩೨೧ರಲ್ಲಿ ಸ್ಥಾಪಿತವಾದ ಮೌರ್ಯವಂಶ ಅಶೋಕವರ್ಧನನ ಕಾಲದಲ್ಲಿ ಪ್ರಖ್ಯಾತಿಯನ್ನು ಹೊಂದಿ ಬೌದ್ಧಧರ್ಮಕ್ಕೆ ಆಧಾರಸ್ತಂಭವಾಗಿತ್ತು. ಮೌರ್ಯರ ಪ್ರಭುತ್ವವನ್ನು ಪುಷ್ಯಮಿತ್ರ ಸುಂಗನು ಕ್ರಿ.ಪೂ. ೧೮೪ರಲ್ಲಿ ಅಪಹರಿಸಿ ಅಶ್ವಮೇಧಯಾಗವನ್ನು ಮಾಡಿದನು. ಇದು ಬ್ರಾಹ್ಮಣಧರ್ಮ ತಲೆಯೆತ್ತಿದ್ದನ್ನು ಸೂಚಿಸುವುದು. ಕಾಣ್ವವಂಶದ ರಾಜನು ತನ್ನ ಬ್ರಾಹ್ಮಣಮಂತ್ರಿಗಳ ಅಭಿಪ್ರಾಯದಂತೆ ಮನುಸ್ಮೃತಿಯನ್ನು ಆಚಾರದಲ್ಲಿ ತಂದನು. ಆಮೇಲೆ ಆಂಧ್ರವಂಶ ಪ್ರಬಲವಾಯಿತು. ಅವರಲ್ಲಿ ಹಲನು ಪ್ರಾಕೃತಭಾಷೆಯ ಪೋಷಕನು. ಹಿಂದೂಸ್ಥಾನದ ವಾಯುವ್ಯ ಮೇರೆಯ ಆಚೆಗಿರುವ ಪ್ರದೇಶವನ್ನು ಸೀಥಿಯನ್ನರೂ ಪಾರ್ಥಿಯನ್ನರೂ ಆಕ್ರಮಿಸಿ ಹಿಂದೂಸ್ಥಾನವನ್ನು ಒಳನುಗ್ಗಹತ್ತಿದರು. ಸುಮಾರು ಕ್ರಿ.ಶ. ೬೦ರಲ್ಲಿ ಕುಷಾಣ ವಂಶದವರು ಅವರನ್ನು ತಳ್ಳಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಈ ವಂಶದ ಮೊದಲನೆಯ ಕ್ಯಾಡಫಿಶಸ್ ಮತ್ತು ಎರಡನೆಯ ಕ್ಯಾಡಫಿಶಸ್ (Cadphisis) ಎಂಬುವರು ಇಂಡೋ–ಪಾರ್ಥಿಯನ್ನರನ್ನು ಸೋಲಿಸಿ ಪಂಜಾಬನ್ನು ಕೈವಶಮಾಡಿಕೊಂಡರು. ಇವರ ರಾಜ್ಯ ಕ್ರಿ.ಶ. ೨೨೬ರ ವರೆಗೆ ಇತ್ತು. ಇವರು ಪರಕೀಯರಾದರೂ ಹಿಂದೂಸ್ಥಾನಕ್ಕೆ ಬಂದಮೇಲೆ ಹಿಂದೂಧರ್ಮವನ್ನು ಸ್ವೀಕರಿಸಿ ಶೈವ ವೈಷ್ಣವಧರ್ಮಗಳ ಚಿಹ್ನೆಗಳನ್ನು ಧರಿಸಹತ್ತಿದರು. ಮುಂದೆ ಗುಪ್ತವಂಶದ ಚಂದ್ರಗುಪ್ತನೂ (ಕ್ರಿ.ಶ. ೩೨೬–೩೭೫) ಆತನ ಮಗನಾದ ಸಮುದ್ರಗುಪ್ತನೂ ಹಿಂದೂಧರ್ಮವನ್ನು ಬಲಪಡಿಸಿದರು. ಜನಮಾನ್ಯರಾದ ಸ್ಥಳಿಕ ಪ್ರಸಿದ್ಧ ಪುರುಷರನ್ನು ದೇವತೆಗಳ ಸ್ಥಾನಕ್ಕೆ ಏರಿಸಿ ಭಾರತ ರಾಮಾಯಣಗಳ ಕಥಾನಾಯಕರನ್ನು ಅವತಾರಪುರುಷರನ್ನಾಗಿ ಮಾಡಿ ಹಿಂದೂಧರ್ಮದ ಹೊರಗಿದ್ದ ಕಥೆಗಳನ್ನೂ ದೇವತೆಗಳನ್ನೂ ಸೇರಿಸಿಕೊಂಡು ಹಿಂದೂಧರ್ಮದ ಬೆಳವಣಿಗೆಯನ್ನು ಮಾಡಿದರು. ಗುಪ್ತವಂಶ ಸುಮಾರು ಕ್ರಿ.ಶ. ೫೦೦ರಲ್ಲಿ ಹೂಣರಿಂದ ಪರಾಭವವನ್ನು ಹೊಂದಿ ಬಲಹೀನವಾಯಿತು.

---

1. FRE. Vol.VI. p. 697. Elliot; Hinduism and Buddhism Vol. II. Chapt. II.

ವೈದಿಕಕಾಲದ ದೇವತೆಗಳಿಗೆ ಈ ಹಿಂದೂಧರ್ಮದಲ್ಲಿ ಸ್ಥಾನವಿಲ್ಲ. ಅವರ ಸ್ವರೂಪವೇ ಬದಲಾಗಿ ಹೋಗಿರುವುದು. ಮಹತ್ತ್ವದ ಸ್ಥಾನವನ್ನು ಆಕ್ರಮಿಸಿದವರು ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳು. ಸೃಷ್ಟಿಯನ್ನು ನಿರ್ಮಿಸುವುದು ಪೌರಾಣಿಕ ಯುಗದ ಬ್ರಹ್ಮನ ಕೆಲಸ; ಅದನ್ನು ಪಾಲಿಸುವುದು ವಿಷ್ಣುವಿನ ಕೆಲಸ; ಅದನ್ನು ಸಂಹರಿಸುವುದು ಮಹೇಶ್ವರನ ಕೆಲಸ. ಮುಂದೆ ಬರಬರುತ್ತ ಬ್ರಹ್ಮನ ವರ್ಚಸ್ಸು ಕಡಮೆಯಾಗಿ ವಿಷ್ಣು ಮತ್ತು ಮಹೇಶ್ವರರು ಅತ್ಯುಚ್ಚಸ್ಥಾನವನ್ನು ಆಕ್ರಮಿಸಿ ಇಬ್ಬರೂ ಸೃಷ್ಟಿ ಸ್ಥಿತಿ ಲಯಕರ್ತರಾದರು. ಬಲು ಪ್ರಾಚೀನಕಾಲದಿಂದ ಶೈವ ಮತ್ತು ವೈಷ್ಣವ ಮತಗಳು ಹಿಂದೂಧರ್ಮರಥದ ಚಕ್ರಗಳಂತೆ ಇರುವುವು. ಎರಡೂ ಮತದ ಅನುಯಾಯಿಗಳು ಹಿಂದೂಸ್ಥಾನದಲ್ಲೆಲ್ಲ ಇರುವರು. ಇವೆರಡೂ ಮತಗಳಲ್ಲಿ ಅನೇಕ ಅವಾಂತರ ಪಂಥಗಳು ಬೆಳೆದಿರುವುವು. ಇವುಗಳಲ್ಲಿ ಮಹತ್ತ್ವವಾದುವುಗಳನ್ನು ಹಕ್ಕಿಯ ದೃಷ್ಟಿಯಿಂದ ನಿರೀಕ್ಷಿಸುವ.

ಶೈವಮತ

ಈ ಮತದ ಅಧಿದೇವತೆ ಶಿವನು. ವೇದಕಾಲದ ರುದ್ರನೇ ಮುಂದೆ ಶಿವನಾದನೆಂದು ಹೇಳುವರು. ಶಿವನೆಂದರೆ ಕಲ್ಯಾಣಕಾರನು. ಶಿವ ಶಬ್ದದ ವ್ಯುತ್ಪತ್ತಿಯನ್ನು ತೃಪ್ತಿಕರವಾಗಿ ಹೇಳುವುದು ಸಾಧ್ಯವಿಲ್ಲ. ಕೆಲವರು ಪಂಡಿತರು ತಮಿಳು ಶಿವಪ್ಪು (ಕೆಂಪು) ಶಬ್ದದಿಂದ ಬಂದಿರಬಹುದೆಂದು ಊಹಿಸುತ್ತಾರೆ. ಶಿವನು ಮೂಲದಲ್ಲಿ ಆರ್ಯರ ದೇವತೆಯಲ್ಲ. ಮೂಲನಿವಾಸಿಗಳ ದೇವತೆಯೆಂದೂ ಆರ್ಯರು ಮೂಲನಿವಾಸಿಗಳ ಅನೇಕ ವಿಷಯಗಳನ್ನು ತೆಗೆದುಕೊಂಡಂತೆ ಅವರ ದೇವರನ್ನೂ ತೆಗೆದುಕೊಂಡು ರುದ್ರನನ್ನಾಗಿ ವೈದಿಕದೇವತೆಗಳಲ್ಲಿ ಸಮಾವೇಶ ಮಾಡಿರಬಹುದೆಂದೂ ಕೆಲಪಂಡಿತರು ತರ್ಕಿಸುತ್ತಾರೆ. ಆದರೆ ಆ ಅಭಿಪ್ರಾಯ ಇತ್ತಿತ್ತ ಸರಿಯಾದುದಲ್ಲವೆಂದು ತಿರಸ್ಕರಿಸಲ್ಪಟ್ಟಿದೆ. ಮೊಹೆಂಜೆದಾರೊದಲ್ಲಿ ಪ್ರಾಚ್ಯವಸ್ತು ಸಂಶೋಧನ ಶಾಖೆಯವರು ಭೂಮಿಯನ್ನು ಅಗೆಯುವಾಗ ದೊರೆತ ಅನೇಕ ವಸ್ತುಗಳಲ್ಲಿ ಯೋಗಮುದ್ರೆಯಿಂದ ಕುಳಿತ ವ್ಯಕ್ತಿಯ ಆಕೃತಿಯ ಬಿಲ್ಲೆಗಳು ಇರುತ್ತವೆ. ಇದು ಸಮಾಧಿಯಲ್ಲಿದ್ದ ಶಿವನ ಚಿತ್ರವೆಂದು ಹೇಳುತ್ತಾರೆ. ಮೊಹೆಂಜದಾರೊ ಸಂಸ್ಕೃತಿಯ ಬಗ್ಗೆ ನಮಗೆ ಇನ್ನೂ ಸಂಪೂರ್ಣವಾಗಿ ಗೊತ್ತಾಗಿಲ್ಲವಾದುದರಿಂದ ವೈದಿಕಕಾಲದಿಂದ ಇಲ್ಲಿಯವರೆಗೆ ಆರ್ಯರ ಧಾರ್ಮಿಕ ಸಾಹಿತ್ಯದಲ್ಲಿದ್ದ ಶಿವನ ಸ್ಥಾನವನ್ನು ನೋಡುವ.

ಸಂಹಿತೆಯ ಕಾಲದಲ್ಲಿ ರುದ್ರನ ಸ್ಥಾನ ಅಷ್ಟು ಮಹತ್ತ್ವದ್ದಿದ್ದಿಲ್ಲವಾದರೂ ಈತನ ದಂಡಿಸುವ ಮತ್ತು ರಕ್ಷಿಸುವ ಶಕ್ತಿಗಳ ವರ್ಣನೆ ಸ್ಪಷ್ಟವಾಗಿರುವುದರಿಂದ

ಈತನಿಗೂ ಉಳಿದ ವೈದಿಕದೇವತೆಗಳಿಗೂ ಅಂತರವಿದೆ. ಯಜುರ್ವೇದ ಶತರುದ್ರೀಯದಲ್ಲಿ ಈತನ ಪ್ರಾರ್ಥನೆಯೂ ವರ್ಣನೆಯೂ ಇದೆ. ಅಲ್ಲಿ ಈತನು ಶಂಕರನೂ ನೀಲಕಂಠನೂ ಆಗಿದ್ದು ಪರ್ವತಗಳಲ್ಲಿಯೂ ಜನರು ವಾಸವಾಗಿಲ್ಲದಂತಹ ಸ್ಥಳಗಳಲ್ಲಿಯೂ ವಾಸಿಸುವನು. ಧರ್ಮಾತಿಕ್ರಮಿಗಳು, ಸೈನಿಕರು, ಕಳ್ಳರು, ಮೋಸಗಾರರು, ಕಾರಾಗೀರರು, ಬೇಟೆಗಾರರು ಮೊದಲಾದವರ ಇಷ್ಟದೈವವಾದಾಗ್ಯೂ ಈತನು ಬಹುದೊಡ್ಡ ಶಕ್ತಿಯುಳ್ಳವನು. ವಿಶ್ವದ ಎಲ್ಲ ವಸ್ತುಗಳಲ್ಲಿ ವಾಸಿಸುವನು. ವಿಶ್ವದ ಎಲ್ಲ ಪ್ರಾಣಿಗಳ ಮೇಲೆ ಪ್ರಭುತ್ವವನ್ನು ನಡಸುವನು.

ಈತನು ಋತ್ವಿಜರ ದೇವತೆಯಲ್ಲ; ಸಾಮಾನ್ಯರ ದೇವತೆ. ಶಿವನು ದೊಡ್ಡ ಯೋಗಿ, ವಿಶ್ವದ ಶಕ್ತಿ ಸ್ವರೂಪನು, ಮಾಂತ್ರಿಕನು, ಭೂತನಾಯಕನು, ಮಹಾಕಾಲನು, ಮೃತ್ಯುಂಜಯನು, ಪ್ರಾಣಿಕೋಟಿಯನ್ನೆಲ್ಲ ತನ್ನಲ್ಲಿ ಇಟ್ಟುಕೊಂಡಿರುವನು. ಉತ್ಪತ್ತಿಯ ಅಧಿದೇವತೆಯಾದುದರಿಂದ ಅರ್ಧನಾರೀಶ್ವರನು. ಶಿವನ ಸಾಕಾರ ರೂಪದ ವರ್ಣನೆ ಸ್ಪಷ್ಟವಾಗಿದೆ. ಈತನ ವಾಸಸ್ಥಳ ಸರ್ವತ್ರವಿದ್ದರೂ ಕೈಲಾಸ ಮುಖ್ಯವಾದುದು. ಈತನು ಮುಕ್ಕಣ್ಣನು, ಬಾಲೇಂದುಧರನು, ಗಂಗಾಧರನು. ಈತನ ಕಂಠ ನೀಲವರ್ಣದ್ದಿದ್ದು ಅದರ ಸುತ್ತಲೂ ಸರ್ಪವೂ ರುಂಡಮಾಲೆಯೂ ಇರುವುವು. ಕೈಯ್ಯಲ್ಲಿ ತ್ರಿಶೂಲ ಡಮರುಗಳಿರುವುವು. ಶಿವನನ್ನು ಅನೇಕ ರೂಪಗಳಿಂದ ಪೂಜಿಸುವರು. ಈತನು ಮಹಾದೇವನು, ಹರನು, ಭೈರವನು, ಪಶುಪತಿಯು. ಗಣಪತಿಯೂ ಸ್ಕಂದನೂ ಈತನ ಮಕ್ಕಳು. ಪಾರ್ವತಿ ಅಥವಾ ಶಕ್ತಿ ಈತನ ಅರ್ಧಾಂಗಿ. ನಂದಿ ಈತನ ವಾಹನ. ಶಿವನ ನಿರಾಕಾರ ರೂಪದ ವರ್ಣನೆಯೂ ಸ್ಪಷ್ಟವಾಗಿದೆ. ಶಿವನು ಸಚ್ಚಿದಾನಂದ, ನಿತ್ಯ, ನಿರಂಜನ, ನಿರಾವರಣ, ಪರಬ್ರಹ್ಮ. ಆದುದರಿಂದ ನಿರಾಕಾರ ರೂಪದಿಂದ ಈತನನ್ನು ಪೂಜಿಸುವುದು ಸರಿಯೆಂದು ಪ್ರಾಚೀನ ಕಾಲದಿಂದ ಲಿಂಗರೂಪದಿಂದ ಪೂಜಿಸುವ ರೂಢಿ ಪ್ರಚಾರದಲ್ಲಿ ಬಂದಿರಬೇಕು. ಶೈವಾಗಮಗಳು ಶಿವನನ್ನು ನಿಷ್ಕಲವಾದ ಲಿಂಗರೂಪದಿಂದಲೇ ಪೂಜಿಸಬೇಕೆಂದೂ ಪೂಜೆಗೆ ಸಕಲ ರೂಪವಾದ ವಿಗ್ರಹ ಅಷ್ಟು ಯೋಗ್ಯವಾದುದಲ್ಲವೆಂದೂ ಹೇಳುವುವು. ಆದರೆ ಯಾವ ಕಾಲದಲ್ಲಿ ಈ ಪೂಜೆ ಪ್ರಾರಂಭವಾಯಿತೆಂಬುದನ್ನು ನಿಶ್ಚಿತವಾಗಿ ಹೇಳುವುದು ಈಗ ಸಾಧ್ಯವಿಲ್ಲ. ಅನೇಕರು ಲಿಂಗದ ಬಗ್ಗೆ ವಿಪರೀತಾರ್ಥವನ್ನು ಕಲ್ಪಿಸಿ ಲಿಂಗ ಪೂಜಕರ ಮನಸ್ಸಿಗೆ ಹತ್ತುವಂತೆ ಅರ್ಥಮಾಡುವರು. ಋಗ್ವೇದದಲ್ಲಿ[1] ಒಂದೆರಡು ಕಡೆಗೆ ಬಂದ 'ಶಿಶ್ನದೇವಾಃ' ಎಂಬುದು ಲಿಂಗಪೂಜಕರಿಗೆ ಸಂಬಂಧಿಸಿದೆ ಎಂದೂ ಲಿಂಗವೆಂದರೆ ಶಿಶ್ನವೆಂದೂ ಕೆಲಪಂಡಿತರು ಅರ್ಥಮಾಡುವರು. ಇದು ಸರಿಯುಲ್ಲ. ಲಿಂಗಪೂಜೆಯು

1. *ಋಗ್ವೇದ ಸಂಹಿತೆ ೭ : ೨೧ : ೫ ಮತ್ತು ೧೦ : ೯೯ : ೩.*

ಇತಿಹಾಸವನ್ನು ಸೂಕ್ಷ್ಮವಾಗಿ ಶೋಧಿಸಿದವರಿಗೆ ಸುಮಾರು ಎರಡು ಸಾವಿರ ವರ್ಷಗಳಿಂದ ಲಿಂಗಕ್ಕೆ ಈ ಅರ್ಥ ಸರಿಹೋಲುವುದಿಲ್ಲವೆಂದು ಕಂಡುಬರುವುದು. ಶೈವರಲ್ಲಿ ಈ ಅರ್ಥದ ಕಲ್ಪನೆ ಕೂಡಾ ಇರುವುದಿಲ್ಲ. ಇದರ ಬಗ್ಗೆ ಸರ್ ಚಾರ್ಲ್ಸ್ ಇಲಿಯಟರ (Sir Charles Elliot) ಅಭಿಪ್ರಾಯ ಹೀಗಿದೆ:

"ವೇದಗಳಲ್ಲಿ ಲಿಂಗದ ಉಲ್ಲೇಖವಿಲ್ಲ. ವೇದಕಾಲದ ಜನರಿಗೆ ಲಿಂಗ ಗೊತ್ತಿದ್ದಿಲ್ಲ. ಋಗ್ವೇದ ಮಂಡಲ ೭ ಸೂಕ್ತ ೨೧ ಮಂತ್ರ ೫ ಮತ್ತು ಮಂಡಲ ೯ ಸೂಕ್ತ ೯೯ ಮಂತ್ರ ೩ ಇವುಗಳಲ್ಲಿ ಬಂದ 'ಶಿಶ್ನದೇವರನ್ನು ಇಂದ್ರನು ನಾಶಮಾಡಲಿ' ಎಂಬಲ್ಲಿಯ ಶಿಶ್ನದೇವಾಃ ಎಂಬ ಶಬ್ದ ಒಂದು ಪ್ರಕಾರದ ರಾಕ್ಷಸರಿಗೆ ಹತ್ತುವುದೋ ಅಥವಾ ಶಿಶ್ನವೇ ದೇವರಾದ ಜನರಿಗೆ ಹತ್ತುವುದೋ ಎಂಬುದು ನಿರ್ಣಯವಾಗಿಲ್ಲ.[1] ಲಿಂಗಪೂಜೆಯನ್ನು ಮೂಲನಿವಾಸಿಗಳಿಂದ ವಿಶೇಷವಾಗಿ ದ್ರಾವಿಡರಿಂದ ಆರ್ಯರು ತೆಗೆದುಕೊಂಡರೆಂಬ ಅಭಿಪ್ರಾಯ ಈಗ ಮಾನ್ಯವಿಲ್ಲ.[2] ಏಕೆಂದರೆ:

೧. ಮೂಲನಿವಾಸಿಗಳು ಲಿಂಗವನ್ನು ಪೂಜಿಸುತ್ತಿದ್ದ ಬಗ್ಗೆ ಆಧಾರಗಳಿಲ್ಲ. ಹಿಂದೂಸ್ಥಾನದಲ್ಲಿ ಮೂಲನಿವಾಸಿಗಳ ಸಂತತಿಯವರೆಂದು ತಿಳಿಯಲ್ಪಡುವ ಬಹುತರ ಎಲ್ಲ ಕಾಡುಜನಾಂಗಗಳಲ್ಲಿ ಲಿಂಗಪೂಜೆಯ ಪ್ರಚಾರವಿಲ್ಲ.

೨. ಲಿಂಗಪೂಜೆ ದಕ್ಷಿಣದಲ್ಲಿ ವಿಶೇಷವಾಗಿದ್ದರೂ ಹಿಂದೂಸ್ಥಾನದ ಪ್ರತಿಯೊಂದು ಮೂಲೆಯಲ್ಲಿ ಮತ್ತು ಅಸ್ಸಾಮ, ನೇಪಾಳ ದೇಶಗಳಲ್ಲಿ ಪ್ರಚಾರದಲ್ಲಿದೆ.

೩. ಕೀಳು ತರಗತಿಯ ಜನರು ಲಿಂಗಪೂಜೆಯನ್ನು ಮಾಡುವುದಿಲ್ಲ. ಲಿಂಗಪೂಜೆಯಲ್ಲಿ ಹೇಯ ಮತ್ತು ತ್ಯಾಜ್ಯವಾದ ವಸ್ತುಗಳ ಸಂಪರ್ಕವೂ ಕೂಡು ಬರುವುದಿಲ್ಲ. ನಿಯಮನಿಷ್ಠರಾದ ಬ್ರಾಹ್ಮಣರೂ ಉಚ್ಚತರಗತಿಯ ಜನರೂ ಲಿಂಗಪೂಜೆಯನ್ನು ಆಸ್ಥೆಯಿಂದ ಮತ್ತು ಭಕ್ತಿಯಿಂದ ಮಾಡುವರು. ಈ ಚಿಹ್ನದ ಮೂಲಾರ್ಥ ಏನೇ ಇದ್ದರೂ ಇದಕ್ಕೆ ಅರ್ಪಿಸತಕ್ಕ ವಸ್ತುಗಳೂ ಪೂಜೆಯ ಪದಾರ್ಥಗಳೂ ಯೋಗ್ಯವೂ ಉಚಿತವೂ ಆಗಿವೆ. ಈ ಧರ್ಮ ಬ್ರಾಹ್ಮಣ ಧರ್ಮಾನುಯಾಯಿಗಳಾದ ಹಿಂದೂಗಳಲ್ಲಿ ಕ್ರಿಸ್ತಶಕದ ಪ್ರಾರಂಭದಲ್ಲಿ ಪ್ರಚಾರದಲ್ಲಿ ಬಂದಿತು. ವೀರ್ಯದಲ್ಲಿ ಮತ್ತು ಉತ್ಪತ್ತಿಯಲ್ಲಿ ದೈವಿಕ ಶಕ್ತಿಯಿದೆಯೆಂಬ ತತ್ತ್ವ

---

1. *"It is not certain if the Sisnadevah whom Indra is aksed to destroy in RgVeda.VII. 21. 5 and X. 99. 3 are priapic demons or worshippers of the phallus." Elliot: Hinduism and Buddhism Vol. II. p. 143.*

2. *Elliot : Hinduism and Buddhism Vol. II. p. 143.*

ಮೊದಲಿನಿಂದಲೂ ರೂಢಿಯಲ್ಲಿದ್ದಿತು. ಈ ಚಿಹ್ನವನ್ನು – ಕಲ್ಲಿನ ಕಂಬವನ್ನು – ಸ್ವೀಕರಿಸಲು ಕೆಳಗಿನ ಎರಡು ಸಂಗತಿಗಳ ಪ್ರಭಾವ ಬಿದ್ದಿರಬಹುದು.[1]

೧. ಬೌದ್ಧರು ಸ್ತೂಪಗಳನ್ನು ಪೂಜಿಸುತ್ತಿದ್ದರು. ಅವರು ಸಣ್ಣ ಸಣ್ಣ ಸ್ತೂಪಾಕೃತಿಗಳನ್ನು ಮಾಡಿ ಅವನ್ನು ಪೂಜಿಸುತ್ತಿದ್ದರು. ಲಿಂಗ ಒಂದು ಸಣ್ಣ ಸ್ತೂಪದಂತೆ ಇರುವುದರಿಂದ ಇದೇ ಶಿವನ ಚಿಹ್ನವೆಂದು ಸ್ವೀಕರಿಸಿರಬಹುದು.

೨. ಪ್ರಾಚೀನ ಕಾಲದಲ್ಲಿ ದೇವರ ಮತ್ತು ದೊಡ್ಡ ಮನುಷ್ಯರ ಸ್ಮಾರಕಕ್ಕಾಗಿ ಕಲ್ಲಿನ ಕಂಬಗಳನ್ನು ಸ್ಥಾಪಿಸಿ ಪೂಜಿಸುವ ಪರಿಪಾಠವಿತ್ತು. ಈ ಕಂಬಗಳೇ ಮುಂದೆ ಲಿಂಗಗಳಾಗಿರಬಹುದು.

ಶಿವನನ್ನು ಲಿಂಗರೂಪದಿಂದ ಪೂಜಿಸುವುದು ಬಹುಪ್ರಾಚೀನಕಾಲದಿಂದಲೂ ಪ್ರಚಾರದಲ್ಲಿದ್ದಂತೆ ತೋರುವುದು. ಭಿಟಾಲಿಂಗ ಮುಖಲಿಂಗವೆಂದೂ ಅದು ಕ್ರಿ.ಪೂ. ೧೦೦ ವರ್ಷವಿದ್ದಿರಬಹುದೆಂದೂ ಆರ್.ಡಿ. ಬೆನರ್ಜಿಯವರು, ಅದಕ್ಕೂ ಪೂರ್ವದ್ದಿರಬಹುದೆಂದು ಟಿ. ಗೋಪಿನಾಥರಾಯರೂ ಅಭಿಪ್ರಾಯಪಡುತ್ತಾರೆ. ಗೋಪಿನಾಥರಾಯರಿಗೆ ಗುಡಿಮಲ್ಲಂ ಎಂಬಲ್ಲಿ ದೊರೆತ ಪರಶುರಾಮೇಶಲಿಂಗ ಕ್ರಿ.ಪೂ. ೨ನೆಯ ಶತಮಾನದ್ದಿರಬೇಕೆಂದು ಅವರು ಸೂಚಿಸುತ್ತಾರೆ.

ಕಾಂಭೋಜ ದೇಶದಲ್ಲಿ ಸುಮಾರು ಕ್ರಿ.ಶ. ೫೫೦ರಲ್ಲಿ ಹುಟ್ಟಿದ ಶಾಸನದಲ್ಲಿ ಲಿಂಗಪ್ರತಿಷ್ಠಾಪನೆಯ ಉಲ್ಲೇಖವಿದೆ.[2] ಹಿಂದೂಸ್ಥಾನದಿಂದ ಚಂಪಾ ಮತ್ತು ಕಾಂಭೋಜದವರಿಗೆ ಲಿಂಗದ ಪ್ರಭಾವ ಮುಟ್ಟಬೇಕಾದರೆ ಅನೇಕ ಶತಮಾನಗಳು ಬೇಕಾಗಿರಬಹುದು. ಐದನೆಯ ಶತಮಾನದಲ್ಲಿ ಸ್ಥಾವರ ಲಿಂಗಪೂಜೆಯಲ್ಲದೆ ಲಿಂಗವನ್ನು ಶರೀರದ ಮೇಲೆ ಧರಿಸುವ ರೂಢಿ ಪ್ರಚಾರದಲ್ಲಿದ್ದಿತೆಂದು ಕ್ರಿ.ಶ. ೪೨೮ರಲ್ಲಿ ಹುಟ್ಟಿದ ವಾಕಾಟಕ ರಾಜನಾದ ೨ನೆಯ ಪ್ರವರಸೇನನ ಶಿಲಾಶಾಸನದಿಂದ ಗೊತ್ತಾಗುವುದು. ಅದರ ಆಶಯ–"ಶಿವಲಿಂಗವನ್ನು ಸದಾ ಭುಜದಲ್ಲಿ ಧರಿಸುವುದರಿಂದ ಸಂತುಷ್ಟನಾದ ಶಿವನು ಭವನಾಗರಿಗೆ ರಾಜ್ಯಸಂಪತ್ತಿಯನ್ನು ಒದಗಿಸಿಕೊಟ್ಟನು" ಎಂದಿರುವುದು.[3]

---

1. *Elliot : Hinduism and Buddhism Vol. II. p. 143-144.*

2. *Elliot : Hinduism and Buddhism Vol. II. p. 143-144 Foot note 3.*

3. *"ಅಂಸ ಭಾರಸನ್ನಿವೇಶಿತ ಶಿವಲಿಂಗೋದ್ವಹನ ಶಿವಪರಿತುಷ್ಟ ಸಮುತ್ಪಾದಿತ ರಾಜವಂಶಾನಾಮ್" Chammak Plates of Vakataka Pravarasena II. Fleets' Gupta Inscriptions; No. 45.*

ಶೈವಧರ್ಮದ ಬಗ್ಗೆ ಸರ್ ಚಾರ್ಲ್ಸ್ ಇಲಿಯೆಟರವರು "ಇದರಲ್ಲಿ ಸತ್ಯವೂ ಶಕ್ತಿಯೂ ಇವೆ. ಇದು ಪರಮಾತ್ಮನ ಸ್ವರೂಪವನ್ನು ಸರಿಯಾಗಿ ಚಿತ್ರಿಸುವುದು" ಎಂದು ಹೇಳಿರುವರು.[1]

ಶೈವಧರ್ಮದಲ್ಲಿ ಅನೇಕ ಅವಾಂತರ ಭೇದಗಳಿವೆ. ಶಿವನು ಸರ್ವಪ್ರಾಣಿಗಳಿಗೆ ಒಡೆಯನಾದುದರಿಂದ ಸರ್ವವರ್ಗದ ಜನರು ಇವನನ್ನು ತಮ್ಮ ಇಷ್ಟಾನುಸಾರ ಪೂಜಿಸುವರು. ಕೆಲವು ಪಂಥದವರು ಶುದ್ಧ ಮತ್ತು ಶಿಷ್ಟಸಮ್ಮತರಿರುವರು: ಮತ್ತೆ ಕೆಲವು ಪಂಥದವರು ಘೋರ ಮತ್ತು ಹೇಯವಾದ ಆಚರಣೆಗಳುಳ್ಳವರು. ನಮಗೆ ಗೊತ್ತಿದ್ದಮಟ್ಟಿಗೆ ಪಾಶುಪತಮತ ಬಹಳ ಹಳೆಯದೂ ಮಹತ್ತ್ವವಾದುದೂ ಆಗಿರುವುದು: ಈ ಮತ ಕರ್ಣಾಟಕದಲ್ಲಿ ಪ್ರಬಲವಾದ ಮತಗಳಲ್ಲಿ ಒಂದಾಗಿತ್ತು.

ಪಾಶುಪತ ಮತ

ಪಾಶುಪತ, ಕಾಳಾಮುಖ, ಲಾಕುಳ, ಮಾಹೇಶ್ವರ ಪಂಥಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಒಂದೇ ಇದ್ದಂತೆ ತೋರುವುದು. "ಸರ್ವದರ್ಶನ ಸಂಗ್ರಹ"ಕಾರರಾದ ಮಾಧವಾಚಾರ್ಯರು ನಕುಲೀಶ ಪಾಶುಪತವೆಂದು ಲಕುಲೀಶ ಮತ್ತು ಪಾಶುಪತಮತಗಳನ್ನು ಒಂದೇ ಹೆಸರಿನಿಂದ ಕರೆದು ಈ ಪಂಥದ ತತ್ತ್ವಗಳನ್ನು ಸಂಗ್ರಹಿಸುವರು.[2] ಶಂಕರಾಚಾರ್ಯರು ತಮ್ಮ 'ಬ್ರಹ್ಮಸೂತ್ರ'ದ ಶಾರೀರಿಕ ಭಾಷ್ಯದಲ್ಲಿ ಪಾಶುಪತರಿಗೆ ಮಹೇಶ್ವರರೆಂದು ಕರೆಯುವರು.[3] ಮಾಧವಾಚಾರ್ಯರೂ ಕೂಡ

---

1. "It may seem strange that a religion whose outward ceremonies though unassuming and modest consist chiefly of worship of the linga, should draw its adherents largely from the educated classes and be under no moral or social stigma. Yet as an idea, as a philosophy Savivism possesses truth and force. It gives the best picture which humanity has drawn of the Lord of this world, not indeed of the ideal to which the saint aspires, nor of the fancies with which hope and emotion people the spheres behind veil, but of the force which rules the Universe as it is, which produce and destroys, and in performing one of these acts necessarity performs the other, seeing that both are but aspects of changes." Elliot : *Hinduism and Buddhism Vol. II, p. 144.*

2. *ಸಾಯಣ–ಮಾಧವರ 'ಸರ್ವದರ್ಶನ ಸಂಗ್ರಹ'– ಮಹಾಮಹೋಪಾಧ್ಯಾಯ ವಾಸುದೇವಶಾಸ್ತ್ರಿ ಅಭ್ಯಂಕರ ಅವರು ಸಂಪಾದಿಸಿದ್ದು. ೧೯೨೪. ಪು. ೧೬೧....೧೭೩.*

3. *ಬ್ರಹ್ಮಸೂತ್ರ ೨ : ೨ : ೩೭.*

ನಕುಲೀಶ ಪಾಶುಪತರಿಗೆ ಮಾಹೇಶ್ವರರೆಂದು ಕರೆದಿರುವರು.[1] ಕಾಳಾಮುಖರೂ ಲಕುಲೀಶರೂ ಒಂದೇ ಎಂದು ಕನ್ನಡ ಶಿಲಾಶಾಸನಗಳನೇಕ ಸಾರುವುವು.[2] ಮಹಾಭಾರತದ 'ಶಾಂತಿಪರ್ವ'ದಲ್ಲಿ ಪಾಶುಪತ ಧರ್ಮದ ಉಲ್ಲೇಖವಿದೆ. ನಕುಲೀಶ, ಲಕುಲೀಶ, ಲಾಕುಳ ಸಮಯ, ಲಾಕುಳವಾಗಮ ಮೊದಲಾದುವು ಲಕುಲೀಶ, ಅಥವಾ ಲಗುಡೀಶ ಪಂಥಕ್ಕೆ ಹೆಸರು. ವಾಯು, ಕೂರ್ಮ ಮತ್ತು ಲಿಂಗಪುರಾಣಗಳಲ್ಲಿ ಲಕುಲೀಶನ ಉತ್ಪತ್ತಿಯೂ ಪ್ರಶಸ್ತಿಯೂ ದೊರೆಯುವುವು. ಶಿಂತ್ರಾ ಪ್ರಶಸ್ತಿಯಲ್ಲಿಯೂ ಇದೇ ವಿಷಯ ಬಂದಿದೆ. ಈ ಪ್ರಶಸ್ತಿಯ ಕಾಲ ಕ್ರಿ.ಶ. ೧೨೭೪ರಿಂದ ೧೨೯೬ರ ವರೆಗಿನದು. ಇದರಲ್ಲಿ ಲಕುಲೀಶನು ಶಿವನ ಅವತಾರವೆಂದೂ ವಿಶ್ವವನ್ನು ಉದ್ಧರಿಸಲೋಸುಗ ಭಟ್ಟಾರಕ ಶ್ರೀ ಲಕುಲೀಶನಾಗಿ ಭೂಮಿಗೆ ಇಳಿದನೆಂದೂ ಹೇಳಿದೆ. ಶಾಪದಿಂದ ಮಕ್ಕಳಾಗದ ಉಲೂಕನ ಮಕ್ಕಳನ್ನು ಉದ್ಧರಿಸಲೋಸುಗ ಲಾಟದೇಶಕ್ಕೆ ಬಂದು ಕಾರೋಹಣದಲ್ಲಿ ವಾಸವಾಗಿದ್ದನು. ಪಾಶುಪತವನ್ನು ಪ್ರಸಾರ ಮಾಡುವುದಕ್ಕೋಸುಗ ಕುಶಿಕ, ಗಾರ್ಗ್ಯ, ಕೌರುಷ, ಮತ್ತು ಮೈತ್ರೇಯರೆಂಬ ನಾಲ್ಕು ಜನ ಶಿಷ್ಯರನ್ನು ನೇಮಿಸಿದನು. ಅವರು ಈ ಮತವನ್ನು ಎಲ್ಲ ಕಡೆಗೂ ಹಬ್ಬಿಸಿದರು. ಡಾಕ್ಟರ್ ಬ್ಯೂಹ್ಲರ್ ಅವರು (Buehler)ಬಡೋದಾ ಸಂಸ್ಥಾನದಲ್ಲಿ ಈಗಿನ ಕಾರ್ವಾನ್ ಎಂಬ ಊರು ವೇಲಿನ ಪ್ರಶಸ್ತಿಯಲ್ಲಿ ಹೇಳಿರುವ ಕಾರೋಹಣವೆಂದೂ ಅಭಿಪ್ರಾಯಪಡುತ್ತಾರೆ.[3] ಡಾ. ಎಸ್. ಆರ್. ಭಾಂಡಾರಕರ ಅವರು ಕ್ರಿ.ಶ. ೯೭೧, ೯೭೨ರಲ್ಲಿ ಹುಟ್ಟಿದ ಉದಯಪುರದ ಸಮೀಪವಿರುವ ಏಕಲಿಂಗಜೀಯ ಗುಡಿಯೊಳಗಿನ ಶಾಸನವನ್ನು ಪ್ರಸಿದ್ಧಿಸಿರುವರು.[4] ಅದರಲ್ಲಿಯ ಮುಖ್ಯವಿಷಯ ಶಿಂತ್ರಾ ಪ್ರಶಸ್ತಿಯ ವಿಷಯಕ್ಕೆ ಸರಿಹೋಲುವುದು. ಇದರಲ್ಲಿ ಭಟ್ಟಾರಕ ಲಕುಲೀಶನ ಶಿಷ್ಯರು ಪಾಶುಪತಯೋಗವನ್ನು ಮಾಡುತ್ತಿದ್ದರೆಂದು ಹೇಳಿದೆ. ವಾಯು ಕೂರ್ಮ ಲಿಂಗ ಪುರಾಣಗಳಲ್ಲಿ ಕೂಡ ಇವರು ಪಾಶುಪತರೆಂದು ಹೇಳಲಾಗಿದೆ. ವಾಯುಪುರಾಣದಲ್ಲಿ ಗುಪ್ತವಂಶದ ಮೊದಲನೆಯ ಚಂದ್ರಗುಪ್ತನ ಉಲ್ಲೇಖವಿರುವುದರಿಂದ ಇದು ಕ್ರಿ.ಶ. ೪ನೆಯ ಶತಕದ ಸುಮಾರಕ್ಕೆ ಹುಟ್ಟಿರಬಹುದು. ಶಿವನ ಅವತಾರವಾದ ಲಕುಲೀಶನು ೧ನೆಯ ಶತಕಕ್ಕೂ ಹಿಂದೆ ಇದ್ದಿರಬೇಕೆಂದು ಪಂಡಿತರ ಅಭಿಪ್ರಾಯ. ಲಕುಲೀಶನನ್ನು

---

1. *ಸರ್ವದರ್ಶನ ಸಂಗ್ರಹ, ಪು. ೧೬೧.*

2. *ಎಪಿ. ಕರ್ನಾ. ಸಂ. ೧೨. ಸಿರಾ ೨೮.*

   ಶಿಕಾರಿಪುರ ೧೦೭, ೯೪. ೯೮: ೧೧೪, ೩೧೬.

3. *ಎಪಿ. ಇಂಡಿ. ಸಂ. ೧. ೨೭೧.*

4. *Journal of the Bombay Branch of the Royal Asiatic Society. Vol. XXII. p. 151.*

ಲಕುಲೋಪಲಕ್ಷಿತ ಕರಃ ಎಂದು ವರ್ಣಿಸಿರುವುದರಿಂದ ಕ್ರಿ.ಪೂ. ೫೮ರಿಂದ ೨೫ರ ವರೆಗೆ ಆಳಿದ ಹುವಿಷ್ಕನ ನಾಣ್ಯಗಳ ಮೇಲಿರುವ ಲಕುಲಧಾರಿಯಾದ ಶಿವನ ಮೂರ್ತಿ ಲಕುಲೀಶನದಾಗಿರಬಹುದು. ಆದುದರಿಂದ ಲಕುಲೀಶ ಪಂಥವೂ ಪಾಶುಪತ ಮತವೂ ಒಂದೇ ಆಗಿದ್ದು ಪುರಾತನ ಕಾಲದಿಂದ ಬಂದುವು. ಡಾ. ರಾಮಕೃಷ್ಣಗೋಪಾಲ ಭಾಂಡಾರಕರ ಅವರು ಕಾಳಾಮುಖ ಧರ್ಮವೂ ಕಾಪಾಲಿಕ ಮತವೂ ಒಂದೇ ಎಂದು ಹೇಳುವರು.[1] ಇದು ಸರಿಯೆಂದು ತೋರುವುದಿಲ್ಲ. ಕಾಳಾಮುಖ ಆಚಾರ್ಯನಾದ ಶ್ರೀಕಂಠ ಪಂಡಿತನು ಸ್ವತಃ ಲಕುಲೀಶನೆಂದೂ ಆತನ ಮಗನಾದ ಸೋಮೇಶ್ವರ ಪಂಡಿತನು ಲಾಕುಲ ಸಿದ್ಧಾಂತವನ್ನು ಅರಳಿಸಿದವನೆಂದೂ ಶಿಕಾರಿಪುರದ ಶಿಲಾಶಾಸನಗಳು ಹೇಳುವುವು.[2] ಮತ್ತೊಂದು ಶಾಸನದಲ್ಲಿ ರಾಜಗುರುವಾದ ವಿಮಲಶಕ್ತಿಯನ್ನು ಲಕುಲೀಶನಿಗೆ ಹೋಲಿಸಲಾಗಿದೆ.[3] ಪರ್ವತಾವಲಿಯ ಮೂವರ ಕೋಣೆಯ ಶಕ್ತಿ ಪರ್ಷೆ ಶಾಖೆಗೆ ಸೇರಿದ ಕಾಳಾಮುಖರ ವರ್ಣನೆ ಅನೇಕ ಕನ್ನಡ ಶಾಸನಗಳಲ್ಲಿ ದೊರೆಯುವುದು.[4] ಕರ್ನಾಟಕದಲ್ಲಿ ಕಾಳಾಮುಖಾಚಾರ್ಯರು ಒಳ್ಳೆಯ ಪ್ರತಿಭಾಶಾಲಿಗಳೂ ಘನಪಂಡಿತರೂ ಮಹಾತಪಸ್ವಿಗಳೂ ಆಗಿದ್ದು ರಾಜಪೂಜಿತರೂ ಲೋಕಪೂಜಿತರೂ ಆಗಿದ್ದರು. ರಾಜರೂ ಮಹಾಜನರೂ ಇವರ ಕಾಲನ್ನು ಕರ್ಚ್ಚಿ (=ತೊಳೆದು) ದತ್ತಿಯನ್ನು ಬಿಟ್ಟ ಉದಾಹರಣೆಗಳು ಅನೇಕವಿವೆ. ಇವರು ಲಕುಲೀಶ ಮತದವರೂ ಪಾಶುಪತರೂ ಆಗಿದ್ದರೆಂಬುದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುವುದು.

ಪಾಶುಪತ ಧರ್ಮದ ತತ್ತ್ವಗಳನ್ನು ಹತ್ತನೆಯ ಶತಮಾನದಲ್ಲಿದ್ದ ಭಾಸರ್ವಜ್ಞನು ತನ್ನ 'ಗಣಕಾರಿಕಾ'ದಲ್ಲಿ ಸಂಗ್ರಹಿಸಿರುವನು. ಮಾಧವಾಚಾರ್ಯರು 'ಸರ್ವದರ್ಶನ ಸಂಗ್ರಹ'ದಲ್ಲಿಯೂ ಈ ಮತದ ತತ್ತ್ವಗಳನ್ನು ಸಂಕಲಿಸಿರುವರು. ಅವು ಯಾವುವೆಂದರೆ:

ಪಂಚ ಪದಾರ್ಥಗಳು

*೧. **ಕಾರ್ಯ** : ಪ್ರಧಾನದಿಂದ ಉದ್ಭವಿಸಿದ ಮಹದಾದಿಗಳು.*

*೨. **ಕಾರಣ** : ಪ್ರಧಾನ ಅಥವಾ ಈಶ್ವರ ಅಥವಾ ಮಹೇಶ್ವರ.*

---

1. Vaisnvism, Saivism and minor Religions, pp. 181-183 (collected works A.R.G. Bhandarkar Vol. IV)

2. ಎಪಿ. ಕರ್ನಾ. ಸಂ. ೧೨. ಶಿಕಾರಿಪುರ ೧೦೭, ೯೪.

3. ಅದೇ. ಶಿಕಾರಿಪುರ ೯೨, ೯೮.

4. ಅದೇ. ಸಂ. ೧೧. ಜಗಳೂರು ೧೦. ಸಂ. ೧೨. ಶಿಕಾರಿಪುರ ೧೦೭, ೧೧೪, ೩೧೬. ೧೦೪, ೧೦೮, ಬೇಲೂರು ೧೧೭.)

೩. **ಯೋಗ** : ಓಂ ಮಂತ್ರವನ್ನು ಸದಾ ವಿವರಿಸುವುದು ಅಥವಾ ಧ್ಯಾನದಲ್ಲಿಡುವುದು.

೪. **ವಿಧಿ** : ತ್ರಿಕಾಲದಲ್ಲಿ ಭಸ್ಮಾದಿ ಸ್ನಾನಮಾಡುವುದು.

೫. **ದುಃಖಾಂತ** : ಮುಕ್ತಿಯನ್ನು ಪಡೆಯುವುದು.

ಈ ಐದು ಪದಾರ್ಥಗಳನ್ನು ಹೆಚ್ಚು ಸ್ಪಷ್ಟವಾಗಿ ವಿವರಿಸಿರುವರು. ಅದರ ಸಾರಾಂಶ.

೧. **ಕಾರ್ಯ** : ಯಾವುದು ಸ್ವತಂತ್ರವಲ್ಲವೋ ಅದು ಕಾರ್ಯ. ಅದು ವಿದ್ಯಾ ಕಲಾ ಪಶು ಎಂದು ಮೂರು ತೆರನಾಗಿರುವುದು. ಇವುಗಳ ಜ್ಞಾನದಿಂದ ಸಂಶಯ, ವಿಪರ್ಯಯ ಮೊದಲಾದುವು ಹೋಗುವುವು. ಪಶುಗುಣಕ್ಕೆ ವಿದ್ಯೆಯೆನ್ನುವರು. ಅದು ಬೋಧ ಮತ್ತು ಅಬೋಧ ಎಂದು ಎರಡು ಪ್ರಕಾರವಾಗಿರುವುದು. ಬೋಧಸ್ವಭಾವ ವಿವೇಕ ಮತ್ತು ಅವಿವೇಕ ಎಂದು ಎರಡು ವಿಧ. ಇದಕ್ಕೆ ಚಿತ್ತ ಎನ್ನುವರು. ಚಿತ್ತ ಎಲ್ಲ ಪ್ರಾಣಿಗಳಿಗೆ ಬೋಧಾತ್ಮಕ ಪ್ರಕಾಶವನ್ನುಂಟುಮಾಡುವುದು. ಸಾಮಾನ್ಯವಾಗಿ ವಿವೇಚಿತ ಮತ್ತು ಅವಿವೇಚಿತ ಅರ್ಥವನ್ನು ತಿಳಿಯುವುದು. ವಿವೇಕಬೋಧಸ್ವಭಾವ ಪ್ರಮಾಣ ಮಾತ್ರ. ವ್ಯಂಗ್ಯ ಅಬೋಧಾತ್ಮಕವಿದ್ಯೆ; ಪಶುಗಳ ಸಲುವಾಗಿ ಧರ್ಮ ಅಧರ್ಮಗಳುಳ್ಳದ್ದು. ಕಲೆ ಚೇತನದ ಅಧೀನದಲ್ಲಿದ್ದಾಗ್ಯೂ ಅಚೇತನ. ಅದು ಕಾರ್ಯ ಕಾರಣಗಳೆಂದು ಎರಡು ವಿಧ. ಕಾರ್ಯ ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶಗಳೆಂಬ ಐದು ತತ್ತ್ವಗಳೂ, ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ಐದು ಗುಣಗಳೂ ಕೂಡಿ ಹತ್ತು ಪ್ರಕಾರವಾಗಿರುವುದು. ಕಾರಣ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು. ಬುದ್ಧಿ, ಮನ, ಅಹಂಕಾರಗಳೆಂಬ ಅಂತಃಕರಣತ್ರಯಗಳೂ ಕೂಡಿ ಹದಿಮೂರು ಪ್ರಕಾರಗಳಾಗಿರುವುದು. ಪಶುತ್ವ ಸಂಬಂಧವುಳ್ಳದ್ದು ಪಶು. ಅದು ಸಾಂಜನ ಮತ್ತು ನಿರಂಜನ ಎಂದು ಎರಡು ಪ್ರಕಾರ. ಶರೀರೇಂದ್ರಿಯ ಸಂಬಂಧವುಳ್ಳದ್ದು ಸಾಂಜನ. ಅದು ಇಲ್ಲದುದು ನಿರಂಜನ.

೨. **ಕಾರಣ** : ಸಮಸ್ತಸೃಷ್ಟಿ ಸಂಹಾರಾನುಗ್ರಹಕಾರಿಯಾದುದು ಕಾರಣ. ಅದು ಒಂದೇ ಇದ್ದಾಗ್ಯೂ ಗುಣ ಕರ್ಮ ಭೇದಗಳಿಗನುಸರಿಸಿ ಪತಿ ಮತ್ತು ಸಾದ್ಯ ಮೊದಲಾದ ವಿಭಾಗಗಳನ್ನು ಹೊಂದುವುದು. ಪತಿತ್ವ ನಿರತಿಶಯ ದೃಕ್‌ಕ್ರಿಯಾಶಕ್ತಿಯುಳ್ಳದ್ದು ಮತ್ತು ನಿತ್ಯವಾಗಿ ಐಶ್ವರ್ಯಯುಕ್ತವಾದುದು. ಸಾದ್ಯತ್ವ ಅನಾಗಂತುಕೈಶ್ವರ್ಯ ಸಂಬಂಧವುಳ್ಳದ್ದು.

೩. **ಯೋಗ** : ಚಿತ್ತದ್ವಾರದಿಂದ ಆತ್ಮನ ಮತ್ತು ಈಶ್ವರನ ಸಂಬಂಧ ಹೇತುವನ್ನು ಉಂಟುಮಾಡಿಕೊಡುವುದು ಯೋಗ. ಅದು ಕ್ರಿಯಾ ಲಕ್ಷಣವೆಂದೂ

ಕ್ರಿಯೋಪರಮ ಲಕ್ಷಣವೆಂದೂ ಎರಡು ವಿಧ. ಜಪಧ್ಯಾನಾದಿ ರೂಪವುಳ್ಳದ್ದು ಕ್ರಿಯಾಲಕ್ಷಣ. ನಿಷ್ಠಾ ಸಂವಿದ್‌ಗತ್ಯಾದಿ ರೂಪವುಳ್ಳದ್ದು ಕ್ರಿಯೋಪರಮ ಲಕ್ಷಣ.

೪. **ವಿಧಿ** : ಧರ್ಮಾರ್ಥಸಾಧಕ ವ್ಯಾಪಾರ ವಿಧಿ. ಅದು ಪ್ರಧಾನಭೂತ ಗುಣಭೂತ ಎಂದು ಎರಡು ಪ್ರಕಾರ. ಸಾಕ್ಷಾತ್ ಧರ್ಮಹೇತು ಭೂತವಾದ ನಡವಳಿಕೆ (ಚರ್ಯಾ) ಪ್ರಧಾನಭೂತ. ಇದು ವ್ರತ ಮತ್ತು ದ್ವಾರಗಳೆಂದು ಎರಡು ವಿಧ. ಭಸ್ಮಸ್ನಾನ ಶಯನ ಉಪಹಾರ ಜಪ ಪ್ರದಕ್ಷಿಣೆಗಳು ವ್ರತ. ಭಗವಾನ್ ನಕುಲೀಶನು "ಭಸ್ಮನಾತ್ರಿಷವಣಂ ಸ್ನಾಯೀತ ಭಸ್ಮನಿ ಶಯೀತ" ಎಂದು ಹೇಳಿರುವನು. ಉಪಹಾರವೆಂಬುದು ನಿಯಮ. ಸೂತ್ರಕಾರನ ಪ್ರಕಾರ [1]ಹಸಿತ–ನಗುವುದು, ಗೀತ–ಹಾಡುವುದು, ನೃತ್ಯ–ಕುಣಿಯುವುದು, ಹುಡುಕ್ಕಾರ–'ಹು ಹು' ಎಂದು ಸಪ್ಪಳ ಮಾಡುವುದು, ನಮಸ್ಕಾರ, ಮತ್ತು ಜಪ ಎಂದು ಉಪಹಾರ ಆರು ಪ್ರಕಾರವಾಗಿದೆ. ದ್ವಾರಗಳು ಕ್ರಾಥನ–ಮಲಗದೆ ಇದ್ದರೂ ಮಲಗಿದಂತೆ ತೋರಿಸುವುದು; ಸ್ಪಂದನ–ಅವಯುವಗಳನ್ನು ನಡಗಿಸುವುದು, ಮಂದನ–ಕಾಲುಗಳು ಊನವಾಗಿದ್ದವನಂತೆ ನಡೆಯುವುದು, ಶೃಂಗಾರ–ಸುಂದರ ಸ್ತ್ರೀಯನ್ನು ನೋಡಿ ಕಾಮಪ್ರವೃತ್ತಿಯನ್ನು ತೋರಿಸುವಂತೆ ತೋರಿಸುವುದು, ಅವಿತತ್ಕರಣ–ಎಲ್ಲರಿಂದಲೂ ತ್ಯಾಜ್ಯವಾದುದನ್ನು ಮಾಡುವುದು, ಅವಿತದ್ಭಾಷಣ–ಅಸಂಬಂಧ ಮತ್ತು ಬುದ್ಧಿಗೇಡಿತನದ ಮಾತುಗಳನ್ನು ಆಡುವುದು ಎಂದು ಆರು ಪ್ರಕಾರ. ಗುಣಭೂತವೆಂದರೆ ವಿಧಿ, ಚರ್ಯಾ, ಅನುಗ್ರಾಹಕ ಅನುಸ್ನಾನಾದಿ ಭೈಕ್ಷ್ಯೋಚ್ಛಿಷ್ಟಾದಿ ನಿರ್ಮಿತ ಅಯೋಗ್ಯತಾ ಪ್ರತ್ಯಯ ನಿವೃತ್ತ್ಯರ್ಥ. ಆದುದರಿಂದ ಸೂತ್ರಕಾರನು "ಅನುಸ್ನಾನ ನಿರ್ಮಾಲ ಲಿಂಗಧಾರೀ" ಎಂದು ಹೇಳಿರುವನು.

೫. **ದುಃಖಾಂತ** : ದುಃಖಾಂತ ಅನಾತ್ಮಕ ಸಾತ್ಮಕವೆಂದು ಎರಡು ಪ್ರಕಾರ. ಅನಾತ್ಮಕವೆಂಬುದು ಎಲ್ಲ ದುಃಖಗಳನ್ನೂ ಸಂಪೂರ್ಣವಾಗಿ ಇಲ್ಲದಂತೆ ಮಾಡುವುದು. ಸಾತ್ಮಕ ದೃಕ್‌ಕ್ರಿಯಾಶಕ್ತಿ ಲಕ್ಷಣವುಳ್ಳ ಐಶ್ವರ್ಯ. ದೃಕ್‌ಶಕ್ತಿ ಒಂದೇ ಇದ್ದಾಗ್ಯೂ ವಿಷಯ ಭೇದದಿಂದ ದರ್ಶನ, ಶ್ರವಣ, ಮನನ, ವಿಜ್ಞಾನ, ಸರ್ವಜ್ಞತ್ವ ಎಂದು ಐದು ಪ್ರಕಾರವಾಗಿರುವುದು. ದರ್ಶನ–ಅತಿ ಸೂಕ್ಷ್ಮವೂ ಅಣುರೂಪವೂ ಆದ ವಸ್ತುಗಳನ್ನು ಅವು ದೂರದಲ್ಲಿದ್ದಾಗ ಅಥವಾ ಕಣ್ಮರೆಯಾದಾಗ ಕಂಡುಕೊಳ್ಳುವುದು; ಶ್ರವಣ–ಸಿದ್ಧಿಜ್ಞಾನದಿಂದ ಬಹುದೂರದಲ್ಲಿದ್ದ ಶಬ್ದಗಳನ್ನು ಕೇಳುವ ಶಕ್ತಿ ಪಡೆಯುವುದು; ಮನನ–ಎಲ್ಲ ವಿಚಾರಗಳನ್ನೂ ವಸ್ತುಗಳನ್ನೂ ಸಿದ್ಧಿಜ್ಞಾನದಿಂದ ಚಿಂತಿಸುವುದು;

---

1. ಹಸಿತ ಗೀತ ನೃತ್ಯ ಹುಡುಕ್ಕಾರ ನಮಸ್ಕಾರ ಜಪ್ಯ ಷಡಂಗೋಪಹಾರೇಣೋಪತಿಷ್ಠೇತ – ಸರ್ವದರ್ಶನ ಸಂಗ್ರಹ. ಪು. ೧೬೫.)

ವಿಜ್ಞಾನ - ಗ್ರಂಥಗಳಲ್ಲಿ ನಿರೂಪಿತವಾದ ಸರ್ವಶಾಸ್ತ್ರಗಳನ್ನು ಸಿದ್ಧಿಜ್ಞಾನದಿಂದ ಅರಿಯುವುದು: ಸರ್ವಜ್ಞತ್ವ - ಎಲ್ಲ ಶಾಸ್ತ್ರಗಳನ್ನೂ ಸಂಪೂರ್ಣವಾಗಿ ಅವುಗಳ ಭಾಗ ವಿಭಾಗಗಳಿಗನುಸರಿಸಿ ಸಿದ್ಧಿಜ್ಞಾನದಿಂದ ತಿಳಿದುಕೊಳ್ಳುವುದು. ದೃಕ್‌ಶಕ್ತಿಗೆ ಧೀಶಕ್ತಿಯೆಂದೂ ಹೇಳುವರು. ಕ್ರಿಯಾಶಕ್ತಿಯೂ ಕೂಡ ಒಂದೇ ಇದ್ದರೂ ಅದರಲ್ಲಿ ಮೂರು ಭಾಗಗಳಿವೆ. ೧. ಮನೋಜವಿತ್ವ ಅಂದರೆ ಅತಿಶಯ ಶೀಘ್ರವಾಗಿ ಕೆಲಸವನ್ನು ಮಾಡುವ ಶಕ್ತಿ. ೨. ಕಾಮರೂಪಿತ್ವ ಅಂದರೆ ಏನೂ ಶ್ರಮವಿಲ್ಲದೆ ತಕ್ಷಣದಲ್ಲಿ ನಾನಾ ಪ್ರಕಾರದ ರೂಪಗಳನ್ನೂ ಶರೀರೇಂದ್ರಿಯಗಳನ್ನೂ ಧರಿಸುವ ಶಕ್ತಿ. ೩. ವಿಕರಣ ಧರ್ಮಿತ್ವ ಅಂದರೆ ಕರಣೇಂದ್ರಿಯಗಳ ವ್ಯಾಪಾರ ನಡೆಯದೆ ಇದ್ದಾಗಲೂ ಕೂಡ ನಿರತಿಶಯ ಐಶ್ವರ್ಯವನ್ನು ಪಡೆಯುವ ಶಕ್ತಿ. ಈ ಶಕ್ತಿಗಳನ್ನು ಮನುಷ್ಯನು ಪಾಶುಪತ ಧರ್ಮದಲ್ಲಿ ಹೇಳಿದ ವ್ರತನಿಯಮಗಳನ್ನು ಬಹಳ ದಿವಸಗಳವರೆಗೆ ಪಾಲಿಸಿದ ಮೇಲೆ ಪಡೆಯುವನು.

ಶೈವ ಸಿದ್ಧಾಂತ

ಶೈವ ಸಿದ್ಧಾಂತ ಬಹು ಪರಿಶುದ್ಧವಾದುದು. ಹಿಂದೂಸ್ಥಾನದಲ್ಲಿ ಅನೇಕ ಕಡೆಗೆ ಇದು ಮಾನ್ಯವಾದ ಮತವಾಗಿತ್ತು. ತಮಿಳು ದೇಶದಲ್ಲಿ ಪುರಾತನ ಕಾಲದಿಂದಲೂ ಶೈವಮತ ಬಹುಜನರ ಮತವಾಗಿತ್ತು. ಈ ಧರ್ಮಕ್ಕೆ ಆಶ್ರಯಕೊಟ್ಟು ಇದನ್ನು ಬೆಳೆಸಿದವರು ಚೋಳರಾಜರು. ಅವರ ವಂಶದಲ್ಲಿ ಅನೇಕ ರಾಜರು ದೊಡ್ಡ ಶಿವಭಕ್ತರಾಗಿದ್ದು ಶೈವಧರ್ಮದ ಆಧಾರಸ್ತಂಭರಾಗಿದ್ದರು. ಅವರಲ್ಲಿ ಕರಿಕಾಲಚೋಳ ಎಂಬುವನು ಮೊದಲನೇಯವನೆಂಬಂತೆ ತೋರುತ್ತದೆ. ಕರಿಕಾಲಚೋಳ ಎಂಬ ಹೆಸರಿನ ಅನೇಕ ರಾಜರಿರುವರು. ಅವರಲ್ಲಿ ಈತನು ಯಾವನು ಎಂಬುದು ತಿಳಿಯದು. ತಮಿಳು ಪಂಡಿತರು ಈತನು ಮೊದಲನೆಯ ಕರಿಕಾಲಚೋಳನಿದ್ದು ವಿದ್ಯಾಪಕ್ಷಪಾತಿಯಾಗಿದ್ದು 'ಶಿಲಪ್ಪದಿಗಾರಂ' ಎಂಬ ಪ್ರಾಚೀನ ತಮಿಳು ಗ್ರಂಥದಲ್ಲಿ ಈತನ ಉಲ್ಲೇಖವಿದೆಯೆನ್ನುವರು. ಈ ಗ್ರಂಥ ಕ್ರಿ.ಶ. ೭೫೬ರಲ್ಲಿ ಹುಟ್ಟಿರಬೇಕೆಂದು ಸ್ವಾಮಿಕಣ್ಣುಪಿಳ್ಳೆಯುವರೂ, ೬ನೆಯ ಶತಮಾನದಲ್ಲಿ ಹುಟ್ಟಿರಬೇಕೆಂದು ವಿ. ವೆಂಕಯ್ಯನವರೂ, ಸುಮಾರು ಕ್ರಿ.ಶ. ೨೦೦ರಲ್ಲಿ ಹುಟ್ಟಿರಬೇಕೆಂದು ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರೂ ಹೇಳುವರು.

ವಿಶೇಷವಾಗಿ ದಕ್ಷಿಣದಲ್ಲಿ ಶೈವಧರ್ಮವನ್ನು ಹಬ್ಬಿಸಲು ಕಾರಣರಾದವರು ಅರವತ್ತುಮೂರು ಮಂದಿ ಪುರಾತನರು. ಇವರಲ್ಲಿ ಅನೇಕರ ಕಾಲವನ್ನು ನಿಶ್ಚಯವಾಗಿ ಹೇಳುವುದು ಸಾಧ್ಯವಿದೆ. ಅಪ್ಪಾರ್ ಅಥವಾ ತಿರುನಾವುಕ್ಕರಸು, ತಿರುಜ್ಞಾನ ಸಂಬಂಧಿ ಅಥವಾ ಪಿಳ್ಳೈನಾಯನಾರ್ ಮತ್ತು ಸುಂದರನಂಬಿ ಇವರು ಕ್ರಿ.ಶ. ೬೦೦ರಿಂದ ೮೦೦ರೊಳಗೆ ಇದ್ದರು. 'ತಿರುವಾಚಗಂ' ಕರ್ತೃವಾದ ಮಾಣಿಕ್ಕವಾಚಗರ್ ಕ್ರಿ.ಶ. ೮೦೦ರಿಂದ ೧೦೦೦ದ ಒಳಗೆ ಇದ್ದಿರಬೇಕು. ದ್ರಾವಿಡವೇದ ಎಂದು ಕರೆಯಲ್ಪಡುವ

'ತಿರುಮುಜೈ' ಕರ್ತೃವಾದ ನಂಬಿಯಾಂಡಾರ್ ನಂಬಿ ಸುಮಾರು ೧೧ನೆಯ ಶತಮಾನದಲ್ಲಿ ಇದ್ದಿರಬಹುದು. ಮೇಲಿನ ಎಲ್ಲ ಸತ್ಪುರುಷರೂ ಶೈವಧರ್ಮದ ಪ್ರಸಾರದಲ್ಲಿ ಬಹಳ ಆಸ್ಥೆಯನ್ನು ವಹಿಸಿ ಕೆಲಸ ಮಾಡಿದರು.

ಇವರು ಭಕ್ತಿಮಾರ್ಗವನ್ನೇ ತಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಂಡು ತೀರ ಸಾಮಾನ್ಯರಿಗೂ ಬೋಧವಾಗುವಂತೆ ಸುಲಭವಾದ ಹಾಡುಗಳನ್ನು ರಚಿಸಿ ಅವುಗಳ ಮಾರ್ಗವಾಗಿ ಜನರಲ್ಲಿ ಶಿವಜ್ಞಾನವನ್ನು ಬೀರಿದರು. ಇವರು ತಮ್ಮ ಗ್ರಂಥಗಳಲ್ಲಿ ಗೂಢವಾದ ತತ್ತ್ವಜ್ಞಾನಗಳ ವಿವರಣೆಯನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡಿಲ್ಲ. ಶಿವನ ಮಹಿಮೆ, ಶಿವಭಕ್ತಿಯಿಂದುಂಟಾಗುವ ಆತ್ಮಶುದ್ಧಿ, ಮನಶ್ಶಾಂತಿ ಮೊದಲಾದವುಗಳನ್ನು ಚಿತ್ತಾಕರ್ಷಕವಾಗುವಂತೆ ತಿಳಿಸಿರುವರು.

ಶೈವಾಚಾರ್ಯರು ಶೈವಧರ್ಮಕ್ಕೆ ಆಗಮಗಳು ಮೂಲವೆಂದು ಹೇಳುವರು. ಇವು ಇಪ್ಪತ್ತೆಂಟು ಇವೆ. ಇವಲ್ಲದೆ ಪ್ರತಿಯೊಂದು ಆಗಮಕ್ಕೆ ಅನೇಕ ಉಪಾಗಮಗಳು ಇವೆ. ಇವೆಲ್ಲವುಗಳ ಸಂಖ್ಯೆ ಬಹುದೊಡ್ಡದಾಗುವುದು. ಕಾಮಿಕಾಗಮದಲ್ಲಿ ಪ್ರತಿಯೊಂದು ಆಗಮದ ಗ್ರಂಥ ಸಂಖ್ಯೆಯನ್ನು ಹೇಳಿರುವುದು.[1] ಅವು ಬಹಳ ಮಾಡಿ ಅತಿಶಯೋಕ್ತಿಯಾಗಿರುವಂತೆ ತೋರುವುದು. ಕೆಲವು ಶಿವಾಗಮಗಳ ಭಾಗಗಳು ಮಾತ್ರ ಈಗ ದೊರೆಯುವುವು. ಶಿವಾಗಮಗಳ ವಿಷಯವನ್ನು ನಾಲ್ಕು ಪಾದಗಳನ್ನಾಗಿ ವಿಭಾಗಿಸಿರುವರು.

೧. **ಕ್ರಿಯಾಪಾದ:** ಇದರಲ್ಲಿ ಗುಡಿಗಳನ್ನು ಕಟ್ಟುವುದು, ಮೂರ್ತಿಗಳನ್ನು ನಿರ್ಮಿಸುವುದು, ಅವುಗಳ ಸ್ಥಾಪನೆ ಮೊದಲಾದ ವಿಷಯಗಳಿವೆ.

೨. **ಚರ್ಯಾಪಾದ:** ಇದರಲ್ಲಿ ಗುಡಿಗಳಲ್ಲಿ ಸ್ಥಾಪಿತವಾದ ಎಲ್ಲ ದೇವತೆಗಳ ಪೂಜೆಯನ್ನು ಮಾಡುವ ಕ್ರಮವನ್ನು ವಿಶದವಾಗಿ ಹೇಳಿದೆ.

೩. **ಯೋಗಪಾದ:** ಇದರಲ್ಲಿ ಪಾತಂಜಲಿಯೋಗದೊಳಗಿರುವ ವಿಷಯುಗಳಿರುವುವಲ್ಲದೆ ಧ್ಯಾನದಿಂದಲೂ ಶ್ರದ್ಧಾಚರಣೆಯಿಂದಲೂ ಕೂಡ ಯೌಗಿಕ ಸಿದ್ಧಿಗಳನ್ನು ಪಡೆಯುವ ವಿಧಾನಗಳನ್ನು ಹೇಳಿದೆ.

೪. **ಜ್ಞಾನಪಾದ** : ಇದರಲ್ಲಿ ಪತಿ, ಪಶು, ಪಾಶ ಪದಾರ್ಥಗಳ ಸಂಪೂರ್ಣ ವಿವರಣೆಯೂ ವಿಶ್ವದ ಉತ್ಪತ್ತಿಯೂ ಜೀವ–ಶಿವರ ಸಂಬಂಧವೂ ಜೀವಾತ್ಮನು ಮಲತ್ರಯಗಳಿಂದ ಮುಕ್ತನಾಗಿ ಶಿವಸಾರೂಪ್ಯವನ್ನು ಪಡೆಯುವ ವಿಧಾನವೂ ಹೇಳಿವೆ.

---

1. ಕಾಮಿಕಾಗಮ ೧.೧. (ತಂತ್ರಾವತಾರ ಪಟಲ). ಉಪಾಗಮಗಳು ಸಹಿತ ಕಾಮಿಕಾಗಮದ ಗ್ರಂಥಸಂಖ್ಯೆ ಪರಾರ್ಧ; ಕಾರಣಾಗಮದ ಸಂಖ್ಯೆ ಕೋಟಿ; ಸೂಕ್ಷ್ಮಾಗಮದ ಸಂಖ್ಯೆ ಪದ್ಮ; ಸಹಸ್ರಾಗಮದ ಸಂಖ್ಯೆ ಶಂಖ; ಅಜಿತಾಗಮದ ಸಂಖ್ಯೆ ನಿಯುತ – ಇತ್ಯಾದಿ.

ಸುಮಾರು ೯ರಿಂದ ೧೨ನೆಯ ಶತಮಾನಗಳಲ್ಲಿ ಶೈವಸಿದ್ಧಾಂತವು ಕಾಶ್ಮೀರ, ಉತ್ತರ ಹಿಂದೂಸ್ಥಾನ, ಬಂಗಾಲ, ಬಿಹಾರ, ಮಧ್ಯಪ್ರಾಂತ, ಕರ್ನಾಟಕ, ಆಂಧ್ರ ಮತ್ತು ದ್ರಾವಿಡ ದೇಶಗಳಲ್ಲಿ ಒಳ್ಳೆಯ ಅಭ್ಯುದಯದ ಸ್ಥಿತಿಯಲ್ಲಿತ್ತು. ಈ ಮತವನ್ನು ಬೋಧಿಸಿದ ಆಚಾರ್ಯರು ಬಹಳ ಪ್ರತಿಭಾಶಾಲಿಗಳಾಗಿದ್ದು ರಾಜಪೂಜಿತರೂ ಲೋಕಪೂಜಿತರೂ ಆಗಿದ್ದರು. ಇವರಲ್ಲಿ ಸದ್ಯೋಜ್ಯೋತಿ, ಭೋಜರಾಜರು ಬಹಳ ಹಳಬರು. ಅನೇಕ ಶೈವಾಚಾರ್ಯರು ಇವರನ್ನು ಸ್ತುತಿಸಿರುವರು. ಇವರು ವಾಸಿಸಿದ ದೇಶವಾಗಲಿ, ಇದ್ದ ಕಾಲವಾಗಲಿ, ನಿಶ್ಚಯವಾಗಿ ಗೊತ್ತಾಗಿಲ್ಲ. ಸದ್ಯೋಜ್ಯೋತಿ 'ಮೋಕ್ಷಕಾರಿಕಾ,' 'ಪರಮೋಕ್ಷನಿರಾಸಕಾರಿಕಾ,' 'ತತ್ತ್ವತ್ರಯ ನಿರ್ಣಯ,' 'ತತ್ತ್ವಸಂಗ್ರಹ,' 'ನರೇಶ್ವರ ಪರೀಕ್ಷಾಕಾರಿಕಾ,' 'ರೌರವಾಗಮದ ವೃತ್ತಿ' ಇವುಗಳನ್ನು ಬರೆದಿದ್ದಾನೆ. ತತ್ತ್ವತ್ರಯ ನಿರ್ಣಯದಲ್ಲಿ ಪತಿ ಪಶು ಪಾಶಗಳ ವಿವರಣೆಯಿದೆ. ತತ್ತ್ವಸಂಗ್ರಹದಲ್ಲಿ ಮೂವತ್ತಾರು ಶೈವ ತತ್ತ್ವಗಳ ವರ್ಣನೆಯಿದೆ. ಇವೆರಡನ್ನೂ 'ಸ್ವಾಯಂಭುವಾಗಮ'ವನ್ನು ಅನುಸರಿಸಿ ಬರೆದಿರುವನೆಂದು ಈತನ ಗ್ರಂಥಗಳಿಗೆ ವ್ಯಾಖ್ಯೆಯನ್ನು ಬರೆದ ಅಘೋರಶಿವನು ಹೇಳುವನು. ಸುಮಾರು ಕ್ರಿ.ಶ. ೯೦೦ರಿಂದ ೯೨೫ರ ನಡುವೆ ಇದ್ದ ರಾಜಾನಕ ರಾಮಕಂಠನು ಈತನ ಮೋಕ್ಷಕಾರಿಕೆಗೆ ವೃತ್ತಿಯನ್ನು ಬರೆದಿರುವುದರಿಂದ ಈತನು ಕ್ರಿ.ಶ. ೯೦೦ಕ್ಕೂ ಹಿಂದಿನವನಿರಬೇಕು.

ಭೋಜರಾಜ ಅಥವಾ ಆಚಾರ್ಯಭೋಜನು 'ತತ್ತ್ವಪ್ರಕಾಶ'ವನ್ನು ಬರೆದಿರುವನು. ಸಾಂಖ್ಯದರ್ಶನಕ್ಕೆ ಸಾಂಖ್ಯಕಾರಿಕೆ ಎಷ್ಟು ಮಹತ್ತ್ವದ ಗ್ರಂಥವಾಗಿರುವುದೋ ಶೈವಧರ್ಮಕ್ಕೆ ಅಷ್ಟೇ ಮಹತ್ತ್ವದ ಗ್ರಂಥ ಇದಾಗಿದೆ. 'ಸರಸ್ವತೀ ಕಂಠಾಭರಣ'ದ ಕರ್ತೃವೂ ಮಾಳವದೇಶದ ದೊರೆಯೂ ಆದ ಭೋಜರಾಜನು ಬೇರೆ, ಈ ಭೋಜರಾಜನು ಬೇರೆ; ಈತನ ಗುರು ಉತ್ತುಂಗ ಶಿವನೆಂದೂ ಆತನು ವಿಂಧ್ಯ ಪರ್ವತದಲ್ಲಿ ವಾಸಿಸುತ್ತಿದ್ದನೆಂದೂ ಅಘೋರಶಿವನು ಹೇಳುವನು. ಈತನ ತತ್ತ್ವಪ್ರಕಾಶಕ್ಕೆ ಅಘೋರಶಿವನು ವ್ಯಾಖ್ಯೆಯನ್ನು ಬರೆದಿರುವನು. ಮಾಧವಾಚಾರ್ಯರು ಅಘೋರಶಿವ ವ್ಯಾಖ್ಯೆಯನ್ನೂ ಮೂಲವನ್ನೂ ಸರ್ವದರ್ಶನ ಸಂಗ್ರಹದಲ್ಲಿ ಎತ್ತಿಕೊಂಡಿರುವರು. ವೀರಶೈವ ಕವಿಗಳು ಸ್ತುತಿಸುವ ಶಿವಭಕ್ತನಾದ ಭೋಜರಾಜನು ಈತನೇ ಇರಬಹುದು.

ರಾಜಾನಕ ರಾಮಕಂಠನು 'ನಾದಕಾರಿಕಾ,' 'ನರೇಶ್ವರ ಪರೀಕ್ಷಾ ಪ್ರಕಾಶ,' 'ಭಗವದ್ಗೀತಾ ಭಾಷ್ಯ,' 'ಮತಂಗ ವೃತ್ತಿ,' 'ಸ್ಪಂದವಿವೃತ್ತಿ,' 'ಸ್ಪಂದಕಾರಿಕಾ,' ಸ್ಪಂದ ಸರ್ವಸ್ವ ವಿವರಣ,' 'ಪರಮೋಕ್ಷ ನಿರಾಸಕಾರಿಕಾ ವೃತ್ತಿ,' 'ಭೋಗಕಾರಿಕಾ ವೃತ್ತಿ,' 'ಮೋಕ್ಷಕಾರಿಕಾ ವೃತ್ತಿ' ಮೊದಲಾದವುಗಳನ್ನು ಬರೆದಿರುವನು. ಈತನು ಪ್ರಸಿದ್ಧ ಗ್ರಂಥಕಾರನು. ಈತನ ಗ್ರಂಥಗಳ ಕೈಬರಹದ ಪ್ರತಿಗಳು ಕಾಶ್ಮೀರ, ನೇಪಾಳ, ಕಲ್ಕತ್ತೆ, ತಂಜಾವೂರು, ಮದ್ರಾಸು ಮೊದಲಾದ ಪುಸ್ತಕಾಲಯಗಳಲ್ಲಿ ದೊರೆಯುವುವು. ಈತನು

ಉತ್ಪಲಾಚಾರ್ಯನ ಶಿಷ್ಯನಾದುದರಿಂದ ಕ್ರಿ.ಶ. ೯೦೦ರಿಂದ ೯೨೫ರ ಮಧ್ಯದಲ್ಲಿ ಇದ್ದಿರಬಹುದು.

ಶ್ರೀಕಂಠಸೂರಿ 'ರತ್ನತ್ರಯ'ವನ್ನು ಬರೆದಿರುವನು. ಇದರಲ್ಲಿ ರತ್ನತ್ರಯಗಳಾದ ಶಿವ-ಶಕ್ತಿ-ಬಿಂದುಗಳ ವಿವರಣೆಯಿದೆ. ಇದು ಮಹತ್ತ್ವದ ಪುಸ್ತಕ.

ಸೋಮಶಂಭು ಕರ್ಮಕ್ರಿಯಾಕಾಂಡವನ್ನು ಬರೆದಿದ್ದಾನೆ. ಇದರ ಹಸ್ತಪ್ರತಿಗಳು ನೇಪಾಳ, ಕಾಶ್ಮೀರ, ಕಲ್ಕತ್ತೆ, ತಂಜಾವೂರು, ಮದ್ರಾಸು ಪುಸ್ತಕಾಲಯಗಳಲ್ಲಿ ಇವೆ. ಅಘೋರಶಿವನೂ ಈಶಾನಶಿವನೂ ಸರ್ವದರ್ಶನ ಸಂಗ್ರಹಕಾರನೂ ಈ ಗ್ರಂಥವನ್ನು ಉಲ್ಲೇಖಿಸಿದ್ದಾರೆ. ಸೋಮಶಂಭು ಈ ಗ್ರಂಥವನ್ನು ವಿಕ್ರಮ ಸಂವತ್ ೧೧೩೦ ಅಂದರೆ ಕ್ರಿ.ಶ. ೧೦೭೩ರಲ್ಲಿ ಬರೆದನು. ಈತನ ಗುರು ಸಶಿವನು. ಪರಮಗುರು ಈಶಾನಶಿವನು.ಮಲಿಕಾಪುರದ ಶಿಲಾಶಾಸನದಿಂದ ಸೋಮಶಂಭು ಗೋಳಕೀಮಠವನ್ನು ಸ್ಥಾಪಿಸಿದ ಭಾವಶಂಭು ಅಥವಾ ಸದ್ಭಾವ ಶಂಭುವಿನ ವಂಶದವನೆಂದು ತಿಳಿಯುವುದು. ಈತನ ಗುರುವಿನ ಗುರುವಾದ ಈಶಾನಶಿವನು ಮೊದಲನೆಯ ರಾಜೇಂದ್ರಚೋಳನ ಗುರುವೂ. ತಂಜಾವರದ ಬೃಹದೀಶ್ವರ ದೇವಾಲಯಕ್ಕೆ ಸಂಬಂಧಿಸಿದ ಮಠದ ಅಧಿಪತಿಯೂ. 'ಈಶಾನ ಶಿವಗುರುದೇವ ಪದ್ಧತಿ'ಯ ಕರ್ತೃವೂ ಆಗಿರಬೇಕು.

ಅಘೋರಶಿವನು 'ಅಘೋರಶಿವ ಪದ್ಧತಿ' ಅಥವಾ 'ಕ್ರಿಯಾಕ್ರಮ ದ್ಯೋತಿಕಾ,' 'ತತ್ತ್ವತ್ರಯ ನಿರ್ಣಯ ವ್ಯಾಖ್ಯಾ,' 'ತತ್ತ್ವಪ್ರಕಾಶವೃತ್ತಿ,' 'ತತ್ತ್ವಸಂಗ್ರಹ ಲಘುಟೀಕಾ,' 'ನಾದಕಾರಿಕಾ ವೃತ್ತಿ,' 'ಸರ್ವಜ್ಞಾನೋತ್ತರ ವೃತ್ತಿ,' 'ದೀಕ್ಷಾವಿಧಿ ಮೃಗೇಂದ್ರವೃತ್ತಿದೀಪಿಕಾ,' 'ಮಹೋತ್ಸವ ವಿಧಿ,' 'ರತ್ನತ್ರಯ ವೃತ್ತಿ,' 'ಭೋಗಕಾರಿಕಾ ವೃತ್ತಿ' ಮೊದಲಾದವುಗಳನ್ನು ಬರೆದಿದ್ದಾನೆ. ಈತನು ಚಿದಂಬರದಲ್ಲಿಯ ಮಠಕ್ಕೆ ಅಧಿಪತಿಯೂ ಆಮರ್ದಕ ಮಠದ ಆಚಾರ್ಯ ವಂಶದವನೂ ಆಗಿರುವನು. ಈತನು ಬಹುದೊಡ್ಡ ಶೈವಾಚಾರ್ಯನೂ ಗ್ರಂಥಕರ್ತೃವೂ ಆಗಿದ್ದನು. ತನ್ನ ಮಠದ ಪೂರ್ವಾಚಾರ್ಯರಾದ ಶ್ರೀಕಂಠ, ಧ್ಯಾನಶಿವ, ಹೃದಯಶಂಕರ, ಪರಮಶಿವ ಅಥವಾ ಸರ್ವಾತ್ಮಶಿವ ಇವರ ಹೆಸರನ್ನು ತನ್ನ 'ಮಹೋತ್ಸವ ವಿಧಿ'ಯಲ್ಲಿ ಹೇಳಿರುವನು. ಈತನನ್ನು ಘೋರಶಿವಾಚಾರ್ಯ, ಅಘೋರಶಂಭು ಎಂಬುದಾಗಿ ಕರೆಯುತ್ತಿದ್ದರು. ಈತನು ಕವಿಯೂ ವಾಗ್ಮಿಯೂ ನಾಟ್ಯಕಾರನೂ ತತ್ತ್ವಜ್ಞಾನಿಯೂ ಆಗಿದ್ದು ಎರಡುಲಕ್ಷ ಶಿಷ್ಯರಿಗೆ ಗುರುವಾಗಿದ್ದನು. ಅಘೋರಶಿವನು ತನ್ನ 'ಪದ್ಧತಿ'ಯನ್ನು ಶಕ ೧೦೮೦ರಲ್ಲಿ ಅಂದರೆ ಕ್ರಿ.ಶ. ೧೧೫೮ರಲ್ಲಿ ಮುಗಿಸಿರುವನೆಂದು ಹೇಳಿಕೊಂಡಿದ್ದಾನೆ.

ತ್ರಿಲೋಚನಶಿವನು 'ರತ್ನತ್ರಯೋದ್ಯೋತ,' 'ಸಿದ್ಧಾಂತ ಸಾರಾವಳಿ' ಮತ್ತು 'ಪ್ರಾಯಶ್ಚಿತ್ತ ಸಮುಚ್ಚಯ'ಗಳನ್ನು ಬರೆದಿದ್ದಾನೆ. ಈತನು ಅಘೋರಶಿವನ ಸಂತತಿಯವನು. ಹದಿನಾಲ್ಕನೆಯ ಶತಮಾನದ ಪ್ರಾರಂಭದಲ್ಲಿ ಆಮರ್ದಕಮಠದ

ಶಾಖಾಮಠಾಧಿಪತಿಯಾಗಿದ್ದನು. ಈತನು ತನ್ನ ಗುರುಗಳಲ್ಲಿ ದೂರ್ವಾಸ, ವ್ಯಾಪಕೇಶಾನ, ಸರ್ವೇಶ ಪಂಡಿತ, ಉತ್ತುಂಗಶಂಕರ, ಸೋಮೇಶಾನ, ಸರ್ವಾತ್ಮಶಿವ, ಅಘೋರಶಿವ ಮೊದಲಾದವರ ಹೆಸರುಗಳನ್ನು ಹೇಳಿರುವನು.

ಈ ಎಲ್ಲ ಶೈವಾಚಾರ್ಯರು ಸಂಸ್ಕೃತದಲ್ಲಿ ಬರೆದ ಶೈವಸಿದ್ಧಾಂತದ ತತ್ತ್ವಗಳನ್ನು ಜನರಾಡುವ ಭಾಷೆಗೆ ಪರಿವರ್ತಿಸಿ ಸರ್ವರಿಗೂ ತಿಳಿಯುವಂತೆ ಮಾಡಿದ ಶ್ರೇಯಸ್ಸು ಏಳು ಜನ ಆಚಾರ್ಯರಿಗೆ ಸಲ್ಲುವುದು. ಇವರು ೧೪ ಗ್ರಂಥಗಳನ್ನು ಬರೆದಿರುವರು- ೧. ಸುಮಾರು ೧೧೪೮ರಲ್ಲಿದ್ದ ತಿರುವಿಯ್ಯಲೂರ ಉಯ್ಯವಂದ ದೇವರ್ 'ತಿರುವುಂದಿಯಾರ್' ಎಂಬ ಗ್ರಂಥವನ್ನು ಬರೆದಿರುವರು. ೨. ಕ್ರಿ.ಶ. ೧೧೭೮ರಲ್ಲಿದ್ದ ತಿರುಕ್ಕಡವೂರ ಉಯ್ಯವಂದದೇವರ್ 'ತಿರುಕಳಿಜ್ಜುಪ್ಪಡಿಯಾರ್' ಎಂಬ ಗ್ರಂಥವನ್ನು ಬರೆದಿರುವರು. ೩. ಶೈವಸಿದ್ಧಾಂತದ ಪಿತರೆಂದು ಪ್ರಸಿದ್ಧರಾದ ಮೆಯ್‌ಕಂಡದೇವರ್ 'ರೌರವಾಗಮ'ಕ್ಕೆ 'ಶಿವಜ್ಞಾನಬೋಧ' ಎಂಬ ತಮಿಳು ವ್ಯಾಖ್ಯೆಯನ್ನು ಬರೆದರು. ಇದು ಈಗ ತಮಿಳು ಶೈವಧರ್ಮದ ಪ್ರಧಾನ ಗ್ರಂಥವಾಗಿದೆ. ಮೆಯ್‌ಕಂಡದೇವರ್ ಪೆನ್ನಾರ್ ನದಿಯ ದಂಡೆಯ ಮೇಲಿನ ತಿರುವಣ್ಣೈ ನಲ್ಲೂರಿನಲ್ಲಿ ವಾಸಿಸುತ್ತಿದ್ದರು. ಇವರು ಜಾತಿಯಿಂದ ಬ್ರಾಹ್ಮಣರಲ್ಲ, ವೆಳ್ಳಾಳರು. ಇವರಿಗೆ ಅನೇಕ ಶಿಷ್ಯರಿದ್ದರು. ೪-೫. ಅವರಲ್ಲಿ ಅರುಳ್‌ನಂದಿ ಶಿವಾಚಾರ್ಯ, ಮನವಾಸಗಂ ಕಡಂದಾರ್ ಎಂಬುವರು ಪ್ರಸಿದ್ಧರು. ಅರುಳ್‌ನಂದಿ ಬ್ರಾಹ್ಮಣನಿರಬೇಕು. ಈತನಿಗೆ ಸಕಲಾಗಮಪಂಡಿತನೆಂದೂ ಬೇರೊಂದು ಹೆಸರಿತ್ತು. ಈತನು 'ಶಿವಜ್ಞಾನಸಿದ್ಧಿ' ಎಂಬ ಪುಸ್ತಕವನ್ನು ಬರೆದಿರುವನು. ಇದು ಮೆಯ್‌ಕಂಡದೇವರ 'ಶಿವಜ್ಞಾನಬೋಧ'ದ ವಿಸ್ತೃತವಾದ ವ್ಯಾಖ್ಯೆ ಎಂದು ಹೇಳಿಕೊಂಡಾಗ್ಗೂ ಇದೊಂದು ಸ್ವತಂತ್ರ ಗ್ರಂಥವಾಗಿದೆ. ಈತನು 'ಇರುಬಾ ಇರುಬ ..ದು' ಎಂಬ ಮತ್ತೊಂದು ಗ್ರಂಥವನ್ನು ಬರೆದಿದ್ದಾನೆ. ಮನವಾಸಗಂ ಕಡಂದದೇವರ್ 'ಉಣ್ಮೈವಿಳಕ್ಕಂ' ಎಂಬ ಗ್ರಂಥವನ್ನು ಬರೆದಿದ್ದಾರೆ. ಇವರು ಕ್ರಿ.ಶ. ೧೨೫೦ರಲ್ಲಿ ಇದ್ದರು. ೬. 'ಶೈವಸಮಯನೆಜಿ' ಎಂಬ ಗ್ರಂಥದ ಕರ್ತೃವಾದ ಮಜ್ಜೈಜ್ಞಾನ ಸಂಬಂಧರ್ ಅರುಳ್‌ನಂದಿಯ ಶಿಷ್ಯರು. ಇವರು ಜಾತಿಯಿಂದ ಬ್ರಾಹ್ಮಣರಲ್ಲ. ಬಹಳ ಯೋಗ್ಯತೆಯುವರಿದ್ದಂತೆ ತೋರುವುದು. ಚಿದಂಬರದ ಮೂರುಸಾವಿರ ಬ್ರಾಹ್ಮಣರಲ್ಲಿ ವಿದ್ವಾಂಸರೂ ಪ್ರತಿಭಾಶಾಲಿಗಳೂ ಆದ ಉಮಾಪತಿ ಶಿವಾಚಾರ್ಯರು ಇವರ ಶಿಷ್ಯರಾದರು. ೭. ಉಮಾಪತಿ ಶಿವಾಚಾರ್ಯರು 'ಶಿವ ಪ್ರಕಾಶಂ,' 'ತಿರುವರುಟ್ಪಯನ್,' 'ವಿನಾವೆಣ್ಬಾ,' 'ಪೋಜೆಪ್ಪ ..ಜಹೊಡ್ಡೈ,' 'ಕೊಡಿಕ್ಕವಿ,' 'ನೆಂಜುವಿಡು ತೂದು,' 'ಉಣ್ಮೈನೆಜೆವಿಳಕ್ಕಂ' ಮತ್ತು 'ಸಂಕಲ್ಪನಿರಾಕರಣಂ' ಎಂಬ ಎಂಟು ಗ್ರಂಥಗಳನ್ನು ಬರೆದು ಶೈವಸಿದ್ಧಾಂತದ ಶಾಸ್ತ್ರವನ್ನು ಬೆಳಸಿದರು. ಈ ಆಚಾರ್ಯರಲ್ಲಿ ಮೆಯ್‌ಕಂಡದೇವರ್, ಅರುಳ್‌ನಂದಿ, ಮಜ್ಜೈಜ್ಞಾನ ಸಂಬಂಧರ್, ಉಮಾಪತಿ ಇವರು **ಸಂತಾನಾಚಾರ್ಯರು** ಎಂದು ಪ್ರಸಿದ್ಧರಾಗಿದ್ದಾರೆ.

ತತ್ತ್ವಜ್ಞಾನ

ಶೈವಸಿದ್ಧಾಂತದ ತತ್ತ್ವಜ್ಞಾನ ಸಾಮಾನ್ಯವಾಗಿ ವ್ಯವಹಾರದಲ್ಲಿ ದೃಷ್ಟಿಗೆ ಬೀಳುವ ಸಂಗತಿಯು ಮೇಲಿಂದ ಹೆಚ್ಚು ಸ್ಪಷ್ಟವಾಗುವುದು. ಕುಂಬಾರನಿಗೆ ಗಡಿಗೆಯನ್ನು ಮಾಡಲು ಮೊದಲು ಮಣ್ಣು ಬೇಕು. ಅದನ್ನು ಹದಮಾಡಿದ ಮೇಲೆ ಅತನಿಗೆ ಚಕ್ರ, ಬಡಿಗೆ, ದಾರ ಮೊದಲಾದವು ಬೇಕು. ಗಡಿಗೆ ಸಿದ್ಧವಾದ ನಂತರ ಅದರ ಉಪಯೋಗವನ್ನು ಮಾಡಿಕೊಳ್ಳುವವನು ಬೇರೆ ಮನುಷ್ಯನು. ಕುಂಬಾರನು ಇಷ್ಟು ಕಷ್ಟಪಟ್ಟು ಗಡಿಗೆಯನ್ನು ಮಾಡಿದುದು ಎರಡನೆಯವರ ಉಪಯೋಗಕ್ಕಾಗಿ. ಇದೇ ಕುಂಬಾರನ ಉಪಮೆಯನ್ನು ವಿಶ್ವವನ್ನು ಮಾಡಿದ ಪರಮಾತ್ಮನಿಗೆ ಹಚ್ಚಿದರೆ, ಶೈವಧರ್ಮದ ಮುಖ್ಯತತ್ತ್ವ ತಿಳಿದಂತಾಗುವುದು. ಪರಮಾತ್ಮನು ವಿಶ್ವವನ್ನು ಬೇರೆಯವರ ಸಲುವಾಗಿ ಕುಂಬಾರನು ಗಡಿಗೆಯನ್ನು ಮಾಡಿದಂತೆ ನಿರ್ಮಿಸಿದನು. ಗಡಿಗೆಯನ್ನು ಮಾಡಲು ಮಣ್ಣು ಬೇಕಾದಂತೆ ವಿಶ್ವವನ್ನು ನಿರ್ಮಿಸಲು ವಸ್ತು ಬೇಕು. ಶೈವಸಿದ್ಧಾಂತಿಗಳು ಈ ವಸ್ತುವಿಗೆ ಮಾಯೆಯೆಂದು ಕರೆಯುವರು. ಇದು ಅದ್ವೈತಿಗಳ ಮಾಯೆ (Illusion) ಅಲ್ಲ; ಯಾವ ವಸ್ತುವಿನಿಂದ ಜಗತ್ತು ಮಾಡಲ್ಪಟ್ಟಿದೆಯೋ ಅದು (Cosmic Matter). ಮಾಯೆ ಉಪಾದಾನ ಕಾರಣ. ಮಾಯೆಯಿಂದುಂಟಾದ ಜಗತ್ತಿಗೆ ಪಾಶವೆಂದು ಹೆಸರು. ಗಡಿಗೆಯನ್ನು ಉಪಯೋಗ ಮಾಡಿಕೊಳ್ಳುವವರು ಹೇಗೆ ಅನ್ಯರೋ ಹಾಗೆ ಈ ವಿಶ್ವವನ್ನು ಉಪಯೋಗ ಮಾಡಿಕೊಳ್ಳುವವರು ಶಿವನಿಂದ ಭಿನ್ನರು. ಇವರು ಜೀವಿಗಳು. ಇವರಿಗೆ ಪಶುಗಳೆಂದು ಹೆಸರು. ಪಶುಗಳು ತಮ್ಮ ಮಲವನ್ನು ತೊಳೆದುಕೊಳ್ಳಲು ಜಗತ್ತನ್ನು ಉಪಯೋಗಮಾಡಿಕೊಳ್ಳುವವು. ಈ ಪಶುಗಳನ್ನು ಕರುಣಿಸಿ ಮುಕ್ತಿಯನ್ನು ಕೊಡುವ ಶಿವನು ಪತಿ. ಕುಂಬಾರನಿಗೆ ಚಕ್ರ, ದಂಡ ಮೊದಲಾದವುಗಳ ಸಹಾಯವಿದ್ದಂತೆ ಕಾಲ ನಿಯತಿಗಳ ಸಹಾಯ ಶಿವನಿಗೆ ಇದೆ. ಇವು ಸಹಕಾರಿ ಕಾರಣಗಳು. ಶಿವನು ನಿಮಿತ್ತ ಕಾರಣನು. ಇದರಿಂದ ಶೈವಸಿದ್ಧಾಂತಿಗಳು ಪತಿ, ಪಶು, ಪಾಶಗಳೆಂಬ ಮೂರು ಪದಾರ್ಥಗಳನ್ನು ಒಪ್ಪುವರು. ಇವು ಮೂರೂ ನಿತ್ಯವಾದುವು. ಆದುದರಿಂದ ಇದು ಅದ್ವೈತ ಧರ್ಮವಲ್ಲ.

ಶಿವನು ಈ ಜಗತ್ತನ್ನು ತನ್ನ ಲೀಲೆಗೋಸುಗ ಮಾಡಿಲ್ಲ. ಇದನ್ನು ನಿರ್ಮಿಸುವುದರಲ್ಲಿ ಒಂದು ಮಹತ್ವದ ಉದ್ದೇಶವಿದೆ. ಅದೇನೆಂದರೆ ಜೀವಾತ್ಮರು ತಮ್ಮ ಮಲಗಳನ್ನು ತೊಳೆದುಕೊಂಡು ಶುದ್ಧರಾಗಬೇಕೆಂಬುದು. ಪ್ರಪಂಚ ಮಲಿನತೆಯುಳ್ಳದ್ದು. ಮಲದಿಂದ ಮಲವನ್ನು ತೊಳೆಯುವುದು ಹೇಗೆ? ಅಗಸನು ಬಟ್ಟೆಯ ಹೊಲಸನ್ನು ತೆಗೆಯಲು ಕತ್ತೆಯ ಲದ್ದಿಯನ್ನು ಕೂಡಿಸಿ ಭಟ್ಟಿಗೆ ಹಾಕುವನು. ಕತ್ತೆಯ ಲದ್ದಿ ಮಲ. ಅದು ಹೇಗೆ ವಸ್ತ್ರದ ಮಲವನ್ನು ಕಳೆಯುವುದೋ ಹಾಗೆ ಜೀವಾತ್ಮರ ಮಲವನ್ನು ಪ್ರಪಂಚ

ತೊಳೆಯುವುದು. ಜೀವಾತ್ಮನಿಗೆ ಆಣವ, ಮಾಯಾ, ಕಾರ್ಮಿಕಗಳೆಂದು ಮೂರು ಮಲಗಳು ಅಂಟಿಕೊಂಡಿರುವುವು. ಪ್ರಪಂಚದಲ್ಲಿ ಉತ್ತಮ ಮತ್ತು ಲೋಕೋಪಯುಕ್ತ ಕರ್ಮಗಳನ್ನೂ, ಜಪತಪ ಪೂಜಾದಿಗಳನ್ನೂ ಮಾಡುವದರಿಂದ ಕಾರ್ಮಿಕಮಲ ಹೋಗುವುದು. ಮಾಯಾತತ್ತ್ವವನ್ನು ದಾಟುವುದರಿಂದ ಮಾಯಾಮಲ ಹೋಗುವುದು. ಪರಮಾತ್ಮನ ಅನುಗ್ರಹದಿಂದ ಆಣವಮಲ ಹೋಗುವುದು.

ಪತಿ ಪದಾರ್ಥ

ಶಿವನೇ ಪತಿ. ಜೀವಗಳಿಗೆ ಅವುಗಳ ಪೂರ್ವಕರ್ಮದಂತೆ ಸುಖ ದುಃಖಗಳನ್ನು ಭೋಗಿಸಲು ಹಚ್ಚುವನಾದುದರಿಂದ ಈತನ ಕ್ರಿಯಾಶಕ್ತಿ ಜೀವಿಗಳ ಕರ್ಮವನ್ನವಲಂಬಿಸಿದೆ. ಈತನು ಸರ್ವಶಕ್ತ, ಸರ್ವಕರ್ತ, ಸರ್ವದ್ರಷ್ಟಾರ. ಕರ್ಮ ಬದ್ಧರಾದ ಜೀವಾತ್ಮರಂತೆ ಪರಮಾತ್ಮನಾದ ಶಿವನಿಗೆ ಭೌತಿಕ ಶರೀರವಿಲ್ಲ. ಆದರೆ ಅದು ಶಕ್ತಿಮಯ ಅಥವಾ ಮಂತ್ರಮಯವಾದುದು. ಮಂತ್ರಗಳು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಮತ್ತು ಈಶಾನ ಎಂಬುವು. ಇವು ಈತನ ಶಕ್ತಿಗಳು ಅಥವಾ ರೂಪಗಳು. ಇವುಗಳಿಂದ ಸೃಷ್ಟಿ, ಸ್ಥಿತಿ, ಲಯ ತಿರೋಧಾನ ಮತ್ತು ಅನುಗ್ರಹಗಳನ್ನು ಮಾಡುವನು. ಮಂತ್ರ, ಮಂತ್ರೇಶ್ವರ, ಮಹೇಶ್ವರ, ಮತ್ತು ಮುಕ್ತರು ಶಿವನ ಸ್ವರೂಪಧಾರಿಗಳು.

ಪಶು

ಜೀವಾತ್ಮನು ಪಶು. ಅಣುಸ್ವರೂಪನಾಗಿದ್ದು ಕ್ಷೇತ್ರಜ್ಞನೆಂದು ಹೆಸರು ಹೊಂದಿ ಶಾಶ್ವತನೂ ಸರ್ವವ್ಯಾಪಿಯೂ ಆಗಿರುವನು. ಜೀವಾತ್ಮರು ಅನೇಕರಿರುವರು. ಪಾಶ ಹರಿದ ನಂತರ ಜೀವನು ಶಿವಸ್ವರೂಪವನ್ನು ಹೊಂದುವನು. ಪಶುಗಳು ಮೂರು ಪ್ರಕಾರವಾಗಿರುವುವು.

೧. **ವಿಜ್ಞಾನಕಲರು** : ವಿಜ್ಞಾನ, ಯೋಗ, ಸಂನ್ಯಾಸ ಅಥವಾ ಭೋಗದಿಂದ ಮಾಯಾ ಮತ್ತು ಕಾರ್ಮಿಕ ಮಲಗಳನ್ನು ತೊಳೆದುಕೊಂಡು ಕಲೆಯ ಸಂಬಂಧವನ್ನು ಕಡಿದೊಗೆದ ಜೀವಾತ್ಮರು ವಿಜ್ಞಾನಕಲರು. ಇವರಲ್ಲಿ ಸಮಾಪ್ತ ಕಲುಷರೆಂದೂ ಅಸಮಾಪ್ತಕಲುಷರೆಂದೂ ಎರಡು ಪ್ರಕಾರ. ಸಮಾಪ್ತಕಲುಷರು ವಿದ್ಯೇಶ್ವರರು. ಇವರು ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂಠ ಮತ್ತು ಶಿಖಂಡಿಯೆಂದು ಎಂಟು ಪ್ರಕಾರ. ಇವರು ಪುರುಷರಿಗೆ ಯೋಗ್ಯವಾದ ದೊಡ್ಡ ಅಧಿಕಾರಿಗಳಲ್ಲಿರುವರು. ಅಸಮಾಪ್ತ ಕಲುಷರು ಮಂತ್ರೇಶ್ವರರು. ಇವರ ಸಂಖ್ಯೆ ಏಳು ಕೋಟಿ.

೨. **ಪ್ರಲಯಕಲರು** : ಜಗತ್ತಿನ ಪ್ರಲಯದಿಂದ ಕಲೆಗಳನ್ನು ಕಳೆದುಕೊಂಡು ಕಾರ್ಮಿಕ ಮಲವನ್ನು ಗೆದ್ದ ಜೀವಾತ್ಮರು ಪ್ರಲಯಕಲರು. ಇವರಲ್ಲಿ ಆಣವ ಮತ್ತು

ಮಾಯಾಮಲಗಳು ಇರುವುವು. ಇವರಲ್ಲಿ ಪಕ್ವಪಾಶದ್ವಯರು ಮತ್ತು ಅಪಕ್ವಪಾಶದ್ವಯರು ಎಂದು ಎರಡು ವಿಧ. ಇವರಲ್ಲಿ ಮೊದಲನೆಯವರು ಶಿವನ ಅನುಗ್ರಹದಿಂದ ಮುಕ್ತಿಯನ್ನು ಹೊಂದುವರು. ಅಪಕ್ವಪಾಶದ್ವಯರು ಪುರ್ಯಷ್ಟಕಬದ್ಧರಾಗಿ ಕರ್ಮಫಲವನ್ನು ಅನುಭವಿಸುತ್ತ ಸಂಸಾರ ಚಕ್ರದಲ್ಲಿ ಸಿಕ್ಕಿ ಜನ್ಮಾಂತರಗಳನ್ನು ಹೊಂದುವರು. ಪುರ್ಯಷ್ಟಕ ಎಂದರೆ ಪೃಥ್ವಿಯಿಂದ ಕಲಾತತ್ತ್ವದವರೆಗಿರುವ ಮೂವತ್ತು ತತ್ತ್ವಾತ್ಮಕವಾದ ಸೂಕ್ಷ್ಮದೇಹ. ಪುರ್ಯಷ್ಟಕಬದ್ಧರಲ್ಲಿ ಶುದ್ಧರಾದವರನ್ನು ಮಹೇಶ್ವರ ಅನಂತನು ಭುವನಪತಿಗಳನ್ನಾಗಿ ಮಾಡುವನು.

೩. **ಸಕಲರು** : ಮೂರು ಮಲಗಳಿಂದ ಬದ್ಧರಾದ ಜೀವಿಗಳು ಸಕಲರು. ಇವರಲ್ಲಿ ಪಕ್ವಕಲುಷ ಮತ್ತು ಅಪಕ್ವಕಲುಷ ಎಂದು ಎರಡು ವಿಧ. ಪರಮೇಶ್ವರನು ಪಕ್ವಕಲುಷರಿಗೆ ಗುರುವಾಗಿ ಮಲವನ್ನು ತೊಳೆದು ಮಹೇಶ್ವರ ಪದವಿಯನ್ನು ಕೊಡುವನು. ಅಪಕ್ವಕಲುಷರು ಕರ್ಮಗಳ ಫಲಗಳನ್ನು ಭೋಗಿಸುತ್ತ ಜನ್ಮಾಂತರ ಚಕ್ರದಲ್ಲಿ ಸಿಕ್ಕಿ ತಿರುಗುತ ಇರುವರು.

ಪಾಶ

ಆಣವ, ಮಾಯಾ, ಕಾರ್ಮಿಕಮಲಯುಕ್ತವಾದುದು ಪಾಶ. ರೋಧ ಶಕ್ತಿಯೆಂಬುದು ಪಾಶದ ಇನ್ನೊಂದು ಪ್ರಕಾರ. ಜೀವಾತ್ಮನ ಜ್ಞಾನ ಕ್ರಿಯಾಶಕ್ತಿಗಳನ್ನು ಮರೆಮಾಡುವುದಕ್ಕೆ ಮಲವೆನ್ನುವರು. ಇದು ಅಕ್ಕಿಯ ಕಾಳಿನ ಮೇಲಿನ ಕವಚದಂತಿರುವುದು. ಕರ್ಮ ಮನುಷ್ಯರು ಫಲಪ್ರಾಪ್ತಿಗಾಗಿ ಮಾಡುವ ಕೃತಿಯ ಪರಿಣಾಮ. ಇದು ಶುದ್ಧ ಮತ್ತು ಅಶುದ್ಧವಾಗಿರುವುದು. ಇದು ಅನಾದಿಯಾಗಿದ್ದು ಬೀಜವೃಕ್ಷನ್ಯಾಯದಂತೆ ಯಾವಾಗಲೂ ಇರುವುದು. ಪ್ರಲಯಕಾಲದಲ್ಲಿ ಜಗತ್ತೆಲ್ಲವೂ ಯಾವುದರಲ್ಲಿ ಅಡಗುವುದೋ ಮತ್ತು ಸೃಷ್ಟಿಕಾಲದಲ್ಲಿ ಯಾವುದರಿಂದ ಜಗತ್ತು ನಿರ್ಮಿಸಲ್ಪಡುವುದೋ ಅದಕ್ಕೆ ಮಾಯೆಯೆನ್ನುವರು. ಸಾಂಖ್ಯರ ಪ್ರಕಾರ ವಿಶ್ವ ೨೪ ತತ್ತ್ವಗಳಿಂದ ಹುಟ್ಟಿದುದು; ಆದರೆ ಶೈವರ ಪ್ರಕಾರ ೩೬ ತತ್ತ್ವಗಳಿಂದಾದುದು. ಇವು ಯಾವುವೆಂದರೆ : ೧. ಶಿವ, ೨. ಶಕ್ತಿ, ೩. ಈಶ್ವರ, ೪. ಸದಾಶಿವ, ೫. ವಿದ್ಯಾ (ಈ ಐದು ತತ್ತ್ವಗಳು ಮಾಯೆಯ ಹೊರಗಿರುವುವು. ಒಂದೇ ಮಲವುಳ್ಳ ವಿಜ್ಞಾನಕಲರು ವಿದ್ಯಾತತ್ತ್ವದಲ್ಲಿರುವವರು) ೬. ಮಾಯಾ, ೭. ಕಲಾ, ೮. ಕಾಲ, ೯. ನಿಯತಿ, ೧೦. ರಾಗ, ೧೧. ಪುರುಷ, ೧೨. ಪ್ರಕೃತಿ, ೧೩. ಗುಣ, ೧೪. ಬುದ್ಧಿ, ೧೫. ಅಹಂಕಾರ, ೧೬. ಮನ, ೧೭–೨೧. ಜ್ಞಾನೇಂದ್ರಿಯಗಳು, ೨೨–೨೬. ಕರ್ಮೇಂದ್ರಿಯಗಳು, ೨೭–೩೧. ತನ್ಮಾತ್ರೆಗಳು, ೩೨–೩೬. ಮಹಾಭೂತಗಳು. ಮಾಯಾತತ್ತ್ವದಲ್ಲಿ ಪ್ರಲಯಕಲರೂ ಉಳಿದವುಗಳಲ್ಲಿ ಸಕಲರೂ ಇರುವರು. ಈ

ತತ್ತ್ವಗಳನ್ನು ನಿರೀಕ್ಷಿಸಿದರೆ ಸ್ವಲ್ಪ ಹೆಚ್ಚು ಕಡಮೆ ಸಾಂಖ್ಯತತ್ತ್ವಗಳನ್ನು ಹೋಲುವುವು. ಇವು ಸಾಂಖ್ಯರ ತತ್ತ್ವಗಳಿಗಿಂತ ಹಳೆಯವಿರಬೇಕೆಂದು ತೋರುವುದು. ಸಾಂಖ್ಯರು ಇವುಗಳನ್ನು ಸುಧಾರಿಸಿ ಕ್ರಮಬದ್ಧವಾಗಿ ಏರ್ಪಡಿಸಿ ತಮ್ಮ ಶಾಸ್ತ್ರದಲ್ಲಿ ಸೇರಿಸಿಕೊಂಡಿರಬಹುದು.

ವೀರಶೈವ ಅಥವಾ ಲಿಂಗವಂತ ಮತ

ಈ ಮತ ಕರ್ನಾಟಕದಲ್ಲಿ ಈಗ ಪ್ರಚಲಿತವಿರುವ ಮತಗಳಲ್ಲಿ ಒಂದು. ಈ ಮತದ ಅನುಯಾಯಿಗಳು ವಿಶೇಷವಾಗಿ ಕರ್ನಾಟಕದಲ್ಲಿ ಇರುವರು. ಇವರ ಸಂಖ್ಯೆ ಈಗ ಸುಮಾರು ೩೫ ಲಕ್ಷವಿರಬಹುದೆಂದು ತರ್ಕ. ಈ ಧರ್ಮದ ಉಗಮವನ್ನು ಈಗ ನಮಗೆ ದೊರೆತ ಆಧಾರಗಳಿಂದ ಕಂಡುಹಿಡಿಯಲು ಸಾಧ್ಯವಿಲ್ಲ. ವೀರಶೈವಧರ್ಮದ ಕೆಲವು ಗ್ರಂಥಗಳಲ್ಲಿ ಇದರ ಉಗಮ ಐದು ಆಚಾರ್ಯರಿಗೆ ಅನ್ವಯಿಸಿದೆ ಎಂದು ಉಲ್ಲೇಖವಿದೆ. ಇವರು ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದ ಪಂಚಗಣಾಧೀಶ್ವರರೆಂದೂ ಯುಗಯುಗಾಂತರಗಳಲ್ಲಿ ಬೇರೆ ಬೇರೆ ನಾಮಗಳಿಂದ ಭೂಮಿಗೆ ಅವತರಿಸಿ ವೀರಶೈವ ಮಾರ್ಗವನ್ನು ಸ್ಥಾಪಿಸಿದರೆಂದೂ ಕಲಿಯುಗದಲ್ಲಿ ಕೊಲ್ಲಿಪಾಕಿ, ವಟಕ್ಷೇತ್ರ, ಸುಧಾಕುಂಡ, ದ್ರಾಕ್ಷಾರಾಮ, ವಾರಾಣಸಿಗಳೆಂಬ ಭರತಖಂಡದ ಪ್ರಸಿದ್ಧ ಕ್ಷೇತ್ರಗಳಲ್ಲಿ ಲಿಂಗಗಳಿಂದುದ್ಭವಿಸಿ, ಸರ್ವತ್ರ ಸಂಚರಿಸಿ, ಬಾಳೆಹಳ್ಳಿ, ಉಜ್ಜಯಿನಿ, ಶ್ರೀಶೈಲ, ಹಿಮವತ್‌ಕೇದಾರ, ಕಾಶೀಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂದೂ ಪ್ರತೀತಿ ಇದೆ. ಇವರಿಗೆ ಕಲಿಯುಗದಲ್ಲಿ ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ಏಕೋರಾಮ, ವಿಶ್ವಾರಾಧ್ಯರೆಂದು ಹೆಸರು. ಇವರಿಂದ ಸ್ಥಾಪಿಸಲ್ಪಟ್ಟವೆಂದು ಪ್ರತೀತಿಯಿದ್ದ ಮಠಗಳು ಈಗಲೂ ಅಸ್ತಿತ್ವದಲ್ಲಿವೆ. ಈ ಆಚಾರ್ಯರ ಕಥೆಗಳು ಪೌರಾಣಿಕ ಕಥೆಗಳಂತೆ ಕಂಡರೂ ಇವರು ಇತಿಹಾಸ ಪುರುಷರಾಗಿರಬೇಕೆಂದು ಊಹಿಸಲು ಅವಕಾಶವಿದೆ. ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನಗಳಲ್ಲಿ ಇದ್ದಿರಬಹುದಾದ ರೇವಣಸಿದ್ಧ, ಪಂಡಿತಾರಾಧ್ಯ, ಏಕೋರಾಮ ಮೊದಲಾದವರು ವೀರಶೈವ ಧರ್ಮದ ಪ್ರಗತಿಗೆ ಬಹಳವಾಗಿ ದುಡಿದಿರುವರು. ಇವರೇ ಪಂಚಾಚಾರ್ಯರೊಳಗಿನ ರೇವಣಸಿದ್ಧ, ಪಂಡಿತಾರಾಧ್ಯ, ಏಕೋರಾಮಾಚಾರ್ಯರೋ ಅಥವಾ ಅದೇ ಹೆಸರಿನವರಿದ್ದು ತದ್ಭಿನ್ನರೋ ಎಂಬುದನ್ನು ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಒಂದು ವೇಳೆ ಇವರೇ ಪಂಚಾಚಾರ್ಯರೆಂದು ಸಿದ್ಧವಾದರೆ ಪಂಚಾಚಾರ್ಯರ ಕಾಲ ಸುಮಾರು ಕ್ರಿ.ಶ. ೧೧-೧೨ನೆಯ ಶತಮಾನಗಳಾಗುವುದು.

ಬಸವಣ್ಣನವರಿಂದಲೇ ವೀರಶೈವ ಮತ ಸ್ಥಾಪಿತವಾಯಿತೆಂಬುದು ಕೆಲವರ ಗ್ರಹಿಕೆ. ಇದಾದರೂ ಸರಿಯಲ್ಲ. ಬಸವಣ್ಣನವರ ಚರಿತ್ರೆಯನ್ನು ವಿವರಿಸಿರುವ ಗ್ರಂಥಗಳ ಮೇಲಿಂದ ಅವರು ಮತಸ್ಥಾಪಕರಿದ್ದಂತೆ ತೋರುವುದಿಲ್ಲ. ಭೀಮಕವಿಯಂತೂ

ಅವರು ವೀರಶೈವ ದೀಕ್ಷೆಯನ್ನು ಪಡೆದರೆಂದು ಹೇಳಿರುವನು. ಬಸವಣ್ಣನವರ ಭಕ್ತಿ ಮತ್ತು ಧರ್ಮದ ಮೇಲಿನ ಪ್ರೇಮವನ್ನು ಕೇಳಿ ದೇಶದೇಶಗಳಿಂದ ಶರಣರು ಅವರ ಹತ್ತಿರಕ್ಕೆ ಬರಲಾರಂಭಿಸಿದರೆಂದು ಸ್ಪಷ್ಟವಾಗಿ ಉಲ್ಲೇಖವಿದೆ. ಈ ಎಲ್ಲ ಶರಣರಿಗೆ ಬಸವಣ್ಣನವರು ಗುರುಗಳಾಗಿಲ್ಲ. ತಿರುಗಿ ಬಸವಣ್ಣನವರೇ ಅವರೆಲ್ಲರನ್ನೂ ಪೂಜಿಸುತ್ತಿದ್ದರು. ಬಸವಣ್ಣನವರೇ ಮತಸ್ಥಾಪಕರಗಿದ್ದರೆ ಹೀಗಾಗುತ್ತಿದ್ದಿಲ್ಲ. ಬೇರೆಬೇರೆ ಭಾಗಗಳಿಂದ ಶರಣರು ಬಂದು ಬಸವಣ್ಣನವರ ಹತ್ತಿರ ಕಲೆಯಹತ್ತಿದುದರಿಂದ, ಆಯಾ ಭಾಗಗಳಲ್ಲಿ ವೀರಶೈವ ಮತ ಅಲ್ಪ ಪ್ರಮಾಣದಲ್ಲಿಯಾದರೂ ಇತ್ತೆಂದು ನಂಬಬೇಕಾಗುವುದು. ಭೀಮಕವಿ ಧರ್ಮೋದ್ಧಾರಕ್ಕಾಗಿ ನಂದಿ ಭೂಮಿಯಲ್ಲಿ ಬಸವಣ್ಣನೆಂಬಭಿಧಾನದಿಂದ ಅವತರಿಸಿದಂತೆ ತಿಳಿಸಿದ್ದಾನೆ. ಶೈವಧರ್ಮಾನುಯಾಯಿಗಳು ಅಲ್ಲಲ್ಲಿ ಅಡಗಿಕೊಂಡಿರುವರೆಂದೇ ನಾರದನ ಮುಖದಿಂದ ಭೀಮನು ಕೈಲಾಸದಲ್ಲಿ ಒಡ್ಡೋಲಗಂಗೊಟ್ಟ ಶಿವನಿಗೆ ಬಿನ್ನವಿಸಿಕೊಂಡಿದ್ದಾನೆ. ಬಸವಣ್ಣನವರಿಗೂ ಮೊದಲು ಹಲವರು ಈ ಮತ ಪ್ರಸಾರಕ್ಕಾಗಿ ಹೆಣಗಾಡಿದಂತೆ ಆಧಾರಗಳು ದೊರೆಯುತ್ತವೆ. ಏಸುಕ್ರಿಸ್ತ ಮತ್ತು ಮಹಮ್ಮದರು ಕ್ರೈಸ್ತ, ಮಹಮ್ಮದೀಯ ಧರ್ಮಗಳ ಸ್ಥಾಪಕರಿರುವಂತೆ ಬಸವಣ್ಣನವರು ವೀರಶೈವ ಮತದ ಸ್ಥಾಪಕರಲ್ಲವೆಂದು ಒಪ್ಪಬೇಕಾಗುವುದು. ಆದುದರಿಂದ ೧೨ನೆಯ ಶತಮಾನದಲ್ಲಿ ಇದು ಉದಯಿಸಿರಲಾರದು. ಆದರೂ ೧೨ನೆಯ ಶತಮಾನದಲ್ಲಿ ಇದರಲ್ಲಿ ಬಹಳವಾಗಿ ಮಾರ್ಪಾಟು ಆಗಿರಬೇಕು. ಇದು ೧೧ನೆಯ ಶತಮಾನಕ್ಕೂ ಪೂರ್ವದಲ್ಲಿ ಇದ್ದಿರಬೇಕು. ಎಷ್ಟು ಶತಮಾನಗಳ ಪೂರ್ವದಲ್ಲಿ ಇತ್ತೆಂಬುದನ್ನು ಹೇಳಲು ಈಗ ಸಾಧ್ಯವಿಲ್ಲ. ಆದರೂ ಮಹಾಭಾರತದ ಕಾಲದಲ್ಲಿ ಈ ಮತದ ವಿಚಾರಗಳನೇಕ ಅಸ್ತಿತ್ವದಲ್ಲಿದ್ದುವೆಂದು ಊಹಿಸಲು ಅವಕಾಶವಿದೆ. ಅದು ಹೇಗೆಂದರೆ, ವೀರಶೈವ ತತ್ತ್ವಜ್ಞಾನ ಶಾಸ್ತ್ರವನ್ನು ಶೋಧಿಸಿದರೆ ಅದರಲ್ಲಿ ಅತಿ ಪ್ರಾಚೀನತತ್ತ್ವಗಳು ಅಡಕವಾಗಿವೆಯೆಂದು ಕಂಡುಬರುವುದು. ಚೆನ್ನಬಸವಣ್ಣನವರೇ ಬರೆದಿರುವರೆಂದು ಪ್ರತೀತಿಯಿರುವ 'ಕರಣ ಹಸುಗೆ'ಯಲ್ಲಿ ಐದು ಕರ್ಮೇಂದ್ರಿಯಗಳೂ, ಐದು ಜ್ಞಾನೇಂದ್ರಿಯಗಳೂ, ಐದು ತನ್ಮಾತ್ರೆಗಳೂ, ಐದು ಪ್ರಾಣವಾಯುಗಳೂ, ಐದು ಅಂತಃಕರಣಗಳೂ ಇವೆಲ್ಲವೂ ಪಂಚಮಹಾಭೂತಗಳಿಂದ ಹುಟ್ಟಿರುವುವೆಂದು ಹೇಳಿದೆ. ಸಾಂಖ್ಯದ ಪ್ರಕಾರ ವಿಶ್ವ ೨೫ ತತ್ತ್ವಗಳಿಂದ ಆಗಿರುವುದೆಂದೂ ಅವು ಪುರುಷ, ಪ್ರಕೃತಿ, ಬುದ್ಧ, ಮನಸ್ಸು, ಅಹಂಕಾರ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರೆಗಳು ಮತ್ತು ಐದು ಮಹಾಭೂತಗಳು ಎಂದೂ ಹೇಳುತ್ತಾರೆ. ಸಾಂಖ್ಯದಲ್ಲಿ ಮಹಾಭೂತಗಳೇ ಕಡೆಯ ತತ್ತ್ವಗಳು. ಅವು ಸನ್ಮಾತ್ರೆಗಳಿಂದ ಬಂದುವು. 'ಕರಣ ಹಸುಗೆ'ಯ ಪ್ರಕಾರ ಮಹಾಭೂತಗಳೇ ಮೊದಲನೆಯವು, ಅವುಗಳಿಂದಲೇ ಉಳಿದ ತತ್ತ್ವಗಳ ಉತ್ಪತ್ತಿ. ಮೇಲಾಗಿ ಸಾಂಖ್ಯದಲ್ಲಿ ಪ್ರಾಣವಾಯುಗಳು

ತತ್ತ್ವಗಳೊಳಗೆ ಗಣಿಸಲ್ಪಡುವುದಿಲ್ಲ. 'ಕರಣ ಹಸುಗೆ'ಯಲ್ಲಿ ಅವು ತತ್ತ್ವಗಳಾಗಿವೆ. ಆದುದರಿಂದ ಸಾಂಖ್ಯರಿಗೂ ಕರಣ ಹಸುಗೆಗೂ ಅಂತರವಿದೆ. ಕರಣ ಹಸುಗೆಯ ತತ್ತ್ವಗಳು ಚೆನ್ನಬಸವಣ್ಣನಿಂದ ಕಲ್ಪಿಸಲ್ಪಟ್ಟುವಲ್ಲ. ಏಕೆಂದರೆ ಅವೆಲ್ಲವನ್ನೂ 'ವಿಜಯ ಭೈರವಿ' ಎಂಬ ಆಗಮದಿಂದ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಸಾಂಖ್ಯರಿಗೂ ಕರಣ ಹಸುಗೆಗೂ ಮುಖ್ಯ ಮಾತುಗಳಲ್ಲಿ ಭಿನ್ನಾಭಿಪ್ರಾಯವಿರುವುದರಿಂದ ಅವನ್ನು ಸಾಂಖ್ಯರಿಂದ ತೆಗೆದುಕೊಂಡಿಲ್ಲವೆಂದು ಹೇಳಬಹುದು.

ಮಹಾಭಾರತ ಪರ್ವ ೧೨ ಅಧ್ಯಾಯ ೩೧೪ ಶ್ಲೋಕ ೪ ಮತ್ತು ೧೪ ಇವುಗಳಲ್ಲಿ ತತ್ತ್ವಗಳ ಉತ್ಪತ್ತಿಯ ಬಗ್ಗೆ ವಿವೇಚನೆಯಿದೆ. ಅವುಗಳಲ್ಲಿ ಅಂತಃಕರಣ, ಬುದ್ಧೀಂದ್ರಿಯ, ಕರ್ಮೇಂದ್ರಿಯ ಮತ್ತು ತನ್ಮಾತ್ರೆಗಳು ಮಹಾಭೂತಗಳಿಂದಲೇ ಉದ್ಭವಿಸಿವೆಯೆಂದು ಉಲ್ಲೇಖಿಸಿದೆ. ಮಹಾಭಾರತದ ಈ ವಿವೇಚನೆಗೂ ಕರಣ ಹಸುಗೆಯ ವಿವೇಚನೆಗೂ ಮುಖ್ಯಮಾತಿನಲ್ಲಿ ಎಂದರೆ ಮಹಾಭೂತಗಳಿಂದ ಉಳಿದ ತತ್ತ್ವಗಳ ಉತ್ಪತ್ತಿ ಎಂಬುದರಲ್ಲಿ ಸರಿಬೀಳುವುದು. ಮಹಾಭಾರತದಲ್ಲಿಯೇ ಮತ್ತೊಂದು ಕಡೆಗೆ ಪ್ರಾಣವಾಯುಗಳನ್ನು ತತ್ತ್ವಗಳಲ್ಲಿ ಗಣಿಸಿರುವರೆಂದು ಡಾ॥ ಆರ್ಥರ್ ಬೆರಿಡೇಲ್ ಕೀತ್ ಅವರು ತಮ್ಮ 'ಸಾಂಖ್ಯದರ್ಶನ' ಎಂಬ ಪುಸ್ತಕದಲ್ಲಿ ಹೇಳಿರುವರು. ಇವರ ಮೇಲಿಂದ ಕರಣ ಹಸುಗೆಯಲ್ಲಿಯ ಅನೇಕ ಮಾತು ಮಹಾಭಾರತದಲ್ಲಿಯವುಗಳಿಗೆ ಸರಿಬೀಳುವುದರಿಂದ ವೀರಶೈವರು ತಮ್ಮ ತತ್ತ್ವಜ್ಞಾನವೆಂದು ತಿಳಿಯುವ ಕರಣ ಹಸುಗೆಯು ತತ್ತ್ವವಿವೇಚನೆ ಮಹಾಭಾರತ ಕಾಲದಷ್ಟು ಹಳೆಯದೆಂಬುದನ್ನು ಒಪ್ಪಿಕೊಳ್ಳಬೇಕಾಗುವುದು. ವೀರಶೈವರಲ್ಲಿ ಇನ್ನೂ ನಡೆಯುತ್ತ ಬಂದ ಹಲಕೆಲವು ಆಚಾರಗಳನ್ನು ನೋಡುವ. ಬಸವಣ್ಣನವರ ಕಾಲದ ಶರಣರು ಅಥವಾ ವಚನಶಾಸ್ತ್ರಕಾರರು ಜಾತಿ ವರ್ಣಗಳ ಭೇದವನ್ನೆಣಿಸಿಲ್ಲ. ಈಗಲೂ ಕೂಡ ಲಿಂಗವಂತರು ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಸ್ತ್ರೀ-ಪುರುಷರ, ಬ್ರಾಹ್ಮಣ-ಶೂದ್ರ ಇತ್ಯಾದಿ ಭೇದಗಳನ್ನು ಮಾಡುವುದಿಲ್ಲ. ಈಗಲೂ ಕೂಡ ಲಿಂಗವಂತರಲ್ಲಿ ಚಾತುರ್ವರ್ಣ್ಯ ವ್ಯವಸ್ಥೆಯಿಲ್ಲ. ಪಂಚಸೂತಕಗಳನ್ನು ಮಾನಿಸುವುದಿಲ್ಲ. ವೀರಶೈವ ಗುರುಗಳು ಕಾಷಾಯ ವಸ್ತ್ರಗಳನ್ನು ಧರಿಸುವರು, ಭಿಕ್ಷೆ ಬೇಡುವರು, ತಲೆಯ ಮತ್ತು ಮುಖದ ಮೇಲಿನ ಕೂದಲುಗಳನ್ನು ಸಂಪೂರ್ಣವಾಗಿ ತೆಗೆದುಬಿಡುವರು. ವೀರಶೈವರು ವೈದಿಕ ಕರ್ಮಕಾಂಡವನ್ನು ಮನ್ನಿಸುವುದಿಲ್ಲ. ಇವರಿಗೆ ಪುನರ್ಜನ್ಮದ ಭೀತಿಯಿಲ್ಲ. ಈ ಪ್ರಕಾರದ ಆಚಾರಗಳುಳ್ಳ ಶೈವರು ಮಹಾಭಾರತದ ಕಾಲದಲ್ಲಿಯೂ ಇದ್ದರೆಂದು ಕಂಡುಬರುವುದು. "ವೇದಗಳನ್ನು ತ್ಯಜಿಸಿ ಮುಖ ತಲೆಗಳನ್ನು ಬೋಳಿಸಿಕೊಂಡು ಕಾಷಾಯ ವಸ್ತ್ರಗಳನ್ನು ಧರಿಸಿ ಭಿಕ್ಷುಕರಾಗಿ ತಿರುಗುವಂಥವರು."[1] "ಪರಲೋಕದ ಭಯವಾಗಲಿ ಮರಣಾನಂತರ ತಿರುಗಿ ಬಂದೇವೆಂಬ ಭಯವಾಗಲಿ

1. *Dr. Hopkins : Great Epic of India, p.88*

ಇಲ್ಲದಂಥವರು."[1] "ನಾನೇ ರುದ್ರನು. ಸರ್ವತ್ರವ್ಯಾಪಿಯೂ ಸರ್ವರಿಗೂ ಹಿತಕರವೂ ಗೂಢವೂ ಆದ ಪಾಶುಪತ ಧರ್ಮವನ್ನು ಮೊದಲನೆಯ ಸಾರೆ ಹುಡುಕಿ ತೆಗೆದೆನು. ಅದನ್ನು ಕಲಿಯಲು ವರುಷಗಳು ಬೇಕು. ಆದರೂ ಹತ್ತೇ ದಿವಸಗಳಲ್ಲಿ ಕೂಡ ಅದನ್ನು ಕಲಿಯಲು ಸಾಧ್ಯವಿದೆ. ವರ್ಣವ್ಯವಸ್ಥೆಗೆ ಮತ್ತು ಶಾಸ್ತ್ರಗಳ ನಿಯಮಗಳಿಗೆ ವಿರುದ್ಧವಾಗಿದೆಯೆಂದು ತಿಳಿಗೇಡಿಗಳಿಂದ ತಿರಸ್ಕರಿಸಲ್ಪಟ್ಟರೂ ಬಲ್ಲವರು (ಗತಾಂತ) ಅದನ್ನು ಬಣ್ಣಿಸುವರು. ಅದು ನಿಜವಾಗಿಯೇ ವರ್ಣವ್ಯವಸ್ಥೆಯುಳ್ಳದ್ದಕ್ಕೂ ಮಿಗಿಲಾದುದು."[2] ಈ ಅವತರಣಿಕೆಯಲ್ಲಿ ಕಂಡ ಆಚಾರಗಳೆಲ್ಲವೂ ವೀರಶೈವರಲ್ಲಿ ಇನ್ನೂ ಪ್ರಚಾರದಲ್ಲಿವೆ. ಮೇಲಿನ ಎರಡು ಅವತರಣಿಕೆಗಳು ಬೌದ್ಧರಿಗೆ ಸಂಬಂಧಿಸಿರಬೇಕೆಂದು ಕೆಲಪಂಡಿತರ ಅಭಿಪ್ರಾಯ. ಆದರೆ ಅವು ಶೈವರಿಗೆ ಸಂಬಂಧಿಸಿರಬೇಕೆಂದು ಮಹಾಭಾರತದ ವಿಷಯದಲ್ಲಿ ಬಲ್ಲಿದರೆಂದು ಹೆಸರಾದ ಡಾ॥ ಹಾಪ್‌ಕಿನ್ಸ್ ಅವರ ಮತ. ಮೂರನೆಯ ಅವತರಣಿಕೆಯಲ್ಲಿ ಪಾಶುಪತರ ಹೆಸರು ಸ್ಪಷ್ಟವಾಗಿದೆ. ಈ ಮೂರು ಅವತರಣಿಕೆಗಳು ಶೈವರಾದ ಪಾಶುಪತರಿಗೆ ಸಂಬಂಧಿಸಿರಬೇಕೆಂದು ನಮ್ಮ ಗ್ರಹಿಕೆ. ಅದು ನಿಜವಿದ್ದ ಪಕ್ಷದಲ್ಲಿ ಈಗ ನಾಮ ಶೇಷವಾಗಿರುವ ಅತಿ ಪ್ರಾಚೀನ ಶೈವಮತವಾದ ಪಾಶುಪತ ಧರ್ಮದಲ್ಲಿಯ ಆಚಾರ ವಿಚಾರಗಳು ಇನ್ನೂ ವೀರಶೈವರಲ್ಲಿ ಕಂಡುಬರುವುವೆಂಬುದನ್ನು ಒಪ್ಪಿಕೊಳ್ಳ ಬೇಕಾಗುವುದು.

ವೀರಶೈವರ ಪ್ರಾಚೀನ ಇತಿಹಾಸ ಉಪಲಬ್ಧವಿಲ್ಲ. ಸುಮಾರು ಕ್ರಿ.ಶ. ೧೧-೧೨ನೆಯ ಶತಮಾನಗಳಿಂದ ಇತ್ತಿತ್ತಲಾಗಿಯೇ ಅದರ ಇತಿಹಾಸ ಉಪಲಬ್ಧವಿದೆ. ಆದುದರಿಂದ ಅದಕ್ಕೂ ಪೂರ್ವದಲ್ಲಿ ಈ ಮತ ಇದ್ದಿರಲಿಲ್ಲವೆಂದು ಕೆಲವರು ಪಂಡಿತರ ಅಭಿಪ್ರಾಯ. ಇದು ಸರಿಯಾದುದಲ್ಲ. ಕ್ರಿ.ಶ. ೧೧ನೆಯ ಶತಮಾನಕ್ಕೂ ಪೂರ್ವದಲ್ಲಿ ಇದರ ಗುರುತು ದೊರೆಯದೇ ಇರುವುದಕ್ಕೆ ಇದು ಇಲ್ಲದೆ ಇರುವುದೆ ಕಾರಣ ಎಂದು ಹೇಳಲಾಗುವುದಿಲ್ಲ. ಕ್ರಿ.ಶ. ೧೪ನೆಯ ಶತಮಾನದಲ್ಲಿ ಈ ಮತ ಅಸ್ತಿತ್ವದಲ್ಲಿದ್ದ ಬಗ್ಗೆ ಯಾರಿಗೂ ತಿಲಮಾತ್ರ ಸಂದೇಹಕ್ಕೂ ಆಸ್ಪದವಿಲ್ಲ. ಆದರೂ ಅದೇ ಶತಮಾನದಲ್ಲಿದ್ದ ಮಾಧವಾಚಾರ್ಯರು 'ಸರ್ವದರ್ಶನ ಸಂಗ್ರಹ'ದಲ್ಲಿ ವೀರಶೈವರ ಹೆಸರನ್ನು ಕೂಡ ಎತ್ತಿಲ್ಲ. ಶೈವಧರ್ಮದ ಪಂಥಗಳಾದ ಪಾಶುಪತ, ಲಕುಲೀಶ, ಪ್ರತ್ಯಭಿಜ್ಞ, ಸಿದ್ಧಾಂತ ಮೊದಲಾದ ಪಂಥಗಳನ್ನೂ ಅವುಗಳ ದರ್ಶನಗಳನ್ನೂ ವಿವರಿಸಿದ್ದಾರೆ. ಅಂದಮೇಲೆ, ಸರ್ವದರ್ಶನಕಾರರ ದೃಷ್ಟಿಗೆ ವೀರಶೈವಮತ ಬೀಳದೆ ಇದ್ದುದು ಆಶ್ಚರ್ಯವಲ್ಲವೆ? ವಿಚಾರಮಾಡಿ ನೋಡಿದರೆ ಮಾಧವಾಚಾರ್ಯರಿಗೆ ವೀರಶೈವಮತ ಗೊತ್ತಿರಲೇಬೇಕು. ವೀರಶೈವ ಅಥವಾ ಲಿಂಗವಂತ ಎಂಬ ಹೆಸರು

1. *Dr. Hopkins : Great Epic of India, p. 88*
2. " " *p. 164*

ಜನರಿಂದ ಸಾಮಾನ್ಯವಾಗಿ ಕರೆಯಲ್ಪಟ್ಟುದೇ ಅಲ್ಲದೆ ಮತ್ತದ ನಿಜವಾದ ಹೆಸರೆಂದು ಅನ್ನಿಸಿರಲಾರದು. ಶಿವನಲ್ಲಿ ಒಳ್ಳೆಯ ಅಭಿಮಾನಿಗಳಾಗಿರುವುದರಿಂದಲೂ ಶಿವನ ಹೆಚ್ಚಳವನ್ನು ಕಾಯ್ದುಕೊಳ್ಳಲು ಪ್ರಾಣವನ್ನು ಕೂಡ ಲೆಕ್ಕಿಸದೆ ಇರುವುದರಿಂದಲೂ ಶೈವಧರ್ಮದ ಕಠೋರ ಮತ್ತು ಬಲು ಬಿಕ್ಕಟ್ಟಾದ ಆಚರಣೆಗಳನ್ನು ಪಾಲಿಸುವುದರಿಂದಲೂ ಇವರಿಗೆ ವೀರಶೈವರೆಂದೂ ಲಿಂಗವನ್ನು ಸದಾ ಧರಿಸುವುದ ರಿಂದ ಲಿಂಗವಂತರೆಂದೂ ಹೆಸರಿರಬೇಕೆಂದೂ ಅವರಿಗೆ ಅನ್ನಿಸಿರಬಹುದು. ಆ ಕಾಲದೊಳಗಾಗಿಯೇ ಬಹುತರ ಎಲ್ಲ ಕಾಳಾಮುಖರ ಮಠಗಳು ವೀರಶೈವರವಾಗಿದ್ದುದರಿಂದ ವೀರಶೈವರಿಗೂ ಕಾಳಾಮುಖರಿಗೂ ಭೇದವಿಲ್ಲವೆಂದು ಕಲ್ಪಿಸಿ ಲಕುಲೀಶ ಪಂಥವನ್ನಷ್ಟೇ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರಬಹುದು.

ವೀರಶೈವರ ಅರ್ವಾಚೀನ ಪ್ರಸಿದ್ಧ ಗ್ರಂಥಕಾರನಾದ ನಿಷ್ಠೂರ ನಂಜಣಾಚಾರ್ಯನು (ಕ್ರಿ.ಶ. ೧೬೨೫) ವೀರಶೈವರನ್ನು ಮಹಾಪಾಶುಪತರೆಂಧು ಕರೆದಿದ್ದಾನೆ. ಮಹಾಭಾರತ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಪಾಶುಪತರ ಕೆಲವು ಆಚಾರ ವಿಚಾರಗಳು ಈಗಲೂ ವೀರಶೈವರಲ್ಲಿ ಕಂಡುಬರುವುವೆಂದು ಮೇಲೆ ಸೂಚಿಸಲಾಗಿದೆ. ಕ್ರಿ.ಶ. ೧೧-೧೨ನೆಯ ಶತಮಾನಗಳಲ್ಲಿ ಪಾಶುಪತರೂ, ಕಾಶ್ಮೀರ ಶೈವರೂ, ಕಾಳಾಮುಖರೂ ನಮ್ಮ ಕನ್ನಡನಾಡಿನಲ್ಲಿ ಇದ್ದರೆಂಧು ಶಿಲಾಶಾಸನಗಳಿಂದ ಕಂಡುಬರುವುದು. ಆದುದರಿಂದ ಆ ಕಾಲದ ಶೈವಪಂಥಗಳನ್ನೆಲ್ಲ ಒಳಗೊಂಡ ಈಗಿನ ವೀರಶೈವ ಮತವು ಪ್ರಾಚೀನ ಕಾಲದಲ್ಲಿ ಪಾಶುಪತ ಪಂಥವಾಗಲಿ ಅದರ ಒಳಭೇದಗಳಲ್ಲೊಂದಾಗಲಿ ಆಗಿರಬಹುದೆಂದು ತರ್ಕಿಸಲವಕಾಶವಿದೆ. ವೀರಶೈವ ಮತದ ಇತಿಹಾಸವನ್ನು ೧೨ನೆಯ ಶತಮಾನದಿಂದ ಈಚೆಗೆ ಸ್ಪಷ್ಟವಾಗಿಯೂ ಪ್ರಮಾಣಬದ್ಧವಾಗಿಯೂ ಕಂಡುಕೊಳ್ಳಲು ಬರುವುದು. ಆದರೂ ವಚನಶಾಸ್ತ್ರಗಳಲ್ಲಿ ಆಗಾಗ ಬರುವ ಉಲ್ಲೇಖ ಮತ್ತು 'ಬಸವ ಪುರಾಣ' 'ಚೆನ್ನಬಸವಪುರಾಣ'ಗಳ ಆಧಾರಗಳಿಂದ ಬಸವಣ್ಣನವರಿಗಿಂತಲೂ ಮೊದಲು ಹಲವು ಶರಣರು ಶೈವ ಮತೋದ್ಧಾರಕ್ಕಾಗಿ ಹೆಣಗಿದರೆಂದು ಕಂಡುಬರುವುದು. ಇಂಥವರಲ್ಲಿ ದ್ರಾವಿಡ ದೇಶದ ಅರವತ್ತು ಮೂವರು ಪುರಾತನರು ಮುಖ್ಯರು. ಬಸವಣ್ಣನವರ ವಚನಗಳಲ್ಲಿ ಅನೇಕ ಪುರಾತನರ ಹೆಸರುಗಳು ಬರುವುದು. ಅರ್ಜುನವಾಡದ ಶಿಲಾಶಾಸನದಲ್ಲಿ "ಬಸವರಾಜನನ್ವಯರುಮಪ್ಪ ಹಾಲುಬಸವೀದೇವರು ತೇಸಷ್ಠಿ ಪುರಾತನರ ಪಾದಾರ್ಚಕರು"[1] ಎಂದು ಹೇಳಿದೆ. ವಚನಗಳಲ್ಲಿ ಅನೇಕ ಕಡೆ ತಮಿಳು ನಾಯನಾರರ ಪದಗಳ ಛಾಯೆಯಿದೆ. ತ್ರಿಷಷ್ಠಿ ಪುರಾತನ ವರ್ಚಸ್ಸು ಲಿಂಗವಂತರಲ್ಲಿ ಬಹಳವಾಗಿದೆ. ಪುರಾತನರ ಕಾಲ ಸುಮಾರು ಕ್ರಿ.ಶ. ೬ರಿಂದ ೯ನೆಯ ಶತಮಾನದವರೆಗೆಂದು ನಿಶ್ಚಯವಾಗಿ ಗೊತ್ತಾಗಿದೆ. ಆದರೂ

---

1. *ಶಿವಾನುಭವ, ವರ್ಷ ೩. ಸಂಚಿಕೆ ೯. ಪುಟ ೯೬.*

ಎಲ್ಲ ಪುರಾತನರು ಇಷ್ಟಲಿಂಗಧಾರಿಗಳಾದ ವೀರಶೈವರಿದ್ದರೆಂದು ತರ್ಕಿಸಲು ಸಾಕಷ್ಟು ಆಧಾರಗಳಿಲ್ಲ. ಕ್ರಿ.ಶ. ೧೧೩೩ರ ಸುಮಾರಿಗೆ ಜೀವಿಸಿದ್ದ ಪ್ರಸಿದ್ಧ ತಮಿಳು ಶೈವಗ್ರಂಥಕಾರನಾದ ಶೇಕ್ಕಿಳಾರನು ಪುರಾತನರ ಬಗ್ಗೆ ಆ ಕಾಲದ ಕಲ್ಪನೆಗಳನ್ನೆಲ್ಲ ಸಂಗ್ರಹಿಸಿ 'ಪೆರಿಯ ಪುರಾಣ'ವೆಂಬ ಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಪುರಾತನರು ಸ್ಥಾವರ ಲಿಂಗಪೂಜಕರೆಂದೇ ಉಲ್ಲೇಖವಿದೆ. ಇಷ್ಟಲಿಂಗಧಾರಿಗಳಾಗಿದ್ದರೆಂಬ ಬಗ್ಗೆ ಸ್ಪಷ್ಟವಾದ ಆಧಾರ ದೊರೆಯುವುದಿಲ್ಲ. ಇನ್ನು ಸ್ವತಃ ಲಿಂಗಧಾರಿಗಳಾಗಿದ್ದು ವೀರಶೈವರ ಆಚರಣೆಯನ್ನು ಪ್ರಸಾರ ಮಾಡಲು ಹೆಣಗಿದವರಲ್ಲಿ ಜೇಡರ ದಾಸಿಮಾರ್ಯರೊಬ್ಬರು. ಇವರ ಬಗ್ಗೆ ಬಸವೇಶ್ವರನ ವಚನಗಳಲ್ಲಿ ಮೇಲಿಂದ ಮೇಲೆ ಉಲ್ಲೇಖವಿದೆ. ಬಸವ ಪುರಾಣದಲ್ಲಿಯೂ ಇತರ ವೀರಶೈವ ಗ್ರಂಥಗಳಲ್ಲಿಯೂ ಇವರ ಚರಿತ್ರೆ ಬಂದಿದೆ. ಅದರೊಳಗಿನ ಕೆಲವು ವಿಷಯಗಳು ಶಿಲಾಶಾಸನಗಳಲ್ಲಿಯೂ ಬಂದಿವೆ. ಕ್ರಿ.ಶ. ೧೧೪೮ರಲ್ಲಿ ಹುಟ್ಟಿದ ಗೊಬ್ಬೂರು ಶಿಲಾಶಾಸನದಲ್ಲಿ ಜೇಡರ ದಾಸಯ್ಯಗಳ ಹೆಸರಿದೆ. ಡಾ. ಫ್ಲೀಟರಂತಹ ಪಾಶ್ಚಾತ್ಯ ಚಿಕಿತ್ಸಕರೂ ಕೂಡ ದಾಸಿಮಾರ್ಯರು ಐತಿಹಾಸಿಕ ಪುರುಷರಿದ್ದರೆಂದು ಒಪ್ಪಿಕೊಳ್ಳುತ್ತಾರೆ. ಕ್ರಿ.ಶ. ೧೦೧೮ರಿಂದ ೧೦೪೮ರವರೆಗೆ ಆಳಿದ ಚಾಲುಕ್ಯ ವಿಕ್ರಮಾದಿತ್ಯ ಅಥವಾ ಜಗದೇಕಮಲ್ಲ ಜಯಸಿಂಹನ ಕಾಲದಲ್ಲಿ ದಾಸಿಮಾರ್ಯರಿದ್ದರೆಂದು ತಿಳಿಯುವುದರಿಂದ ಇವರು ಬಸವಣ್ಣನವರಿಗಿಂತ ಸುಮಾರು ೧೦೦ ವರ್ಷ ಮೊದಲಿನವರು. ದಾಸಿಮಾರ್ಯರ ತರುವಾಯ ವೀರಶೈವಮತ ಪ್ರಸಾರಣೆಯ ಕಾರ್ಯಕ್ಕೆ ಕೈಹಾಕಿದ ಐತಿಹಾಸಿಕ ಪುರುಷನು ಏಕಾಂತದ ರಾಮಯ್ಯನೆಂಬುವನು. ಈತನು ಮಾಡಿದ ಅದ್ಭುತ ಪವಾಡವನ್ನು ಅಬ್ಬಲೂರು ಶಾಸನ ಬಣ್ಣಿಸುವುದು. ಈತನು ಬಸವಣ್ಣನವರಿಗಿಂತ ಮೊದಲಿನವನು. ಆಮೇಲೆ ಬಸವಯುಗ ಪ್ರಾರಂಭವಾಗುವುದು. ಬಸವಯುಗದಲ್ಲಿ ಮುಖ್ಯ ಆಶ್ರಯದಾತರೂ ಮಹತ್ತ್ವದ ವ್ಯಕ್ತಿಗಳೂ ಬಸವಣ್ಣನವರೇ ಆದಾಗ್ಗೂ ಆ ಕಾಲದ ಅನೇಕ ಶಿವಶರಣರನ್ನು ಮರೆಯುವ ಹಾಗಿಲ್ಲ. ಅವರಲ್ಲಿ ಅನೇಕರು ನಿಷ್ಠೆಯಲ್ಲಿ ಬಸವಣ್ಣನವರಿಗಿಂತಲೂ ಮಿಗಿಲಾಗಿದ್ದರು. ಭಕ್ತಿ, ನಿಷ್ಠೆ, ಜ್ಞಾನ, ವೈರಾಗ್ಯ ಮೊದಲಾದವುಗಳಲ್ಲಿ ಪರಿಪೂರ್ಣರಾದ ತೇಜೋಮೂರ್ತಿಗಳನೇಕರು ಬಸವಣ್ಣನವರಿಗೆ ಬೆಂಬಲರಾಗಿದ್ದರು. ಇವರೆಲ್ಲರಿಗೂ ಬಸವಣ್ಣನವರು ಕೈಂಕರ್ಯಭಾವದಿಂದ ನಡೆದುಕೊಳ್ಳುತ್ತಿದ್ದರು. ಬಸವಯುಗದಲ್ಲಾದ ಧಾರ್ಮಿಕ ಕ್ರಾಂತಿಯ ಶ್ರೇಯಸ್ಸು ಬಸವಣ್ಣನವರ ಬೆಂಬಲಿಗರಾದ ಶರಣರಿಗೆ ಸಲ್ಲುವುದೆಂದರೆ ಅತಿಶಯೋಕ್ತಿಯಾಗಲಾರದು. ಬಸವಯುಗದಲ್ಲಾದ ಧಾರ್ಮಿಕ ಜಾಗೃತಿಗೆ ಮುಂದೆ ಕೆಲಕಾಲದಲ್ಲಿ ಪೋಷಣೆ ದೊರೆತಂತೆ ಕಾಣುವುದಿಲ್ಲ. ಅದಕ್ಕೆ ಕಾರಣ ಈ ಕಾಲದಲ್ಲಿ ದೇಶದಲ್ಲಿ ನೆಲಸಿದ ಅರಾಜಕತೆ. ದೇಶದಲ್ಲಿ ಸುಖಶಾಂತಿಗಳು ನೆಲೆಸಿದಾಗಲೇ ಜನರ

ಪ್ರವೃತ್ತಿ ಸಂಸ್ಕೃತಿಯ ಕಡೆಗೆ ತಿರುಗುವುದು. ಆ ಕಾಲದ ಪರಿಸ್ಥಿತಿಯನ್ನು ನಿರೀಕ್ಷಿಸಲು ಕರ್ನಾಟಕದ ಇತಿಹಾಸವನ್ನು ನಿರೀಕ್ಷಿಸುವ.

ಚಾಲುಕ್ಯರ ವಂಶದ ೨ನೆಯ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿ ಚಾಲುಕ್ಯರ ಪ್ರತಿಷ್ಠೆಯನ್ನು ಪುನಃ ಸ್ಥಾಪಿಸಿದ ತರುವಾಯ ಚಾಲುಕ್ಯರ ಸಾಮ್ರಾಜ್ಯವು ಆತನ ವಂಶದ ವಿಕ್ರಮಾದಿತ್ಯನ ಕಾಲದಲ್ಲಿ ಅಭ್ಯುದಯದ ಪರಮಾವಧಿಯನ್ನು ಹೊಂದಿ ಬರುಬರುತ್ತ ಇಳಿಯಹತ್ತಿತ್ತು. ಮೂರನೆಯ ತೈಲಪನ ಕಾಲದಲ್ಲಂತೂ ಚಾಲುಕ್ಯರ ರಾಜ್ಯದ ಕಟ್ಟುಗಳು ಸಡಿಲವಾಗಿ ಅದು ಬಲಹೀನವಾಯಿತು. ಅದೇ ಕಾಲಕ್ಕೆ ಉತ್ತರದಲ್ಲಿ ದೇವಗಿರಿಯ ಯಾದವರೂ ದಕ್ಷಿಣದಲ್ಲಿ ಹೊಯ್ಸಳರೂ ಪ್ರಬಲರಾಗಿ ಚಾಲುಕ್ಯ ರಾಜ್ಯವನ್ನು ಒಳನುಗ್ಗಹತ್ತಿದರು. ಇಂತಹ ಪ್ರಸಂಗದಲ್ಲಿ ಚಾಲುಕ್ಯರ ರಾಜ್ಯದ ಸೂತ್ರಗಳು ಒಂದೊಂದಾಗಿ ಕಳಚೂರ್ಯ ವಂಶದ ಬಿಜ್ಜಳನು ಚಾಳುಕ್ಯರ ರಾಜ್ಯದ ಮೇಲೆ ದಂಡೆತ್ತಿ ಬರುತ್ತಿರುವ ಶತ್ರುಗಳನ್ನು ಮುರಿಯುವುದರಲ್ಲಿ ಆಸಕ್ತನಾಗದೆ ತಾನೇ ಸಿಂಹಾಸನವನ್ನು ಆಕ್ರಮಿಸುವ ವಿಚಾರವನ್ನು ನಡೆಸಿದನು. ಮತ್ತು ಅದೇ ಪ್ರಕಾರ ತೈಲಪನನ್ನು ತಳ್ಳಿ ಸಿಂಹಾಸನವನ್ನೇರಿದನು. ಆದುದರಿಂದ ಯಾದವರೂ ಹೊಯ್ಸಳರೂ ಚಾಲುಕ್ಯ ರಾಜ್ಯದ ಬಹುಭಾಗವನ್ನು ಆಕ್ರಮಿಸಲು ಅನುವು ದೊರೆಯಿತು. ವಂಶಪರಂಪರೆಯಿಂದ ಚಾಲುಕ್ಯರ ಸೇವೆ ಮಾಡುತ್ತ ಬಂದ ಅನೇಕ ಮಂಡಲೇಶ್ವರರಿಗೆ ಬಿಜ್ಜಳನ ಈ ಕೃತಿ ಮನಸ್ಸಿಗೆ ಬಂದಂತೆ ತೋರುವುದಿಲ್ಲ. ಏಕೆಂದರೆ ಅವರಲ್ಲನೇಕರು ತೈಲಪನ ಮಗನಾದ ಸೋಮೇಶ್ವರನಿಗೆ ಆಶ್ರಯವನ್ನಿತ್ತರು. ಆದರೂ ಬಿಜ್ಜಳನು ಬಲಿಷ್ಠನಿದ್ದುದರಿಂದ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಲು ಶಕ್ತನಾದನು. ಚಾಲುಕ್ಯರ ರಾಜ್ಯದ ಬಹುಭಾಗದಲ್ಲಿ ಶಾಂತಿಯನ್ನೂ ವ್ಯವಸ್ಥೆಯನ್ನೂ ನೆಲೆಗೊಳಿಸಿದನು. ಇದೇ ಕಾಲಕ್ಕೆ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿದ್ದರು. ಶರಣರ ಸ್ವತಂತ್ರ ವಿಚಾರಗಳೂ ಅವುಗಳಿಗಿದ್ದ ಬಸವಣ್ಣನವರ ಬೆಂಬಲವೂ ಕೆಲವು ವಿಶಿಷ್ಟ ಜನರಿಗೆ ರುಚಿಸಲಿಲ್ಲ. ಭೀಮಕವಿಯ ಹೇಳಿಕೆಯಂತೆ ಅಂಥವರ ಉಪದೇಶದಿಂದ ಬಿಜ್ಜಳನು ಶರಣರನ್ನು ದಂಡಿಸಿದನು. ಶರಣರ ಅನುಯಾಯಿಗಳಿಗೂ ಬಿಜ್ಜಳನಿಗೂ ಮನಸ್ತಾಪವುಂಟಾಯಿತು. ಆದರೂ ಸಾಮಾನ್ಯರಲ್ಲಿ ಬಸವ ಮೊದಲಾದ ಶರಣರ ಬಗ್ಗೆ ಆದರವಿತ್ತೆಂದು ತೋರುವುದು. ಏಕೆಂದರೆ ಬಿಜ್ಜಳನ ಮರಣಾನಂತರ ನಾಮಧಾರಿಗಳಾದ ಇಬ್ಬರು ಮೂವರು ರಾಜರು ರಾಜ್ಯವಾಳಿದರೂ ಕಲಚೂರ್ಯ ರಾಜ್ಯವು ಕುಪ್ಪಳಿಸಿತು. ಬಸವನ ಮತಕ್ಕೆ ಬಲವೇರಿತು. ಬಿಜ್ಜಳನ ರಾಜದ್ರೋಹದ ಕೃತಿಗಾಗಿ ಮೊದಲೇ ಮನನೊಂದ ಅನೇಕ ಮಂಡಲಾಧೀಶ್ವರರು ಶರಣರಿಗುಂಟಾದ ತಾಪದಿಂದ ಬಿಜ್ಜಳನಿಂದ ಮತ್ತಷ್ಟು ದೂರವಾದರು. ಬಲವಂತರಾದ ದಂಡನಾಯಕರಲ್ಲಿ ಒಬ್ಬನೂ ಬಿಜ್ಜಳನಿಗೆ ಸಹಾಯಕನೂ ಆದ ಬರ್ಮರಸನು ಬಿಜ್ಜಳನ ಮರಣಾನಂತರ ಚಾಲುಕ್ಯ ವಂಶದ

ಳನೆಯ ಸೋಮೇಶ್ವರನನ್ನು ಅಣ್ಣಿಗೇರಿಯಲ್ಲಿ ಪಟ್ಟಕ್ಕೆ ಕುಳ್ಳಿರಿಸಿದನು. ಇದರಿಂದ ಪುನಃ ಕಲಹಕ್ಕೆ ಆರಂಭವಾಯಿತು. ಚಾಲುಕ್ಯರೂ ಕಲಚೂರ್ಯರೂ ಯಾದವರೂ ಹೊಯ್ಸಳರೂ ಮತ್ತು ಅವರವರ ಅನುಯಾಯಿಗಳೂ ತಮ್ಮ ತಮ್ಮ ಹಕ್ಕು ಸ್ಥಾಪಿಸುವುದಕ್ಕೋಸ್ಕರ ಹೋರಾಡಹತ್ತಿದುದರಿಂದ ದೇಶದಲ್ಲಿ ಕ್ಷೋಭೆ ನೆಲಸಿತು.

ಕಲ್ಯಾಣವನ್ನೇ ಕೇಂದ್ರಸ್ಥಾನವಾಗಿ ಮಾಡಿಕೊಂಡು ಬಸವಣ್ಣನವರ ಆಶ್ರಯದಲ್ಲಿದ್ದ ಶರಣರೆಲ್ಲರೂ ಬಸವಣ್ಣನವರು ಕಲ್ಯಾಣವನ್ನು ಬಿಟ್ಟಮೇಲೆ ಮನಬಂದತ್ತ ಹೊರಟುಹೋದರು. ಅವರು ಹೋದಹೋದಲ್ಲಿ ಕಲ್ಯಾಣದಲ್ಲಿ ಆಚರಣೆಯಲ್ಲಿ ತಂದ ವೀರಶೈವ ತತ್ತ್ವಗಳನ್ನು ಬೀರಿ ಅನೇಕರನ್ನು ತಮ್ಮೊಳಗೆ ಎಳೆದುಕೊಳ್ಳುತ್ತಿದ್ದರು. ಕನ್ನಡಿಗರು ಅಭಿಮಾನಪಡತಕ್ಕ ವಚನವಾಙ್ಮಯ ಬಯಲಿಗೆ ಬಂದುದು ಇದೇ ಕಾಲದಲ್ಲಿ. ಇವರು ತೀರ ಸುಲಭ ಮತ್ತು ಅಜ್ಞರಿಗೂ ಕೂಡ ತಿಳಿಯುವ ಮಾತುಗಳಲ್ಲಿ ತತ್ತ್ವಜ್ಞಾನದ ತಿರುಳನ್ನು ಹೇಳಹತ್ತಿದರು. ಭಕ್ತಿಜ್ಞಾನ ವೈರಾಗ್ಯನೀತಿ ಮೊದಲಾದವುಗಳನ್ನು ಬೋಧಿಸಿದರು. ಜನರಲ್ಲಿ ಸ್ವಾಭಾವಿಕವಾಗಿ ನೆಲೆಗೊಂಡ ಧಾರ್ಮಿಕ ಮತ್ತು ಸಾಮಾಜಿಕ ಕುಂದುಗಳನ್ನು ಸ್ಪಷ್ಟವಾದ ನುಡಿಗಳಿಂದ ಹೊರಗೆಡಹಿದರು. ಜೀವ-ಜಗತ್ತು-ಶಿವ ಇವರ ಪರಸ್ಪರ ಸಂಬಂಧವನ್ನೂ ಇಹಲೋಕ ಪರಲೋಕಗಳ ತಾರತಮ್ಯವನ್ನೂ ಇಹದಲ್ಲಿಯ ಸದ್ವರ್ತನೆಯೇ ಪರಲೋಕದ ದ್ವಾರವನ್ನು ತೆಗೆಯುವ ಬೀಗದ ಕೈ ಎಂಬುದನ್ನು ಮನಸ್ಸಿನಲ್ಲಿ ಒಡಮೂಡುವ ಮಾತುಗಳಿಂದ ಹೇಳಿದರು. ವಚನವಾಙ್ಮಯ ಸರಳ ಗದ್ಯದಲ್ಲಿದ್ದರೂ ಕಾವ್ಯಮಯವಾಗಿರುವುದು. ಪ್ರಾಚೀನ ಭಾರತೀಯರ ಪ್ರಜ್ಞಾತಿಶಯದ ಕುರುಹೆಂದು ಗಣಿಸಲ್ಪಡುವ ಉಪನಿಷತ್ತುಗಳಿಗಿಂತ ಯಾವ ಭಾಗದಲ್ಲಿಯೂ ವಚನಶಾಸ್ತ್ರಗಳು ಕಡಮೆಯಾಗಿಲ್ಲ. ಇಂತಹ ಅಪಾರವಾದ ಅಪೂರ್ವ ಸಾಹಿತ್ಯವನ್ನು ಹುಟ್ಟಿಸಿ ಮಾತೃಭಾಷೆಗೆ ಭೂಷಣಪ್ರಾಯರಾದವರು ಶಿವಶರಣರು. ಇವರಿಂದಲೇ ವೀರಶೈವಮತ ಬಹಳವಾಗಿ ಪಸರಿಸಿತು. ಆ ಕಾಲದಲ್ಲಿದ್ದ ಅನೇಕ ಶೈವಪಂಥಗಳು ತಮ್ಮತಮ್ಮೊಳಗಿನ ವ್ಯತ್ಯಾಸಗಳನ್ನು ಹರಿದೊಗೆದು ಒಂದಾಗಿ ವೀರಶೈವ ಮಾರ್ಗವನ್ನೇ ಅನುಸರಿಸಿ ಅದರ ಬೆಳವಣಿಗೆಗೆ ಕಾರಣವಾದುವು.

ದೇಶದಲ್ಲಿ ಶಾಂತತೆಯಿಲ್ಲದುದರಿಂದ ಬಸವಣ್ಣನವರ ತರುವಾಯ ಸುಮಾರು ನೂರು ವರ್ಷಗಳವರೆಗಾದರೂ ಧರ್ಮಪ್ರಸಾರದ ಕೆಲಸ ಸಾವಕಾಶವಾಗಿ ನಡೆದಿರಬಹುದು. ಹದಿಮೂರನೆಯ ಶತಮಾನದ ಆದಿಯಲ್ಲಿ ಕಲಚೂರ್ಯರೂ ಚಾಲುಕ್ಯರೂ ಉರುಳಿ ಹೊಯ್ಸಳ ಮತ್ತು ಯಾದವರಿಬ್ಬರೇ ಉಳಿದರು. ಕೆಲವರ್ಷಗಳಲ್ಲಿ ಕರ್ನಾಟಕದ ಉತ್ತರ ಭಾಗವನ್ನು ಯಾದವರೂ ದಕ್ಷಿಣ ಭಾಗವನ್ನು ಹೊಯ್ಸಳರೂ ಆಕ್ರಮಿಸಿದರು. ಆಂಧ್ರದೇಶದ ಬಹುಭಾಗವನ್ನು ಆಳುತ್ತಿದ್ದ ಕಾಕತೀಯ ಪ್ರತಾಪರುದ್ರನು ಶೈವಪಕ್ಷಪಾತಿಯಾಗಿದ್ದನು. ಈತನ ದೀಕ್ಷಾಗುರು ವಿಶ್ವೇಶ್ವರ ಶಂಭುವೆಂದೂ ಮತ್ತು ಆ ವಿಶ್ವೇಶ್ವರನ ಸುತ್ತುಮುತ್ತು ನೂರಾರು ವೀರಶೈವಾಚಾರ್ಯರಿರುತ್ತಿದ್ದರೆಂದೂ

ಮಲಕಾಪುರದ ಶಿಲಾಶಾಸನದಿಂದ ತಿಳಿಯುವುದು. ಇದೇ ವಂಶದ ಪ್ರತಾಪ ರುದ್ರನೊಬ್ಬನು ವೀರಶೈವ ಕವಿಗಳಾದ ರಾಘವಾಂಕಾದಿಗಳಿಗೆ ಆಶ್ರಯವನ್ನಿತ್ತಂತೆ ಕಂಡುಬರುವುದು.

ಇದೇ ಕಾಲಕ್ಕೆ ಮುಸಲ್ಮಾನರು ಉತ್ತರ ಹಿಂದೂಸ್ಥಾನವನ್ನು ನುಂಗಿ ದಕ್ಷಿಣಕ್ಕೆ ಕಾಲುಚಾಚುತ್ತಿದ್ದರು. ಬಿರುಗಾಳಿಯಂತೆ ಬಂದ ಮಲಿಕಕಾಫರನ ದಾಳಿಯಿಂದ ದಕ್ಷಿಣದಲ್ಲಿಯ ಹಲವು ರಾಜ್ಯಗಳೂ ಪ್ರಸಿದ್ಧ ದೇವಾಲಯಗಳೂ ನೆಲಕ್ಕುರುಳಿದವು. ಮುಂದೆ ಮುಸಲ್ಮಾನರು ತಮ್ಮ ವರ್ಚಸ್ಸನ್ನು ಬೆಳಸಹತ್ತಿದರು. ತಮ್ಮ ತಮ್ಮೊಳಗೆ ಹೊಡೆದಾಡಿ ನಿರ್ವಿಣ್ಣರಾದ ಯಾದವರೂ ಹೊಯ್ಸಳರೂ ಮುಸಲ್ಮಾನರನ್ನು ತಡೆಯಲು ಸಮರ್ಥರಾಗಿರಲಿಲ್ಲ. ದಕ್ಷಿಣ ಹಿಂದೂಸ್ಥಾನವೂ ಮುಸಲ್ಮಾನಮಯವಾಗುವ ಸಂಭವ ತೋರತೊಡಗಿತು. ಈ ಪ್ರಸಂಗದಲ್ಲಿ ವಿಜಯನಗರ ರಾಜ್ಯ ಸ್ಥಾಪನೆಯಾಗಿ ಹಿಂದೂಧರ್ಮಕ್ಕೆ ಆಶ್ರಯಸ್ಥಾನವಾಯಿತು. ವಿಜಯನಗರದ ರಾಜರಲ್ಲನೇಕರು ಶೈವಪಕ್ಷಪಾತಿಗಳಾಗಿದ್ದರು. ಕೆಲವರು ವೀರಶೈವರ ಆಶ್ರಯದಾತರೂ ಆಗಿದ್ದರು. ರಾಜಮನೆತನದಲ್ಲಿ ಹಲವರು ವೀರಶೈವ ಮತಾವಲಂಬಿಗಳಾಗಿದ್ದರೆಂದು ಊಹಿಸಲು ಅವಕಾಶವಿದೆ. ವಿಜಯನಗರದ ರಾಜ್ಯದಾಡಳಿತೆಯಲ್ಲಿ ಬಹುಜನರು ವರ್ಚಸ್ವಿಗಳಾದ ವೀರಶೈವ ವಿದ್ವಾಂಸರಾಗಿ ಹೋದರು. ಕಾಶೀವಿಲಾಸ ಕ್ರಿಯಾಶಕ್ತಿ ಎರಡನೆಯ ಹರಿಹರನ ಕುಲಗುರುವಾಗಿದ್ದನು.[1] ಈತನಿಗೆ "ರಾಮರಾಜ ಗುರುಮಂಡಲಾಚಾರ್ಯ" ಮತ್ತು "ರಾಮರಾಜ ಗುರುಪಿತಾಮಹ" ಎಂಬ ಬಿರುದುಗಳಿದ್ದವು.[2] ಚಂದ್ರಗುತ್ತಿ, ಆರಗ, ಕೊಂಕಣ ಭಾಗಗಳಿಗೆ ಅಧಿಪತಿಯಾಗಿದ್ದ ಮಾಧವಮಂತ್ರಿ ಕ್ರಿಯಾಶಕ್ತಿ ತನ್ನ ಗುರುವೆಂದು ತಾನು ರಚಿಸಿದ "ತಾತ್ಪರ್ಯ ದೀಪಿಕೆ"ಯಲ್ಲಿ ಹೇಳಿಕೊಂಡಿರುವನು.[3] ಪ್ರಸಿದ್ಧ ತೆಲುಗು ಕವಿಯಾದ ಶ್ರೀನಾಥನು ತನ್ನ ಗ್ರಂಥದಲ್ಲೊಂದನ್ನು ತನ್ನ ಗುರುವಾದ ಕ್ರಿಯಾಶಕ್ತಿಗೆ ಅರ್ಪಿಸಿರುವನು. ಈ ಕ್ರಿಯಾಶಕ್ತಿ ವೀರಶೈವ ಗುರುವೆಂದು ಕೆಲವರ ಅಭಿಪ್ರಾಯ. ವೀರಶೈವರ ಹೆಚ್ಚಳವು ಹೆಚ್ಚಿದುದು ಪ್ರೌಢದೇವರಾಯನ (ಕ್ರಿ.ಶ. ೧೪೧೯–೧೪೪೪) ಕಾಲದಲ್ಲಿ ಲಕ್ಕಣ್ಣ ಮತ್ತು ಜಕ್ಕಣ್ಣ ಮೊದಲಾದ ಅಧಿಕಾರಿಗಳು ಸ್ವತಃ ವೀರಶೈವರಿದ್ದುದರಿಂದ ರಾಜಾಸ್ಥಾನದಲ್ಲಿ ಆಗಾಗ್ಗೆ ವೀರಶೈವ ಮತವನ್ನು ಎತ್ತಿ ಹಿಡಿಯುತ್ತಿದ್ದರು. ಇವರ ಗುರುಗಳು ಪರಮವಿರಕ್ತರೂ ಒಳ್ಳೆಯ ವಿದ್ವಾಂಸರೂ ಆದ ಮಹಲಿಂಗದೇವರು. ಪ್ರಭುದೇವರ ಷಟ್‌ಸ್ಥಲ ವಚನಗಳಿಗೆ ಇವರು ಬರೆದ

---

1. ಎಪಿ. ಕರ್ನಾ. ನಂ. ೫. (ಚೆನ್ನರಾಯಪಟ್ಟಣ ತಾಲ್ಲೂಕು ೨೫೬).

2. ಎಪಿ. ಕರ್ನಾ. ಸಂ. ೧೧. (ದಾವಣಗೆರೆ ೨೩).

3. " " ಸಂ. ೭. (ಸೊರಬ ३೭೫).

ಟೀಕೆಯಿಂದ ಇವರ ವಿದ್ವತ್ತು ಸ್ಪಷ್ಟವಾಗುವುದು. ಇದೇ ಕಾಲದಲ್ಲಿ ನೂರೊಂದು ವಿರಕ್ತರು ವೀರಶೈವಮತ ಪ್ರಸಾರಕ್ಕೋಸುಗ ಬಹಳ ಹೆಣಗಾಡಿದರು. ವಚನವಾಙ್ಮಯವನ್ನು ಉದ್ಧರಿಸಿದರು. ಅದಕ್ಕೆ ಟೀಕೆ ಟಿಪ್ಪಣಿ ಮೊದಲಾದುವುಗಳನ್ನು ಬರೆದರು. ಈ ಕಾಲದಲ್ಲಿ ವೈಷ್ಣವ ಮತವು ಇವರ ಬಲವಾದ ಪ್ರತಿಸ್ಪರ್ಧಿಯಾಗಿತ್ತು. ಆಗಾಗ್ಗೆ ವೀರಶೈವರಿಗೂ ವೀರವೈಷ್ಣವರಿಗೂ ಸ್ಪರ್ಧೆಗಳು ನಡೆಯುತ್ತಿದ್ದುವು. ಚಾಮರಸನ 'ಪ್ರಭುಲಿಂಗಲೀಲೆ' ಇಂತಹ ಸ್ಪರ್ಧೆಯಿಂದಲೇ ಉಂಟಾಯಿತೆಂದು ವೀರಶೈವರಲ್ಲಿ ಪ್ರಚಾರದಲ್ಲಿದ್ದ ಕಥೆಗಳಿಂದ ಗೊತ್ತಾಗುವುದು.[1] ಬಸವಣ್ಣನವರ ತರುವಾಯ ವೀರಶೈವರ ಇತಿಹಾಸದಲ್ಲಿ ಈ ಕಾಲ ಬಲು ಮಹತ್ತ್ವವಾದುದು. ಈ ಕಾಲದಲ್ಲಿ ಈ ಮತಕ್ಕೆ ರಾಜಾಶ್ರಯವೂ ಜನಾಶ್ರಯವೂ ಉಂಟಾದುವು.

ವಿಜಯನಗರದ ದೊರೆಗಳ ಒಡೆತನದಲ್ಲಿಯೇ ವೀರಶೈವ ಸಂಸ್ಥಾನಗಳು ಉದಯಿಸಹತ್ತಿದುವು. ಇಂಥವುಗಳಲ್ಲಿ ಕೆಳದಿ ಸಂಸ್ಥಾನ ಮುಖ್ಯವಾದುದು. ನಮಗೆ ದೊರೆಯುವ ಆಧಾರಗಳಿಂದ ಈ ವಂಶದ ದೊಡ್ಡ ಸಂಕಣ್ಣನಾಯಕನು ವೀರಶೈವ ಮತಪ್ರಸಾರಕ್ಕೆ ಬಲು ಸಹಾಯಕಾರಿಯಾದನೆಂದು ಕಂಡುಬರುವುದು. ಈತನು ಯಾತ್ರೆಯಾಗಿ ಹೊರಟು ದೂರ ದೂರ ದೇಶದಲ್ಲಿರುವ ಪ್ರಸಿದ್ಧ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿದಂತೆ ಪ್ರತೀತಿಯಿದೆ.[2] ಕೆಳದಿಯ ಅರಸರಿಂದ ವೀರಶೈವರಿಗೆ ಬಹಳ ಸಹಾಯವಾಯಿತು. ಈ ಅರಸರ ಆಶ್ರಯದಿಂದ ಹಲವು ವೀರಶೈವ ಧಾರ್ಮಿಕ ಗ್ರಂಥಗಳು ಹೊರಬಿದ್ದುವು. ವೀರಶೈವ ಮತವನ್ನು ಸಂಸ್ಕೃತದಲ್ಲಿ ವಿವರಿಸುವ ಹವ್ಯಾಸ ಈ ಕಾಲದಲ್ಲಿ ವಿಶೇಷವಾಗಿದ್ದಂತೆ ತೋರುವುದು. ಆದುದರಿಂದಲೇ ಸಂಸ್ಕೃತ ಗ್ರಂಥಗಳು ಹೆಚ್ಚಾಗಿ ಹುಟ್ಟಿದವು. ಶಿವತತ್ತ್ವ ರತ್ನಾಕರದ ಕರ್ತೃವಾದ ಬಸವರಾಜ, ಪರ್ವತ ಶಿವಯೋಗಿ, ಮೋನಪ್ಪ, ನಿರ್ವಾಣ ಮಂತ್ರಿ ಮೊದಲಾದವರು ಕೆಳದಿಯರಸರ ಕಾಲದವರು. ಸುಮಾರು ಕ್ರಿ.ಶ. ೧೫೦೦ರಿಂದ ೧೭೫೦ರ ವರೆಗೆ ವೀರಶೈವ ಮತಪ್ರಸಾರವೂ ಅಭ್ಯುದಯವೂ ಬಲು ಜೋರಿನಿಂದ ನಡೆದಂತೆ ತೋರುವುದು. ಕ್ರಿ.ಶ. ೧೫೬೫ರಲ್ಲಿ ವಿಜಯನಗರದ ರಾಜ್ಯ ನಾಶವಾದರೂ ಈ ಮತ ಪ್ರಸಾರಕ್ಕೆ ತೊಂದರೆಯಾದಂತೆ ತೋರುವುದಿಲ್ಲ. ಅನೇಕ ಅಧಿಕಾರಿಗಳು ಕೆಲಮಟ್ಟಿಗೆ ಸ್ವತಂತ್ರ ಸಂಸ್ಥಾನಗಳನ್ನೇ ಸ್ಥಾಪಿಸಹತ್ತಿದರು. ಮುಂದೆ ಬರಬರುತ್ತ ಅಂತಹ ಸಂಸ್ಥಾನಗಳ ಸಂಖ್ಯೆ ಬೆಳೆಯಹತ್ತಿತು. ಆ ಕಾಲದಲ್ಲಿ ವೀರಶೈವ ಗುರುಗಳು ಸಂಕುಚಿತ ಭಾವನೆಯರವರಿದ್ದಿಲ್ಲ. ಅವರು ಧರ್ಮನೀತಿಗಳನ್ನು ಬೋಧಿಸುವುದೇ ತಮ್ಮ ಆಯುಷ್ಯದ ಧ್ಯೇಯವೆಂದು ತಿಳಿದಿದ್ದರು. ಸಾದಾ ಮತ್ತು ಸಾತ್ತ್ವಿಕ ವೃತ್ತಿಯಿಂದ

---

1. ಪ್ರೌಢರಾಯನ ಕಾವ್ಯ. ಸಂಧಿ ೧. ಪದ್ಯ ೩೯ರಿಂದ ಮುಂದೆ.
ಪ್ರೊ. ಬಸವನಾಳರವರ 'ಪ್ರಭುಲಿಂಗಲೀಲೆ' ಪ್ರಸ್ತಾವನೆ. ಪುಟ ೨ ರಿಂದ ೪.

2. ಕೆಳದಿ ನೃಪವಿಜಯ – ತೃತೀಯಾಶ್ವಾಸ.

ಆ ಕಾಲದ ಅಧಿಕಾರಗಳಲ್ಲಿಯೂ ಸಾಮಾನ್ಯರಲ್ಲಿಯೂ ತಮ್ಮ ಬಗ್ಗೆ ಪೂಜ್ಯಭಾವವನ್ನು ನೆಲೆಗೊಳಿಸಿದ್ದರು. ಈ ಕಾಲದಲ್ಲಿಯೇ ಹಲವು ಪಾಳೆಯಗಾರರನ್ನು ಲಿಂಗವಂತ ಧರ್ಮಕ್ಕೆ ಸೇರಿಸಿಕೊಂಡರು. ಹದಿನೆಂಟನೆಯ ಶತಮಾನದ ಆರಂಭಕ್ಕೆ ಕರ್ನಾಟಕದ ಬಹುತರ ಸಂಪೂರ್ಣಭಾಗವನ್ನು ಒಂದಿಲ್ಲೊಂದು ಪ್ರಕಾರದಿಂದ ಲಿಂಗವಂತರೇ ಆಳುತ್ತಿದ್ದರು. ಮೈಸೂರು ಸಂಸ್ಥಾನಾಧಿಪತಿಗಳು ಕ್ರಿ.ಶ. ೧೭೦೪ರ, ವರೆಗೆ ಶುದ್ಧ ಲಿಂಗವಂತರಿದ್ದರು. ಮಸಾಲೆ ಸಾಮಾನುಗಳಿಗೆ ಆಗರವಾದ ಕೊಂಕಣವೆಲ್ಲವೂ ಕೆಳದಿಯರಸರ ಅಧಿಪತ್ಯಕ್ಕೊಳಪಟ್ಟಿತ್ತು. ದಕ್ಷಿಣದಲ್ಲಿ ಬಲು ವೀರರೆಂದು ಹೆಸರಾದ ಕೊಡಗರ ಅರಸರು ಲಿಂಗವಂತರಿದ್ದರು. ಶಿರಸಂಗಿ ಕಿತ್ತೂರು ಮೊದಲಾದ ದೇಸಾಯಿಯವರು ಉತ್ತರ ಕರ್ನಾಟಕದ ಬಹುಭಾಗವನ್ನು ಆಳುತ್ತಿದ್ದರು. ಬಹುತರ ಕರ್ನಾಟಕದಲ್ಲಿ ಗ್ರಾಮಾಧಿಕಾರಿಗಳು (ಗೌಡರು) ಲಿಂಗವಂತರೇ ಇದ್ದಾರೆ. ಆಳುವರಸರು ಯಾರೇ ಇದ್ದರೂ ಭೂಮಿಯ ಒಡೆಯರು ಲಿಂಗವಂತರೇ ಆಗಿದ್ದರೆಂದು ಕಂಡುಬರುವುದು. ಲಿಂಗವಂತರ ಪ್ರತಿಷ್ಠಿತ ಸಂಸ್ಥಾನಗಳನ್ನು ಮುರಿಯಲು ಮೊದಲು ಟಿಪ್ಪುವೂ ಆಮೇಲೆ ಮರಾಠರೂ ಕಾರಣರಾದರು.

ವೀರಶೈವರು ಸ್ವಭಾವತಃ ಶಾಂತರೂ ಕೃಷಿವಾಣಿಜ್ಯಾದಿ ಉದ್ಯೋಗನಿರತರೂ ಇದ್ದಾಗ್ಯೂ ವೀರರೂ ಧೀರರೂ ಪ್ರಸಂಗ ಬಂದಾಗ ಸಾಹಸಿಗಳೂ ಆಗಿರುವರು. ವೀರಶೈವ ಐತಿಹಾಸಿಕ ಪುರುಷರು ನ್ಯಾಯಪಕ್ಷಪಾತಿಗಳೂ ರಾಜಕಾರಣಪಟುಗಳೂ ಹೆಸರಾದ ದಂಡನಾಯಕರೂ ಆಗಿದ್ದರು. ಉದಾಹರಣೆಗಾಗಿ ಲಕ್ಕಣ್ಣ ದಂಡೇಶರನ್ನು ತೆಗೆದುಕೊಳ್ಳಬಹುದು. ಒಬ್ಬ ಪೋರ್ತುಗೀಜ ಗ್ರಂಥಕಾರನು ಲಕ್ಕಣ್ಣನನ್ನು ಬಣ್ಣಿಸಿದ ಬಿಣತಿಯನ್ನು ಓದಿದರೆ ಈ ಮಾತು ಮನದಟ್ಟಾಗುವುದು. ಶಿರಸಂಗಿಯ ಜಾಯಪ್ಪ ದೇಸಾಯಿಯವರು ಪೇಶವಾಯಿಯವರು ದರಬಾರದಲ್ಲಿ ತೋರಿಸುತ್ತಿದ್ದ ಜಾಣ್ಮೆಯ ಬಗ್ಗೆ ಈಗಲೂ ಕೆಲ ವೃದ್ಧರು ಹೇಳುವ ಸಂಗತಿಗಳನ್ನು ಲಕ್ಷ್ಯಕ್ಕೆ ತಂದರೆ ಇವರು ಅಕಬರನ ದರಬಾರದಲ್ಲಿದ್ದ ಬೀರಬಲ್ಲನಿಗೆ ಕಡಮೆಯವರಲ್ಲವೆಂದು ಅನ್ನಿಸುವುದು. ಶೌರ್ಯದಲ್ಲಿ ಕೊಡಗಿನ ವೀರರಾಜೇಂದ್ರ ಮತ್ತು ಕೆಳದಿಯ ದೊಡ್ಡ ಸಂಕಣ್ಣನಾಯಕರಿಗೆ ಸರಿಹೋಲುವವರು ವಿರಳ. ಅದೇಕೆ? ಈ ಮತದ ಲಲನಾಮಣಿಗಳು ಕೂಡ ಮಹಾವೀರರನ್ನು ಬೊಟ್ಟು ಕಚ್ಚಿಸಿರುವರು.

ಮಹಾರಾಷ್ಟ್ರದಲ್ಲಿ ಹಿಂದೂರಾಜ್ಯವನ್ನು ಸ್ಥಾಪಿಸಿದ ಶಿವಾಜಿಯ ಶೌರ್ಯವನ್ನು ಅರಿಯದವರಾರು? ಇಂತಹ ವೀರನು ನಮ್ಮ ಕರ್ನಾಟಕದ ಮೇಲೆ ದಾಳಿಮಾಡಿ ತನ್ನ ಮಲತಮ್ಮನಿಂದ ತಂದೆಯ ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಬರುವಾಗ ದಾರಿಯಲ್ಲಿ ಹುಬ್ಬಳ್ಳಿಯನ್ನು ಸುಲಿದು ರಾಯಗಡದ ಕಡೆಗೆ ತೆರಳಿದನು. ಧಾರವಾಡದಿಂದ ಸವದತ್ತಿಯ ಕಡೆಗೆ ಕೆಲವು ಮೈಲುಗಳ ಮೇಲೆ ಬೆಳವಡಿಯೆಂಬುದೊಂದು ಹಳ್ಳಿ ಈಗಲೂ ಇರುವುದು ಆ ದಾರಿಯಿಂದ ಹೋದವರ ಲಕ್ಷ್ಯದಲ್ಲಿರಬಹುದು. ಈ

ಊರಲ್ಲಿ ಆ ಕಾಲಕ್ಕೆ ಈಶ್ವರಪ್ರಭುವೆಂಬ ದೇಸಾಯಿ ಇದ್ದನು. ಆತನ ಹೆಂಡತಿಯೇ ವೀರಸಾಧ್ವೀಮಣಿ ಮಲ್ಲಮ್ಮ. ಶಿವಾಜಿ ಮಾರ್ಗದಲ್ಲಿ ಬೆಳವಡಿ ಸಂಸ್ಥಾನದೊಳಗಿಂದ ಹಾಯಬೇಕಾಗಿತ್ತು; ಸಂಸ್ಥಾನದ ಪ್ರಜೆಗಳಿಗೆ ತೊಂದರೆ ಕೊಡದೆ ದಾಟಿ ಹೋಗಲು ಅಪ್ಪಣೆಯೂ ದೊರೆತಿತ್ತು. ಆತನ ದಂಡಾಳುಗಳಲ್ಲಿ ಕೆಲವರು ರೈತರಿಗೆ ತೊಂದರೆ ಕೊಟ್ಟಿದ್ದರಿಂದ ಮಲ್ಲಮ್ಮನು ವಿಜಯಿಯಾಗಿ ಪಡೆಸಹಿತ ಮನೆಯ ಕಡೆ ತೆರಳಿದ ಶಿವಾಜಿಯನ್ನು ತಡೆದಳು. ಶಿವಾಜಿಗೆ ಒಂದೆರಡು ದಿವಸಗಳಲ್ಲಿ ಸಂಸ್ಥಾನವನ್ನು ನೆಲಸಮ ಮಾಡುವೆನೆಂಬ ಹೆಮ್ಮೆ. ಆದುದರಿಂದ ಯುದ್ಧಕ್ಕೆ ಆರಂಭವಾಯಿತು. ಮಲ್ಲಮ್ಮನು ಸ್ವತಃ ಶಸ್ತ್ರಧಾರಿಯಾಗಿ ಹೋರಾಡಹತ್ತಿದಳು. ಮೂರು ತಿಂಗಳವರೆಗೂ ಶಿವಾಜಿಗೆ ಹಣಿಯಲಿಲ್ಲ. ಶಿವಾಜಿ ಆಕೆಯ ಶೌರ್ಯಕ್ಕೆ ಮೆಚ್ಚಿ ಆಕೆಯನ್ನು ಮನ್ನಿಸಿ ರಾಯಗಡದ ಕಡೆಗೆ ತೆರಳಿದನು. ದೊಡ್ಡವರ ಮನಸ್ಸು ದೊಡ್ಡದು. ಬಲಿಷ್ಠರಾದ ಬಾದಶಹರಿಗೆ ಕಾಲಸ್ವರೂಪನಾದ ಶಿವಾಜಿಗೆ ಚಿಕ್ಕ ದೇಸಗಿತಿಯ ಹೆಣ್ಣುಮಗಳು ಕೂಡ ಹಣಿಯಲಿಲ್ಲ. ಮರಾಠಿ ಇತಿಹಾಸಕಾರರು ಮಲ್ಲಮ್ಮನು ಜಾತಿಯಿಂದ ಬ್ರಾಹ್ಮಣಳೆಂದು ಕೆಲವರೂ ಪ್ರಭು ಎಂದು ಕೆಲವರೂ ಬರೆದುಕೊಂಡಿದ್ದಾರೆ. ಲಿಂಗವಂತಳೆಂದು ಅನೇಕರಿಗೆ ಗೊತ್ತಿಲ್ಲ. ವೀರಶೈವರ ಇತಿಹಾಸದಲ್ಲಿ ಪ್ರಜ್ವಲಿಸುವ ಇನ್ನೊಬ್ಬ ಲಲನಾಮಣಿ ಇಕ್ಕೇರಿಯ ರಾಣಿಯಾದ ಚೆನ್ನವ್ವಾಜಿ. ಆಕೆ ಚಿಕ್ಕ ಚೆನ್ನಬಸವನನ್ನು ಮುಂದಿಟ್ಟುಕೊಂಡು ಕೊಂಕಣದ ರಾಜ್ಯವನ್ನೆಲ್ಲ ಆಳುತ್ತಿದ್ದಳು. ಆ ಕಾಲಕ್ಕೆ ದಿಲ್ಲಿಯ ಮಹತ್ವಾಕಾಂಕ್ಷಿಯಾದ ಬಾದಶಹ ಔರಂಗಜೇಬನು ಮುಸಲ್ಮಾನರನ್ನು ಕೂಡ ನೋಡದೆ ದಕ್ಷಿಣದ ರಾಜ್ಯಗಳನ್ನೆಲ್ಲ ತಾನೇ ಸ್ವತಃ ದಂಡು ತೆಗೆದುಕೊಂಡು ಬಂದು ಮುರಿದುಹಾಕಿದನು. ಮರಾಟರನ್ನು ಬೇರು ಸಹಿತ ಕಿತ್ತೊಗೆಯಬೇಕೆಂದು ಆತನ ಪ್ರತಿಜ್ಞೆ. ಅದರಂತೆ ಶಿವಾಜಿಯ ಹಿರಿಯ ಮಗನಾದ ಸಂಭಾಜಿಯನ್ನು ಕೊಲ್ಲಿಸಿ ಆತನ ಹೆಂಡತಿಯನ್ನೂ ಮಗನನ್ನೂ ಸೆರೆಹಿಡಿದನು. ಗಟ್ಟಿಗರಾದ ಮರಾಟರೂ ಶಿವಾಜಿಯ ಮತ್ತೊಬ್ಬ ಮಗನಾದ ರಾಜಾರಾಮನನ್ನು ಬೆನ್ನು ಕಟ್ಟಿದರು. ಔರಂಗಜೇಬನು ಮಹಾರಾಷ್ಟ್ರದಲ್ಲಿಯ ಎಲ್ಲ ಸಂಸ್ಥಾನಗಳನ್ನು ಕೈವಶಮಾಡಿಕೊಂಡು ರಾಜಾರಾಮನಿಗೆ ಗುಡ್ಡಗಳಲ್ಲಿ ಕೂಡ ನಿಲ್ಲಲು ಅವಕಾಶ ಕೊಡಲಿಲ್ಲ. ರಾಜಾರಾಮನು ಅತ್ತಿತ್ತ ಅಲೆದಾಡಿ ಬೇಸತ್ತು ದಕ್ಷಿಣದಲ್ಲಿರುವ ತನ್ನ ಬಂಧುಗಳ ಕಡೆಗೆ ಹೋಗಬೇಕೆಂದು ನಿಶ್ಚೈಸಿದನು. ಆದರೆ ಅತ್ತಹೋಗಲು ಚೆನ್ನಮ್ಮನ ರಾಜ್ಯದೊಳಗಿಂದಲೇ ಹಾಯ್ದು ಹೋಗಬೇಕಾಗಿತ್ತು. ಈತನಿಗೆ ಮಾರ್ಗವನ್ನು ಕೊಟ್ಟರೆ ದಿಲ್ಲಿಯ ಬಾದಶಹನು ರೊಚ್ಚಿಗೆದ್ದು ಆಕೆಯ ರಾಜ್ಯವನ್ನೇ ಹಾಳುಮಾಡುವ ಸಂಭವ. ಕೊಡದಿದ್ದರೆ ಮರಾಠರ ವಂಶವೇ ನಿರ್ಮೂಲವಾಗುವ ಪ್ರಸಂಗ. ಆದರೂ ರಾಜಾರಾಮನಿಗೆ ಮಾರ್ಗವನ್ನು ಕೊಟ್ಟಳಷ್ಟೇ ಅಲ್ಲ. ಆತನು ತನ್ನ ಸೀಮೆಯನ್ನು ದಾಟುವವರೆಗೆ ಆತನನ್ನು ರಕ್ಷಿಸುವ ಭಾರವನ್ನು ವಹಿಸಿದಳು. ಸ್ವತಃ ಶಸ್ತ್ರಪಾಣಿಯಾಗಿ ರಾಜಾರಾಮನ ಬೆನ್ನಟ್ಟಿ ಬಂದ ಮೊಗಲ ಪಡೆಯನ್ನು ತಡೆದಳು. ಈ ಕಾಲಕ್ಕೆ ರಾಜಾರಾಮನೂ ಆತನ

ಅನುಯಾಯಿಗಳೂ ಕೊರಳೊಳಗೆ ಲಿಂಗವನ್ನು ಕಟ್ಟಿಕೊಂಡು ಜಂಗಮರ ವೇಷದಿಂದ ಯಾತ್ರಿಕರಂತೆ ಪ್ರವಾಸಮಾಡಿದರು. ರಾಜಾರಾಮನು ತನ್ನ ರಾಜ್ಯದ ಗಡಿಯನ್ನು ದಾಟಿ ಹೋಗುವವರೆಗೆ ಮೊಗಲರನ್ನು ತನ್ನ ಸೀಮೆಯೊಳಗೆ ಕಾಲಿಡಗೊಡಲಿಲ್ಲ. ಅನಂತರ ರಾಜಾರಾಮನು ಬಲುದೂರ ಹೋದನೆಂಬ ಸುದ್ದಿ ಮುಟ್ಟಿದ ಕೂಡಲೇ ಮೊಗಲ ಪಡೆ ಜಿಂಜಿಯ ಕಡೆಗೆ ತೆರಳಿತು. ಈ ಪ್ರಸಂಗದಲ್ಲಿ ಚೆನ್ನಮ್ಮಾಜಿ ತೋರಿಸಿದ ಅತುಲ ಧೈರ್ಯ, ಶೌರ್ಯ, ಸಾಹಸಾದಿ ಗುಣಗಳು ವರ್ಣನೀಯವಾದುವು. ರಾಜಾರಾಮನನ್ನು ಅತಿದೊಡ್ಡ ಪ್ರಾಣಸಂಕಟದಿಂದ ಉಳಿಸಿದ ಶ್ರೇಯಸ್ಸು ಚೆನ್ನಮ್ಮಾಜಿಯದು.

ವೀರಶೈವರ ತತ್ತ್ವಗಳು

ನಮಗೆ ಗೊತ್ತಿದ್ದ ಹಿಂದೂಧರ್ಮದ ಗ್ರಂಥಗಳಲ್ಲಿ ಕರ್ಮಕಾಂಡವನ್ನು ವಿವರಿಸುವ ಗ್ರಂಥಗಳು ಬಹುಪ್ರಾಚೀನವೂ ವಿಪುಲವೂ ಆಗಿರುವುವು. ಕರ್ಮಕಾಂಡ ಮೊದಲಿನದೆಂದೂ ಆಮೇಲೆ ಜ್ಞಾನಕಾಂಡ ಪ್ರಚಾರದಲ್ಲಿ ಬಂದಿರಬೇಕೆಂದೂ ವೈದಿಕ ವಾಙ್ಮಯದ ಅವಲೋಕನದಿಂದ ಕಂಡುಬರುವುದು. ಬರಬರುತ್ತ ಜ್ಞಾನಮಾರ್ಗ ಬೆಳೆದು ಜನಮಾನ್ಯವಾಯಿತು. ಆದರೂ ಜನರು ಕರ್ಮವನ್ನು ತ್ಯಜಿಸಲಿಲ್ಲ. ಹಿಂದೂವೆಂದು ಹೇಳಿಕೊಳ್ಳುವ ಪ್ರತಿಯೊಬ್ಬನ ಜೀವನಕ್ಕೆ ಕರ್ಮದ ಅಗತ್ಯವಿದೆ. ಆದರೂ ಶೈವರು ಮೊದಲಿನಿಂದಲೂ ಕರ್ಮಕ್ಕೆ ಉಚ್ಚಸ್ಥಾನವನ್ನು ಕೊಟ್ಟಿಲ್ಲ. ಕೆಲವು ಶೈವಪಂಥಗಳು ಮಾತ್ರ ಕರ್ಮಕಾಂಡವನ್ನು ಸಂಪೂರ್ಣವಾಗಿ ಇಟ್ಟುಕೊಂಡಿರುವುವು. ವೀರಶೈವ ಮತವು ಇದನ್ನು ಮನ್ನಿಸುವುದಿಲ್ಲ. ವಚನಶಾಸ್ತ್ರದಲ್ಲಿ ಕರ್ಮಕಾಂಡದ ಖಂಡನೆಯಿದೆ. ವೀರಶೈವರಿಗೆ ಕರ್ಮವೆಂದರೆ ಪ್ರತಿದಿವಸ ಅಗತ್ಯವಾಗಿ ಮಾಡತಕ್ಕ ಇಷ್ಟಲಿಂಗ ಪೂಜಾವಿಧಿ. ಇದು ಇವರು ಅಗತ್ಯ ಮಾಡತಕ್ಕ ಕ್ರಿಯೆ. ಯಾವಾಗಲೂ ಶರೀರದ ಮೇಲೆ ಧರಿಸಿರುವ ಲಿಂಗದ ಸಂಪರ್ಕದಿಂದ ಶರೀರ ಶುದ್ಧವಾಗಿರುವುದೆಂದೂ ಶರೀರಶುದ್ಧಿಗೆ ಕರ್ಮಾದಿಗಳ ಅಗತ್ಯವಿಲ್ಲವೆಂದೂ ವೀರಶೈವರ ನಂಬುಗೆ. ವೀರಶೈವರು ಅಗತ್ಯವಾಗಿ ಆಚರಿಸತಕ್ಕವುಗಳಲ್ಲಿ ಅಷ್ಟಾವರಣಗಳು ಮುಖ್ಯವಾದುವು. ಅವಾವುವು ಎಂದರೆ:–

೧. **ಗುರು** : ವೀರಶೈವರಲ್ಲಿ ಗುರುವಿನ ಯೋಗ್ಯತೆ ಬಲು ದೊಡ್ಡದು. ಶೈವರಲ್ಲಿಯಾದರೂ ಶಿವನೇ ಗುರುರೂಪದಿಂದ ಬಂದು ಭಕ್ತರನ್ನು ಉದ್ಧರಿಸುವನೆಂದು ನಂಬುಗೆಯಿದೆ. ಭಕ್ತನಿಗೆ ಗುರು ಶಿವನಿಗಿಂತ ಶ್ರೇಷ್ಠನು. ಏಕೆಂದರೆ ಪ್ರತ್ಯಕ್ಷವಾಗಿ ಭಕ್ತನಲ್ಲಿ ಅಧ್ಯಾತ್ಮಶಕ್ತಿಯನ್ನು ಹೆಚ್ಚಿಸಿ ಮೋಕ್ಷಮಾರ್ಗವನ್ನು ತೋರಿಸಿಕೊಡುವವನು ಗುರು. ಗುರುಗಳಲ್ಲಿ ೧. ದೀಕ್ಷಾಗುರು ೨. ಶಿಕ್ಷಾಗುರು ೩. ಮೋಕ್ಷಗುರು ಎಂದು ಮೂರು ವಿಧ. ಒಬ್ಬನೇ ಗುರು ಈ ಮೂರೂ ಸ್ಥಾನಗಳಲ್ಲಿರಬಹುದು.

೨. **ಲಿಂಗ** : ಶಿವನ ನಿರಾಕಾರ ಸ್ವರೂಪದ ಗುರುತೇ ಲಿಂಗ. ಗುರು ತನ್ನ ಅಧ್ಯಾತ್ಮಿಕ ಶಕ್ತಿಯ ಬಲದಿಂದ ಶಿಷ್ಯನಲ್ಲಿರುವ ಶಿವರೂಪವಾದ ಚೈತನ್ಯವನ್ನು ಗಟ್ಟಿಗೊಳಿಸಿ ಅವನ ಹಸ್ತದಲ್ಲಿಡುವನು. ಇದಕ್ಕೆ ಇಷ್ಟಲಿಂಗವೆನ್ನುವರು. ಇದು ಜ್ಯೋತಿ. ಇದು ಕಣ್ಣು ಮನಸ್ಸು ಭಾವಗಳಲ್ಲಿ ಇಷ್ಟ, ಪ್ರಾಣ, ಭಾವಲಿಂಗಗಳ ರೂಪದಿಂದ ಬೆಳಗುವುದು. ಇದನ್ನು ಗುರು ದೀಕ್ಷಾಕಾಲದಲ್ಲಿ ಕೊಡುವನು. ಶಿಷ್ಯನು ಅದನ್ನು ಸದಾಕಾಲದಲ್ಲಿಯೂ ಶರೀರದ ಮೇಲೆ ಧರಿಸಬೇಕು. ಮತ್ತು ಪ್ರತಿದಿವಸ ವಿಧಿಯುಕ್ತವಾಗಿ ಪೂಜಿಸಬೇಕು. ಶಿವನನ್ನು ಬೇರೆ ರೂಪದಿಂದ ಪೂಜಿಸುವುದನ್ನು ವೀರಶೈವರು ಒಪ್ಪುವುದಿಲ್ಲ.

೩. **ಜಂಗಮ** : ಈ ಶಬ್ದದ ಮೂಲಾರ್ಥ ಸ್ಥಿರವಾಗಿ ಒಂದೇ ಕಡೆಗೆ ಇರದಂತಹ ಮತ್ತು ಯಾವಾಗಲೂ ಸಂಚರಿಸುವಂತಹ ವ್ಯಕ್ತಿ ಎಂದಿರುವುದು. ಆದುದರಿಂದ ತಾನು ಪ್ರಪಂಚಕ್ಕೆ ಅಂಟಿಕೊಳ್ಳದೆ ನೀತಿ – ಭಕ್ತಿ – ಜ್ಞಾನಗಳನ್ನು ಉಪದೇಶಿಸುತ್ತ ಯಾವಾಗಲೂ ಸಂಚಾರದಲ್ಲಿರುವ ವೈರಾಗ್ಯಮೂರ್ತಿಗೆ ಜಂಗಮನೆಂದು ಹೆಸರು. ಸಂಗನಬಸವನು:– "ಜಂಗಮವೆಂತವನೆಂದೊಡೆ ನಿರ್ಲೇಪ, ನಿರುಪಾಧಿಕ, ನಿರ್ಬೋಧ, ನಿರಾಶ್ರಿತ, ನಿಷ್ಕಾರಣ, ನಿರ್ಲಂಪಟ. ಜಂಗಮ ಈ ಸದ್ಗುಣಭರಿತನಾದೊಡೆ ಜಂಗಮವೆಂಬೆನಯ್ಯಾ"[1] ಎಂದು ಹೇಳಿರುವನು.

ಗುರು–ಲಿಂಗ–ಜಂಗಮ ಇವರ ಸ್ಥಾನ ವೀರಶೈವರಲ್ಲಿ ಬಹು ಉಚ್ಚತಮವಾದುದು. ಇವರಲ್ಲಿ ಹೆಚ್ಚು ಕಡಿಮೆಯೆಂಬ ಬೇಧವಿಲ್ಲ. ಶಿವನು ಭಕ್ತರ ಉದ್ಧಾರಕ್ಕಾಗಿ ಜಂಗಮರೂಪದಿಂದ ಬರುವನೆಂದು ನಂಬುಗೆಯಿದ್ದುದರಿಂದ ಜಂಗಮನು ಶಿವನ ಸಾಕಾರರೂಪವೆಂದು ತಿಳಿಯಲ್ಪಡುವನು. ಆದುದರಿಂದ ಗುರು ಲಿಂಗ ಜಂಗಮರಲ್ಲಿ ಹೆಚ್ಚು ಕಡಮೆಯೆಂಬ ಭೇದವನ್ನೆಣಿಸಕೂಡದು.

ವೀರಶೈವರ ಗುರು–ಲಿಂಗ–ಜಂಗಮವನ್ನು ಬೌದ್ಧರ ಬುದ್ಧ–ಧರ್ಮ–ಸಂಘ ಇವಕ್ಕೆ ಹೋಲಿಸಬಹುದು. ಗುರು ಬೋಧಕನಾದುದರಿಂದ ಬುದ್ಧನಿಗೂ, ಲಿಂಗ ಪರಬ್ರಹ್ಮನಾದ ಶಿವನ ನಿಷ್ಕಲರೂಪವಿದ್ದುದರಿಂದ ಧರ್ಮಕ್ಕೂ, ಸಮುಚ್ಚಯಾರ್ಥದಲ್ಲಿ ಉಪಯೋಗಿಸಿದ ಜಂಗಮ ಸಂಘಕ್ಕೂ ಸರಿಹೋಲುವುದು. ಬೌದ್ಧಧರ್ಮದಲ್ಲಿ ಬುದ್ಧ–ಧರ್ಮ–ಸಂಘಕ್ಕೆ ಇರುವ ಸ್ಥಾನ ವೀರಶೈವರಲ್ಲಿ ಗುರು–ಲಿಂಗ–ಜಂಗಮರಿಗೆ ಇರುವುದು.

೪. **ಪಾದೋದಕ** : ಗುರು ಮತ್ತು ಜಂಗಮ ಇವರು ಬಲು ಶುದ್ಧ ಮತ್ತು ಪವಿತ್ರವಾದ ಆಚರಣೆಯುವರಿರುವುದರಿಂದ ಅವರು ಮುಟ್ಟಿದ ಪದಾರ್ಥಗಳು ಶುದ್ಧವಾಗುವುವೆಂದು ವೀರಶೈವರ ನಂಬುಗೆ. ಗುರುವಿನಿಂದ ಪಡೆದ ಪಾದೋದಕ

---

1. *ಸಂಗನ ಬಸವನ ವಚನಗಳು. ಶಿವಾನುಭವ ಗ್ರಂಥಮಾಲೆ–೧೨. ಪುಟ ೨೯–೩೦.*

ಮನಸ್ಸನ್ನೂ ಶರೀರವನ್ನೂ ಶುದ್ಧಮಾಡುವುದು. ಗುರುವಿನ ಮೇಲಿರುವ ಭಕ್ತನ ಅಚಲವಾದ ಭಕ್ತಿಯನ್ನೂ ಶ್ರದ್ಧೆಯನ್ನೂ ಪಾದೋದಕ ಸೂಚಿಸುವುದು.

೫. **ಪ್ರಸಾದ** : ಪ್ರಸಾದ ಶಬ್ದದ ಮೂಲಾರ್ಥ ಅನುಗ್ರಹ ಎಂದಿರುವುದು. ಇದು ಗುರುವಿನ ಅನುಗ್ರಹವನ್ನು ಸೂಚಿಸುವುದು. ಸಾಮಾನ್ಯವಾಗಿ ವೀರಶೈವರು ಅನ್ನ ಪವಿತ್ರವಾದುದೆಂದು ತಿಳಿಯುವರು. ಉಚ್ಛಿಷ್ಟದೋಷ ಇವರಲ್ಲಿ ಇಲ್ಲ. ಗುರು ಮುಟ್ಟಿ ಶಿಷ್ಯನಿಗೆ ಕರುಣೆಯಿಂದ ಕೊಟ್ಟ ಅನ್ನವೇ ಪ್ರಸಾದ. ಪ್ರಸಾದವೆಂದರೆ ಭುಕ್ತ ಶೇಷವಲ್ಲ. ಪ್ರಸಾದವನ್ನು ಸ್ವೀಕರಿಸುವವನು ಪ್ರಸಾದಿ. ಪ್ರಸಾದಿಯ ಸ್ವರೂಪವನ್ನು ಸಂಗನ ಬಸವನು ತನ್ನದೊಂದು ವಚನದಲ್ಲಿ ಹೀಗೆ ಹೇಳಿರುವನು. "ಅಯ್ಯಾ, ನಿರ್ವಂಚಕತ್ವದಿಂದ ದಶವಿಧ ಲಿಂಗಂಗಳಿಗೆ ಏಕವಿಶಂತಿ ಮಂತ್ರಸ್ಮರಣೆಯಿಂದ ದಶವಿಧ ಪಾದೋದಕವನರ್ಪಿಸಿ ಸಂತೃಪ್ತಾನಂದದಲ್ಲಿ ಜಲದಲ್ಲಿ ಪರಿಣಾಮಿಸಬಲ್ಲಡೆ ನಿಜ ಪ್ರಸಾದಿವೆಂಬೆನಯ್ಯ."[1]

ವೀರಶೈವರು ಪಾದೋದಕ, ಪ್ರಸಾದ ಇವುಗಳನ್ನು ಆಧ್ಯಾತ್ಮಿಕ ಉನ್ನತಿಯ ಸಲುವಾಗಿಯೂ ಸಾಮಾಜಿಕ ಐಕ್ಯತೆಯ ಸಲುವಾಗಿಯೂ ಆಚರಣೆಯಲ್ಲಿ ತಂದಿರಬಹುದು. ಪಾದೋದಕ ಪ್ರಸಾದಗಳಿಂದ ಗುರು–ಭಕ್ತ–ದೇವ ಇವರು ಒಂದೇ ಯೋಗ್ಯತೆಯವರು. ಇವರಲ್ಲಿ ತಾರತಮ್ಯ ಭಾವವನ್ನು ಎಣಿಸಲಾಗದೆಂಬುದನ್ನು ಆಚರಣೆಯಿಂದ ತೋರಿಸಿಕೊಡುವರು.

೬. **ವಿಭೂತಿ** : ಇದು ಶೈವಧರ್ಮದ ಎಲ್ಲ ಪಂಥಗಳಲ್ಲಿಯೂ ಪವಿತ್ರವಾದುದು. ವಿಭೂತಿಯೆಂದರೆ ಸಾಮಾನ್ಯವಾದ ಬೂದಿಯೆಂದರ್ಥವಲ್ಲ. ವಿಭೂತಿಯನ್ನು ಮಾಡುವ ಕ್ರಮ ಅಷ್ಟು ಸುಲಭವಲ್ಲ. ಪ್ರತಿಯೊಬ್ಬ ಶೈವನೂ ವಿಭೂತಿಯನ್ನು ಧರಿಸುವನು. ಆದರೆ ವೀರಶೈವರಿಗೆ ಇದು ಒಂದು ಮಹತ್ತ್ವದ ಆವರಣವಾಗಿದೆ.

೭. **ರುದ್ರಾಕ್ಷಿ** : ರುದ್ರನು ತ್ರಿಪುರಗಳನ್ನು ದಹಿಸುವಾಗ ಆತನ ನೇತ್ರಗಳಿಂದ ಬಿದ್ದ ಜಲಬಿಂದುಗಳಿಂದ ಇವು ಹುಟ್ಟಿದುವಾದುದರಿಂದ ಇವಕ್ಕೆ ರುದ್ರಾಕ್ಷಗಳೆಂದು ಹೆಸರುಂಟಾಯಿತು ಎಂದು ಪುರಾಣಗಳು ಹೇಳುವುವು. ಎಲ್ಲ ಪಂಥಗಳ ಶೈವರೂ ರುದ್ರಾಕ್ಷಿಗಳನ್ನು ಧರಿಸುವರು.

೮. **ಮಂತ್ರ** : ವೈದಿಕಧರ್ಮದವರಿಗೆ ಗಾಯತ್ರೀಮಂತ್ರ ಎಷ್ಟು ಮಹತ್ತ್ವವಾದುದೂ ಪವಿತ್ರವಾದುದೂ ಆಗಿರುವುದೋ ಪಂಚಾಕ್ಷರೀಮಂತ್ರ ಶೈವರಿಗೆ ಅಷ್ಟೇ ಮಹತ್ತ್ವವಾದುದೂ ಆಗಿದೆ. ವೀರಶೈವರು ಇದರ ಹೊರತು ಮತ್ತಾವ ಮಂತ್ರವನ್ನೂ ಉಪಯೋಗಿಸುವುದಿಲ್ಲ. ಮೇಲೆ ಹೇಳಿದ ಅಷ್ಟಾವರಣಗಳು ವೀರಶೈವರ ಆಚರಣೆಗೆ ಸಂಬಂಧಿಸಿದುವು.

---

1. *ಸಂಗನ ಬಸವನ ವಚನಗಳು. ಪುಟ ೩೬.*

ವೀರಶೈವರಲ್ಲಿ ಮುಖ್ಯವಾಗಿ ದೀಕ್ಷೆ, ಲಗ್ನ, ಅಂತ್ಯವಿಧಿಯೆಂಬ ಮೂರು ಸಂಸ್ಕಾರಗಳಿರುವುವು. ಇವುಗಳಲ್ಲಿ ವೀರಶೈವರು ತಮ್ಮ ಮಂತ್ರಗಳನ್ನೇ ಉಪಯೋಗಿಸುವರು. ಇವುಗಳನ್ನು ಮಾಡುವ ಪದ್ಧತಿಯಾದರೂ ವೈದಿಕ ಧರ್ಮದ ಪದ್ಧತಿಯಿಂದ ಅನೇಕ ವಿಷಯಗಳಲ್ಲಿ ಬೇರೆಯಾಗಿರುವುದು. ದೀಕ್ಷೆ ಮತ್ತು ಮದುವೆಗಳಲ್ಲಿ ಇವರು ಅಗ್ನಿಗಳನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ಶಿವನ ಪಂಚಮುಖಿಗಳ ದ್ಯೋತಕವಾದ ಪಂಚಕಲಶಗಳನ್ನು ಹೂಡಿ ಅವನ್ನೇ ಸಾಕ್ಷಿಯಾಗಿಟ್ಟು ತಮ್ಮ ವಿಧಿಗಳನ್ನು ನಡೆಯಿಸಿಕೊಳ್ಳುವರು. ಅಂತ್ಯವಿಧಿಯಲ್ಲಿಯಾದರೂ ಇವರು ತಮ್ಮದೇ ಒಂದಾದ ಕ್ರಮವನ್ನು ಏರ್ಪಡಿಸಿಕೊಂಡಿರುವರು. ಬ್ರಾಹ್ಮಣ ಧರ್ಮದಲ್ಲಿಯಂತೆ ಇವರು ಶರೀರಗಳನ್ನು ಸುಡುವುದಿಲ್ಲ, ಹುಡಿಯುವರು. ಇವಲ್ಲದೆ ಇವರಲ್ಲಿ ನಾಮಕರಣ, ಚೌಲ ಮೊದಲಾದ ಹಲಕೆಲವು ಸಂಸ್ಕಾರಗಳುಂಟು. ಆದರೂ ಇವೆಲ್ಲವುಗಳನ್ನು ತಮ್ಮ ಪದ್ಧತಿಯ ಪ್ರಕಾರ ಮಾಡುವರು. ವೀರಶೈವರು ತಮ್ಮ ಎಲ್ಲ ಗೃಹ್ಯಕರ್ಮಗಳನ್ನು ಜಂಗಮರಿಂದ ಮಾಡಿಸುವರು. ವೀರಶೈವರು ಸೂತಕಗಳನ್ನು ಪಾಲಿಸುವುದಿಲ್ಲ.

ಲಕುಲೀಶ ಪಾಶುಪತ ಮತ್ತು ಶೈವಸಿದ್ಧಾಂತಗಳ ತತ್ತ್ವಗಳಿಗೂ ವೀರಶೈವರ ತತ್ತ್ವಗಳಿಗೂ ಅಂತರವಿದೆ. ವೀರಶೈವರು ತಮ್ಮದೇ ಆದ ಪಾರಿಭಾಷಿಕ ಶಬ್ದಗಳನ್ನು ತಮ್ಮ ತತ್ತ್ವಜ್ಞಾನದಲ್ಲಿ ಪ್ರಯೋಗಿಸಿರುವರು. ಇವನ್ನು ಯಾವ ಕಾಲದಿಂದ ಪ್ರಯೋಗಿಸಹತ್ತಿರುವರೆಂಬುದನ್ನು ನಿಶ್ಚಯವಾಗಿ ಹೇಳಲು ಬರುವುದಿಲ್ಲ. ಸೂಕ್ಷ್ಮವಾಗಿ ವೀರಶೈವ ತತ್ತ್ವಜ್ಞಾನವನ್ನು ಪರೀಕ್ಷಿಸಿದರೆ ಅದರಲ್ಲಿ ಶಿವ-ಜೀವ-ಜಗತ್ತು ಇವುಗಳ ಬಗ್ಗೆ ಕಲ್ಪನೆ ನಿಶ್ಚಿತವಾಗಿ ಹೀಗೆಯೇ ಇರುವುದೆಂದು ಹೇಳುವುದು ಕಠಿಣ. ಚೆನ್ನಬಸವಣ್ಣನವರ 'ಕರಣ ಹಸುಗೆ'ಯಲ್ಲಿ ಜಗದುತ್ಪತ್ತಿ ಹೀಗಿದೆ:

"ಮೊದಲು ನಿಷ್ಕಲ ಬ್ರಹ್ಮವು. ಆ ನಿಷ್ಕಲ ಬ್ರಹ್ಮನಿಂದ ಜ್ಞಾನಚಿತ್ತು. ಆ ಚಿತ್ತಿನಿಂದ ಚಿನ್ನಾದ, ಚಿದ್‌ಬಿಂದು, ಚಿತ್‌ಕಳೆಗಳು ಹುಟ್ಟಿದುವು. ಆ ಚಿನ್ನಾದ, ಚಿದ್ಬಿಂದು, ಚಿತ್ಕಳೆ, ಮೂಲಚಿತ್ತು ಎಂಬ ಚತುರ್ವಿಧ ಘಟ್ಟಿಗೊಂಡು ಅಖಂಡ ಗೋಳಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತು. ಆ ಮಹಾಲಿಂಗದಲ್ಲಿ ಒಂದಾನೊಂದು ಬೀಜದಲ್ಲಿ ವೃಕ್ಷೋತ್ಪತ್ತಿಯಾದ ಹಾಂಗೆ ಪಂಚಮುಖವನ್ನುಳ್ಳ ಸದಾಶಿವ ಮೂರ್ತಿಯಾದನು. ಆ ಸದಾಶಿವನ ಸದ್ಯೋಜಾತಾದೀಶಾನಾಂತ್ಯಮಾ ದೈದುವದನಂ ಗಳಿಂದ ಹುಟ್ಟಿದ ಪೃಥಿವ್ಯಾದಿ ಐದು ತತ್ತ್ವಂಗಳೇಕೀಕರಿಸಿ ಚತುರ್ದಶ ಭುವನ ಚರಾಚರ ಪ್ರಾಣಿಗಳ ಸಮೂಹವನ್ನುಳ್ಳ ವಿಶ್ವೋತ್ಪತ್ತಿಯಾದ ಕಾರಣ ಜಗದುತ್ಪತ್ತಿಗೆ ಮೂಲಕಾರಣವಾಗಿರುವಂಥಾದ್ದೇ ಸದಾಶಿವಮೂರ್ತಿಯು."[1]

---

1. ಕರಣ ಹಸುಗೆ-ಶಿವಾನುಭವಶಾಸ್ತ್ರ, ಪುಟ ೨೦

ಈ ಅವತರಣಿಕೆಯಲ್ಲಿ ಜಗದುತ್ಪತ್ತಿ ನಿಷ್ಕಲಬ್ರಹ್ಮದಿಂದುಂಟಾಗಿದೆಯೆಂದೂ ಋಗ್ವೇದ ಮಂಡಲ ೧೦ ಸೂಕ್ತ ೭೨ರಲ್ಲಿ ಹೇಳಿದ ಜಗದುತ್ಪತ್ತಿಗೆ ಸರಿಹೋಲುವುದೆಂದೂ ಕಂಡುಬರುವುದು.[1] ಉಪನಿಷತ್ತುಗಳ ಕಾಲದಲ್ಲಿ ಅಸತ್ತಿನಿಂದ ಸತ್ತೂ ಅದರಿಂದ ಜಗತ್ತೂ ಉದ್ಭವಿಸಿದುವೆಂದು ಹೇಳಿದೆ.[2]

ಕ್ರಿಯಾಸಾರಕರ್ತೃವಾದ ನೀಲಕಂಠನು ವೀರಶೈವಮತ ಶಕ್ತಿವಿಶಿಷ್ಟಾದ್ವೈತ ಪರವಾಗಿರುವುದೆಂದು ಹೇಳಿರುವನು. ವೀರಶೈವರಲ್ಲಿ ಅನೇಕರು ಇದನ್ನು ನಂಬುವರು. ಮಗ್ಗೆಯ ಮಾಯಿದೇವರು ವೀರಶೈವರ ತತ್ತ್ವಜ್ಞಾನ ಅದ್ವೈತಪರವಾಗಿರುವುದೆಂದು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸುವರು. ವಚನಶಾಸ್ತ್ರಗಳಲ್ಲಿ ಕೆಲವು ಕಡೆಗೆ ಈ ಅಭಿಪ್ರಾಯಗಳಿಗೆ ಪುಷ್ಟಿ ದೊರೆಯುವುದು. ಅನೇಕ ವಚನಗಳಲ್ಲಿ ಅದ್ವೈತ ವಿಶಿಷ್ಟಾದ್ವೈತಗಳ ಛಾಯೆ ಒಡಮೂಡಿರುವುದು. ದ್ವೈತವನ್ನೂ ಕೂಡ ವಚನಗಳಲ್ಲಿ ಕಾಣಬಹುದು. ಉಪನಿಷತ್ತುಗಳು ಹೇಗೆ ಅದ್ವೈತ ವಿಶಿಷ್ಟಾದ್ವೈತ ದ್ವೈತಮತಗಳಿಗೆ ಆಧಾರಗಳಾಗಿರುವುವೋ ಹಾಗೆಯೇ ವಚನಗಳಾದರೂ ಈ ಮೂರೂ ತತ್ತ್ವಗಳನ್ನು ಪ್ರತಿಪಾದಿಸುತ್ತವೆಂದು ಹೇಳಬಹುದು. ಭಕ್ತಿ ಜ್ಞಾನ ವೈರಾಗ್ಯಗಳು ಆಧ್ಯಾತ್ಮಿಕೋನ್ನತಿಗೆ ಅಗತ್ಯವಾದುವು. ವೀರಶೈವರ ವಚನಗಳಲ್ಲಿ ಅನೇಕ ಕಡೆ ಶೈವರ ಮೂವತ್ತಾರು ತತ್ತ್ವಗಳು, ಷಡಧ್ವಗಳು, ಮಲಗಳು ಮೊದಲಾದವುಗಳ ಉಲ್ಲೇಖಗಳು ಬರುವುವು. ವೀರಶೈವರ ಅದ್ವೈತ ಶಂಕರಾಚಾರ್ಯರ ಮಾಯಾವಾದವನ್ನು ಒಳಗೊಂಡಂತೆ ತೋರುವುದಿಲ್ಲ. ವೀರಶೈವರು ಮೊದಲು ತತ್ತ್ವಜ್ಞಾನಕ್ಕೆ ಮಹತ್ತ್ವ ಕೊಡದೆ ಧರ್ಮನೀತಿಗೆ ಬಹಳ ಮಹತ್ತ್ವಕೊಟ್ಟಂತೆ ತೋರುವುದು. ಶುದ್ಧಾಚರಣೆ, ಪವಿತ್ರಜೀವನ, ಶಿವನಲ್ಲಿ ದೃಢವಾದ ಭಕ್ತಿ ಮತ್ತು ಲಿಂಗಪೂಜೆ ಇವು ಮನಸ್ಸನ್ನು ತೊಳೆದು ನಿರ್ಮಲವಮಾಡಿ ಜೀವನವನ್ನು ಸಂಸಾರಕ್ಕೆ ಅಂಟಿಕೊಳ್ಳದಂತೆ ಮಾಡುವುದೆಂದು ತಿಳಿದಿದ್ದರು. ಭಕ್ತಿ ಜ್ಞಾನ ವೈರಾಗ್ಯ ದ್ವೈತ ವಿಶಿಷ್ಟಾದ್ವೈತ ಅದ್ವೈತ ಇವೆಲ್ಲವುಗಳನ್ನು ಷಟ್‌ಸ್ಥಲ ಸಿದ್ಧಾಂತ ಒಳಗೊಂಡಂತೆ ತೋರುವುದು. ಷಟ್‌ಸ್ಥಲಗಳಲ್ಲಿ ಮೊದಲಿನವೆರಡಾದ ಭಕ್ತ ಮತ್ತು ಮಹೇಶ ಸ್ಥಲಗಳು ಭಕ್ತಿಯನ್ನೂ ದ್ವೈತವನ್ನೂ, ಮೂರನೆಯ ಮತ್ತು ನಾಲ್ಕನೆಯವಾದ ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳು ಜ್ಞಾನವನ್ನೂ ವಿಶಿಷ್ಟಾದ್ವೈತವನ್ನೂ ಕಡೆಯವೆರಡಾದ ಶರಣ ಮತ್ತು ಐಕ್ಯಸ್ಥಲಗಳು ವೈರಾಗ್ಯವನ್ನೂ ಅದ್ವೈತವನ್ನೂ ಸೂಚಿಸುತ್ತವೆ ಎಂದು ತಿಳಿಯಬಹುದು. ಭಕ್ತ ಮಹೇಶ ಸ್ಥಲಗಳಲ್ಲಿ ಸ್ವಾಮಿ ಭೃತ್ಯ ಸಂಬಂಧವಿದೆ. ಸ್ವಾಮಿ ಶಿವನು. ಭೃತ್ಯನು ಜೀವನು. ಆದುದರಿಂದ ಇಲ್ಲಿ ದ್ವೈತಭಾವವಿದೆಯೆಂದು ಕಲ್ಪಿಸಲಾಗಿದೆ. ಆತ್ಮನು ಹೆಚ್ಚು ಹೆಚ್ಚು ಶುದ್ಧನಾದಂತೆ ಈ ದ್ವೈತಭಾವ ಕಡಮೆಯಾಗುತ್ತ ಹೋಗುವುದು.

---

1. 'ಅಸತಃ ಸದ್‌ಜಾಯತ' – ಋಗ್ವೇದ ೧೦ : ೭೨.

2. ಛಾಂದೋಗ್ಯೋಪನಿಷತ್ – ಶ್ವೇತಕೇತು ಮತ್ತು ಅವನ ತಂದೆಯ ಸಂಭಾಷಣೆ.

ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳಲ್ಲಿ ಸತಿ–ಪತಿ ಭಾವವಿದೆ. ಇವರಿಬ್ಬರೂ ಶರೀರದಿಂದ ಬೇರೆಯಾದರೂ ಒಂದೇ ಮನಸ್ಸುಳ್ಳವರೂ ಒಂದೇ ಭಾವವುಳ್ಳವರೂ ಆಗಿರುವರು; ಆದುದರಿಂದ ಇಲ್ಲಿ ವಿಶಿಷ್ಟಾದ್ವೈತವಿದೆಯೆಂದು ತಿಳಿಯಲಾಗಿದೆ. ಶರಣ ಐಕ್ಯಸ್ಥಲಗಳಲ್ಲಿ ಶಿವಜೀವರ ಸಂಪೂರ್ಣ ಐಕ್ಯವೂ ಸಂಸಾರದಿಂದ ಅಲಿಪ್ತತೆಯೂ ಇರುವುದರಿಂದ ಇವುಗಳಲ್ಲಿ ಅದ್ವೈತವಿದೆಯೆಂದು ಗ್ರಹಿಸಲಾಗಿದೆ. ಈ ಆರು ಸ್ಥಲಗಳನ್ನು ನಿಚ್ಚಣಿಕೆಯ ಆರು ಮೆಟ್ಟಲುಗಳಿಗೆ ಹೋಲಿಸಬಹುದು. ಈ ಸ್ಥಲಗಳು ಆತ್ಮನ ಅಧ್ಯಾತ್ಮಿಕೋನ್ನತಿಯ ಮೆಟ್ಟಲುಗಳಾಗಿರುವುವು. ವೀರಶೈವರು ಶಿವ ಜೀವೈಕ್ಯವನ್ನು – ಮುಕ್ತಿಯನ್ನು – ಬಯಲು ಮತ್ತು ನಿರ್ವಯಲು ಎಂಬುದಾಗಿ ಬಣ್ಣಿಸುವುದರಿಂದ ಬೌದ್ಧರ ನಿರ್ವಾಣದ ಛಾಯೆ ಇದರಲ್ಲಿ ಇರಬಹುದೇ ಎಂದು ಸಂಶಯ ಬರುವುದು.

ಶಿವಯೋಗಿ ಶಿವಾಚಾರ್ಯನು 'ಸಿದ್ಧಾಂತ ಶಿಖಾಮಣಿ'ಯಲ್ಲಿ ಈ ಆರು ಸ್ಥಲಗಳು ಅಂಗಲಿಂಗ ಪ್ರಭೇದದಿಂದ ೧೦೧ ಸ್ಥಲಗಳಾದ ಕ್ರಮವನ್ನೂ ಅವುಗಳ ವಿವರಣೆಯನ್ನೂ ಹೇಳಿರುವನು. ಚೆನ್ನಬಸವಣ್ಣನವರು ಈ ಆರು ಸ್ಥಲಗಳನ್ನು ೨೧೬ ಭಾಗಗಳಾಗಿ ಮಾಡಿರುವರು. ಅವರ ವಿಭಾಗಕ್ರಮ ಬಹು ಸರಳವಾಗಿರುವುದು. ಆರು ಸ್ಥಲಗಳಲ್ಲಿ ಪ್ರತಿಯೊಂದನ್ನು ಆರು ಭಾಗವಾಗಿ ಮಾಡಿರುವರು. ಅವು ೩೬ ಆಗುವುವು. ಇವುಗಳಿಗೆ ತತ್ತ್ವಗಳೆನ್ನುವರು. ಇವು ಶೈವರ ೩೬ ತತ್ತ್ವಗಳಿಂದ ಭಿನ್ನವಾದುವು. ಈ ೩೬ರಲ್ಲಿ ಪ್ರತಿಯೊಂದೂ ೬ ಭಾಗಗಳಾಗಿ ಒಟ್ಟು ೨೧೬ ತತ್ತ್ವಗಳು ಅಥವಾ ಸ್ಥಲಗಳಾಗಿರುವುವು.

ಮಗ್ಗೆಯ ಮಾಯಿದೇವರು ತಮ್ಮ ಅನುಭವ ಸೂತ್ರದಲ್ಲಿ ಷಟ್‌ಸ್ಥಲಗಳನ್ನು ಕೆಳಗಿನಂತೆ ವಿವರಿಸಿರುವರು.[1]

ಸ್ಥಲವೆಂದರೆ ಪರಬ್ರಹ್ಮ. ಪರಬ್ರಹ್ಮ ತನ್ನೊಳಗೆ ಅಡಗಿಕೊಂಡಿರುವ ಪರಾಶಕ್ತಿಯ ಸ್ಫುರಣದಿಂದ ಅಂಗಸ್ಥಲವೆಂದೂ ಲಿಂಗಸ್ಥಲವೆಂದೂ ಎರಡು ಪ್ರಕಾರವಾಗಿರುವುದು. ಅಂಗಸ್ಥಲವೆಂದರೆ ಜೀವನು. ಲಿಂಗಸ್ಥಲವೆಂದರೆ ಶಿವನು. ಆಕಾಶವನ್ನು ಘಟಾಕಾಶ ಮಹಾಕಾಶವೆಂದು ವಿಭಾಗಿಸಿದರೆ ಹೇಗೆ ಅದರಿಂದ ಆಕಾಶಕ್ಕೆ ಬಾಧೆಯಿಲ್ಲವೋ ಹಾಗೆ ಅಂಗಲಿಂಗ ಭೇದವನ್ನು ಹೊಂದಿದ ಪರಬ್ರಹ್ಮನಿಗೆ ಬಾಧೆಯಿಲ್ಲ. ಇಲ್ಲಿ ಕಾಶ್ಮೀರತ್ರಿಕ ಧರ್ಮದಲ್ಲಿ ಕಂಡುಬರುವ ಆಭಾಸದ ಛಾಯೆ ಮೂಡಿದೆ. ಇದೇ ಪ್ರಕಾರ ಶಕ್ತಿ ಸ್ವಸ್ವಾತಂತ್ರ್ಯ ಬಲದಿಂದ ಎರಡು ಭಾಗವಾಗಿ ಒಂದು ಕಲಾರೂಪದಿಂದ ಶಿವನಿಗೂ ಮತ್ತೊಂದು ಭಕ್ತಿರೂಪದಿಂದ ಜೀವನಿಗೂ ಹೊಂದಿಕೊಳ್ಳುವುದು.

---

1. ಅನುಭವಸೂತ್ರ. ಅಧಿಕರಣ ೩ ಮತ್ತು ೪. ರಾವ್‌ಬಹದ್ದೂರ್ ವಾರದ ಅವರ ಆಶ್ರಮದಿಂದ ಸೊಲ್ಲಾಪುರದಲ್ಲಿ ೧೯೦೯ರಲ್ಲಿ ಪ್ರಸಿದ್ಧಿಸಿದ ಪ್ರತಿ. ಚೆನ್ನಬಸವಣ್ಣನ 'ಮಿಶ್ರಾರ್ಪಣ'ದಲ್ಲಿಯೂ ಇದೇ ವಿಷಯವಿದೆ. ಶಿವಾನುಭವಶಾಸ್ತ್ರ : ಪುಟ ೧೩೫ ನೋಡಿರಿ.

ಕಲಾಶಕ್ತಿ ಸಂಸಾರದ ಜಂಜಡವನ್ನು ಉಂಟುಮಾಡುವುದು. ಭಕ್ತಿ ಶಕ್ತಿ ಸಂಸಾರದ ತೊಡಕನ್ನು ಹರಿಯಲು ಸಹಕಾರಿಯಾಗುವುದು. ಲಿಂಗಸ್ಥಲ ಮೂರು ಪ್ರಕಾರವಾಗಿರುವುದು.

೧. **ಭಾವಲಿಂಗ** : ಇದು ನಿಷ್ಕಲವೂ ಭಾವಗ್ರಾಹ್ಯವೂ ಪರಾತ್ಪರವೂ ಸತ್ ಸ್ವರೂಪ ಉಳ್ಳದ್ದೂ ಬಾಹ್ಯಾಭ್ಯಂತರವ್ಯಾಪ್ತವಾದುದೂ ಆಗಿದ್ದು ಬಿಂದು ಸ್ವರೂಪ ದಿಂದಿರುವುದು. ಇದು ಚಿಚ್ಛಕ್ತಿಯಿಂದ ಸ್ಫುರಣವನ್ನು ಹೊಂದಿ ಆದ್ಯಂತ ಶೂನ್ಯವೂ ಅಮಳವೂ ಪರಿಪೂರ್ಣವೂ ಸೂಕ್ಷ್ಮವೂ ಪರಾತ್ಪರವೂ ಅನಾಮಯವೂ ಅಪ್ರಮೇಯವೂ ಭಾವೈಕಗಮ್ಯವೂ ಆಗಿರುವ ಮಹಾಲಿಂಗವಾಗುವುದು. ಚಿಚ್ಛಕ್ತಿ ಶಾಂತ್ಯತೀತೋತ್ತರ ಕಲಾಯುಕ್ತವಾದುದು. ಪುನಃ ಪರಾಶಕ್ತಿಯಿಂದ ಸ್ಫುರಣ ಹೊಂದಿ ಜ್ಯೋತಿರ್ಮಯವೂ ನಿಜವೂ ಅಖಂಡವೂ ಅತೀಂದ್ರಿಯಾರ್ಥವೂ ಜ್ಞಾನೋಪಲಬ್ಧವೂ, ಅಮೃತವೂ, ಪರಿಣಾಮ ಬೀಜರೂಪವೂ ಆಗಿರುವ ಪ್ರಸಾದ ಲಿಂಗವಾಗುವುದು. ಇದಕ್ಕೆ ಸಾದಾಖ್ಯ ತತ್ತ್ವವೆನ್ನುವರು. ಪರಾಶಕ್ತಿ ಶಾಂತ್ಯತೀತ ಕಲಾಯುಕ್ತವಾದುದು.

೨. **ಪ್ರಾಣಲಿಂಗ** : ಇದು ನಿಷ್ಕಲವೂ ಮನೋಗ್ರಾಹ್ಯವೂ ಚಿದ್ರೂಪವೂ ಸೂಕ್ಷ್ಮವೂ ಅಭ್ಯಂತರವ್ಯಾಪ್ತವೂ ಆಗಿದ್ದು ನಾದರೂಪದಿಂದ ಇರುವುದು. ಇದು ಆದಿಶಕ್ತಿಯಿಂದ ಸ್ಫುರಣಹೊಂದಿ ಅಂತರಂಗ ಬಹಿರಂಗ ವ್ಯಾಪಕವೂ ಅಮೂರ್ತ ಜ್ಯೋತಿರ್ಮಯವೂ ಪುರುಷವೂ ಪರಾಖ್ಯವೂ ಆದ ಚರಲಿಂಗವಾಗುವುದು. ಆದಿಶಕ್ತಿ ಶಾಂತಿಕಲಾಯುಕ್ತ ವಾಗಿರುವುದು. ಪುನಃ ಇಚ್ಛಾಶಕ್ತಿಯಿಂದ ಸ್ಫುರಣಹೊಂದಿ ವಿದ್ಯಾಕಲಾಕಲಿತ ರೂಪಶೋಭಿತವೂ ದಿವ್ಯಪ್ರಭಾಪಟಲವುಳ್ಳದ್ದೂ ಏಕಮುಖ ವಾಗಿರುವುದೂ ಪ್ರಶಾಂತವಾದುದೂ ಆಗಿರುವ ಶಿವಲಿಂಗವಾಗುವುದು. ಇಚ್ಛಾಶಕ್ತಿ ವಿದ್ಯಾಕಲೆಯಿಂದ ಕೂಡಿದುದು.

೩. **ಇಷ್ಟಲಿಂಗ** : ಇದು ಸಕಲವೂ ದೃಕ್‌ಕಲಾಗ್ರಾಹ್ಯವೂ ಆನಂದರೂಪವೂ ಸ್ಥೂಲವೂ ಬಾಹ್ಯವೂ ಕಲಾಯುಕ್ತವೂ ಆಗಿರುವುದು. ಇದು ಭಕ್ತರ ಇಷ್ಟಾರ್ಥವನ್ನು ಕೊಡುವುದಾದುದರಿಂದ ಇದಕ್ಕೆ ಇಷ್ಟಲಿಂಗ ಎಂದು ಹೆಸರು. ಇದು ಜ್ಞಾನಶಕ್ತಿಯಿಂದ ಸ್ಫುರಣಹೊಂದಿ ಕರ್ತೃತತ್ತ್ವವುಳ್ಳದ್ದೂ ಸರ್ವೋಪದೇಶ ವಿಧಿ ತಂತ್ರಕೃತ ಪ್ರತಿಷ್ಠವಾದುದೂ ತೇಜೋನಿಧಿಯೂ ಪರಮಪಾರಸುಖಾಂಬುರಾಶಿಯೂ ಬುದ್ಧಿಪದದಲ್ಲಿರುವುದೂ ಆಗಿರುವ ಗುರುಲಿಂಗವಾಗುವುದು. ಜ್ಞಾನಶಕ್ತಿ ಪ್ರತಿಷ್ಠಾಕಲೆಯಿಂದೊಡಗೂಡಿರುವುದು. ಇದು ಪುನಃ ಕ್ರಿಯಾಶಕ್ತಿಯಿಂದ ಸ್ಫುರಣಹೊಂದಿ ಸಕಲತತ್ತ್ವನಿವಾಸಹೇತುವೂ ಆಧಾರಭೂತವೂ ಅಚಲವೂ ಚಿತ್ತದಿಂದ ತಿಳಿಯಲು ಸಾಧ್ಯವೂ ನಿವೃತ್ತಿಮಾರ್ಗಪರವೂ ಆದ ಆಚಾರಲಿಂಗವಾಗುವುದು. ಕ್ರಿಯಾಶಕ್ತಿ ನಿವೃತ್ತಿ ಕಲೆಯಿಂದೊಡಗೂಡಿರುವುದು. ಅಂಗಸ್ಥಲ ಮೂರು ಪ್ರಕಾರವಾಗಿರುವುವು:

೧. **ಯೋಗಾಂಗ** : ಇದು ಶಿವಯೋಗ ಸುಖವನ್ನುಂಟುಮಾಡಿ ಕೊಡುವುದು. ಇದು ಕಾರಣ ಶರೀರದಿಂದ ಸುಷುಪ್ತಿ ಅವಸ್ಥೆಯಲ್ಲಿ ಇರುವುದು. ಇದಕ್ಕೆ ಪ್ರಾಜ್ಞ ರೂಪವಿರುವುದು. ಇದರಿಂದ ಐಕ್ಯ ಮತ್ತು ಶರಣ ಎಂಬ ಎರಡು ಸ್ಥಲಗಳಾಗುವುವು. ಐಕ್ಯಸ್ಥಲಕ್ಕೆ ಮರಸ ಭಕ್ತಿಯೂ ಶರಣಸ್ಥಲಕ್ಕೆ ಆನಂದ ಭಕ್ತಿಯೂ ಕೂಡಿಕೊಂಡಿರುವುವು.

೨. **ಭೋಗಾಂಗ** : ಶಿವನೊಡಗೂಡಿ ಸುಖವನ್ನು ಭೋಗಿಸುವುದರಿಂದ ಇದಕ್ಕೆ ಭೋಗಾಂಗವೆನ್ನುವರು. ಇದು ಸೂಕ್ಷ್ಮಶರೀರದ ಸ್ವಪ್ನಾವಸ್ಥೆಯಲ್ಲಿರುವುದು. ಇದರ ರೂಪವು ತೈಜಸವಾಗಿರುವುದು. ಇದರಿಂದ ಪ್ರಾಣಲಿಂಗಿ ಪ್ರಸಾದಿ ಎಂಬ ಎರಡು ಸ್ಥಲಗಳಾಗುವುವು. ಪ್ರಾಣಲಿಂಗಿ ಸ್ಥಲಕ್ಕೆ ಅನುಭವ ಭಕ್ತಿ, ಪ್ರಸಾದಿ ಸ್ಥಲಕ್ಕೆ ಅವಧಾನ ಭಕ್ತಿ ಕೂಡಿರುವುವು.

೩. **ತ್ಯಾಗಾಂಗ** : ಸಂಸಾರಭ್ರಾಂತಿಯನ್ನು ತ್ಯಜಿಸುವುದರಿಂದ ತ್ಯಾಗಾಂಗವೆನ್ನುವರು. ಇದು ಸ್ಥೂಲ ಶರೀರದಿಂದ ಜಾಗ್ರದವಸ್ಥೆಯಲ್ಲಿರುವುದು. ಇದರ ರೂಪ ವಿಶ್ವ. ಇದರಲ್ಲಿ ಮಹೇಶ ಮತ್ತು ಭಕ್ತ ಎಂದು ಎರಡು ಸ್ಥಲಗಳು. ಮಹೇಶಸ್ಥಲಕ್ಕೆ ನೈಷ್ಠಿಕಾಭಕ್ತಿ, ಭಕ್ತಸ್ಥಲಕ್ಕೆ ಶ್ರದ್ಧಾಭಕ್ತಿ ಹೊಂದಿಕೊಂಡಿರುವುವು.

ಈ ಎಲ್ಲ ವಿಷಯಗಳನ್ನು ಹೆಚ್ಚು ವಿಸ್ತಾರವಾಗಿ ಶಿವಯೋಗಿ ಶಿವಾಚಾರ್ಯರು 'ಸಿದ್ಧಾಂತ ಶಿಖಾಮಣಿ'ಯಲ್ಲಿಯೂ ಗುಬ್ಬಿಯ ಮಲ್ಲಣಾಚಾರ್ಯರು ತಮ್ಮ 'ಗಣ ಭಾಷ್ಯ ರತ್ನಮಾಲೆ' ಮೊದಲಾದ ಗ್ರಂಥಗಳಲ್ಲಿಯೂ ವಿವರಿಸಿರುವರು. ವಚನಗಳಲ್ಲಿಯೂ ಅಲ್ಲಲ್ಲಿ ಈ ತತ್ತ್ವಗಳ ವಿವರಣೆ ಕಂಡುಬರುವುದು.

ವೀರಶೈವರ ಷಟ್‌ಸ್ಥಲಕ್ಕೂ ಜೈನರ ಗುಣಸ್ಥಾನಗಳಿಗೂ ಬಹಳ ಸಾಮ್ಯವಿದೆಯಾದರೂ ವೀರಶೈವರು ಜೈನರಿಂದ ಷಟ್‌ಸ್ಥಲದ ವಿಚಾರವನ್ನು ತೆಗೆದುಕೊಂಡರೆಂದು ಹೇಳಲು ಬರುವುದಿಲ್ಲ. ಏಕೆಂದರೆ ಷಟ್‌ಸ್ಥಲಗಳಿಗೂ ಗುಣ ಸ್ಥಾನಗಳಿಗೂ ವೈಷಮ್ಯವುಂಟು. ಗುಣಸ್ಥಾನಗಳು ಹದಿನಾಲ್ಕು, ಸ್ಥಲಗಳು ಆರು. ಗುಣಸ್ಥಾನದಲ್ಲಿ ಆತ್ಮನು ಸ್ಥಾನದಿಂದ ಸ್ಥಾನಕ್ಕೆ ಏರುವಾಗ, ತಪ್ಪಿದರೆ ಕೆಳಗಿಳಿಯಲೂಬಹುದು. ವೀರಶೈವರ ಸ್ಥಲದಲ್ಲಿ ಒಮ್ಮೆ ಆತ್ಮನು ಸ್ಥಲದಿಂದ ಸ್ಥಲಕ್ಕೆ ಏರಹತ್ತಿದರೆ ಅವ್ಯಾಹತವಾಗಿ ಸಾಗುವನು. ಎಂಥ ವಿಘ್ನಗಳೂ ಆತನನ್ನು ಕೆಳಗೆ ದೂಡಲಾರವು. ಜೈನರ ಗುಣಸ್ಥಾನಗಳನ್ನು ಹತ್ತುವುದು ಬಲು ಕಠಿಣ. ಸ್ವಲ್ಪ ತಪ್ಪಾದರೆ ಸ್ಥಾನಚ್ಯುತಿಯಾಗುವುದು. ಎಲ್ಲ ಜೀವಿಗಳಿಗೆ ಕಡೆಯ ಸ್ಥಾನಕ್ಕೆ ಮುಟ್ಟಲು ಸುಲಭ ಸಾಧ್ಯವಲ್ಲ. ಆತ್ಮನಿಗೆ ಅನೇಕ ಜನ್ಮಗಳೂ ಅನೇಕ ಯುಗಗಳೂ ಕೂಡ ಬೇಕಾಗಬಹುದು. ಸೃಷ್ಟಿಯ ಆದಿಯಿಂದ ಇಲ್ಲಿಯವರೆಗೆ ೨೪ ಜನರು ಕಡೆಯ ಸ್ಥಾನಕ್ಕೆ ಮುಟ್ಟಿರುವರು. ವೀರಶೈವರಲ್ಲಿ ಇದೇ ಜನ್ಮದಲ್ಲಿ ಧ್ಯೇಯವನ್ನು ಸಾಧಿಸಲು ಸಾಧ್ಯವಿದೆ. ಬೌದ್ಧ ಧರ್ಮದಲ್ಲಿಯೂ ಕೂಡ ವೀರಶೈವರ ಷಟ್‌ಸ್ಥಲದ ಸಾಮ್ಯ ಬಹಳವಾಗಿದೆ. ಡಾ. ಎ. ಜೆರಿಡೇಲಕೀಥ್ ಎಂಬ ವಿದ್ವಾಂಸರು ತಮ್ಮ 'ಹಿಂದೂಸ್ಥಾನ

ಮತ್ತು ಸಿಂಹಳ ದ್ವೀಪದಲ್ಲಿ ಬೌದ್ಧಧರ್ಮ' ಎಂಬ ಗ್ರಂಥದಲ್ಲಿ 'ಅಭಿಭಾಯತನ' ಎಂದು ಕರೆಯಲ್ಪಡುವ ಜೀವಿಯನ್ನು ಶುದ್ಧಮಾಡಿ ನಿರ್ವಾಣಕ್ಕೆ ಹೊಂದಿಸುವ, ಎಂಟು ಪಾವಟಿಗೆಗಳನ್ನು ವಿವರಿಸಿರುವರು.

ಅದರ ಸಾರಾಂಶ ಹೀಗಿದೆ:

ಪರಿಮಿತ ಅಥವಾ ಅಪರಿಮಿತವಾದ, ನೀಲ ಹಳದಿ ಕೆಂಪು ಇಲ್ಲವೆ ಬಿಳುಪು ಬಣ್ಣದವಾದ, ಬಾಹ್ಯರೂಪಗಳನ್ನು ಚಿಂತಿಸುತ್ತ, ಅವುಗಳ ನಿಜವಾದ ಅಶಾಶ್ವತತೆಯನ್ನು ಬಗೆಗಾಣುವುದೂ ತನ್ಮೂಲಕ ಮನಃಪ್ರಪಂಚವನ್ನು ಶೂನ್ಯವಾಗಿಸಿಕೊಳ್ಳುವುದೂ ಯೋಗಾಭ್ಯಾಸದ ಪಾವಟಿಗೆಗಳು. ಇವನ್ನು ತಿಳಿಯಲು ಬಹುಕಷ್ಟ. ಈ ಯೋಗಾಭ್ಯಾಸಕ್ಕೆ ಸಮನಾದವು 'ವಿಮೋಕ್ಷ'ದ ಮೊದಲ ಮೂರು ಹಂತಗಳು. ತನ್ನ ಭೌತರೂಪವನ್ನು ಕುರಿತು ಮೊದಲು, ಆಮೇಲೆ ಬಾಹ್ಯರೂಪವನ್ನು ಕುರಿತು ಚಿಂತಿಸಿದಾಗ, ದೃಷ್ಟಿ ಅಂತ್ಯೋದ್ದೇಶದಲ್ಲಿ ತೀವ್ರವಾಗಿ ನೆಟ್ಟು, ಬಳಿಕ ವಸ್ತುಕಲ್ಪನೆಯನ್ನೂ ವೇದನಾನುಭವವನ್ನೂ ದಾಟಿ, ಬಹುರೂಪತೆಗಳ ಭಾವನೆಯನ್ನೂ ಅದುಮಿದಾಗ ಮೇರೆಯಿಲ್ಲದ ಆಕಾರದ ಭಾವನೆಯೊಂದು ಮಾತ್ರ ಬಗೆಯಲ್ಲಿ ಮೂಡುವುದು. ('ಅಕಾಸಾಞ್ಚ') ಇದೇ ನಾಲ್ಕನೆಯ ಹಂತ. ಇದಾದ ಬಳಿಕಣ ಹಂತವೆಂದರೆ ಮೇರೆ ಗಾಣದ ಪ್ರಜ್ಞೆಯ ಅನುಭವ (ವಿಞ್ಞಾನಾಞ್ಚ'). ಆರನೆಯ ಹಂತದಲ್ಲಿ ಮನಃಪ್ರಪಂಚದಲ್ಲಿ ಯಾವುದೂ ಗೋಚರಿಸದೆ ಇರುವ ಭಾವನೆ ('ಆಕಿಞ್ಚಞ್ಞಾಯತನ'). ಏಳನೆಯ ಹಂತದಲ್ಲಿ ಭಾವನೆಗಳ ಅಸ್ತಿತ್ವವಾಗಲಿ ನಾಸ್ತಿತ್ವವಾಗಲಿ ಗ್ರಹಿಕೆಗೆ ಬಾರದು ('ನೇವಸಞಾಸಞಾಯತನ').ಕೊನೆಗೆ ಎಂಟನೆಯ ಹಂತದಲ್ಲಿ ವೇದನಾನುಭವವೂ ಭಾವನೆಗಳೂ ಸಂಪೂರ್ಣವಾಗಿ ನಿಗ್ರಹವಾಗಿರುವುವು. ('ಸಞಾವೇದಯಿತ ನಿರೋಧ').[1]

---

1. More abstruse are the positions of mastery (ಅಭಿಭಾಯತನಾನಿ)which are essentially modes of contemplating external forms, finite or boundless, and coloured blue, yellow, red, white, and appreciating their true impermanance and thus presumably rendering vacant the mind. Akin to these exercises are the first three of the stages of deliverance (ವಿಮೋಕ್ಷ) which seem to be, first, the contemplation by a man of his own material form, then external form, and then attainment of inteness. Then by passing beyond any conception of matter or idea of sensation and suppressing the idea of multiformity, he attains the stage of mind of which the only idea present is the infinity

ಮೇಲಿನ ಅವತರಣಿಕೆಯಲ್ಲಿ ಬಂದಿರುವ ಮೊದಲಿನ ಮೂರು ಪಾವಟಿಗೆಗಳಿಂದೊಡಗೂಡಿದ ಬೌದ್ಧರ "ವಿಮೋಕ್ಷ-ವಿಮೋಕ್ಷ-ಬಿಡುಗಡೆ" ಎಂಬುದನ್ನು ವೀರಶೈವರ ಭಕ್ತಸ್ಥಲಕ್ಕೆ ಹೋಲಿಸಬಹುದು. ಭಕ್ತಸ್ಥಲದಲ್ಲಿ ಇಷ್ಟಲಿಂಗ ಪೂಜೆ ಅಗತ್ಯವಾಗಿದೆ. ಇಷ್ಟಲಿಂಗಕ್ಕೆ ಕಂಥೆಯನ್ನು ಕೂಡಿಸಿ ಅದನ್ನು ದಿಟ್ಟಿಸಿ ನೋಡುವುದು ವೀರಶೈವ ಶಿವಪೂಜೆಯ ಪ್ರಧಾನವಾದ ಅಂಗ. ಇಷ್ಟಲಿಂಗ ಪಂಚಸೂತ್ರಕ್ಕೆ ಸರಿಯಾಗಿರಬೇಕು. ಧ್ಯಾನದಲ್ಲಿ ಕುಳಿತ ಶಿವಯೋಗಿಯ ಪೀಠದ ಅಳತೆ, ಆತನ ಇಷ್ಟಲಿಂಗ ಸಹಿತವಾದ ಹಸ್ತದಿಂದೊಡಗೂಡಿದ ಭುಜದ ಸುತ್ತಳತೆ - ಇವು ಯಾವ ಪ್ರಮಾಣದಲ್ಲಿರುವವೋ ಅದೇ ಪ್ರಮಾಣದಲ್ಲಿ ಲಿಂಗದ ಕೆಳಗಿನ ಪೀಠ, ಮೇಲಿನ ಪೀಠ, ಕೆಳಗಿನ ಪೀಠದಿಂದ ಮೇಲಿನ ಪೀಠದವರೆಗಿರುವ ಎತ್ತರ, ಮೇಲಿನ ಪೀಠದಿಂದ ಪಿಂಡದ ತುದಿಯವರೆಗೆ ಇರುವ ಎತ್ತರ, ಪಿಂಡದ ಸುತ್ತಳತೆ ಇವು ಇರುವುದು. ಪಂಚಸೂತ್ರವೆಂಬುದು. ಇದರ ಮೇಲಿಂದ ವೀರಶೈವರ ಇಷ್ಟಲಿಂಗವೆಂದರೆ ಧ್ಯಾನದಲ್ಲಿ ಮಗ್ನನಾದ ಶಿವಯೋಗಿಯ ಆಕೃತಿ ಎಂದು ಗಣಿಸಬಹುದು. ಇದು ಸರಿಯಾದಲ್ಲಿ ಬೌದ್ಧರ ಮೊದಲನೆಯ ಪಾವಟಿಗೆಯಲ್ಲಿ ಹೇಳಿರುವ ನೀಲಿ, ಹಳದಿ, ಕೆಂಪು, ಬಿಳಿಯ ಬಣ್ಣವುಳ್ಳ ತನ್ನ ಪ್ರಾಕೃತ ಸ್ವರೂಪವನ್ನು ಧ್ಯಾನಿಸುವುದೂ, ವೀರಶೈವರ ಭಕ್ತಸ್ಥಲದಲ್ಲಿಯ ಇಷ್ಟಲಿಂಗ ಪೂಜೆಯೂ ಸಮಾನ ಎಂದು ಅನ್ನಬಹುದು. ಬೌದ್ಧರಲ್ಲಿರುವ ಉಳಿದ ಐದು ಪಾವಟಿಗೆಗಳು ವೀರಶೈವರ ಉಳಿದ ಐದು ಸ್ಥಲಗಳಿಗೆ ತಾತ್ತ್ವಿಕ ದೃಷ್ಟಿಯಿಂದ ಸರಿ ಬೀಳುವುವು. ಇವುಗಳಲ್ಲಿ ಬಹಳ ಸಾಮ್ಯವಿರುವುದರಿಂದ ವೀರಶೈವರು ಬೌದ್ಧರಿಂದ ಷಟ್‌ಸ್ಥಲದ ವಿಚಾರವನ್ನು ತೆಗೆದುಕೊಂಡು ಬೆಳೆಸಿದರೆಂದು ಊಹಿಸಲು ಅವಕಾಶವಿದೆ. ಆದರೆ ಅದು ಸರಿಯಲ್ಲವೆಂದು ಸೂಚಿಸಬಹುದು. ಏಕೆಂದರೆ ಡಾ. ಕೀಥ್ ಅವರೇ ಅದೇ ಪುಸ್ತಕದ ೧೪೫ನೆಯ ಪುಟದಲ್ಲಿ 'ಅತ್ಯಂತಿಕ ಫಲವನ್ನು ಸಾಧಿಸುವುದಕ್ಕಾಗಿ,

---

of space (ಕಾಅಸಾಞ್ಞ). On this follows a stage in which the infinity or unboundedness of intellest (ವಿಞ್ಞಾನಾಞ್ಞ) is alone present. The next stage if reached when there is nothing at all present to the mind (ಆಕಿಞ್ಞಞ್ಞಾಯತನ). Then is achieved the stage when neither the presence of ideas nor the absence of ideas is psecifically Present (ನೇವಸಞಾಸಞಾಯತನ) finally is attained the stage where there is suppresion of both sensation and idea (ಸಞಾವೇದಯಿತ ನಿರೋಧ).

-Buddhist Philosophy in India and Ceylon, pp. 123-124.

ಅಂತಃಕರಣ ವೃತ್ತಿಯ ನಿಯತವಾದ ಸಂಯಮನದ ಕಲ್ಪನೆಯನ್ನು ಬೌದ್ಧಧರ್ಮ ಯೋಗದಿಂದ ಬಳಸಿಕೊಂಡಿದೆ"[1] ಎಂದು ಒಪ್ಪಿಕೊಂಡಿರುವರು.

ಬೌದ್ಧರ ಈ ಪಾವಟಿಗೆಗಳು ಯೋಗದಿಂದ ತೆಗೆದುಕೊಂಡವು ಎಂಬುದು ಅವರ ಈ ವಾಕ್ಯದಿಂದ ಸ್ಪಷ್ಟವಾಗುವುದು. ಯೋಗ ಶೈವಧರ್ಮದ ಒಂದು ಪಂಥವೆಂಬುದೂ ವೀರಶೈವಧರ್ಮ ತತ್ತ್ವಗಳಲ್ಲಿ ಯೋಗ ಪದೇ ಪದೇ ಬರುವದೆಂಬುದೂ ತಜ್ಞರಿಗೆ ಗೊತ್ತಿದ್ದ ವಿಷಯ. ಆದುದರಿಂದ ಷಟ್‌ಸ್ಥಲ ಯೌಗಿಕ ಮಾರ್ಗಕ್ಕನುಸರಿಸಿ ವೀರಶೈವರಲ್ಲಿ ಹುಟ್ಟಿ ಬೆಳೆಯಿತೆಂಬುದನ್ನು ಒಪ್ಪಿಕೊಳ್ಳಬಹುದು.

ವೈಷ್ಣವ ಮತ

ಋಗ್ವೇದ ಸಂಹಿತೆಯಲ್ಲಿ ವಿಷ್ಣುಪರವಾದ ಸೂಕ್ತಗಳಿವೆಯೆಂದೂ ವೇದಕಾಲದಲ್ಲಿ ವಿಷ್ಣು ಅಂತಹ ಮಹತ್ತ್ವದ ದೇವತೆಯಾಗಿದ್ದಿಲ್ಲವೆಂದೂ ಆತನು ಸೂರ್ಯನಿಂದ ಭಿನ್ನನಲ್ಲವೆಂದೂ ಹಿಂದೆ ಹೇಳಿದೆ. ವೇದದಲ್ಲಿ ಆತನು ಮೂರು ಹೆಜ್ಜೆಗಳಿಂದ ಆಕಾಶವನ್ನು ಆಕ್ರಮಿಸಿ ತ್ರಿವಿಕ್ರಮನಾಗಿರುವನು.[2] ಮೊದಲು ಇದು ಸೂರ್ಯಕ್ರಮಣದ ವರ್ಣನೆಯಾಗಿತ್ತು[3]; ಆದರೆ ಪೌರಾಣಿಕ ಯುಗದಲ್ಲಿ ವಿಷ್ಣು ವಾಮನನಾಗಿ ಬಂದು ಬಲಿಯಿಂದ ಮೂರುಪಾದ ಭೂಮಿಯನ್ನು ಬೇಡಿ ಅವನನ್ನು ಪಾತಾಳಕ್ಕೆ ಮೆಟ್ಟಿದನೆಂಬ ಕಥೆ ರೂಢಿಯಲ್ಲಿ ಬಂದಿತು. ವೇದದಲ್ಲಿ ವಿಷ್ಣುರಕ್ಷಕನೂ ಪರಹಿತೇಚ್ಛುವೂ ಆಗಿದ್ದು ಲೋಕಕಲ್ಯಾಣಕ್ಕಾಗಿ ತ್ರಿವಿಕ್ರಮನಾಗಿರುವನು: ದ್ಯಾವಾಪ್ರಿಥಿವಿಗಳನ್ನು ಸ್ಥಾಪಿಸಿ ರಕ್ಷಿಸುತ್ತಿರುವನು. ಈತನು ಮುಖ್ಯ ಸೂರ್ಯದೇವನಲ್ಲ; ಆದರೂ ಸೌರದೇವತೆಗಳಾಗ ಸವಿತೃ, ಪೂಷನ್ ಮೊದಲಾದವರಂತೆ ಸೂರ್ಯನಿಂದ ಭಿನ್ನನಲ್ಲ. ಬ್ರಾಹ್ಮಣಗಳ ಕಾಲದಲ್ಲಿ ವಿಷ್ಣುವಿನ ಮಹತ್ತ್ವ ಇದಕ್ಕೂ ಹೆಚ್ಚಾಗಿ ಬೆಳೆಯಿತು.[4] ಆಗ ಈತನು ದೇವೋತ್ತಮನಾದನು. ಉಪನಿಷತ್ತುಗಳ ಕಾಲದಲ್ಲಿ ಈತನ ಮಹತ್ತ್ವ ಇನ್ನೂ ಹೆಚ್ಚಾಗಿ ಬೆಳೆಯಿತು. ಆಧ್ಯಾತ್ಮಿಕೋನ್ನತಿಯ ಪ್ರವಾಸದಲ್ಲಿ ಆತ್ಮನು ಮುಟ್ಟತಕ್ಕ ಕಡೆಯ ಸ್ಥಾನಕ್ಕೆ ವಿಷ್ಣುವಿನ ಪರಮಪದ ಎಂದು ಕಠೋಪನಿಷತ್ತಿನಲ್ಲಿ ಹೇಳಿದೆ.[5] ಅದು ಶಾಶ್ವತ

---

1. From Yoga Buddhism borrowed the conception of a carefully planned regulation of psychical life in order to attain the desired end.

2. A.A. Macdonnel : Vedic Mythology p. 32.

3. Sir Charles Ellitot : Hinduism and Buddhism Vol. 11, p. 148.

4. ಶತಪಥ ಬ್ರಾಹ್ಮಣ ೧೧೧ : ೧ : ೨೦೫.

5. ಕಠೋಪನಿಷತ್ ೧ : ೩ : ೯.

ಸುಖದ ಸ್ಥಾನ. ದೇವಕೀಪುತ್ರ ಕೃಷ್ಣನು ಘೋರ ಆಂಗಿರಸನಿಂದ ಉಪದೇಶವನ್ನು ಪಡೆದನೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿದೆ.[1] ಈ ಕೃಷ್ಣನು ಕೃಷ್ಣವಾಸುದೇವನಾಗಿದ್ದರೆ ಇಲ್ಲಿ ಅವತಾರ ಪುರುಷನೆಂದು ಗಣನೆಹೊಂದಿಲ್ಲ. ಕಾಲಕಾಲಕ್ಕೆ ಸಂಕಟದಲ್ಲಿ ಬಿದ್ದ ಜಗತ್ತನ್ನು ಉದ್ಧರಿಸಲು ಅವತಾರವನ್ನು ತಾಳುವುದು ವಿಷ್ಣುವಿನ ವಿಶೇಷ. ಈವರೆಗೆ ಈತನು ಹತ್ತು ಅವತಾರಗಳನ್ನು ತಾಳಿರುವನು. ಅವುಗಳಲ್ಲಿ ರಾಮ ಮತ್ತು ಕೃಷ್ಣಾವತಾರಗಳು ಮಹತ್ತ್ವವಾದುವಿದ್ದು ರಾಮಕೃಷ್ಣರ ರೂಪದಿಂದ ವಿಷ್ಣು ಈಗಲೂ ಪೂಜೆಗೊಳ್ಳುವನು. ಮಹಾಭಾರತದಲ್ಲಿ ವೈಷ್ಣವಮತದ ಬಗ್ಗೆ ಅನೇಕ ಆಧಾರಗಳು ದೊರೆಯುವುವು. ಭಾಗವತ ಧರ್ಮ ಪರಿಪೂರ್ಣ ಸ್ಥಿತಿಯನ್ನು ಹೊಂದಿತ್ತು. ಶಾಂತಿಪರ್ವ ನಾರಾಯಣೀಯ ಭಾಗದಲ್ಲಿಯೂ ಭಗವದ್ಗೀತೆಯಲ್ಲಿಯೂ ವಿಷ್ಣು ಕೃಷ್ಣ ವಾಸುದೇವನ ರೂಪದಿಂದ ಪರಬ್ರಹ್ಮನೆಂದು ಗಣನೆಹೊಂದಿ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಕರ್ತೃವಾಗಿದ್ದಾನೆ. ಪಾಣಿನಿ "ವಾಸುದೇವಾರ್ಜುನಾಭ್ಯಾಂ ಉಣ್"[2] ಎಂಬ ಸೂತ್ರದಲ್ಲಿ ವಾಸುದೇವನ ಹೆಸರನ್ನು ಹೇಳಿರುವನು. ಈ ಸೂತ್ರವನ್ನು ವಿವರಿಸುವಾಗ ಪತಂಜಲಿ ವಾಸುದೇವನೆಂಬುದು ಸಾಮಾನ್ಯವಾದ ಮನುಷ್ಯನ ಹೆಸರಲ್ಲ. ಅದು ಭಗವಂತನಾದ ವಾಸುದೇವನ ಹೆಸರೆಂದು ಸ್ಪಷ್ಟವಾಗಿ ಹೇಳಿರುವನು.[3] ಇದರ ಮೇಲಿಂದ ಕ್ರಿ.ಪೂ. ೪ನೆಯ ಶತಮಾನದಲ್ಲಿ ವಾಸುದೇವ ಕೃಷ್ಣನ ಪೂಜೆ ಪ್ರಚಾರದಲ್ಲಿತ್ತೆಂದು ತಿಳಿಯುವುದು. ಚಂದ್ರಗುಪ್ತಮೌರ್ಯನ ದರ್ಬಾರಿನಲ್ಲಿದ್ದ ಬ್ಯಾಕ್ಟ್ರೋ ಗ್ರೀಕರ ರಾಯಭಾರಿಯಾಗಿದ್ದ ಮೃಗೇಸ್ತನೀಸನು, ಆ ಕಾಲದಲ್ಲಿ ಗುಡ್ಡದೊಳಗಿರುವ ಜನರು ಡಿಯೊನಿಸಸ್‌ನನ್ನು (Dionysus=ಶಿವ) ಪೂಜಿಸುತ್ತಿದ್ದರೆಂದೂ, ಬಯಲು ಪ್ರದೇಶದಲ್ಲಿದ್ದ ಸೌರಸೇನೋಯ್ (Sourasenoi) ಜನರು ಹೆರೇಕ್ಲಸ್‌ನನ್ನು (Heracles=ಕೃಷ್ಣ) ಪೂಜಿಸುತ್ತಿದ್ದರೆಂದೂ ಅವರ ನಾಡಿನಲ್ಲಿ ಮೇಥೋರಾ (Methora) ಪಟ್ಟಣವುಂಟೆಂದೂ ಜೋಬರೇಸ್ (Jobares) ಎಂಬ ನದಿ ಹರಿಯುವುದೆಂದೂ ಹೇಳಿರುವನು. ಸೌರಸೇನೋಯ್ ಎಂಬುವರು ಸೂರಸೇನರೆಂದೂ ಮೇಥೊರಾ ಎಂಬುದು ಮಥುರಾ ಪಟ್ಟಣವೆಂದೂ ಜೋಬರೇಸ್ ನದಿ ಯಮುನಾ ನದಿಯೆಂದೂ ಗೊತ್ತಾಗಿದೆ. ಚಂದ್ರಗುಪ್ತಮೌರ್ಯನು ಕ್ರಿ.ಪೂ. ೩೨೨ರಿಂದ ೨೯೮ರ ವರೆಗೆ ರಾಜ್ಯವಾಳಿದನು. ಮಗೇಸ್ತನೀಸನು ಪಾಟಲೀಪುತ್ರಕ್ಕೆ ೩೦೨ರಲ್ಲಿ ಬಂದಿದ್ದನು.[4]

---

1. *ಛಾಂದೋಗ್ಯೋಪನಿಷತ್-೩ : ೧೭-೬.*
2. *ಪಾಣಿನಿ : ಅಷ್ಟಾಧ್ಯಾಯಿ-೪; ೩. ೯೮.*
3. *Dr. R.G. Bhandarkar: Vaisnavism, Saivism and Minor Religious Systems.*
4. *V. Smith : Early History of India (1924). p. 126.*

ರಜಪೂತಸ್ಥಾನದಲ್ಲಿ ಘೋಸುಂಡಿ ಎಂಬ ಸ್ಥಳದಲ್ಲಿ ದೊರೆತ ಶಿಲಾಲೇಖದಲ್ಲಿ[1] ಸಂಕರ್ಷಣ ವಾಸುದೇವರ ಹೆಸರಿವೆ. ಅಕ್ಷರಗಳ ಮೇಲಿಂದ ಈ ಲೇಖವನ್ನು ಏನಿಲ್ಲೆಂದರೂ ಕ್ರಿ.ಪೂ. ೨೦೦ರ ಸುಮಾರಿಗೆ ಬರಸಿರಬಹುದೆಂದು ತೋರುವುದು. ಬೆಸ್ನಾಗರದಲ್ಲಿ ದೊರೆತ ಇನ್ನೊಂದು ಲೇಖದಿಂದ[2] ಹಿಲಿಯೋಡೋರ (Heliodora) ಎಂಬುವನು ದೇವದೇವನಾದ ವಾಸುದೇವನಿಗಾಗಿ ಗರುಡಧ್ವಜವನ್ನು ನಿಲ್ಲಿಸಿದಂತೆ ಹೇಳಿದೆ. ಈತನು ದಿಯಾನ (Dion) ಎಂಬುವನ ಮಗನೂ ತಕ್ಷಶಿಲೆಯ ನಿವಾಸಿಯೂ ಆಗಿದ್ದನು. ಮಾಳವದೇಶವನ್ನಾಳುತ್ತಿದ್ದ ಭಾಗಭದ್ರನ ಕಡೆಗೆ ಬ್ಯಾಕ್ಟ್ರೋಗ್ರೀಕ್ ರಾಜನಾದ ಅಂತಿಯಲ್ಕಿದಾಸನ (Antialcidas) ರಾಯಭಾರಿಯಾಗಿ ಬಂದಿದ್ದನೆಂದು ತಿಳಿಯುತ್ತದೆ. ಹಿಲಿಯೋಡೋರನು ಭಾಗವತನಿದ್ದನೆಂದು ಈ ಲೇಖದಲ್ಲಿ ಹೇಳಿದೆ. ಈ ಲೇಖ ಸುಮಾರು ಕ್ರಿ.ಪೂ. ೧೨೧ರಲ್ಲಿ ಹುಟ್ಟಿರುವುದು. ನಾನಾಘಾಟದಲ್ಲಿಯ ದೊಡ್ಡಗವಿಯೊಳಗಿನ ಲೇಖದಲ್ಲಿ ಸಂಕರ್ಷಣ ವಾಸುದೇವರ ಹೆಸರಿವೆ. ಈ ಲೇಖವನ್ನು ಸುಮಾರು ಕ್ರಿ.ಪೂ. ೧ನೆಯ ಶತಮಾನದಲ್ಲಿ ಬರೆದಿರಬಹುದು. ಬೌದ್ಧರ ಗ್ರಂಥಗಳಾದ 'ದೀಘನಿಕಾಯ' ಮತ್ತು 'ಘಟಜಾತಕ'ಗಳಲ್ಲಿ ಕೃಷ್ಣನ ಉಲ್ಲೇಖವಿದೆ.[3] ಘಟಜಾತಕದಲ್ಲಿ ಕೃಷ್ಣನ ಬಾಲಲೀಲೆಯ ವರ್ಣನೆಗೆ ಹೋಲುವುದು. ಎರಡನೆಯ ಚಂದ್ರಗುಪ್ತ, ಕುಮಾರಗುಪ್ತ ಮತ್ತು ಸ್ಕಂದಗುಪ್ತರು ತಾವು ಪರಮ ಭಾಗವತರಿದ್ದು ಭಗವಾನ್ ವಾಸುದೇವನ ಅನುಯಾಯಿಗಳಾಗಿದ್ದರು.[4] ಇವರು ಕ್ರಿ.ಶ ೩೭೫ರಿಂದ ೪೬೭ರಲ್ಲಿ ಹಿಂದೂಸ್ಥಾನದ ಬಹುಭಾಗವನ್ನು ಆಳಿದರು.[5] ಸೌರಾಷ್ಟ್ರ ದೇಶಕ್ಕೆ ಅಧಿಕಾರಿಯಾಗಿ ಸ್ಕಂದಗುಪ್ತನಿಂದ ನೇಮಿಸಲ್ಪಟ್ಟ ಪರ್ಣದತ್ತನ ಮಗನಾದ ಚಕ್ರಪಾಲಿತನು ಕ್ರಿ.ಶ. ೪೫೬ರಲ್ಲಿ ವಿಷ್ಣುವಿನ ದೇವಾಲಯವನ್ನು ಕಟ್ಟಿಸಿದನೆಂದೂ[6] ಅತ್ಯಂತ ಭಗವದ್ಭಕ್ತರಾದ ಮಾತೃವಿಷ್ಣು ಮತ್ತು ಧನ್ಯವಿಷ್ಣುವೆಂಬುವರು ಕ್ರಿ.ಶ. ೪೮೫ರಲ್ಲಿ ಗರುಡಧ್ವಜವನ್ನು ನಿಲ್ಲಿಸಿದರೆಂದೂ ಶಾಸನಗಳಿಂದ ಗೊತ್ತಾಗುವುದು. ಕಾಲಿದಾಸನು ತನ್ನ 'ಮೇಘದೂತ'ದಲ್ಲಿ ನೀಲವರ್ಣದ ಮೇಘವನ್ನು ಗೋಪವೇಷದ ವಿಷ್ಣುವಿಗೆ ಹೋಲಿಸಿರುವನು.[7] ಕಾಲಿದಾಸನು ವಿಕ್ರಮಾದಿತ್ಯನೆಂದು ಪ್ರಸಿದ್ಧನಾದ ಎರಡನೆಯ ಚಂದ್ರಗುಪ್ತನ ಕಾಲದಲ್ಲಿದ್ದನೆಂದು ಪಂಡಿತರ ಮತ. ಜೋಧಪುರದ ಸಮೀಪದಲ್ಲಿರುವ

---

1. *Dr. R.G. Bhandarkar; Vaisnavism, Saivism and Minor Religious Systems.*
2. *Rapson : Ancient India, p. 156.*
3. *ದೀಘನಿಕಾಯ-೩ : ೧ : ೨೩. ಘಟಜಾತಕ - ೪೫೪.*
4. *Dr. Fleet; Gupta Inscriptions.*
5. *V.A. Smith; Early History of India (1924). pp 306-330.*
6. *Dr. Fleet; Gupta Inscriptions.*
7. *ಮೇಘದೂತ - ಡಾ|| ವಿ.ಜಿ. ಪರಾಂಜಪೆ ಅವರಿಂದ ಸಂಪಾದಿತವಾದದ್ದು.)*

ಮೇಂಡೋರ್ ಎಂಬಲ್ಲಿ ಕಲ್ಲಮೇಲೆ ಕೊರೆದ ಚಿತ್ರಗಳಲ್ಲಿ ಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿದ ಮತ್ತು ಬಂಡಿಯನ್ನು ಹೊರಳಿಸಿದ ಚಿತ್ರಗಳಿವೆ.[1] ಈ ಚಿತ್ರಗಳನ್ನು ಕ್ರಿ.ಶ. ೫ನೆಯ ಶತಕದಲ್ಲಿ ಕೊರೆದಿರಬಹುದು. ದಕ್ಷಿಣ ಭಾರತಕ್ಕೆ ಸಮ್ರಾಟನಾಗಿದ್ದ ಚಾಲುಕ್ಯರ ಎರಡನೆಯ ಪುಲಿಕೇಶಿಯ ಕಕ್ಕನಾದ ಮಂಗಲೀಶನು ಬಾದಾಮಿಯಲ್ಲಿ ಕೊರೆಸಿದ ದೊಡ್ಡಗುಹೆಗೆ ವೈಷ್ಣವಗವಿಯೆಂಬ ಹೆಸರಿದೆಯೆಂದೂ ಈ ಗವಿಯಲ್ಲಿ ಶೇಷಶಾಯಿಯಾದ ನಾರಾಯಣನ ಮೂರ್ತಿಯನ್ನು ಸ್ಥಾಪಿಸಿ, ನಾರಾಯಣ ಬಲಿಗಾಗಿ ಒಂದು ಹಳ್ಳಿಯ ಉತ್ಪನ್ನವನ್ನು ಉಪಯೋಗಿಸಲಾಗುತ್ತಿತ್ತೆಂದೂ ಇದೇ ಗವಿಯಲ್ಲಿರುವ ಶಿಲಾಶಾಸನದಿಂದ ಗೊತ್ತಾಗುವುದು. ಮಂಗಲೀಶನು ಶಾ.ಶ. ೫೦೦ರಲ್ಲಿ ಇದ್ದನು. ಈ ಎಲ್ಲ ಉದಾಹರಣೆಗಳಿಂದ ವೈಷ್ಣವಮತ ಹಿಂದೂಸ್ಥಾನದಲ್ಲಿ ಬಹು ಪುರಾತನ ಕಾಲದಿಂದ ಬಂದಿದೆಯೆಂದೂ ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಪಸರಿಸಿತ್ತೆಂದೂ ಒಪ್ಪಿಕೊಳ್ಳಬೇಕಾಗುವುದು.

ಭಾಗವತ ಪಂಥ

ವಾಸುದೇವನೆಂದರೆ ವೃಷ್ಣಿವಂಶದವನೂ ಮಹಾಭಾರತದಲ್ಲಿ ಪ್ರಸಿದ್ಧನೂ ಆದ ಕೃಷ್ಣನೆಂದೂ ಪತಂಜಲಿ ಹೇಳುವನು. ಆದುದರಿಂದ ಕ್ಷತ್ರಿಯನಾದ ಕೃಷ್ಣನು ಭಾಗವತ ಪಂಥದ ಉತ್ಪಾದಕನು. ವಸುದೇವನ ಮಗನಾದುದರಿಂದ ಇವನಿಗೆ ವಾಸುದೇವನೆಂದು ಹೆಸರು. ಇವನು ಸಾತ್ವತ ಕುಲದವನು. ಮೂಲ ಮಹಾಭಾರತದಲ್ಲಿ ಈತನು ಯಾದವರ ನಾಯಕನೂ ನೀತಿಶಾಸ್ತ್ರವಿಶಾರದನೂ ಶೂರನಾದ ಭಟನೂ ಧಾರ್ಮಿಕ ಪುರುಷನೂ ಆಗಿರುವನು. ಬರಬರುತ್ತ ಮಹಾಭಾರತ ಬೆಳೆದಂತೆ ಈತನು ವಿಷ್ಣುವಿನ ಅವತಾರವೂ ಭಗವಾನ್ ವಾಸುದೇವನೂ ಆದನು. ಉಪನಿಷತ್ತುಗಳ ಕಾಲದಲ್ಲಿ ಕ್ಷತ್ರಿಯರು ಆಧ್ಯಾತ್ಮಿಕೋನ್ನತಿಯ ಮಾರ್ಗದಲ್ಲಿ ಮುಂದಾಗಿ ಬ್ರಾಹ್ಮಣರಿಗೆ ಕೂಡ ಉಪದೇಶಕರಾಗಿದ್ದರೆಂದು ಮೇಲೆ ಹೇಳಿದೆ. ಜನಕ, ಅಜಾತಶತ್ರು, ಜೈವಲಿ, ಅಶ್ವಪತಿ, ಕೈಕೇಯ ಮೊದಲಾದ ರಾಜರ್ಷಿಗಳು ಜ್ಞಾನಪ್ರಚೋದನಕ್ಕೆ ಅವಕಾಶವನ್ನು ಕೊಟ್ಟು ತಮ್ಮದೇ ಆದ ಸಿದ್ಧಾಂತಗಳನ್ನು ಸ್ಥಾಪಿಸಿದರು. ಮುಂದೆ ಜಿನ ಮತ್ತು ಬುದ್ಧ ಇವರು ಜೈನ ಮತ್ತು ಬೌದ್ಧಧರ್ಮಗಳನ್ನು ಪೂರ್ವದೇಶದಲ್ಲಿ ಸ್ಥಾಪಿಸಿ ಪ್ರಸಾರ ಮಾಡಿದರು. ಕೃಷ್ಣನಾದರೂ ಬಹುತರ ಇದೇ ಕಾಲದಲ್ಲಿ ಭಾಗವತ ಧರ್ಮವನ್ನು ಸ್ಥಾಪಿಸಿ ಪಶ್ಚಿಮದಲ್ಲಿ ತನ್ನ ವಂಶದವರೂ ಅನುಯಾಯಿಗಳೂ ಆದ ಸಾತ್ವತರಲ್ಲಿ ಪ್ರಸಾರ ಮಾಡಿರಬಹುದು. ಪ್ರಾರಂಭದಲ್ಲಿ ಭಾಗವತ ಮತ ವೈದಿಕಧರ್ಮಕ್ಕೆ ಅಧೀನವಾಗಿದ್ದಿಲ್ಲ. ಹಲಕೆಲವು

---

1. *Arch; Survey Ind. 1905. p.135.*

ವಿಷಯಗಳಲ್ಲಿ ಅದನ್ನು ವಿರೋಧಿಸುತ್ತಿತ್ತು. ಏಕೇಶ್ವರ ವಾದ ಯಜ್ಞ ಯಾಗಾದಿಗಳ ನಿರಸನ, ಪ್ರಾಣಿಬಲಿ ಪ್ರತಿಬಂಧ ಇವು ಈ ಧರ್ಮದ ವಿಶೇಷಗಳು. ಕೃಷ್ಣನ ಚರಿತ್ರವನ್ನು ಸೂಕ್ಷ್ಮವಾಗಿ ಶೋಧಿಸಿದರೆ ಆತನು ವೇದ ವಿರುದ್ಧವಾದ ಕೃತಿಗಳನ್ನು ಮಾಡಿರುವನು. ಅವುಗಳಲ್ಲಿ ಮುಖ್ಯವಾದುವು:

೧. ಇಂದ್ರನಿಗೂ ಕೃಷ್ಣನಿಗೂ ವಿರೋಧ : ಇಂದ್ರನ ವನವನ್ನು ನಾಶ ಮಾಡುವನು; ಅದನ್ನು ಉಳಿಸಿಕೊಳ್ಳಲು ಬಂದ ದೇವತೆಗಳ ಕೂಡ ಯುದ್ಧ ಮಾಡುವನು. ಮಥುರೆಯಲ್ಲಿ ಆಗ ಪ್ರಚಾರದಲ್ಲಿದ್ದ ಇಂದ್ರನ ಪೂಜೆಯನ್ನೂ ಉತ್ಸವವನ್ನೂ ನಿಲ್ಲಿಸುವನು : ಇಂದ್ರನು ಸಿಟ್ಟಾಗಿ ಬಹಳ ಮಳೆಯನ್ನು ಕರೆದು ಜನರಿಗೆ ತೊಂದರೆಪಡಿಸಹತ್ತಲು ಕೃಷ್ಣನು ಗೋವರ್ಧನಗಿರಿಯನ್ನು ಎತ್ತಿ ಹಿಡಿದು ಅವರನ್ನು ರಕ್ಷಿಸುವನು.

೨. ಕೃಷ್ಣನು ಶಿವನ ಸಂಗಡ ಮತ್ತು ಸ್ಕಂದನ ಸಂಗಡ ಯುದ್ಧ ಮಾಡುವನು.

೩. ಕೃಷ್ಣನು ವಾರಣಸಿಯನ್ನೂ ಅಲ್ಲಿಯ ನಿವಾಸಿಗಳನ್ನೂ ಸುಡುವನು.

೪. ಮಹಾಭಾರತದಲ್ಲಿ ಅನೇಕ ಕಡೆಗೆ ಕೃಷ್ಣನ ದೇವತ್ವವನ್ನೂ ಅನಾರ್ಯರಿಗೆ ಸಲ್ಲುವಂತಹ ಕೃತಿಗಳನ್ನು ಅವನು ಆಚರಿಸಿದುದನ್ನೂ ಅಲ್ಲಗಳೆದಿರುವುದು ಕಂಡುಬರುತ್ತದೆ.

ಇವುಗಳ ಮೇಲಿಂದ ಕೃಷ್ಣನು ಭಾಗವತ ಧರ್ಮದ ಉತ್ಪಾದಕನಿರಬೇಕು. ಮುಂದಿನವರು ಅವನನ್ನು ವಿಷ್ಣುವಿನ ಅವತಾರವನ್ನಾಗಿ ಮಾಡಿರಬೇಕೆಂದು ಗ್ರಹಿಸಬಹುದು. ಬುದ್ಧನಿಗೂ ಭಗವಾ ಎಂದರೆ ಭಗವತ್ ಅಥವಾ ಭಗವಾನ್ ಎಂಬ ವಿಶೇಷಣ ಬೌದ್ಧ ಧಾರ್ಮಿಕ ಗ್ರಂಥಗಳಲ್ಲಿ ಪದೇ ಪದೇ ಬಂದಿದೆ. ಭಾಗವತ ಧರ್ಮಕ್ಕೂ ಬೌದ್ಧ ಜೈನಧರ್ಮಗಳಿಗೂ ಇರುವ ಅಂತರವೆಂದರೆ – ಭಾಗವತ ಮತ, ಆಸ್ತಿಕ ಮತ ಮತ್ತು ಸಂಪೂರ್ಣವಾಗಿ ವೈದಿಕ ಕ್ರಿಯೆಗಳನ್ನು ತ್ಯಜಿಸಿ ವೇದ ಧರ್ಮದಿಂದ ಬೇರೆಯಾದುದಲ್ಲ. ವೈದಿಕಧರ್ಮದಲ್ಲಿ ಆಗ ಪ್ರಚಾರದಲ್ಲಿದ್ದ ಆಚಾರ ವಿಚಾರಗಳಲ್ಲಿ ಸುಧಾರಣೆ ಮಾಡಿದೆ. ಬೌದ್ಧ ಜೈನಧರ್ಮಗಳು ವೈದಿಕಧರ್ಮದಿಂದ ಸಂಪೂರ್ಣವಾಗಿ ಸಿಡಿದುಹೋಗಿರುವುವು. ಹಿಂದೂಧರ್ಮದ ಉದಯ ಕಾಲದಲ್ಲಿ ಎಲ್ಲ ಆಸ್ತಿಕ ಪಂಥಗಳು ಒಂದುಗೂಡಿ ಬೌದ್ಧಧರ್ಮವನ್ನು ಎದುರಿಸಿದಾಗ ಭಾಗವತ ಧರ್ಮಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಆ ಧರ್ಮದ ಮೂಲಪುರುಷನಾದ ಕೃಷ್ಣವಾಸುದೇವನನ್ನು ಪರಬ್ರಹ್ಮನಾದ ವಿಷ್ಣುವಿನ ಅವತಾರವನ್ನಾಗಿ ಮಾಡಿ ತಮ್ಮೊಳಗೆ ಎಳೆದುಕೊಂಡಂತೆ ತೋರುವುದು.[1] ಭಾಗವತ ಧರ್ಮದ ಮುಖ್ಯ ಗ್ರಂಥಗಳು

---

1. *Sir Walter Elliot : Hinduism and Buddhish. part 11. p. 157. Vide ERE. p. 541.*

ಮಹಾಭಾರತ, ಭಗವದ್ಗೀತೆ, ಭಾಗವತ ಪುರಾಣ ಮತ್ತು ವೈಷ್ಣವಾಗಮಗಳು. ಮಹಾಭಾರತ ಶಾಂತಿಪರ್ವದ ನಾರಾಯಣೀಯ ಭಾಗದಲ್ಲಿ ಭಾಗವತ ಧರ್ಮದ ಬಗ್ಗೆ ಹೀಗಿದೆ.

ನರ ನಾರಾಯಣರನ್ನು ಕಾಣಲು ನಾರದನು ಬದರಿಕಾಶ್ರಮಕ್ಕೆ ಹೋಗುವನೆಂದೂ ಅಲ್ಲಿ ನರ ನಾರಾಯಣರು ತಪಸ್ಸು ಮಾಡುತ್ತಿದ್ದುದನ್ನು ಕಂಡು ನೀವೇ ಪರಮೇಶ್ವರರಿದ್ದು ಯಾರನ್ನು ಪೂಜಿಸುವಿರೆಂದು ಕೇಳಲು ಅವರು ತಮ್ಮ ಮೂಲಪ್ರಕೃತಿಯನ್ನು ಪೂಜಿಸುವೆವೆಂದು ಹೇಳಿದರೆಂದೂ ಈ ಮೂಲಪ್ರಕೃತಿಯನ್ನು ಕಾಣಲು ನಾರದನು ಮೇರುಪರ್ವತದ ಶಿಖರದ ಮೇಲೆ ಇಳಿಯುವನೆಂದೂ ಅಲ್ಲಿಂದ ಕ್ಷೀರಸಾಗರದಲ್ಲಿ ಉತ್ತರಕ್ಕಿರುವ ಶ್ವೇತದ್ವೀಪದಲ್ಲಿ ಅನಿಂದ್ರಿಯರೂ, ಅನಶನರೂ, ನಿಷ್ಪಂದಹೀನರೂ, ಸುಗಂಧಯುಕ್ತರೂ, ಗತಸರ್ವಪಾಪರೂ, ವಜ್ರಾಸ್ಥಿಕಾಯರೂ, ದಿವ್ಯಾವಯದ ರೂಪರೂ, ಛತ್ರಾಕೃತಿಶೀರ್ಷರೂ, ಮೇಘೌಘನಿನಾದರೂ, ಭಗವದ್ಭಕ್ತರೂ, ಆದ ಬಿಳಿಯ ಮೈ ಬಣ್ಣದ ಜನರನ್ನು ಕಾಣುವನೆಂದೂ ಭೀಷ್ಮನು ಯುಧಿಷ್ಠಿರನಿಗೆ ಹೇಳುವನು. ಅವನು ಈ ಜನರು ಈ ಸ್ವರೂಪವನ್ನು ಹೇಗೆ ಹೊಂದಿದರೆಂದು ಕೇಳಲು ಭೀಷ್ಮನು ವಿವರಿಸುವನು. "ಯಾರು ಭಗವಂತನಾದ ಪರಮೇಶ್ವರನನ್ನು ಸಾತ್ವತ ವಿಧಿಯಿಂದ ಪೂಜಿಸುವರೋ ಅವರು ಈ ಸ್ವರೂಪವನ್ನು ಹೊಂದುವರು." ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಮತ್ತು ವಸಿಷ್ಠರೆಂಬ ಸಪ್ತ ಚಿತ್ರ ಶಿಖಂಡಿಗಳೂ ಮತ್ತು ಸ್ವಯಂಪ್ರಭುವೂ ಮೇರು ಪರ್ವತದ ಶಿಖರದಲ್ಲಿ ಈ ಶಾಸ್ತ್ರವನ್ನು ಸ್ಥಾಪಿಸಿದರು. ಇದರಲ್ಲಿ ಶತಸಹಸ್ರ ಶ್ಲೋಕಗಳಿರುವುವು. ಇದು ವೇದಸಮ್ಮತವಿದ್ದು ಧ್ಯಾನಕ್ರಿಯೆಗಳನ್ನೊಳಗೊಂಡು ಲೌಕಿಕರ ಆಚಾರ ವಿಚಾರಗಳನ್ನು ಬೋಧಿಸುವುದು. ದೇವಗುರುವೂ ಅಂಗಿರಸಪುತ್ರನೂ ಆದ ಬೃಹಸ್ಪತಿ ಇದನ್ನು ಮೊದಲು ವಸುಉಪರಿಚರ ರಾಜನಿಗೆ ಬೋಧಿಸಿದನು. ವಸುಉಪರಿಚರನ ಮಹತ್ತ್ವವನ್ನು ಸೂಚಿಸುವ ಪ್ರಸಂಗ ಇಲ್ಲಿ ಬಂದಿದೆ. ಅದು ಹೇಗೆಂದರೆ ವಸುರಾಜನು ಅಶ್ವಮೇಧಯಾಗವನ್ನು ಮಾಡಿದನು. ಆತನ ಉಪಾಧ್ಯಾಯನಾದ ಬೃಹಸ್ಪತಿ ಹೋತಾರನೂ ಪ್ರಜಾಪತಿ ಸುತರಾದ ಏಕತ ದ್ವಿತ ತ್ರಿತರು ಸದಸ್ಯರೂ ಆಗಿದ್ದರು. ಧನುರ್ಬೈಬ್ಯ, ಮೇಧಾತಿಥಿ, ತಾಂಡ್ಯ, ತೈತ್ತಿರಿ, ಕಣ್ವ ಮೊದಲಾದ ಹದಿನಾರು ಋಷಿಗಳು ಬಂದಿದ್ದರು. ಈ ಯಜ್ಞದಲ್ಲಿ ಪಶುವಧೆಯನ್ನು ಬಿಟ್ಟು ಆರಣ್ಯಕಗಳಲ್ಲಿ ಹೇಳಿದ ವಿಧಿಗಳನ್ನೆಲ್ಲ ಮಾಡಿದರು. ದೇವದೇವನು ವಸುರಾಜನಿಗಷ್ಟೇ ಪ್ರತ್ಯಕ್ಷನಾಗಿ ಪುರೋಡಾಶವನ್ನು ಸ್ವೀಕರಿಸಿದನು. ತನಗೆ ಪ್ರತ್ಯಕ್ಷ ನಾಗಲಿಲ್ಲವೆಂದು ಬೃಹಸ್ಪತಿ ಸಿಟ್ಟಿಗೆದ್ದು ಸ್ರುಚೆಯನ್ನು ಆಕಾಶಕ್ಕೆ ಎಸೆದನು. ಹರಿ

ಬೇಕಾದಾಗ ಬೇಕಾದವರಿಗೆ ಕಾಣುವುದಿಲ್ಲವೆಂದೂ ಆತನ ಅನುಗ್ರಹಕ್ಕೆ ಪಾತ್ರರಾದವರಿಗಷ್ಟೇ ಪ್ರತ್ಯಕ್ಷನಾಗುವನೆಂದೂ ಏಕತ ದ್ವಿತ ತ್ರಿತರೂ ಋಷಿಗಳೂ ಬೃಹಸ್ಪತಿಗೆ ಹೇಳಿ ಅವನನ್ನು ಸಮಾಧಾನಪಡಿಸಿದರು. ವಸುಉಪರಿಚರನ ಬಗ್ಗೆ ಇನ್ನೊಂದು ಕಥೆ. ಒಂದಾನೊಂದು ಕಾಲದಲ್ಲಿ ದೇವತೆಗಳಿಗೂ ಋಷಿಗಳಿಗೂ ವಿವಾದವುಂಟಾಯಿತು. "ಅಜೇನ ಯಷ್ಟವ್ಯಂ" ಎಂಬುದರಲ್ಲಿ ಅಜ ಎಂದರೆ ಛಾಗ=ಆಡು ಎಂದೂ ಯಜ್ಞದಲ್ಲಿ ಬೇರೆ ಪಶುಗಳನ್ನು ವಧಿಸದೆ ಆಡನ್ನು ಕೊಲ್ಲಬಹುದೆಂದೂ ದೇವತೆಗಳ ಮತ. 'ಬೀಜೈರ್ಯಜ್ಞೇನ ಯಷ್ಟವ್ಯಂ' ಎಂದು ವೈದಿಕ ಶ್ರುತಿಯಿರುವುದರಿಂದ ಅಜ ಎಂದರೆ ಬೀಜವೆಂದೂ, ಆದುದರಿಂದ ಯಜ್ಞದಲ್ಲಿ ಧಾನ್ಯ ಮತ್ತು ವನಸ್ಪತಿಗಳನ್ನು ಪಶುವಿಗೆ ಬದಲಾಗಿ ಉಪಯೋಗಿಸಬೇಕೆಂದು ಋಷಿಗಳು ವಾದಿಸಿದರು. ಇದರ ನಿರ್ಣಯವನ್ನು ಕೊಡಬೇಕೆಂದು ವಸುಉಪರಿಚರನನ್ನು ದೇವತೆಗಳೂ ಋಷಿಗಳೂ ಕೇಳಲು ಆತನು ದೇವತೆಗಳ ಪರವಾಗಿ ನಿರ್ಣಯಕೊಟ್ಟನು. ಆದುದರಿಂದ ಋಷಿಗಳು ಸಿಟ್ಟಾಗಿ ದೇವತೆಗಳ ಅನುಗ್ರಹದಿಂದ ಆಕಾಶದಲ್ಲಿ ಸಂಚರಿಸುವ ನೀನು ದೇವತೆಗಳ ಪಕ್ಷವನ್ನು ಕಟ್ಟಿ ನಿರ್ಣಯವನ್ನು ಕೊಟ್ಟೆಯಾದುದರಿಂದ ಭೂಮಿಯಲ್ಲಿ ಬಿಲದೊಳಗೆ ವಾಸಿಸೆಂದು ಶಾಪವನ್ನು ಕೊಟ್ಟರು. ಅಂದಿನಿಂದ ವಸು ಬಿಲದಲ್ಲಿ ವಾಸಿಸಹತ್ತಿದನು. ಅಲ್ಲಿ ಒಳ್ಳೆಯ ನಿಷ್ಠೆಯಿಂದ ನಾರಾಯಣನನ್ನು ಪಂಚಯಜ್ಞಗಳಿಂದ ಪಂಚಕಾಲಗಳಲ್ಲಿ ಸ್ತುತಿಸುತ್ತಿದ್ದನು. ಭಗವಾನ್ ವಿಷ್ಣು ಆತನನ್ನು ಉದ್ಧರಿಸಲಿಕ್ಕೆ ಗರುಡನನ್ನು ಕಳುಹಿಸಿದನು. ಗರುಡನು ಆತನನ್ನು ಭೂವಿವರದೊಳಗಿಂದ ಎತ್ತಿ ಬ್ರಹ್ಮಲೋಕಕ್ಕೆ ಒಯ್ದನು.

ಮಹಾಭಾರತದಲ್ಲಿ ಹೇಳಿದ ಭಾಗವತ ಧರ್ಮದ ತತ್ತ್ವಗಳು- "ವಾಸುದೇವನು ಚಕ್ಷುಗಳಿಂದ ದೃಶ್ಯನಲ್ಲ, ಸ್ಪರ್ಶನದಿಂದ ಸ್ಪೃಶ್ಯನಲ್ಲ. ಆತನು ರಸ ವಿವರ್ಜಿತನು. ಸತ್ತ್ವರಜಸ್ತಮೋಗುಣಗಳು ಆತನಿಗೆ ಹತ್ತುವುದಿಲ್ಲ. ಆತನು ಸರ್ವಗತನೂ ಲೋಕದ ಸಾಕ್ಷಿಯೂ ಭೂತಗ್ರಾಮದ ಆತ್ಮನೂ ಕ್ಷೇತ್ರಜ್ಞನೂ ಅಜನೂ ಪರಮಾತ್ಮನೂ ಆಗಿರುವನು. ಪಂಚಮಹಾಭೂತಗಳು ಪರಮಾತ್ಮನ ಶರೀರವಾಗಿರುವುವು. ಚರಾಚರವಿಶ್ವವು ಪರಮಾತ್ಮನಿಂದ ಸಂಭವಿಸುವುದು ಮತ್ತು ಆತನಲ್ಲಿ ಪ್ರವೇಶಿಸುವುದು. ಪರಮಾತ್ಮನಾದ ವಾಸುದೇವನಿಂದ ಜೀವರೂಪನಾದ ಸಂಕರ್ಷಣನು ಹುಟ್ಟುವನು. ಜೀವಗಳೆಲ್ಲ ಸಂಕರ್ಷಣನ ರೂಪಗಳು. ಸಂಕರ್ಷಣನಿಂದ ಮನೋರೂಪನಾದ ಪ್ರದ್ಯುಮ್ನನೂ ಆತನಿಂದ ಅಹಂಕಾರ ರೂಪನಾದ ಅನಿರುದ್ಧನೂ ಸಂಭವಿಸುವರು. ಅನಿರುದ್ಧನು ಈಶ್ವರನು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಪರಮಾತ್ಮನ ನಾಲ್ಕು ಮೂರ್ತಿಗಳು. ಮಾಯೆಯನ್ನು ಪರಮಾತ್ಮನೇ ನಿರ್ಮಿಸಿದನು. ವಿಶ್ವಸೃಷ್ಟಿಯನ್ನೂ, ಸಂಹಾರವನ್ನೂ, ದೇವನೇ ಮಾಡುವನು. ಹಂಸ, ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ದಾಶರಥಿರಾಮ, ಸಾತ್ವತ

ಮತ್ತು ಕಲ್ಕಿ ಇವು ಭಗವಾನ್ ವಾಸುದೇವನ ಅವತಾರಗಳು. ವಾಸುದೇವನು ಮಥುರೆಯಲ್ಲಿ ಕಂಸನನ್ನೂ ಉಳಿದ ರಾಕ್ಷಸರನ್ನೂ ಕೊಂದು ದ್ವಾರಕೆಯಲ್ಲಿ ವಾಸಿಸುವನು. ಆಮೇಲೆ ಸರ್ವ ಸಾತ್ವತ ಪ್ರಮುಖರನ್ನೂ ದ್ವಾರಕೆಯನ್ನೂ ನಾಶಮಾಡಿ ಅಪರಿಮಿತವಾದ ಕಾರ್ಯಗಳನ್ನು ಮಾಡಿ ಬ್ರಹ್ಮಲೋಕವನ್ನೈದುವನು.

ಮುಕ್ತರು ಅಥವಾ ಪಾಪದಿಂದ ಬಿಡುಗಡೆ ಹೊಂದಿದವರು ಮೊದಲು ಸೂರ್ಯ ಲೋಕಕ್ಕೆ ತೆರಳುವರು. ಅಲ್ಲಿ ತಮ್ಮ ಮಲಿನತೆಯನ್ನು ಕಳೆದುಕೊಂಡು ಅಣುರೂಪದಿಂದ ಇರುವರು. ಅಲ್ಲಿಂದ ಅವರು ಅನಿರುದ್ಧನ ರೂಪವನ್ನು ಹೊಂದುವರು. ಆಮೇಲೆ ಮನೋರೂಪವನ್ನು ಹೊಂದಿ ಪ್ರದ್ಯುಮ್ನನಲ್ಲಿ ಸೇರುವರು. ಆಮೇಲೆ ಅವರು ಜೀವರೂಪದಿಂದ ಸಂಕರ್ಷಣನಲ್ಲಿ ಕೂಡುವರು. ಆಮೇಲೆ ಗುಣತ್ರಯಗಳಿಂದ ಮುಕ್ತರಾಗಿ ಸರ್ವತ್ರವ್ಯಾಪಿಯೂ ಪರಮಾತ್ಮನೂ ಆದ ವಾಸುದೇವನಲ್ಲಿ ಸೇರ್ಪಡೆಯಾಗುವರು.

ಈ ಭಾಗವತ ಧರ್ಮದ ವಿವರ ಹರಿಗೀತೆಯಲ್ಲಿಯೂ ಭಗವದ್ಗೀತೆಯಲ್ಲಿಯೂ ಇದೆ. ಈ ಧರ್ಮದ ಅನುಯಾಯಿಗಳೂ ಸಾತ್ವತರು. ಸತ್ವತವೆಂಬವನು ಅಂಶನ ಮಗನೆಂದೂ ಆತನ ವಂಶದವರು ಸಾತ್ವತರೆಂದೂ ವಾಸುದೇವನು ಸಾತ್ವತ ಋಷಭನೆಂಧೂ ವೇಷ್ಣಿ, ಅಂಧಕ, ಸಾತ್ವತ ಇವು ಸಾತ್ವತರ ಕುಲಗಳೆಂದೂ ವಿಷ್ಣುಪುರಾಣದಲ್ಲಿ ಹೇಳಿದೆ. ವಾಸುದೇವ, ಸಂಕರ್ಷಣ (ಬಲರಾಮ) ಪ್ರದ್ಯುಮ್ನ ಮತ್ತು ಅನಿರುದ್ಧ ಇವರು ಸಾತ್ವತ ಕುಲದವರು. ಆದುದರಿಂದ ಭಾಗವತ ಧರ್ಮ ಸಾತ್ವರಲ್ಲಿ ಹುಟ್ಟಿ ಬೆಳೆದಂತೆ ತೋರುತ್ತದೆ. ಒಬ್ಬನೇ ದೇವರನ್ನು ಪೂಜಿಸುವುದರಿಂದ ಭಾಗವತ ಧರ್ಮಕ್ಕೆ ಏಕಾಂತಿಕ ಧರ್ಮವೆಂದೂ ಹೆಸರು. ಭಕ್ತಿಯೇ ಈ ಧರ್ಮದ ಮೂಲ. ಮಹಾಭಾರತದಲ್ಲಿ ಭಾಗವತ ಧರ್ಮವನ್ನು ಸ್ಥಾಪಿಸಿದವರು ಚಿತ್ರ ಶಿಖಂಡಿಗಳೆಂಬ ಏಳು ಋಷಿಗಳೂ ಸ್ವಯಂಭುವೂ ಎಂದು ಇದೆ. ಆದರೆ ಶಂಕರಭಾಷ್ಯದಲ್ಲಿ ನಾಲ್ಕು ವೇದಗಳಲ್ಲಿ ಶ್ರೇಯಸ್ಸು ದೊರೆಯದುದರಿಂದ ಶಾಂಡಿಲ್ಯನು ಈ ಶಾಸ್ತ್ರವನ್ನು ದೊರಕಿಸಿದನೆಂದು ಹೇಳಿದೆ. ಶಾಂಡಿಲ್ಯ ಸೂತ್ರವೆಂಬ ಭಕ್ತಿಮಾರ್ಗವನ್ನು ಬೋಧಿಸುವ ಒಂದು ಗ್ರಂಥ ಈಗ ಉಪಲಬ್ಧವಿದೆ.

ಪಾಂಚರಾತ್ರ

ವೈಷ್ಣವ ಧರ್ಮದಲ್ಲಿ ಅತಿ ಪ್ರಾಚೀನವಾದುದು ಪಾಂಚರಾತ್ರಪಂಥ. ಇದನ್ನು ಭಾಗವತ ಅಥವಾ ಸಾತ್ವತವೆಂದು ಸಾಮಾನ್ಯವಾಗಿ ಕರೆಯಬಹುದಾದರೂ ಇದು ಭಾಗವತ ಧರ್ಮದ ಅವಾಂತರ ಭೇದವೆಂದು ಗ್ರಾಯರ್‌ಸನ್ (Grierson),

ಇಲಿಯಟ್ (Elliot) ಮೊದಲಾದವರು ಅಭಿಪ್ರಾಯಪಡುವರು.[1] ಡಾ. ಭಾಂಡಾರಕರ್ ಅವರು ಪಾಂಚರಾತ್ರವನ್ನು ಸಾಮಾನ್ಯವಾಗಿ ಭಾಗವತವೆದು ಕರೆಯುವರು.[2] ಮಹಾಭಾರತದ ನಾರಾಯಣೀಯ ಭಾಗದಲ್ಲಿ ವಸುಉಪರಿಚರನ ಮನೆಯಲ್ಲಿ ಪಾಂಚರಾತ್ರವಿದರು ಊಟಮಾಡುತ್ತಿದ್ದರೆಂದು ಹೇಳಿದೆ.[3] ಶಂಕರಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಪರಮತಗಳನ್ನು ಖಂಡಿಸುವಾಗ ಪಾಂಚರಾತ್ರ ಮತವನ್ನು ಖಂಡಿಸಿರುವರು. ಅವರು ತಮ್ಮ ಭಾಷ್ಯದಲ್ಲಿ ಭಾಗವತ ಪಾಂಚರಾತ್ರಗಳನ್ನು ಸಮಾನಾರ್ಥದಲ್ಲಿ ಪ್ರಯೋಗಿಸಿರುವರು.[4] ರಾಮಾನುಜರ ಶ್ರೀಭಾಷ್ಯದಲ್ಲಿಯೂ ಕೂಡ ಭಾಗವತ–ಸಾತ್ವತ–ಪಾಂಚರಾತ್ರಗಳನ್ನು ಸಮಾನಾರ್ಥದಲ್ಲಿ ಪ್ರಯೋಗಿಸಲಾಗಿದೆ.[5] ಇವುಗಳಲ್ಲಿಯ ಭೇದ ಆಯಾ ಪಂಥದವರು ಉಪಯೋಗಿಸುವ ಮಂತ್ರಗಳನ್ನವಲಂಬಿಸಿವೆಯೆಂದೂ ಭಾಗವತರು 'ಓಂ ನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಾಕ್ಷರೀ ಮಂತ್ರವನ್ನೂ ಪಾಂಚರಾತ್ರರು 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರೀ ಮಂತ್ರವನ್ನೂ ಪಠಿಸುವರೆಂದೂ ಪಿ.ಟಿ. ಶ್ರೀನಿವಾಸ ಅಯ್ಯಂಗಾರ್ ಅವರು ಹೇಳಿರುವರು.[6] ಭಗವದ್ಗೀತೆಯಲ್ಲಿ ಹೇಳಿದ ಏಕಾಂತ ಧರ್ಮಕ್ಕೂ ಪಾಂಚರಾತ್ರಕ್ಕೂ ಭಕ್ತಿ ಸಾಮಾನ್ಯವಾಗಿದೆಯಾದರೂ ಇವುಗಳೊಳಗೆ ಸುಸಂಘಟಿತ ಸಂಬಂಧವಿದ್ದಂತೆ ತೋರುವುದಿಲ್ಲ.

ಪಾಂಚರಾತ್ರ ಮತದ ಮುಖ್ಯ ಗ್ರಂಥಗಳು ಸಂಹಿತೆಗಳು, ತಂತ್ರಗಳು ಅಥವಾ ಆಗಮಗಳು. ಇವುಗಳಿಗೆ ವೈಷ್ಣವಾಗಮ ಅಥವಾ ಪಾಂಚರಾತ್ರಾಗಮಗಳೆಂದು ಹೆಸರು. ಇವು ಋಗ್ವೇದ ಮೊದಲಾದ ಸಂಹಿತೆಗಳಂತೆ ಅಪೌರುಷೇಯವಾದುವು.

---

1. *It may be noted that Bhagavatas are often called "Pancharatras; this is, properly speaking, the name of one the sects into which the religion was divided" ERE. Vol. 2. p. 541, Elliot: Hinduism and Buddhism Vol. II. p. 199.*

2. *Dr. R.G. Bhandarkar: Vaisnavism, Saivism and Minor cults. (1928) p. 54.*

3. *ಪಾಂಚರಾತ್ರವಿದೋ ಮುಖ್ಯಾಸ್ತಸ್ಯಗೇಹೇ ಮಹಾತ್ಮನಃ।*
   ಪ್ರಯಾಗಂ ಭಗವತ್ಪ್ರೋಕ್ತಂ ಭುಂಜತೇ ವಾಽಗ್ರಭೋಜನಮ್॥

4. *ಬ್ರಹ್ಮಸೂತ್ರ, ಶಂಕರಭಾಷ್ಯ ೨ : ೨ : ೪೨-೪೫.*

5. *ಬ್ರಹ್ಮಸೂತ್ರ, ಶ್ರೀಭಾಷ್ಯ ೨ ; ೨ : ೪೨-೪೫.*

6. *Outlines of Indian Philosophy. p. 174*

ಇವುಗಳ ಸಂಖ್ಯೆ ೧೦೮ ಎಂದು ಪ್ರತೀತಿಯಿದೆಯಾದರೂ ಡಾಕ್ಟರ್ ಶ್ರೇಡರ್ ಅವರು ೨೧೫ ವೈಷ್ಣವಾಗಮಗಳ ಪಟ್ಟಿಯನ್ನು ಕೊಟ್ಟಿರುವರು.[1] ಇವುಗಳಲ್ಲಿ ಹಲಕೆಲವು ಮುದ್ರಣಹೊಂದಿವೆ. ಬಹುಭಾಗ ಕೈಬರಹದ ಗ್ರಂಥಗಳ ರೂಪದಲ್ಲಿ ದೊರೆಯುತ್ತದೆ. ಕೆಲಭಾಗ ಉಪಲಬ್ಧವಿಲ್ಲ. ಈ ಎಲ್ಲ ಸಾಹಿತ್ಯ ದೊರೆತರೆ ಪ್ರಾಚೀನ ಹಿಂದೂಧರ್ಮದ ಸಂಸ್ಕೃತಿಯನ್ನು ಸರಿಯಾಗಿ ತಿಳಿದುಕೊಳ್ಳಲು ಅವಕಾಶವುಂಟಾಗುವುದು. ಈ ಸಂಹಿತೆಗಳನ್ನೆಲ್ಲ ಕಾಲಗಣನೆಯ ಪ್ರಕಾರ ಏಳು ಗುಂಪುಗಳನ್ನಾಗಿ ವಿಭಾಗಿಸುವರು:

೧. ಪೌಷ್ಕರ, ವಾರಾಹ, ಬ್ರಾಹ್ಮ. ೨. ಸಾತ್ವತ. ೩. ಅಹಿರ್ಬುಧ್ನ್ಯ. ೪. ಪಾರಮೇಶ್ವರ. ೫. ಜಯ, ಸನತ್ಕುಮಾರ, ಪಾರಮ, ಪದ್ಮೋದ್ಭವ ಮಾಹೇಂದ್ರ, ಕಾಣ್ವ. ೬. ಪಾದ್ಮ. ೭. ಈಶ್ವರ.

ಇವು ಪ್ರಾಚೀನ ಸಂಹಿತೆಗಳು. ಇವುಗಳ ಕಾಲವನ್ನು ನಿಶ್ಚಯವಾಗಿ ಹೇಳುವುದು ಸಾಧ್ಯವಿಲ್ಲದಿದ್ದರೂ ಇವು ಮಹಾಭಾರತದ ತರುವಾಯ ಮತ್ತು ಕ್ರಿ.ಶ. ೮೦೦ಕ್ಕೆ ಪೂರ್ವದಲ್ಲಿ ಹುಟ್ಟಿರಬೇಕು. ಇವುಗಳಲ್ಲಿ ಎಲ್ಲಕ್ಕೂ ಪೂರ್ವದವು ಪೌಷ್ಕರ, ವಾರಾಹ, ಬ್ರಾಹ್ಮ ಸಂಹಿತೆಗಳು. ಈಶ್ವರ ಸಂಹಿತೆ ಎಲ್ಲಕ್ಕೂ ಕಡೆಯದು. ಅದು ಸುಮಾರು ಕ್ರಿ.ಶ. ೮೦೦ರಲ್ಲಿ ಹುಟ್ಟಿರಬಹುದು. ಇವುಗಳಲ್ಲಿ ಶೈವಾಗಮಗಳಲ್ಲಿದ್ದಂತೆಯೇ ಕ್ರಿಯಾ, ಚರ್ಯಾ, ಯೋಗ, ಜ್ಞಾನ ಎಂದು ನಾಲ್ಕು ಪಾದಗಳಿರುವುವು. ಪ್ರತಿಯೊಂದು ಅಧ್ಯಾಯಕ್ಕೆ ಪಟಲವೆನ್ನುವರು.

ಐದು ರಾತ್ರಿಗಳಲ್ಲಿ ಅನಂತ, ಗರುಡ, ವಿಶ್ವಕ್ಸೇನ, ಬ್ರಹ್ಮ ಮತ್ತು ರುದ್ರನು ಕೇಶವನಿಂದ ಈ ಶ್ರದ್ಧಾಶಾಸ್ತ್ರವನ್ನು ಕೇಳಿದುದರಿಂದ ಇದಕ್ಕೆ ಪಾಂಚರಾತ್ರವೆಂಬ ಹೆಸರುಂಟಾಯಿತೆಂದು ವಿಹಗೇಂದ್ರ ಸಂಹಿತೆಯೂ,[2] ತತ್ತ್ವ, ಮುಕ್ತಿಪ್ರದ, ಭಕ್ತಿಪ್ರದ, ಯೌಗಿಕ ಮತ್ತು ವೈಶೇಷಿಕಗಳೆಂಬ ಐದು ಪ್ರಕಾರದ ರಾತ್ರಗಳನ್ನು ಅಂದರೆ ಜ್ಞಾನಗಳನ್ನು ಹೇಳುವುದರಿಂದ ಪಾಂಚರಾತ್ರವೆಂದು ಕರೆಯುವರೆಂದು ನಾರದೀಯ ಸಂಹಿತೆಯೂ ಹೇಳುತ್ತವೆ. ಶತಪಥ ಬ್ರಾಹ್ಮಣದಲ್ಲಿ ಹೇಳಿದ ಪಾಂಚರಾತ್ರಸತ್ರದಿಂದ[3] ಈ ಮತ ಪಾಂಚರಾತ್ರ ಶಬ್ದವನ್ನು ತೆಗೆದುಕೊಂಡಿರಬಹುದೆಂದೂ ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ ಎಂಬ ಐದು ಪ್ರಕಾರದ ರೂಪಗಳಿಂದ ದೇವರ ಪ್ರಕಟನೆಯನ್ನು

---

1. *Dr. F. O. Schrader: Introduction to Pancharatra and Ahirbudhnya Samhita. p. 11.*

2. *ವಿಹಗೇಂದ್ರ ಸಂಹಿತಾ ೧ : ೩೧–೩೪.*

3. *ಶತಪಥ ಬ್ರಾಹ್ಮಣ ೩೧ : ೧ : ೬.*

ಸೂಚಿಸುವುದರಿಂದ ಪಾಂಚರಾತ್ರವೆಂದು ಕರೆದಿರಬಹುದೆಂದೂ ಡಾಕ್ಟರ ಷ್ರೇಡರರು ಹೇಳುವರು.[1]

ತತ್ತ್ವಗಳು[2]

ಪಾಂಚರಾತ್ರ ತತ್ತ್ವಗಳನ್ನು ತಿಳಿದುಕೊಳ್ಳಲು ನಾವು ಮೊದಲು ಪಾಂಚರಾತ್ರ ಧರ್ಮದ ಅಭಿಪ್ರಾಯದ ಪ್ರಕಾರ ನಾರಾಯಣನ ದಿವಸ ಮತ್ತು ರಾತ್ರಿಗಳ ಪರಿಮಾಣವನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಏಕೆಂದರೆ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳು ನಾರಾಯಣನ ಕಾಲ ಪರಿಮಾಣದ ಕೂಡ ನಿಕಟ ಸಂಬಂಧವುಳ್ಳವುಗಳಾಗಿವೆ.

ಬ್ರಹ್ಮನ ಒಂದು ಹಗಲಿಗೆ ೪೩ ಕೋಟಿ ೨೦ ಲಕ್ಷ ಮನುಷ್ಯನ ವರ್ಷಗಳಾಗುವುವು. ಬ್ರಹ್ಮನ ಹಗಲು ಮುಗಿದ ತರುವಾಯ ತತ್ತ್ವಗಳನ್ನು ಬಿಟ್ಟು ಉಳಿದ ಎಲ್ಲವೂ ಪ್ರಲಯಾಗ್ನಿಯಿಂದ ನಾಶವಾಗುವುವು. ಇದಕ್ಕೆ ಅವಾಂತರ ಪ್ರಲಯ ಅಥವಾ ನೈಮಿತ್ತಿಕ ಪ್ರಲಯವೆನ್ನುವರು. ಬ್ರಹ್ಮನ ರಾತ್ರಿಯಾದರೂ ಇಷ್ಟೇ ಪರಿಮಾಣವುಳ್ಳದ್ದಿರುವುದು. ರಾತ್ರಿಯಲ್ಲಿ ಬ್ರಹ್ಮಾಂಡ ಆತನಲ್ಲಿಯೇ ಅಡಗಿಕೊಂಡು ಸುಪ್ತಾವಸ್ಥೆಯಲ್ಲಿರುವುದು. ಈ ಪ್ರಕಾರದ ೩೬೦ ದಿವಸಗಳ ೧೦೦ ವರ್ಷಗಳು ಮುಗಿದ ಮೆಲೆ ಅಂದರೆ ೩೬೦೦ ಸಾರಿ ನೈಮಿತ್ತಿಕ ಪ್ರಲಯವಾದ ಮೇಲೆ ಬ್ರಹ್ಮನ ಆಯುಷ್ಯ ತೀರುವುದು. ಆಗ ಮಹಾಪ್ರಲಯವಾಗುವುದು. ಮಹಾಪ್ರಲಯದಲ್ಲಿ ಎಲ್ಲವೂ ಪುರುಷನಲ್ಲಿ ಅಡಗುವುವು. ಬ್ರಹ್ಮನ ಆಯುಷ್ಯ ಪುರುಷನ ಒಂದು ಹಗಲು. ಅವನ ರಾತ್ರಿಯಾದರೂ ಅಷ್ಟೇ ದೊಡ್ಡದು. ಪುರುಷನು ಅನಾದಿಯಾಗಿರುವುದರಿಂದ ಅವನ ಆಯುಷ್ಯಕ್ಕೆ ಮಿತಿಯಿಲ್ಲ. ಬ್ರಹ್ಮನ ಆಯುಷ್ಯದಷ್ಟು ಪ್ರಮಾಣದ ಪುರುಷನ ಒಂದು ಹಗಲಿಗೆ ಪರ ಎಂದು ಹೆಸರು. ಪುರುಷನ ರಾತ್ರಿಯಲ್ಲಿ ಎಲ್ಲವೂ ದೀರ್ಘನಿದ್ರೆ ಮಾಡುವುವು.

ಪುರುಷನ ಎಂಟನೆಯ ರಾತ್ರಿಯ ಕಡೆಯ ಭಾಗದಲ್ಲಿ ವಿಷ್ಣುವಿನ ಶಕ್ತಿ ಎಚ್ಚತ್ತು ಕಣ್ಣು ತೆರೆಯಿತು (ಉನ್ಮೇಷ). ಇಲ್ಲಿಯವರೆಗೆ ಶಕ್ತಿ ಪರಬ್ರಹ್ಮನಲ್ಲಿ ಬೆರೆತು ಹೋಗಿದ್ದಿತು. ಕ್ರಿಯಾಭಕ್ತಿ ರೂಪಗಳಿಂದ ಶಕ್ತಿಯ ಅಂಶ ಯಾವುದೋ ಒಂದು ಪ್ರಕಾರದ ಸ್ವಾತಂತ್ರ್ಯದಿಂದ ಅಕಸ್ಮಾತ್ ಪ್ರಾದುರ್ಭವಿಸುವುದು. ವಿಷ್ಣುವೂ ಲಕ್ಷ್ಮೀಯೂ ಒಂದೆಯಲ್ಲ.

---

1. *Dr. F.O. Schrader : Introduction to Pancharatra and Ahirbudhnya Samhita. p. 25.*

2. *Dr. F.O. Schrader : Introduction to Panchnratra and Ahirbudhnya Samhita. pp. 27-91.*

ಬೇರೆಯಾಗಿರುವರು. ಪ್ರಲಯಕಾಲದಲ್ಲಿ ಕೂಡ ಕೂಡಿ ಇದ್ದರೂ ಬೇರೆಯಾಗಿಯೇ ಉಳಿಯುವರು. ಇವರಿಬ್ಬರ ಸಂಬಂಧ ಸೂರ್ಯ ಮತ್ತು ಸೂರ್ಯಕಿರಣ, ಚಂದ್ರ ಮತ್ತು ಚಂದ್ರಕಿರಣ, ಧರ್ಮ ಮತ್ತು ಧರ್ಮಿ ಇವುಗಳ ಸಂಬಂಧದಂತೆ ಸಮವಾಯ ಸಂಬಂಧವಾಗಿರುವುದು. ಲಕ್ಷ್ಮಿಯೊಬ್ಬಳೇ ವಿಷ್ಣುವಿನ ಇಚ್ಛೆಯ ಪ್ರಕಾರ ಪ್ರವೃತ್ತಿಯನ್ನುಂಟುಮಾಡುವಳು. ಇಲ್ಲಿ ಲಕ್ಷ್ಮಿ ಸಾಂಖ್ಯರ ಪ್ರಕೃತಿಗೆ ಸರಿಹೋಲುವಳು. ಲಕ್ಷ್ಮಿ ಕ್ರಿಯಾಶಕ್ತಿ ಮತ್ತು ಭೂತಿಶಕ್ತಿ ಎಂದು ಎರಡು ಪ್ರಕಾರವಾಗಿರುವಳು. ಕ್ರಿಯಾಶಕ್ತಿ ನಿಷ್ಕಲ; ಭೂತಿಶಕ್ತಿ ನಾನಾ ಭೇದವತಿ. ಇವರಿಬ್ಬರ ಸಂಬಂಧ ಮುತ್ತಿನ ಸರದಲ್ಲಿ ಮುತ್ತಿಗೂ ದಾರಕ್ಕೂ ಇರುವ ಸಂಬಂಧದಂತಿರುವುದು. ವಿಷ್ಣು ಕ್ರಿಯಾಶಕ್ತಿ ಮತ್ತು ಭೂತಿಶಕ್ತಿ ಇವರು ಕ್ರಮವಾಗಿ ಸೃಷ್ಟಿಯ ನಿಮಿತ್ತ, ಸಹಕಾರಿ ಮತ್ತು ಉಪಾದಾನ ಕಾರಣರಾಗಿರುವರು. ಭೂತಿಶಕ್ತಿ ವಿಶ್ವರೂಪದಿಂದಿರುವುದು. ಕ್ರಿಯಾಶಕ್ತಿ ಅದಕ್ಕೆ ಚೈತನ್ಯವನ್ನುಂಟುಮಾಡಿ ಅದಕ್ಕೆ ಅಧಿಷ್ಠಾತೃವಾಗುವುದು. ವಿಷ್ಣು ಸಾಂಖ್ಯರ ಪುರುಷನಂತೆ ದೂರ ಮತ್ತು ಉದಾಸೀನನಾಗಿರುವನು. ಕ್ರಿಯಾಶಕ್ತಿ ವಿಷ್ಣುವಿನ ಪ್ರಾಣ ಸ್ವರೂಪವಾದ ಸಂಕಲ್ಪ. ಭೂತಿಶಕ್ತಿಯನ್ನು ಸಾಂಖ್ಯರ ಪ್ರಧಾನಕ್ಕೂ ಶೈವರ ಮಾಯೆಗೂ ಹೋಲಿಸಬಹುದು. ಶೈವರ ಮಾಯೆಯಂತೆ ಭೂತಿಶಕ್ತಿ ವಿಶ್ವವನ್ನು ಉಂಟುಮಾಡಿ ಆತ್ಮನ ಭೋಗಕ್ಕೆ ಅನುಕೂಲಮಾಡಿಕೊಟ್ಟು ಪ್ರಲಯಕಾಲದವರೆಗೆ ನಡೆಸಿಕೊಂಡು ಹೋಗಿ ಪ್ರಲಯ ಕಾಲದಲ್ಲಿ ಎಲ್ಲವನ್ನು ಉಪಸಂಹರಿಸಿಕೊಳ್ಳುವುದು.

ಲಕ್ಷ್ಮಿಯ ಉನ್ಮೇಷನದ ಆದಿಭಾಗಕ್ಕೆ ಶುದ್ಧಸೃಷ್ಟಿ ಅಥವಾ ಗುಣೋನ್ಮೇಷ ದೆಶೆಯೆಂದು ಹೆಸರು. ಈ ಸೃಷ್ಟಿಯಲ್ಲಿ ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ತೇಜಸ್ಸು ಎಂಬ ಗುಣಗಳು ಕಾಣಿಸಿಕೊಳ್ಳುವುವು. ಇವು ದೇವರಿಗೆ ಅನ್ವಯಿಸುವವು. ಇವು ಅಪ್ರಾಕೃತ ಗುಣಗಳು. ಪ್ರಕೃತಿ ಇನ್ನೂ ಅಸ್ತಿತ್ವದಲ್ಲಿ ಬಂದಿರುವುದಿಲ್ಲವಾದುದರಿಂದ ಅದರ ಗುಣಗಳಾದ ಸತ್ತ್ವ, ರಜ, ತಮೋಗುಣಗಳಿಗೂ ಈ ಗುಣಗಳಿಗೂ ಏನೂ ಸಂಬಂಧವಿಲ್ಲ. ಪರಮಾತ್ಮನು ನಿರ್ಗುಣನಾದರೂ ಈ ಗುಣಗಳು ಆತನಿಗೆ ಅನ್ವಯಿಸುವುವು. ಏಕೆಂದರೆ, ಇವುಗಳಿಲ್ಲದಿದ್ದರೆ ಶುದ್ಧಸೃಷ್ಟಿ ಸಂಭವಿಸುವುದಿಲ್ಲ. ಉಳಿದ ಸೃಷ್ಟಿ ಶುದ್ಧಸೃಷ್ಟಿಯನ್ನು ಅವಲಂಬಿಸಿರುವುದರಿಂದ ಶುದ್ಧಸೃಷ್ಟಿಯಾಗದ ಪಕ್ಷದಲ್ಲಿ ಯಾವ ಸೃಷ್ಟಿಯೂ ಆಗಲಾರದು. ಈ ಗುಣಗಳ ಉತ್ಪತ್ತಿಯಿಂದ ಪರಮಾತ್ಮನ ಸ್ವರೂಪದಲ್ಲಿ ಬದಲಾವಣೆಯಾಗುವುದಿಲ್ಲ. ಆತನು ಸ್ವಸ್ವರೂಪದಲ್ಲಿಯೇ ಇರುವನು. ಆದರೆ ಆತನ ಶಕ್ತಿ ಈ ಆರು ಗುಣಗಳಿಂದೊಡಗೂಡಿ ಶುದ್ಧ ಸೃಷ್ಟಿಯನ್ನುಂಟು ಮಾಡುವುದು. ಈ ಗುಣಗಳು ವಾಸುದೇವನ ಮತ್ತು ಲಕ್ಷ್ಮಿಯ ಶರೀರ ಗಳನ್ನುಂಟುಮಾಡುವುವು. ಈ ಗುಣಗಳಲ್ಲಿ ಮೊದಲಿನ ಮೂರು ಭೂತಿಶಕ್ತಿಗೆ ಸಂಬಂಧಿಸಿದ್ದು; ಅವಕ್ಕೆ ವಿಶ್ರಾಮ ಭೂಮಿಯೆಂದು ಹೆಸರು. ಹಾಗೆಯೇ ಮುಂದಿನ ಮೂರು ಕ್ರಿಯಾಶಕ್ತಿಗೆ ಸಂಬಂಧಿಸಿದ್ದು; ಶ್ರಮಭೂಮಿಯೆಂಬ ಹೆಸರುಳ್ಳದ್ದು.

ವಾಸುದೇವನ ವ್ಯೂಹಗಳಲ್ಲಿ ಸಂಕರ್ಷಣನಿಗೆ ಜ್ಞಾನಬಲಗಳೂ, ಪ್ರದ್ಯುಮ್ನನಿಗೆ ಐಶ್ವರ್ಯ ವೀರ್ಯಗಳೂ, ಅನಿರುದ್ಧನಿಗೆ ಶಕ್ತಿ ತೇಜಸ್ಸುಗಳೂ ಮುಖ್ಯವಾಗಿರುವುವು. ಪ್ರತಿಯೊಂದು ವ್ಯೂಹವೂ ನೂರು ಕಾಮ್ಯವರ್ಷಗಳವರೆಗೆ ಅಂದರೆ ೧೬೦೦ ಮಾನವ ವರ್ಷಗಳವರೆಗೆ ಅವ್ಯಾಕೃತವಾಗಿರುವುದು. ಶುದ್ಧಸೃಷ್ಟಿಯ ಕಾಲ ಸಂಕರ್ಷಣನ ಉತ್ಪತ್ತಿಯಿಂದ ಅನಿರುದ್ಧನ ಅಂತ್ಯದವರೆಗೆ ೪೮೦೦ ಮಾನವ ವರ್ಷವಾಗುವುದು. ಪ್ರತಿಯೊಂದು ವ್ಯೂಹಕ್ಕೆ ಒಂದೊಂದು ಶಕ್ತಿ ಸಹಾಯವಾಗಿರುವುದು. ಮತ್ತು ಪ್ರತಿಯೊಂದು ವ್ಯೂಹಕ್ಕೆ ಒಂದು ನೈತಿಕಕಾರ್ಯವೂ ಒಂದು ಸೃಷ್ಟಿಕಾರ್ಯವೂ ಇರುವುವು.

ಸಂಕರ್ಷಣನು ಸೃಷ್ಟಿಯನ್ನು ತಿಲಕಾಲಕದಂತೆ ಧರಿಸುವನು. ಅಂದರೆ ವಿಶ್ವ ಇನ್ನೂ ಗರ್ಭಾವಸ್ಥೆಯಲ್ಲಿರುವುದೆಂದರ್ಥ. ಸಂಕರ್ಷಣನು ಜ್ಞಾನ ಬಲಗಳಿಂದ ವಿಶ್ವಸೃಷ್ಟಿಯನ್ನುಂಟುಮಾಡುವನೆಂದು ತಿಳಿಯುವುದು. ಆದರೆ ಬಲದ ಸಹಾಯವೂ ಆತನಿಗೆ ಬೇಕೆಂಬುದು ಆತನಿಗಿರುವ ಬಲದೇವ ಎಂಬ ಹೆಸರಿನಿಂದ ಸ್ಪಷ್ಟವಾಗುವುದು. ಅವನನ್ನು ಅಶೇಷ ಭುವನಾಧಾರನೆಂದು ವರ್ಣಿಸಿರುವರು.

ಪ್ರದ್ಯುಮ್ನನಿಂದ ಪುರುಷ ಪ್ರಕೃತಿಗಳ ವಿಭಾಗವುಂಟಾಗುವುದು. ಅವನು ತನ್ನ ಐಶ್ವರ್ಯ ವೀರ್ಯಗಳಿಂದ ಮಾನವ ಮತ್ತು ವೈದ್ಯಸರ್ಗವನ್ನುಂಟುಮಾಡುವನು. ಮಾನವ ಸರ್ಗವೆಂದರೆ ಜೀವಾತ್ಮರ ಗುಂಪು. ವೈದ್ಯಸರ್ಗವೆಂದರೆ ಪಾಂಚಭೌತಿಕ ಸೃಷ್ಟಿಗೆ ಕಾರಣವಾದ ಮೂಲ ಪದಾರ್ಥ (Primordial Matter).

ಅನಿರುದ್ಧನು ಶರೀರ ಮತ್ತು ಆತ್ಮಗಳ ಬೆಳವಣಿಗೆಗೆ ಕಾರಣನಾಗುವನು. ಈತನು ತನ್ನ ತೇಜಶ್ಶಕ್ತಿಗಳಿಂದ ಬ್ರಹ್ಮಾಂಡದ ಈಶ್ವರನಾಗಿರುವನು.

ಬ್ರಹ್ಮಾಂಡದ ಸೃಷ್ಟಿ ಸ್ಥಿತಿ ಲಯಗಳು ವ್ಯೂಹಗಳ ಕರ್ತವ್ಯಗಳೆಂದು ಹೇಳಿದೆ. ಅನಿರುದ್ಧನು ಸೃಷ್ಟಿಸುವನು, ಪ್ರದ್ಯುಮ್ನನು ರಕ್ಷಿಸುವನು, ಸಂಕರ್ಷಣನು ನಾಶ ಮಾಡುವನು ಎಂದು ಲಕ್ಷ್ಮೀ ತಂತ್ರದಲ್ಲಿ (೪,೧೧,೧೯.೨೦) ಹೇಳಿದೆ.

ನೈತಿಕ ಕಾರ್ಯಗಳು

ಈ ಮೂರು ವ್ಯೂಹಗಳ ನೈತಿಕ ಕಾರ್ಯಗಳಾವುವೆಂದರೆ: ಸಂಕರ್ಷಣನು ಐಕಾಂತಿಕ ಮಾರ್ಗವನ್ನು ಬೋಧಿಸುವನು; ಪ್ರದ್ಯುಮ್ನನು ಅದನ್ನು ಪ್ರಚಾರದಲ್ಲಿ ತರುವನು; ಅನಿರುದ್ಧನು ಕ್ರಿಯಾಫಲವನ್ನುಂಟುಮಾಡುವನು, ಅಂದರೆ ಮೋಕ್ಷವನ್ನೊದಗಿಸಿ ಕೊಡುವನು. ಈ ಕಾರ್ಯಗಳಿಗೆ ಷಡ್ಗುಣಗಳು ಸಹಾಯಕಾರಿಗಳಾಗಿವೆ.

ಮಹಾಭಾರತ ಶಾಂತಿಪರ್ವ ನಾರಾಯಣೀಯ ಭಾಗ ಮತ್ತು ಶ್ರೀ ಶಂಕರಾಚಾರ್ಯರ ಶಾರೀರಿಕ ಭಾಷ್ಯ (ಅಧ್ಯಾಯ ೨, ಪಾದ ೨, ಸೂತ್ರ ೪೨)

ಇವುಗಳಲ್ಲಿ ಸಂಕರ್ಷಣನು ಜೀವಾತ್ಮನೆಂದೂ ಪ್ರದ್ಯುಮ್ನನು ಮನಸ್ಸೆಂದೂ ಅನಿರುದ್ಧನು ಅಹಂಕಾರವೆಂದೂ ಹೇಳಿದೆ. ಆದರೆ ಸಂಹಿತೆಗಳಲ್ಲಿ ಈ ಅರ್ಥಗಳನ್ನು ಬದಿಗಿಟ್ಟಂತೆ ತೋರುತ್ತದೆ. ಅಲ್ಲಿ ಇವರು ಅಧಿಷ್ಠಾತ ದೇವತೆಗಳೆಂದು ಹೇಳಿದೆ.[1]

ಪ್ರತಿಯೊಂದು ವ್ಯೂಹದಿಂದ ಮೂರು ವ್ಯೂಹಾಂತರ ಅಥವಾ ಮೂರ್ತ್ಯಂತರಗಳು ಅವತರಿಸುವುವು. ವಾಸುದೇವನಿಂದ ಕೇಶವ, ನಾರಾಯಣ, ಮಾಧವ; ಸಂಕರ್ಷಣನಿಂದ ಗೋವಿಂದ, ವಿಷ್ಣು, ಮಧುಸೂದನ; ಪ್ರದ್ಯುಮ್ನನಿಂದ ತ್ರಿವಿಕ್ರಮ, ವಾಮನ, ಶ್ರೀಧರ; ಅನಿರುದ್ಧನಿಂದ ಹೃಷಿಕೇಶ, ಪದ್ಮನಾಭ, ದಾಮೋದರ – ಈ ಹನ್ನೆರಡು ಮೂರ್ತ್ಯಂತರಗಳು ಹನ್ನೆರಡು ತಿಂಗಳುಗಳ ಅಧಿದೇವತೆಗಳು. ಇವರು ಯಂತ್ರಗಳೊಳಗೆ ಬಹಳ ಮಹತ್ತ್ವದ ಭಾಗವನ್ನು ಆಕ್ರಮಿಸಿರುವರು. ಇವರು ಮುಖ್ಯವಾಗಿ ಧ್ಯಾನಮೂರ್ತಿಗಳು. ಕೇಶವನ ಸ್ವರೂಪ ಹೊಳೆಯುವ ಬಂಗಾರದಂತಿದ್ದು ನಾಲ್ಕು ಚಕ್ರಗಳನ್ನು ಧರಿಸುವನು. ನಾರಾಯಣನ ಮೈಬಣ್ಣ ನೀಲವರ್ಣದ ಪದ್ಮದಂತಿದ್ದು ಅವನು ನಾಲ್ಕು ಶಂಖಗಳನ್ನು ಧರಿಸುವನು. ಮಾಧವನ ಮೈ ಬಣ್ಣ ಪ್ರಕಾಶಮಾನವಾದ ಪಚ್ಚೆಯಂತಿದ್ದು ಅವನು ನಾಲ್ಕು ಗದೆಗಳನ್ನು ಧರಿಸುವನು. ಇವರು ಊರ್ಧ್ವಪುಂಡ್ರಧಾರಿಗಳಾದ ಭಕ್ತರ ಶರೀರಗಳನ್ನು ರಕ್ಷಿಸುವರು.

ಈ ಶುದ್ಧಸೃಷ್ಟಿಯಲ್ಲಿ ವಿಭವಗಳು ಅಥವಾ ಅವತಾರಗಳು ಕೂಡಿಕೊಂಡಿರುವುವು. ಅವತಾರಗಳಲ್ಲಿ ದೇವರ ವ್ಯೂಹಗಳ ಮತ್ತು ಮೂರ್ತ್ಯಂತರ ದೇವತೆಗಳ ಅವತಾರಗಳೂ ಅಡಕವಾಗಿವೆ. ಅಹಿರ್ಬುಧ್ನ್ಯ ಸಂಹಿತೆಯ ಪ್ರಕಾರ ಇವು ೩೯ ಇವೆ. ಅವಾವುವೆಂದರೆ:

೧. ಪದ್ಮನಾಭ. ೨. ಧ್ರುವ. ೩. ಅನಂತ (ಬಲರಾಮ). ೪. ಶಕ್ತ್ಯಾತ್ಮ. ೫. ಮಧುಸೂದನ. ೬. ವಿದ್ಯಾಧಿದೇವ. ೭. ಕಪಿಲ. ೮. ವಿಶ್ವರೂಪ. ೯. ವಿಹಂಗಮ. ೧೦. ಕ್ರೋಡಾತ್ಮ. ೧೧. ಬಡಬಾವಕ್ತ್ರ. ೧೨. ಧರ್ಮ. ೧೩. ವಾಗೀಶ್ವರ. ೧೪. ಏಕಾರ್ಣವಶಾಯಿ. ೧೫. ಕಮಠೇಶ್ವರ. ೧೬. ವರಾಹ. ೧೭. ನಾರಸಿಂಹ. ೧೮. ಪೀಯೂಷಾಪಹರಣ. ೧೯. ಶ್ರೀಪತಿ. ೨೦. ಕಾಂತಾತ್ಮ (ಧನ್ವಂತರಿ). ೨೧. ರಾಹುಜಿತ್. ೨೨. ಕಾಲನೇಮಿಹಾ. ೨೩. ಪಾರಿಜಾತಹರ. ೨೪. ಲೋಕನಾಥ. ೨೫. ಶಾಂತಾತ್ಮ. ೨೬. ದತ್ತಾತ್ರೇಯ. ೨೭. ನ್ಯಗ್ರೋಧಶಾಯಿ. ೨೮. ಏಕಶೃಂಗತನು. ೨೯. ವಾಮನ. ೩೦. ತ್ರಿವಿಕ್ರಮ. ೩೧. ನರ. ೩೨. ನಾರಾಯಣ. ೩೩. ಹರಿ. ೩೪. ಕೃಷ್ಣ. ೩೫. ಪರಶುರಾಮ. ೩೬. ಧನುರ್ಧರರಾಮ. ೩೭. ವೇದವಿದ್ (ವ್ಯಾಸ). ೩೮. ಕಲ್ಕಿ. ೩೯. ಪಾತಾಲಶಯನ.

---

1. *Dr. F.O. Schrader: Introduction of Pancharatra and Ahirbudhnya Samhita. p. 40.*

ಈ ಅವತಾರಗಳು ವಿಷ್ಣುವಿನ ನಿತ್ಯವಾದ ಸ್ವರೂಪಗಳು (Aspects). ಇವು ಧ್ಯಾನಕ್ಕೋಸುಗ ಉಪಯುಕ್ತವಾದುವು. ವಿಷ್ಣು ಬೇರೆ ಬೇರೆ ರೂಪಗಳನ್ನು ಧರಿಸಿ ಅವತರಿಸಿದ್ದು ಭಕ್ತರ ಧ್ಯಾನಕ್ಕೆ ಅನುಕೂಲವಾಗಬೇಕೆಂದೇ ಆಗಿರುವುದು. ಪರಮವ್ಯೋಮನ್ ಅಥವಾ ವೈಕುಂಠವೂ ಅದರೊಳಗಿರುವ ಎಲ್ಲಾ ಜೀವಿಗಳೂ ವಸ್ತುಗಳೂ ಶುದ್ಧ ಸೃಷ್ಟಿಯಲ್ಲಿ ಅಡಕವಾಗಿವೆ. ವೈಕುಂಠ ಅದರ ನಿವಾಸಿಗಳ ಸಂಗಡ ವ್ಯೂಹಗಳೊಡನೆ ಉದ್ಭವಿಸಿ ಮಹಾಪ್ರಲಯದಲ್ಲಿ ಬ್ರಹ್ಮಾಂಡ ಅದೃಶ್ಯವಾದಾಗ ಮತ್ತು ಲಕ್ಷ್ಮೀ ವಿಷ್ಣುವಿನಿಂದ ವಿಂಗಡಿಸಲು ಬಾರದಂತೆ ಅವನಲ್ಲಿ ಕೂಡಿಕೊಂಡಾಗ ಉಪಸಂಹರಿಸಲ್ಪಡುವುದೆಂದು ಕೆಲವು ತಂತ್ರಗಳೂ. ವೈಕುಂಠವೂ ವಿಷ್ಣು ಲಕ್ಷ್ಮೀಯರೂ ಮಹಾಪ್ರಲಯದಲ್ಲಿ ಕೂಡ ಇದ್ದ ಹಾಗೆಯೇ ಇರುವರೆಂದು ಬೇರೆ ಕೆಲವು ತಂತ್ರಗಳೂ ಹೇಳುವುವು.

ಈ ರೀತಿಯಾಗಿ ಶುದ್ಧಸೃಷ್ಟಿಯಲ್ಲಿ ವ್ಯೂಹಗಳೂ ಮೂರ್ತ್ಯಂತರಗಳೂ ವಿಭವ ಅಥವಾ ಅವತಾರಗಳೂ ವೈಕುಂಠವೂ ಸಮಾವೇಶವಾಗಿರುವುವು. ವೈಷ್ಣವರ ಶುದ್ಧಸೃಷ್ಟಿ ಶೈವರ ವಿದ್ಯಾತತ್ತ್ವಗಳಿಗೆ ಸರಿಹೋಲುವುದು.


ಮಧ್ಯಸೃಷ್ಟಿ

ಶುದ್ಧಸೃಷ್ಟಿಯನ್ನನುಸರಿಸಿ ಪರಮಾತ್ಮನ ಒಂದು ಕೋಟ್ಯಂಶದಿಂದ ಭೂತಿಶಕ್ತಿ ಶುದ್ಧೇತರ ಸೃಷ್ಟಿಯನ್ನುಂಟುಮಾಡುವುದು. ಇದು ಕೆಲವಂಶದಲ್ಲಿ ಮಿಶ್ರವೂ, ಕೆಲವಂಶದಲ್ಲಿ ಶುದ್ಧವೂ, ಕೆಲವಂಶದಲ್ಲಿ ಅಶುದ್ಧವೂ ಆಗಿರುವುದು. ಈ ಸೃಷ್ಟಿಯಲ್ಲಿ ಕೂಟಸ್ಥ ಪುರುಷನು ಮಾಯಾಶಕ್ತಿಯಿಂದೊಡಗೂಡಿರುವನು. ಕೂಟಸ್ಥ ಪುರುಷನ ವರ್ಣನೆ ಲಕ್ಷ್ಮೀತಂತ್ರದಲ್ಲಿ (೭,೧೧,೧೨) ಬಂದಿದೆ. "ಪುರುಷನು ಸುಸರ್ವಜ್ಞನೂ ಸರ್ವವ್ಯಾಪಿಯೂ ಸರ್ವಭೋಕ್ತೃವೂ ಆಗಿದ್ದು ಕೂಟಸ್ಥನಾಗಿರುವನು. ಎಲ್ಲಾ ನಿತ್ಯ ಜೀವಿಗಳು ಮತ್ತು ಪ್ರಲಯಕಾಲದಲ್ಲಿ ಬದ್ಧಜೀವಿಗಳು ಕೂಡ ಆತನಲ್ಲಿ ಅಡಗಿಕೊಂಡಿರುವುವು. ಅಂದರೆ ಪ್ರಲಯದ ತರುವಾಯ ಮತ್ತು ಪುನಸ್ಸೃಷ್ಟಿಗಿಂತ ಮೊದಲು ಇರುವ ಮಧ್ಯಕಾಲದಲ್ಲಿ ಎಲ್ಲ ಕರ್ಮಬದ್ಧ ಜೀವಿಗಳೂ ಪುರುಷನಲ್ಲಿ ಅಡಗಿಕೊಂಡಿರುವುವು. ಆತನು ಶುದ್ಧಾಶುದ್ಧಮಯನು. ತನ್ನಷ್ಟಕ್ಕೆ ತಾನು ಶುದ್ಧನು. ಅಶುದ್ಧಜೀವಿಗಳನ್ನೊಳಕೊಂಡಿರುವುದರಿಂದ ಅಶುದ್ಧನು." ಕೂಟಸ್ಥಪುರುಷನೂ ಮಾಯಾಶಕ್ತಿಯೂ ಪ್ರದ್ಯುಮ್ನನಿಂದ ಹುಟ್ಟುವುವು. ಮಾಯಾಶಕ್ತಿ, ಶಕ್ತಿ, ಭಗವಚ್ಛಕ್ತಿ, ಮೂಲಪ್ರಕೃತಿ, ಅವಿದ್ಯಾ ಎಂಬುದು ಪ್ರಕೃತಿ ರೂಪದಿಂದ ಪುರುಷನ ಸಂಗಡ ಉದ್ಭವಿಸುವುದು. ಇದು ಪಂಚಭೂತಗಳ ಮೂಲಸ್ವರೂಪ (Primitive form of Matter). ಇದರಿಂದ ಗುಣ-ಕಾಲ-ನಿಯತಿಗಳು ಹುಟ್ಟುವುವು. ಇವು ಪ್ರಾದುರ್ಭವಿಸಿದ ತರುವಾಯ ಪ್ರದ್ಯುಮ್ನನು ಇವುಗಳ ಬೆಳವಣಿಗೆಯನ್ನು ಅನಿರುದ್ಧನಿಗೆ ಒಪ್ಪಿಸುವನು. ಅನಿರುದ್ಧನ ಯೋಗದಿಂದ ಇವು ಒಂದು ಸಾವಿರ ವರ್ಷಗಳ ವರೆಗೆ ಬೆಳೆದು ಸಂಪೂರ್ಣ ಸ್ಥಿತಿಯನ್ನು ಹೊಂದಿ ಶಕ್ತಿ, ಶಕ್ತಿಯಿಂದ ನಿಯತಿ, ಅದರಿಂದ ಕಾಲ,

ಅದರಿಂದ ಸತ್ತ್ವಗುಣ, ಅದರಿಂದ ರಜೋಗುಣ, ಅದರಿಂದ ತಮೋಗುಣ ಇವು ಪ್ರಾದುರ್ಭವಿಸುವುವು. ಇದೇ ಕಾಲಕ್ಕೆ ಸರಿಯಾಗಿ ಮನುಗಳು ಪ್ರಾದುರ್ಭವಿಸಿ ಈ ತತ್ತ್ವಗಳೊಳಗೆ ಕೂಡಿಕೊಳ್ಳುವರು. ಇದಕ್ಕೆ ಮಧ್ಯ ಅಥವಾ ಮಿಶ್ರಸೃಷ್ಟಿಯೆಂದು ಹೆಸರು.

ಅಧಃಸೃಷ್ಟಿ

ಮನುಗಳು ತಮೋಗುಣಕ್ಕೆ ಮುಟ್ಟಿದ ತರುವಾಯ ಸತ್ತ್ವ ರಜಸ್ ತಮೋ ಗುಣಗಳು ಮೂಲ ಪ್ರಕೃತಿಯನ್ನುಂಟುಮಾಡುವುವು. ಈ ಮೂಲಪ್ರಕೃತಿಯಿಂದ ತತ್ತ್ವಗಳು ಹುಟ್ಟುವುವು. ವೈಷ್ಣವರ ಈ ತತ್ತ್ವಗಳು ಸಾಂಖ್ಯರ ತತ್ತ್ವಗಳಿಂದ ಅಲ್ಲಲ್ಲಿ ಬೇರೆಯಾಗಿರುವುವು. ಆದರೂ ಸಾಮಾನ್ಯವಾಗಿ ಹೋಲಿಕೆಯಿದೆಯೆಂದು ಹೇಳಬಹುದು. ಅವು ಹೇಗೆಂದರೆ :



ಪಾಂಚರಾತ್ರ ಅಥವಾ ಭಾಗವತಧರ್ಮ ೧೨ನೆಯ ಶತಮಾನದಲ್ಲಿ ಪುನರ್ಘಟನೆಯಾಗಿ ಬೇರೆ ಬೇರೆ ಪಂಥಗಳಾಗಿ ಹಿಂದೂಸ್ಥಾನದ ಬಹುಭಾಗವನ್ನು ವ್ಯಾಪಿಸಿತು. ಈ ಧರ್ಮದಲ್ಲಿ ಈಗ ನಾಲ್ಕು ಸಂಪ್ರದಾಯಗಳು ಮುಖ್ಯವಾಗಿವೆ.

೧. ಶ್ರೀ ರಾಮಾನುಜಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀಸಂಪ್ರದಾಯ.

೨. ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಬ್ರಹ್ಮಸಂಪ್ರದಾಯ.

೩. ವಿಷ್ಣುಸ್ವಾಮಿಯ ರುದ್ರಸಂಪ್ರದಾಯ.

೪. ನಿಂಬಾದಿತ್ಯನಿಂದ ಸ್ಥಾಪಿತವಾದ ಸನಕಾದಿಸಂಪ್ರದಾಯ.

ಇವುಗಳಲ್ಲಿ ಮೂರನೆಯ ಸಂಪ್ರದಾಯ ಗುಜರಾಥದಲ್ಲಿಯೂ ನಾಲ್ಕನೆಯ ಸಂಪ್ರದಾಯ ಉತ್ತರ ಹಿಂದೂಸ್ಥಾನದಲ್ಲಿಯೂ ಪ್ರಚಾರದಲ್ಲಿರುವುವು. ನಮ್ಮಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಶ್ರೀಸಂಪ್ರದಾಯ ಮತ್ತು ಬ್ರಹ್ಮಸಂಪ್ರದಾಯಗಳನ್ನು ವಿವೇಚಿಸುವ.

ಶ್ರೀಸಂಪ್ರದಾಯ

ಶ್ರೀಸಂಪ್ರದಾಯದ ಬೆಳವಣಿಗೆಗೆ ತಮಿಳುನಾಡಿನಲ್ಲಿದ್ದ ಆಳ್ವಾರರು ಮುಖ್ಯ ಕಾರಣರು. ಅವರು ಹನ್ನೆರಡು ಜನರು ಅವರಾರೆಂದರೆ:

ಪ್ರಾಚೀನರು :

೧. ಪೊಯ್‌ಗೈಯಾಳ್ವಾರ್ – ಸರೋಯೋಗಿನ್.

೨. ಪೂದತ್ತಾಳ್ವಾರ್ – ಭೂತಯೋಗಿನ್.

೩. ಪೇಯ್ ಆಳ್ವಾರ್ – ಮಹಾಯೋಗೀ.

೪. ತಿರುಮೞಿಶೈಯಾಳ್ವಾರ್ – ಭಕ್ತಿಸಾರರು.

ಮಧ್ಯಕಾಲೀನರು :

೫. ನಮ್ಮಾಳ್ವಾರ್ – ಶಠಗೋಪರು.

೬. ಮಧುರ ಕವಿಯಾಳ್ವಾರ್ – ಮಧುರ ಕವಿಗಳು.

೭. ಕುಲಶೇಖರಾಳ್ವಾರ್ – ಕುಲಶೇಖರರು.

೮. ಶೂಡಿಕ್ಕುಡುತ್ತನಾಚಿಯಾರ್ (ಆಂಡಾಳ್) – ಗೋದಾದೇವಿ.

೯. ಪೆರಿಯಾಳ್ವಾರ್ – ಭಟ್ಟನಾಥರು ಅಥವಾ ವಿಷ್ಣುಚಿತ್ತರು.

ಅರ್ವಾಚೀನರು :

೧೦. ತೊಂಡರಡಿಪ್ಪೊಡಿಯಾಳ್ವಾರ್ – ಭಕ್ತಾಂಘ್ರಿರೇಣು.

೧೧. ತಿರುಪ್ಪಾಣಾಳ್ವಾರ್ – ಮುನಿವಾಹನರು ಅಥವಾ ಯೋಗಿವಾಹನರು.

೧೨. ತಿರುಮಂಗೈಯಾಳ್ವಾರ್ – ಪರಕಾಲರು.

ಆಳ್ವಾರರು ಕ್ರಿ.ಶ. ೫ ರಿಂದ ೮ನೆಯ ಶತಮಾನದವರೆಗೆ ಇದ್ದಿರಬಹುದೆಂದು ತಜ್ಞರ ಅಭಿಪ್ರಾಯ. ಆಳ್ವಾರರು ತಮಿಳುಭಾಷೆಯಲ್ಲಿ ದೇವರ ಮೇಲಿನ ಭಕ್ತಿಪೂರ್ಣವಾದ ಪದ್ಯಗಳನ್ನು ಹಾಡಿ ಜನರಲ್ಲಿ ವಿಷ್ಣುಭಕ್ತಿಯನ್ನು ಪ್ರಸಾರ ಮಾಡಿದರು. ಈ ಹಾಡುಗಳಿಗೆ ಪ್ರಬಂಧಗಳೆನ್ನುವರು; ಇವು ಸುಮಾರು ೪೦೦೦ ಪದ್ಯಗಳಿವೆ. ('ನಾಲಾಯಿರ ದಿವ್ಯ ಪ್ರಬಂಧ') ಈ ಗ್ರಂಥಕ್ಕೆ ವೈಷ್ಣವ ವೇದವೆಂಬ ಹೆಸರು ರೂಢಿಯಲ್ಲಿದೆ. ಇವು ಅಷ್ಟು ಪವಿತ್ರವಾದುವು. ದಕ್ಷಿಣ ಹಿಂದೂಸ್ಥಾನದ ವೈಷ್ಣವ ಗುಡಿಗಳಲ್ಲಿ ಈ ಹನ್ನೆರಡು ಆಳ್ವಾರರ ಪ್ರತಿಮೆಗಳನ್ನಿಟ್ಟು ಪೂಜಿಸುವರು.

ಶ್ರೀಸಂಪ್ರದಾಯದ ಬೆಳವಣಿಗೆಗೆ ಆಳ್ವಾರರ ಈ ಪ್ರಬಂಧಗಳು ಬಹಳ ಸಹಾಯಮಾಡಿದುವು. ವೈಷ್ಣವರ ಗುಡಿಗಳಲ್ಲಿ ಪೂಜೆಯ ಕಾಲಕ್ಕೆ ಪ್ರಬಂಧಗಳೊಳಗಿನ ಪದ್ಯಗಳನ್ನು ಅನ್ನುವ ಪರಿಪಾಠ ಇನ್ನೂ ರೂಢಿಯಲ್ಲಿದೆ. ಈ ಆಳ್ವಾರರಂತೆಯೇ ಶ್ರೀಸಂಪ್ರದಾಯಕ್ಕೆ ಸಹಾಯಮಾಡಿದ ನಾಥಮುನಿ ಮತ್ತು ಯಾಮುನಾಚಾರ್ಯರೆಂಬ ಇನ್ನಿಬ್ಬರು ಮಹಾಪುರುಷರು ಆಗಿಹೋದರು.

ನಾಥಮುನಿ

ಕ್ರಿ.ಶ. ೯ನೆಯ ಶತಮಾನದ ಕೊನೆ ಮತ್ತು ೧೦ನೆಯ ಶತಮಾನದ ಆದಿಭಾಗ. ಈ ಕಾಲದಲ್ಲಿ ಶ್ರೀರಂಗದಲ್ಲಿ ರಂಗನಾಥಾಚಾರ್ಯನೆಂಬ ವೈಷ್ಣವ ಪಂಡಿತನು ವಾಸಿಸುತ್ತಿದ್ದನು. ಈತನಿಗೆ ನಾಥಮುನಿಯೆಂದು ಹೆಸರು. ಈತನು ವೀರನಾರಾಯಣಪುರದವನು. ಈಗಿನ ದಕ್ಷಿಣ ಆರ್ಕಾಟು ಜಿಲ್ಲೆಯ ಚಿದಂಬರಂ ತಾಲ್ಲೂಕಿನ, ಈಗ ಮನ್ನಾರಗುಡಿ ಎಂಬ ಊರೇ ವೀರನಾರಾಯಣಪುರವೆಂದು ತಿಳಿದುಬಂದಿದೆ. ನಮ್ಮಾಳ್ವಾರು ಆದ ಮೇಲೆ ನಾಥಮುನಿಯೇ ವಿಶಿಷ್ಟಾದ್ವೈತದ ಮೂಲಪುರುಷನೆನ್ನಬಹುದು. ಈತನ ತತ್ತ್ವಗಳನ್ನೇ ಬೆಳಸಿ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನು ಸ್ಥಾಪಿಸಿದರು. ಈತನು ದೀರ್ಘಕಾಲದವರೆಗೆ ಜೀವಿಸಿದ್ದು ಹಿಂದೂಸ್ಥಾನದ ಪ್ರಖ್ಯಾತವಾದ ವೈಷ್ಣವ ಕ್ಷೇತ್ರಗಳ ಯಾತ್ರೆಯನ್ನು ಮಾಡಿಕೊಂಡು ಬಂದನು. ಈತನು ಯಮುನಾನದಿಯ ತೀರದಲ್ಲಿದ್ದಾಗ ಈತನಿಗೊಬ್ಬ ಮೊಮ್ಮಗನು ಹುಟ್ಟಿದನು. ಆ ಹುಡುಗನಿಗೆ ಯಾಮುನನೆಂದು ನಾಮಕರಣಮಾಡಿದನು. ಈ ಹುಡುಗನೇ ಮುಂದೆ ಪ್ರಸಿದ್ಧನಾದ ಯಾಮುನಾಚಾರ್ಯನು.

ನಾಥಮುನಿ ನಮ್ಮಾಳ್ವಾರರ ಪದ್ಯಗಳನ್ನು ಸಂಕಲಿಸಿ ಪ್ರಚಾರಕ್ಕೆ ತಂದನು. 'ತಿರುವಾಯ್‌ಮೊಟಿ'ಯೊಳಗಿನ ಪದ್ಯಗಳನ್ನು ವೈಷ್ಣವ ಗುಡಿಗಳಲ್ಲಿ ರಾಗಬದ್ಧವಾಗಿ ಹಾಡುವ ಪದ್ಧತಿಯನ್ನೂ ಈತನೇ ಆರಂಭಮಾಡಿದನು. ಈತನು ತಮಿಳು ಸಂಸ್ಕೃತ ಭಾಷೆಗಳಲ್ಲಿ ಬಲ್ಲಿದನಾಗಿದ್ದನು. ಯೋಗಶಾಸ್ತ್ರದಲ್ಲಿ ನಿಷ್ಣಾತನಿದ್ದನು. ಸಂಸ್ಕೃತದಲ್ಲಿ

'ನ್ಯಾಯತತ್ತ್ವ' ಮತ್ತು 'ಯೋಗರಹಸ್ಯ' ಎಂಬ ಗ್ರಂಥಗಳನ್ನು ಬರೆದಂತೆ ಪ್ರತೀತಿಯಿದೆ. ಆದರೆ ಅವು ಈಗ ಉಪಲಬ್ಧವಿಲ್ಲ.

ಯಾಮುನಾಚಾರ್ಯ

ಈತನು ನಾಥಮುನಿಯ ಮೊಮ್ಮಗನು. ಕ್ರಿ.ಶ. ೧೦ನೆಯ ಶತಮಾನದ ಪ್ರಾರಂಭದಲ್ಲಿ ಜನಿಸಿದನು. ಈತನ ತಂದೆಯಾದ ಈಶ್ವರಭಟ್ಟನೂ ನಾಥಮುನಿಯ ಶಿಷ್ಯರಲ್ಲೊಬ್ಬನಾದ ಪುಂಡರೀಕನ ಶಿಷ್ಯ ರಾಮಮಿಶ್ರನೂ ಕೂಡಿ ಈತನಿಗೆ ವೇದಾಭ್ಯಾಸ ಮಾಡಿಸಿದರೆಂದು ತಿಳಿದುಬರುತ್ತದೆ. ಯಾಮುನಾಚಾರ್ಯನು ಬಹಳ ಪ್ರತಿಭಾ ಶಾಲಿಯಾಗಿದ್ದು ಚಿಕ್ಕಂದಿನಲ್ಲೆ ಅಕ್ಕಿ ಆಳ್ವಾನ್ ಎಂಬ ಪಂಡಿತನನ್ನು ಸೋಲಿಸಿ ಆಳವಂದಾರ್ ಎಂಬ ಹೆಸರನ್ನು ಪಡೆದನು.

ಯೌವನದಲ್ಲಿ ಯಾಮುನಾಚಾರ್ಯನು ಶ್ರೀಮಂತನೂ ಸುಖೋಪಭೋಗಿಯೂ ಆದ ಗೃಹಸ್ಥನಾಗಿದ್ದನು. ಇವನಿಗೆ ನಾಲ್ಕು ಜನ ಮಕ್ಕಳಿದ್ದರು. ಒಂದು ದಿವಸ ಈತನ ಗುರುವಾದ ರಾಮಮಿಶ್ರನು ಈತನನ್ನು ಶ್ರೀರಂಗಸ್ವಾಮಿಯ ಗುಡಿಗೆ ಕರೆದುಕೊಂಡುಹೋಗಿ ದೇವರ ಮುಂದೆ ನಿಲ್ಲಿಸಿ ನಾಥಮುನಿಯ ಪ್ರಸಿದ್ಧಿಯನ್ನೂ ಪ್ರಭಾವವನ್ನೂ ತಿಳಿಸಿ, ಅಂತಹ ಪ್ರಸಿದ್ಧಪುರುಷನ ಮೊಮ್ಮಗನಾದ ಇವನು ಮಾಡಬೇಕಾದ ಕರ್ತವ್ಯಗಳನ್ನು ಚೆನ್ನಾಗಿ ತಿಳಿಯಹೇಳಿದನು. ಈ ಉಪದೇಶದಿಂದ ಯಾಮುನಾಚಾರ್ಯನು ಸಂಸಾರ ವಿಮುಖನಾಗಿ ಸಂನ್ಯಾಸವನ್ನು ಕೈಕೊಂಡು ವೈಷ್ಣವ ಮತದ ಪ್ರಸಾರ ಕಾರ್ಯದಲ್ಲಿ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಿದನು. ಈತನು ೧. ಸಿದ್ಧಿತ್ರಯ, ೨. ಆಗಮ ಪ್ರಾಮಾಣ್ಯ, ೩. ಗೀತಾರ್ಥ ಸಂಗ್ರಹ, ೪. ಮಹಾಪುರುಷ ನಿರ್ಣಯ ಎಂಬ ಗ್ರಂಥಗಳನ್ನು ಬರೆದಿರುವನು. ಇವುಗಳಲ್ಲಿ ಕೊನೆಯದು ಉಪಲಬ್ಧವಿಲ್ಲ.

ನಾಥಮುನಿಯ ಶಿಷ್ಯರಲ್ಲೊಬ್ಬನಾದ ಕುರುಕೈಕ್ಕಾವಲಪ್ಪನ್ ಎಂಬವನಿಂದ ಯೋಗರಹಸ್ಯದ ಉಪದೇಶವನ್ನು ಮಾಡಬೇಕೆಂದು ಯಾಮುನಾಚಾರ್ಯನು ಅವನನ್ನು ಕೇಳಿದ್ದನು. ಅವನೂ ಒಪ್ಪಿಕೊಂಡಿದ್ದನು. ಒಂದು ನಿಶ್ಚಿತವಾದ ದಿವಸ ಹೋಗಿ ಉಪದೇಶವನ್ನು ಪಡೆಯಬೇಕೆಂಬುದಾಗಿ ಮಾತೂ ಆಗಿತ್ತು. ಈ ಮಧ್ಯದಲ್ಲಿ ಯಾಮುನಾಚಾರ್ಯನು ದಕ್ಷಿಣದೇಶದ ವೈಷ್ಣವಕ್ಷೇತ್ರಗಳಿಗೆ ಯಾತ್ರಾರ್ಥಿಯಾಗಿ ಹೋದವನು ನಿರ್ದಿಷ್ಟವಾದ ದಿವಸಕ್ಕೆ ಸರಿಯಾಗಿ ತಿರುಗಿ ಬರಲಿಲ್ಲ. ಅವನು ತಿರುಗಿಬರುವಷ್ಟರಲ್ಲಿ ಕುರುಕೈಕ್ಕಾವಲಪ್ಪನ್ ತೀರಿಕೊಂಡಿದ್ದನು.

ಯಾಮುನಾಚಾರ್ಯನು ಮುಪ್ಪಿನವರೆಗೆ ಜೀವಿಸಿದ್ದು ಸುಮಾರು ಕ್ರಿ.ಶ. ೧೦೪೦ರಲ್ಲಿ ಸಮಾಧಿಸ್ಥನಾದನೆಂದು ತಿಳಿದುಬರುತ್ತದೆ. ಯಾಮುನಾಚಾರ್ಯನಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಕೆಲವರು ರಾಮಾನುಜರಿಗೆ ಗುರುಗಳಾಗಿದ್ದರು. ಮಹಾಪೂರ್ಣ,

ಗೋಷ್ಠಿಪೂರ್ಣ, ಶ್ರೀಶೈಲಪೂರ್ಣ ಮಲಾಧರ ಎಂಬವರು ಯಾಮುನಾಚಾರ್ಯರ ಶಿಷ್ಯರಲ್ಲಿ ಮುಖ್ಯರು. ಯಾಮುನಾಚಾರ್ಯನು ಅಂತ್ಯಕಾಲದಲ್ಲಿ ರಾಮಾನುಜರನ್ನು ಕಾಣಬೇಕೆಂದೂ ಅವರೇ ತನ್ನ ತರುವಾಯ ಶ್ರೀರಂಗದ ವೈಷ್ಣವ ಪೀಠದ ಅಧಿಕಾರಿಯಾಗಬೇಕೆಂದೂ ಇಚ್ಛಿಸುತ್ತಿದ್ದನು. ಆ ಕಾಲದಲ್ಲಿ ರಾಮಾನುಜರು ಕಂಚಿಯಲ್ಲಿರುತ್ತಿದ್ದರು. ಅವರು ಅಲ್ಲಿಂದ ಬರುವಷ್ಟರಲ್ಲಿ ಯಾಮುನಾಚಾರ್ಯನು ಪರಂಧಾಮವನ್ನೈದಿದನು.

ರಾಮಾನುಜಾಚಾರ್ಯರು

ಯಾಮುನಾಚಾರ್ಯನ ಶಿಷ್ಯರಲ್ಲೊಬ್ಬನೂ ಆಪ್ತನೂ ಆದ ಶ್ರೀಶೈಲಪೂರ್ಣನು ತಿರುಪತಿಯ ಬೆಟ್ಟದ ಗುಡಿಯಲ್ಲಿ ಕಿಂಕರನಾಗಿದ್ದನು. ಅವನಿಗೆ ಇಬ್ಬರು ತಂಗಿಯರಿದ್ದರು. ಅವರಲ್ಲಿ ಕಾಂತಿಮತಿ ಎಂಬುವಳನ್ನು ಪೆರುಂಬುದೂರಿನ ಕೇಶವ ಸೋಮಯಾಜಿ ಲಗ್ನವಾಗಿದ್ದನು. ಈ ದಂಪತಿಗಳಿಂದ ಕ್ರಿ.ಶ. ೧೦೧೭ರಲ್ಲಿ ರಾಮಾನುಜರು ಜನಿಸಿದರು. ಶ್ರೀಶೈಲಪೂರ್ಣನ ಎರಡನೆಯ ತಂಗಿಯನ್ನು ಮಲಯಮಂಗಲದ ಕಮಲನಯಭಟ್ಟನು ಲಗ್ನವಾಗಿದ್ದನು. ಗೋವಿಂದಭಟ್ಟನು ಅವರ ಮಗನು. ಶ್ರೀಶೈಲಪೂರ್ಣನು ತನ್ನ ಈ ಇಬ್ಬರೂ ಅಳಿಯಂದಿರನ್ನು ಕಂಚಿಯ ಯಾದವಪ್ರಕಾಶನಲ್ಲಿ ಶಾಸ್ತ್ರಾಭ್ಯಾಸಕ್ಕಾಗಿ ಇಟ್ಟಿದ್ದನು. ಯಾದವ ಪ್ರಕಾಶನು ಹೇಳುತ್ತಿದ್ದ ಅರ್ಥ ರಾಮಾನುಜರಿಗೆ ಸರಿದೋರುತ್ತಿರಲಿಲ್ಲ. ಆದುದರಿಂದ ಗುರುಶಿಷ್ಯರಲ್ಲಿ ವೈಮನಸ್ಯ ಬೆಳೆಯಿತು. ರಾಮಾನುಜರು ಅಭ್ಯಾಸವನ್ನು ಬಿಟ್ಟು ಕಂಚಿಯ ದೇವರಾಜಪೆರುಮಾಳ್ ಗುಡಿಯಲ್ಲಿ ಕಿಂಕರರಾದರು. ಈ ಗುಡಿಯ ವ್ಯವಸ್ಥೆ ಯಾಮುನಾಚಾರ್ಯರ ಶಿಷ್ಯರಲ್ಲೊಬ್ಬನಾದ ಕಾಂಚೀಪೂರ್ಣನ ಅಧೀನದಲ್ಲಿತ್ತು. ಕಾಂಚೀಪೂರ್ಣನು ಆ ಕಾಲದಲ್ಲಿ ಬಹಳ ಪ್ರಸಿದ್ಧ ದೇವನಿಷ್ಠನಾದ ಭಕ್ತನಾಗಿದ್ದನು.

ಹತ್ತನೆಯ ಶತಮಾನದ ಕೊನೆಯ ಸುಮಾರಿಗೆ ವಿಶಿಷ್ಟಾದ್ವೈತಮತ ಯಾಮುನಾಚಾರ್ಯನ ಪ್ರಯತ್ನದಿಂದ ವಿಶೇಷವಾಗಿ ಬೆಳೆದು ಶ್ರೀರಂಗ, ಕಂಚಿ, ತಿರುಪತಿ ಮೊದಲಾದ ಸ್ಥಳಗಳಲ್ಲಿ ಬೇರೂರಿತು. ಆದರೆ ಆತನ ಅನುಯಾಯಿಗಳಲ್ಲಿ ಈ ಮತದ ಬೆಳವಣಿಗೆಯನ್ನು ಸಾಗಿಸಿಕೊಂಡು ಹೋಗುವಷ್ಟು ಯೋಗ್ಯತೆಯುಳ್ಳವರು ಯಾರೂ ಇದ್ದಿದ್ದಿಲ್ಲ. ಯಾಮುನಾಚಾರ್ಯನು ಕಂಚಿಗೆ ಒಮ್ಮೆ ಹೋಗಿದ್ದಾಗ ಆಗ ಇನ್ನೂ ಚಿಕ್ಕವರಾಗಿದ್ದ ರಾಮಾನುಜರನ್ನು ಕಂಡಿದ್ದನು. ಆ ಕಾಲದಲ್ಲಿ ರಾಮಾನುಜರು ಅದ್ವೈತಮತಾನುಯಾಯಿಯಾದ ಯಾದವಪ್ರಕಾಶನಲ್ಲಿ ಶಾಸ್ತ್ರಾಭ್ಯಾಸ ಮಾಡುತ್ತಿದ್ದರು. ಆದರೂ ವಿಶಿಷ್ಟಾದ್ವೈತಮತದ ಪ್ರಸಾರ ಕಾರ್ಯವನ್ನು ಮಾಡಲು ರಾಮಾನುಜರಿಗಿಂತಲೂ ಯೋಗ್ಯರಾದವರು ಬೇರೆಯಿಲ್ಲವೆಂದು ಯಾಮುನಾಚಾರ್ಯನ ಮತವಾಗಿತ್ತು. ಆದರೂ ಆ ವಿಷಯವನ್ನು ಆಗ ಚರ್ಚಿಸದೆ ದೇವರಿಚ್ಛೆಯಿದ್ದಂತಾಗಲಿ ಎಂದು ಸುಮ್ಮನಿದ್ದನು. ಯಾಮುನಾಚಾರ್ಯನು ತಾನು ಸಾಯುವುದಕ್ಕೆ ಮೊದಲು

ರಾಮಾನುಜರನ್ನು ಕಾಣಬೇಕೆಂದು ಅವರನ್ನು ಕರೆತರಲು ಮಹಾಪೂರ್ಣನೆಂಬುವನನ್ನು ಕಂಚಿಗೆ ಕಳುಹಿಸಿದನು. ಆ ಕಾಲದಲ್ಲಿ ರಾಮಾನುಜರು ಗುಡಿಯಲ್ಲಿ ಕಿಂಕರರಾಗಿದ್ದರು. ರಾಮಾನುಜರೂ ಹೊರಟು ಬಂದರು. ಅವರಿಬ್ಬರೂ ಕಾವೇರಿಯ ಉತ್ತರದಡವನ್ನು ಮುಟ್ಟುವಷ್ಟರಲ್ಲಿ ವೈಷ್ಣವರ ಒಂದು ದೊಡ್ಡ ಗುಂಪು ಕೂಡಿತ್ತು. ಅದೇನೆಂದು ವಿಚಾರಿಸಲಾಗಿ ಯಾಮುನಾಚಾರ್ಯನು ಸಮಾಧಿಸ್ಥನಾದುದು ತಿಳಿದುಬಂತು. ರಾಮಾನುಜರು ಕಳೇಬರದ ದರ್ಶನವನ್ನು ತೆಗೆದುಕೊಂಡರು. ಆಗ ಅದರ ಬಲಗೈಯ ಮೂರು ಬೆರಳುಗಳು ಗಟ್ಟಿಯಾಗಿ ಮುಚ್ಚಿದ್ದುದು ಅವರಿಗೆ ಕಾಣಿಸಿತು. ವಿಚಾರಿಸಲಾಗಿ, ಯಾಮುನಾಚಾರ್ಯನಿಗೆ ೧. ಬ್ರಹ್ಮಸೂತ್ರಕ್ಕೆ ವಿಶಿಷ್ಟಾದ್ವೈತ ಪರವಾದ ಭಾಷ್ಯವನ್ನು ಬರೆಯುವ, ೨. ವಿಷ್ಣು ಪುರಾಣದ ಕರ್ತೃವಾದ ಪರಾಶರರ ಹೆಸರನ್ನು ಶಾಶ್ವತಗೊಳಿಸುವ, ೩. ಆಳ್ವಾರರಲ್ಲಿ ಪ್ರಸಿದ್ಧನಾದ ನಮ್ಮಾಳ್ವಾರ್ ಅಥವಾ ಶಠಕೋಪನ ಹೆಸರನ್ನು ಶಾಶ್ವತಗೊಳಿಸುವ ಮೂರು ಆಶೆಗಳು ಪೂರ್ಣವಾಗದೆ ಉಳಿದುವೆಂದು ತಿಳಿದುಬಂತು. ರಾಮಾನುಜರು ಆ ಮೂರು ಕಾರ್ಯಗಳನ್ನು ತಾವು ಮಾಡುವುದಾಗಿ ಭಾಷೆಕೊಟ್ಟರು. ಕೂಡಲೇ ಬೆರಳುಗಳು ಬಿಚ್ಚಿದುವಂತೆ.

ಯಾಮುನಾಚಾರ್ಯನ ಔರ್ಧ್ವದೇಹಿಕ ಕ್ರಿಯೆಗಳು ಮುಗಿದ ತರುವಾಯ ರಾಮಾನುಜರು ಕಂಚಿಗೆ ತಿರುಗಿಬಂದು ಕಾಂಚೀಪೂರ್ಣನ ಸಹವಾಸದಲ್ಲಿ ಕಾಲ ಕಳೆಯುತ್ತಿದ್ದರು. ಕಾಂಚೀಪೂರ್ಣನು ಬ್ರಾಹ್ಮಣನಲ್ಲ. ಆದರೂ ರಾಮಾನುಜರು ಅವನ ಮನೆಗೆ ಹೋಗುವುದು, ಅವನನ್ನು ತಮ್ಮ ಮನೆಗೆ ಕರೆಯುವುದು ಹೀಗೆ ಪರಿಪಾಠವಿತ್ತು. ಆದರೆ ಇದು ರಾಮಾನುಜರ ಹೆಂಡತಿಗೆ ಸರಿದೋರುತ್ತಿರಲಿಲ್ಲ. ಒಂದು ದಿವಸ ರಾಮಾನುಜರು ಕಾಂಚೀಪೂರ್ಣನನ್ನು ಊಟಕ್ಕೆ ಕರೆದಿದ್ದರು. ರಾಮಾನುಜರು ಮನೆಯಲ್ಲಿ ಇಲ್ಲದೆ ಇದ್ದಾಗ ಕಾಂಚೀಪೂರ್ಣನು ಬಂದು ತನಗೆ ಬಹಳ ಹಸಿವೆಯಾಗಿದೆಯೆಂದು ಹೇಳಿದುದರಿಂದ ರಾಮಾನುಜರ ಹೆಂಡತಿ ಅವನಿಗೆ ಹೊರಗಿನಿಂದಲೇ ಊಟಕ್ಕೆ ಹಾಕಿ ಅವನು ಊಟ ಮಾಡಿ ಹೊರಟುಹೋದ ಕೂಡಲೆ ಅದನ್ನು ಬಳಿದು ಶುದ್ಧಮಾಡಿ ಸ್ನಾನಮಾಡುತ್ತಿದ್ದುದನ್ನು ಆ ಸಮಯಕ್ಕೆ ಬಂದ ರಾಮಾನುಜರು ಕಂಡು ನಡೆದುದನ್ನೆಲ್ಲಾ ಕೇಳಿ ಬಹಳ ವ್ಯಥೆಪಟ್ಟರು. ಮತ್ತೊಮ್ಮೆ ರಾಮಾನುಜರು ಯಾಮುನಾಚಾರ್ಯನ ಶಿಷ್ಯನಾದ ಮಹಾಪೂರ್ಣನನ್ನು ಕಾಣಬೇಕೆಂದು ಹುಡುಕುತ್ತಾ ಹೋಗಿ ಮಧುರಾಂತಕಂ ಎಂಬ ಊರಲ್ಲಿ ಅವರನ್ನು ಕಂಡು ಅವರನ್ನೂ ಅವರ ಇಬ್ಬರು ಹೆಣ್ಣುಮಕ್ಕಳನ್ನೂ ಕರೆದುಕೊಂಡು ಬಂದು ತಮ್ಮ ಮನೆಯಲ್ಲೆ ಇಳಿಸಿಕೊಂಡು ಮಹಾಪೂರ್ಣನಿಂದ ವೈಷ್ಣವಮತದ ಮಹತ್ತ್ವಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಒಂದು ದಿವಸ ಮಹಾಪೂರ್ಣನ ಮಕ್ಕಳೂ ರಾಮಾನುಜರ ಹೆಂಡತಿಯೂ ನೀರಿಗೆ ಹೋದಲ್ಲಿ, ರಾಮಾನುಜರ ಹೆಂಡತಿ ಜಗಳ ತೆಗೆದು, ಇಬ್ಬರೂ ಜಗಳವಾಡಿದರು. ಈ ವಿಷಯವನ್ನು ಮಹಾಪೂರ್ಣರಿಗೆ ಅವರ ಮಕ್ಕಳು ತಿಳಿಸಿದರು.

ಅವರುಗಳು ರಾಮಾನುಜರಿಗೆ ಈ ವಿಷಯಗಳೆಲ್ಲಾ ತಿಳಿದರೆ ಬಹಳ ನೊಂದುಕೊಂಡಾರೆಂದು ಅವರಿಗೆ ತಿಳಿಸದೆ ಶ್ರೀರಂಗಕ್ಕೆ ಹೊರಟುಹೋದರು. ಈ ಎಲ್ಲ ಕಾರಣಗಳಿಂದ ರಾಮಾನುಜರಿಗೆ ಸಂಸಾರದಲ್ಲಿ ವಿರಕ್ತಿ ಹುಟ್ಟಿ ಹೆಂಡತಿಯನ್ನು ತವರುಮನೆಗೆ ಕಳುಹಿಸಿ ತಾವು ಸಂನ್ಯಾಸಿಗಳಾದರು.

ರಾಮಾನುಜರ ಕೀರ್ತಿ ಸರ್ವತ್ರ ವ್ಯಾಪಿಸಿತು. ಕೂರೇಶನೆಂಬ ಶ್ರೀಮಂತ ಬ್ರಾಹ್ಮಣನು ರಾಮಾನುಜರ ಶಿಷ್ಯನಾದನು. ರಾಮಾನುಜರ ಸೋದರಳಿಯನಾದ ದಾಶರಥಿಯೂ ಅವರ ಮತವನ್ನವಲಂಬಿಸಿದನು. ಇದೇ ಕಾಲಕ್ಕೆ ರಾಮಾನುಜರಿಗೆ ಶ್ರೀರಂಗದಿಂದ ಕರೆ ಬಂದಿತು. ರಾಮಾನುಜರು ದಾಶರಥಿಯೊಡನೆ ಶ್ರೀರಂಗಕ್ಕೆ ಹೋದರು. ಶ್ರೀರಂಗದ ವೈಷ್ಣವರು ಅವರನ್ನು ಬಹಳ ಮರ್ಯಾದೆಯಿಂದ ಎದುರ್ಗೊಂಡು ಕರೆದುಕೊಂಡು ಯಾಮುನಾಚಾರ್ಯರ ಪೀಠದ ಮೇಲೆ ಕುಳ್ಳಿರಿಸಿದರು. ರಾಮಾನುಜರ ಶಿಷ್ಯನಾದ ಕೂರೇಶನೂ ತನ್ನ ಸರ್ವಸ್ವವನ್ನು ಬಡವರಿಗೆ ದಾನಮಾಡಿ ಹೆಂಡತಿಯೊಡನೆ ಶ್ರೀರಂಗಕ್ಕೆ ಬಂದನು. ರಾಮಾನುಜರ ಚಿಕ್ಕಪ್ಪನ ಮಗನೂ ಸಹಾಧ್ಯಾಯಿಯೂ ಆದ ಗೋವಿಂದಭಟ್ಟನು ವೈಷ್ಣವಮತವನ್ನು ಸ್ವೀಕರಿಸಿ ಸಂನ್ಯಾಸಿಯಾಗಿ ಎಂಬಾರ್ ಎಂಬ ಹೆಸರಿನಿಂದ ರಾಮಾನುಜರ ಶಿಷ್ಯರಲ್ಲೊಬ್ಬನಾದನು. ರಾಮಾನುಜರು ವಾದದಲ್ಲಿ ಯಜ್ಞಮೂರ್ತಿಯೆಂಬ ಅದ್ವೈತ ಮತದ ಪಂಡಿತನನ್ನು ಸೋಲಿಸಿ ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ದೇವರಾಜಮುನಿಯೆಂಬ ಹೆಸರಿಟ್ಟರು.

ಯಾಮುನಾಚಾರ್ಯರ ಶಿಷ್ಯರಾದ ಅನೇಕ ವೃದ್ಧರು ರಾಮಾನುಜರಿಗೆ ವೈಷ್ಣವಮತದ ತತ್ತ್ವಗಳನ್ನು ಉಪದೇಶಿಸುತ್ತಿದ್ದರು. ಅವರಲ್ಲಿ ಗೋಷ್ಠೀಪೂರ್ಣನೆಂಬವನು ರಾಮಾನುಜರನ್ನು ಮಧುರೆ ಜಿಲ್ಲೆಯಲ್ಲಿದ್ದ ತನ್ನ ಊರಿಗೆ ಶ್ರೀರಂಗದಿಂದ ೧೮ ಸಾರಿ ಬರುವಂತೆ ಮಾಡಿ ಕಡೆಗೆ ಯಾರಿಗೂ ಹೇಳಕೂಡದೆಂದು ಗೀತಾರಹಸ್ಯವನ್ನು ಉಪದೇಶಿಸಿದನು. ಉಪದೇಶವನ್ನು ಹೊಂದಿದ ಕೂಡಲೇ ಆಚಾರ್ಯರು ಸಮೀಪದಲ್ಲಿ ಒಂದು ಗುಡ್ಡದ ಮೇಲೆ ಹತ್ತಿ ಅಲ್ಲಿ ನಿಂತುಕೊಂಡು ಕೆಳಗೆ ಜನರನ್ನು ಕೂಡಿಸಿ ಎಲ್ಲರಿಗೂ ಕೇಳುವಂತೆ ಆ ಗುಪ್ತಮಂತ್ರವನ್ನು ಗಟ್ಟಿಯಾಗಿ ಹೇಳಿದರು.

ರಾಮಾನುಜರು ವೇದಾರ್ಥಸಂಗ್ರಹವೆಂಬ ಗ್ರಂಥವನ್ನು ಬರೆದು ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯುವ ಕಾರ್ಯವನ್ನು ಕೈಕೊಂಡರು. ಬೋಧಾಯನ ವೃತ್ತಿಯನ್ನನುಸರಿಸಿ ಭಾಷ್ಯವನ್ನು ಬರೆಯಬೇಕೆಂದು ಆಚಾರ್ಯರ ಇಚ್ಛೆಯಾಗಿದ್ದಿತು. ಆ ಕಾಲದಲ್ಲಿ ಬೋಧಾಯನ ವೃತ್ತಿಯ ಪ್ರತಿಗಳು ದಕ್ಷಿಣ ಹಿಂದೂಸ್ಥಾನದಲ್ಲಿ ದೊರೆಯುತ್ತಿರಲಿಲ್ಲ. ಆದುದರಿಂದ ಆಚಾರ್ಯರು ಕೂರೇಶನನ್ನು ಸಂಗಡ ಕರೆದುಕೊಂಡು ಕಾಶ್ಮೀರಕ್ಕೆ ಹೋಗಿ ವೃತ್ತಿಯನ್ನು ದೊರಕಿಸಿಕೊಂಡು ಬಂದು ತಮ್ಮ ಭಾಷ್ಯವನ್ನು ಪೂರ್ಣಮಾಡಿದರು. ರಾಮಾನುಜರ ಈ ಭಾಷ್ಯಕ್ಕೆ ಶ್ರೀಭಾಷ್ಯವೆಂದು

ಹೆಸರು. ಇದಲ್ಲದೆ ಶ್ರೀಭಾಷ್ಯದ ಸಾರವನ್ನೊಳಕೊಂಡ ವೇದಾಂತಸಾರ, ವೇದಾಂತದೀಪ ಎಂಬ ಬೇರೆ ಎರಡು ಸಣ್ಣ ಗ್ರಂಥಗಳನ್ನೂ ಭಗವದ್ಗೀತೆಯ ಭಾಷ್ಯವನ್ನೂ ಗದ್ಯತ್ರಯ ಮತ್ತು ನಿತ್ಯವೆಂಬ ಗ್ರಂಥಗಳನ್ನೂ ಬರೆದಿರುವರು.

ಆಚಾರ್ಯರು ವೈಷ್ಣವ ಕ್ಷೇತ್ರಗಳ ದರ್ಶನ ಮತ್ತು ಮತಪ್ರಚಾರ ಕಾರ್ಯಗಳಿಗಾಗಿ ದೊಡ್ಡ ಪ್ರವಾಸವನ್ನು ಕೈಕೊಂಡರು. ಅವರು ಮೊದಲು ದಕ್ಷಿಣಕ್ಕೆ ಹೊರಟು ವೈಷ್ಣವ ಸಾಧುಗಳಾದ ಆಳ್ವಾರರ ಸ್ಥಾನಗಳನ್ನೆಲ್ಲ ದರ್ಶನಮಾಡಿಕೊಂಡು ಅನಂತಶಯನಕ್ಕೆ ಹೋಗಿ ಅಲ್ಲಿಂದ ಪಶ್ಚಿಮ ಸಮುದ್ರತೀರದ ಮಾರ್ಗವಾಗಿ ದ್ವಾರಕೆಗೆ ಹೋಗಿ ಅಲ್ಲಿಂದ ಮಥುರೆ, ಬದರಿನಾಥ, ಕಾಶ್ಮೀರ, ಕಾಶಿ, ಜಗನ್ನಾಥಗಳ ಮಾರ್ಗವಾಗಿ ತಿರುಪತಿಗೆ ಬಂದು ಅಲ್ಲಿ ತಿರುಪತಿಯ ದೇವರು ವೈಷ್ಣವರ ದೇವರೆಂಬ ನಿರ್ಣಯವನ್ನು ಕೊಟ್ಟು ಅಲ್ಲಿಂದ ಕಂಚಿಯ ಮಾರ್ಗವಾಗಿ ನಾಥಮುನಿಯ ಜನ್ಮಸ್ಥಾನವಾದ ವೀರನಾರಾಯಣಪುರಕ್ಕೆ ಹೋಗಿ ಅಲ್ಲಿಂದ ಶ್ರೀರಂಗವನ್ನು ಮುಟ್ಟಿದರು.

ರಾಮಾನುಜರ ಪ್ರಖ್ಯಾತಿ ಬಹಳ ಬೆಳೆದು ಅವರಿಗೆ ಅನೇಕ ಶಿಷ್ಯರಾದರು. ರಾಮಾನುಜರು ತಮ್ಮ ಶಿಷ್ಯರನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಇವರ ಸೋದರಮಾವನ ಮಗನಾದ ಪಿಳ್ಳಾನ್ ಎಂಬುವನನ್ನು ಇವರು ತಮ್ಮ ಸ್ವಂತ ಮಗನಂತೆ ಪ್ರೀತಿಸುತ್ತಿದ್ದರು. ಅವನಿಗೆ ಶಠಕೋಪನ ಹೆಸರಾದ ಕುರುಕೇಶನೆಂಬ ಹೆಸರಿಟ್ಟು ಆತನಿಂದ ಶಠಕೋಪನ ತಿರುವಾಯ್‌ಮೊಳಿಗೆ ವ್ಯಾಖ್ಯಾನವನ್ನು ಬರೆಯಿಸಿ ಶಠಕೋಪನ ಹೆಸರನ್ನು ಶಾಶ್ವತಗೊಳಿಸಿದರು. ತಮ್ಮ ಶಿಷ್ಯನಾದ ಕೂರೇಶನ ಮಗನಿಗೆ ಪರಾಶರನೆಂದು ಹೆಸರಿಟ್ಟು ಭಗವದ್ಗುಣದರ್ಪಣ ಮೊದಲಾದ ಅನೇಕ ಗ್ರಂಥಗಳನ್ನು ಬರೆಯಿಸಿ ಪರಾಶರನ ಹೆಸರನ್ನೂ ಶಾಶ್ವತಗೊಳಿಸಿ ತಾವು ಯಾಮುನಾಚಾರ್ಯನ ಶವದ ಮುಂದೆ ಕೊಟ್ಟ ವಚನವನ್ನು ಪೂರ್ಣಗೊಳಿಸಿದರು.

ರಾಮಾನುಜಾಚಾರ್ಯರ ಮತಪ್ರಸಾರ ಕಾರ್ಯದಿಂದ ಶೈವನಾದ ಮೊದಲನೆಯ ಕುಲೋತ್ತುಂಗ ಚೋಳನಿಗೂ ಇವರಿಗೂ ಮನಸ್ತಾಪವುಂಟಾಗಿ ಇವರು ಶ್ರೀರಂಗವನ್ನು ಬಿಟ್ಟು ದೋರಸಮುದ್ರದ ಬಲ್ಲಾಳ ರಾಜನಾದ ಬಿಟ್ಟಿದೇವನಲ್ಲಿ ಆಶ್ರಯಹೊಂದಿದರು. ಬಿಟ್ಟಿದೇವನನ್ನು ಶ್ರೀವೈಷ್ಣವನನ್ನಾಗಿ ಮಾಡಿ ಅವನಿಗೆ ವಿಷ್ಣುವರ್ಧನನೆಂಬುದಾಗಿ ಹೆಸರಿಟ್ಟರು. ಮೇಲುಕೋಟೆಯಲ್ಲಿ ಒಂದು ವಿಷ್ಣುದೇವಾಲಯವನ್ನು ಕಟ್ಟಿಸಿ ರಾಮಪ್ರಿಯ ಎಂಬ ವಿಷ್ಣುವಿನ ವಿಗ್ರಹವನ್ನು ಅಲ್ಲಿ ಸ್ಥಾಪಿಸಿದರು. ಈ ವಿಗ್ರಹ ದಿಲ್ಲಿಯ ಬಾದಶಹನ ಮಗಳಲ್ಲಿತ್ತೆಂದೂ ಅದನ್ನು ರಾಮಾನುಜರು ಅಲ್ಲಿಂದ ತಂದು ಮೇಲುಕೋಟೆಯಲ್ಲಿ ಸ್ಥಾಪಿಸಿದರೆಂದೂ ಪ್ರತೀತಿಯಿದೆ. ಮೇಲುಕೋಟೆಯ ದೇವಾಲಯದಲ್ಲಿ ಕೆಲವು ನಿಯಮಿತ ದಿವಸಗಳಲ್ಲಿ ಪಂಚಮರಿಗೆ ದೇವರ ದರ್ಶನಕ್ಕೆ ಅವಕಾಶವನ್ನು

ಮಾಡಿಕೊಟ್ಟರು. ಬೇಲೂರು ಮೊದಲಾದ ಸ್ಥಳಗಳಲ್ಲಿಯೂ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದರು. ಇವರು ಮೈಸೂರು ದೇಶದಲ್ಲಿ ಸುಮಾರು ೨೦ ವರ್ಷ ಇದ್ದರೆಂದು ತಿಳಿದುಬರುತ್ತದೆ. ಇದೇ ಕಾಲಕ್ಕೆ ಕುಲೋತ್ತುಂಗ ಚೋಳನು ತೀರಿಕೊಂಡನು. ಆತನ ತರುವಾಯ ಪಟ್ಟಕ್ಕೆ ಬಂದ ರಾಜನು ವೈಷ್ಣವರಿಗೆ ವಿರೋಧಿಯಲ್ಲವೆಂದು ನಿಶ್ಚಯವಾಗಿ ತಿಳಿದಮೇಲೆ ಆಚಾರ್ಯರು ತಿರುಗಿ ಶ್ರೀರಂಗಕ್ಕೆ ಹೋದರು.

ಚಿದಂಬರದಲ್ಲಿದ್ದ ಗೋವಿಂದರಾಜನ ವಿಗ್ರಹವನ್ನು ಚೋಳರಾಜನಾದ ಕುಲೋತ್ತುಂಗನ ಆಜ್ಞೆಯ ಪ್ರಕಾರ ಕಿತ್ತೊಗೆದುದನ್ನು ವೈಷ್ಣವರು ಗುಪ್ತರೀತಿಯಿಂದ ತಂದು ತಿರುಪತಿಯಲ್ಲಿ ಬಚ್ಚಿಟ್ಟಿದ್ದರು. ಆ ವಿಷಯ ಆಚಾರ್ಯರಿಗೆ ತಿಳಿದ ಕೂಡಲೇ ಅವರು ತಿರುಪತಿಗೆ ಬಂದು ಆ ಮೂರ್ತಿಯನ್ನು ದೊರಕಿಸಿ ಬೆಟ್ಟದ ಬುಡದಲ್ಲಿ ಗೋವಿಂದರಾಜ ಪಟ್ಟಣದಲ್ಲಿ ಗುಡಿಯನ್ನು ಕಟ್ಟಿಸಿ ಅದರಲ್ಲಿ ಆ ಮೂರ್ತಿಯನ್ನು ಸ್ಥಾಪಿಸಿದರು. ಆಮೇಲೆ ಶ್ರೀರಂಗಕ್ಕೆ ತಿರುಗಿಹೋಗಿ ಅಲ್ಲಿ ಕೆಲವು ದಿವಸವಿದ್ದು ಕ್ರಿ.ಶ. ೧೧೩೭ರಲ್ಲಿ ಸಮಾಧಿಸ್ಥರಾದರು.

ರಾಮಾನುಜರ ಸಿದ್ಧಾಂತದಲ್ಲಿ ಚಿತ್, ಅಚಿತ್ ಮತ್ತು ಈಶ್ವರ ಎಂಬ ಮೂರು ಪದಾರ್ಥಗಳಿವೆ. ಚಿತ್ ಎಂದರೆ ಆತ್ಮ; ಅಚಿತ್ ಎಂದರೆ ಅಚೇತನ ಜಗತ್ತು; ಈಶ್ವರ ಎಂದರೆ ಪರಮಾತ್ಮ. ಜೀವಾತ್ಮ ಮತ್ತು ಅಚೇತನ ಜಗತ್ತು ಇವೆರಡೂ ಪರಮಾತ್ಮನ ವಿಶೇಷಣಗಳು (Attributes). ರಾಮಾನುಜರ ಮತಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ವಿಶಿಷ್ಟಾದ್ವೈತವೆಂದರೆ ವಿಶಿಷ್ಟತೆಗಳಿಂದೊಡಗೂಡಿದ ಅದ್ವೈತ ಧರ್ಮ. "ದೇವರು ಒಬ್ಬನೆ ಸದ್‌ವಸ್ತು. ಉಳಿದುವೆಲ್ಲ ಆತನ ಪ್ರತಿಬಿಂಬ. ಪರಮಾತ್ಮನನ್ನು ಬಿಟ್ಟು ಉಳಿದೆಲ್ಲವೂ ನಶ್ವರ ಮತ್ತು ಕ್ಷಣಿಕವಾದವು. ಅವು ಅವಿದ್ಯೆಯಿಂದ ನಮಗೆ ಸತ್ಯದಂತೆ ಕಾಣುವುವು. ಬ್ರಹ್ಮನಿಗೆ ಏನೂ ವಿಶೇಷಣಗಳಿಲ್ಲ" ಎಂದು ಅದ್ವೈತಿಗಳು ಹೇಳುವರು. "ಪರಮಾತ್ಮನು ಸದ್‌ವಸ್ತು. ಉಳಿದುವೆಲ್ಲವೂ ಆತನ ಪ್ರಕಾರ ಮತ್ತು ವಿಶೇಷಣಗಳು, ಅಥವಾ ಶರೀರಗಳು. ಪರಮಾತ್ಮನ ವಿಶೇಷಣಗಳು ಕೂಡ ಸತ್ಯವಾದುವು. ಆದರೆ ಅವು ಪರಮಾತ್ಮನಿಂದ ಸ್ವತಂತ್ರವಾದುವುಗಳಲ್ಲ. ಅವುಗಳಿಗೆ ಪ್ರಕಾರ, ಶೇಷ ಮತ್ತು ನಿಯಾಮ್ಯಗಳೆಂದು ಹೆಸರು. ಬ್ರಹ್ಮ ಎಂಬ ಶಬ್ದವನ್ನು ಜೀವಾತ್ಮ ಮತ್ತು ಜಗತ್ತುಗಳೆಂಬ ವಿಶೇಷಣಗಳಿಂದ ಕೂಡಿದ ಪರಮಾತ್ಮನ ಪರವಾಗಿ ಉಪಯೋಗಿಸಬಹುದು" ಎಂದು ವಿಶಿಷ್ಟಾದ್ವೈತಿಗಳು ಹೇಳುವರು. "ವಿಶಿಷ್ಟಾದ್ವೈತಿಗಳ ಪ್ರಕಾರ ದ್ವೈತಮತದಲ್ಲಿಯಂತೆ ಜೀವಾತ್ಮರು ಪರಮಾತ್ಮನಿಂದ ಸ್ವತಂತ್ರ ಮತ್ತು ಬೇರೆಯಾದ ಪದಾರ್ಥಗಳಲ್ಲ."

ಸೃಷ್ಟಿಗಿಂತ ಮೊದಲು ಪರಮಾತ್ಮನಿಗೆ ಸೂಕ್ಷ್ಮವಾದ ಶರೀರವಿರುವುದು. ಸೃಷ್ಟಿಯಾದ ಮೇಲೆ ಅದು ಬೆಳೆದು ವಿಶ್ವದ ರೂಪವನ್ನು ಹೊಂದುವುದು. ಆದುದರಿಂದ

ಬ್ರಹ್ಮನು ಜಗತ್ತಿನ ಉಪಾದಾನ ಕಾರಣನು. ಪರಬ್ರಹ್ಮನು ಜಗತ್ತನ್ನು ನಿರ್ಮಿಸಬೇಕೆಂದು ಇಚ್ಛಿಸುವುದರಿಂದಲೂ ಜಗತ್ತಿನ ಅಂತರ್ನಿಯಾಮಕನಾಗಿರುವುದರಿಂದಲೂ ಜಗತ್ತಿಗೆ ನಿಮಿತ್ತಕಾರಣನಾಗಿರುವನು. ಅಚೇತನ ಜಗತ್ತಿನ ಸೂಕ್ಷ್ಮರೂಪವೇ ಪ್ರಕೃತಿ. ಅದು ಅಂತರ್ನಿಯಾಮಕನಾಗಿರುವ ಪರಮಾತ್ಮನ ರಕ್ಷಣೆಯಲ್ಲಿ ಬೆಳೆದು ಬ್ರಹ್ಮಾಂಡ ಸ್ವರೂಪವನ್ನು ಹೊಂದುವುದು. ಬ್ರಹ್ಮಾಂಡದ ಕರ್ತೃ ಈಶ್ವರನು.

ಈಶ್ವರನು ದೋಷರಹಿತನು, ನಿತ್ಯನು, ಚೇತನಾಚೇತನ ವಸ್ತುಗಳಲ್ಲಿ ವ್ಯಾಪ್ತನು, ಅಂತರ್ಯಾಮಿ, ಸಚ್ಚಿದಾನಂದನು; ಜ್ಞಾನ, ಶಕ್ತಿ ಮೊದಲಾದ ಕಲ್ಯಾಣಗುಣಗಳುಳ್ಳವನು. ವಿಶ್ವದ ಸೃಷ್ಟಿ-ಸ್ಥಿತಿ-ಸಂಹಾರ ಕರ್ತನು. ಆರ್ತ, ಜಿಜ್ಞಾಸು, ಮುಮುಕ್ಷು ಮೊದಲಾದವರಿಂದ ಭಜಿಸಲ್ಪಡುವನು. ಧರ್ಮ-ಅರ್ಥ-ಕಾಮ-ಮೋಕ್ಷಪ್ರದನು. ಆಶ್ಚರ್ಯಕರವಾದ ಅನುಪಮ ಸೌಂದರ್ಯಯುಕ್ತವಾದ ದೈವಿಕ ಶರೀರದಿಂದ ಕೂಡಿದವನು. ಈತನಿಗೆ ಲಕ್ಷ್ಮಿ, ಭೂ, ನೀಳಾ ಎಂಬ ಹೆಸರಿನ ಹೆಂಡರಿರುವರು. ಈಶ್ವರನು ಐದು ಪ್ರಕಾರದಿಂದ ಪ್ರಕಟನಾಗುವನು. ಅವು ಯಾವುವೆಂದರೆ:-

೧. ಪರ, ನಾರಾಯಣ. ಪರಬ್ರಹ್ಮ, ಅಥವಾ ಪರವಾಸುದೇವರೂಪ. ಇವನು ವೈಕುಂಠದಲ್ಲಿ ವಾಸಿಸುವನು. ಆ ವೈಕುಂಠವನ್ನು ಕೆಲವು ದ್ವಾರಪಾಲಕರು ಕಾಯುವರು. ಅಲ್ಲಿ ಆದಿಶೇಷನ ಆಕೃತಿಯ ರತ್ನಸಿಂಹಾಸನದಲ್ಲಿ ಕುಳಿತುಕೊಂಡಿರುವನು. ಶ್ರೀ, ಭೂ, ನೀಳೆಯರಿಂದ ಸೇವಿತನು. ಶಂಖ, ಚಕ್ರಗಳನ್ನೂ ಇತರ ಆಯುಧಗಳನ್ನೂ ಧರಿಸಿದವನು. ಕಿರೀಟ ಮೊದಲಾದ ದೈವಿಕ ಆಭರಣಗಳುಳ್ಳವನು. ಜ್ಞಾನ, ಬಲ, ಕ್ರಿಯಾ ಮೊದಲಾದ ಅನಂತ ಕಲ್ಯಾಣ ಗುಣಗಳುಳ್ಳವನು. ಅನಂತ, ಗರುಡ, (ವಿಷ್ವಕ್ಸೇನ) ಮೊದಲಾದ ನಿತ್ಯಾತ್ಮರಿಗೂ ಮುಕ್ತಾತ್ಮರಿಗೂ ಸಂತೋಷ ವನ್ನುಂಟುಮಾಡುವನು.

೨. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ವ್ಯೂಹರೂಪ. ಈ ರೂಪಗಳಿಂದ ಸೃಷ್ಟಿಯನ್ನು ಮಾಡುವನು. ಈ ರೂಪಗಳು ಪೂಜೆಗೂ ಧ್ಯಾನಕ್ಕೂ ಅನುಕೂಲವಾದುವು. ಈ ರೂಪಗಳಲ್ಲಿ ಸಂಕರ್ಷಣನು ಜ್ಞಾನ, ಬಲಗಳೆಂಬ ಎರಡು ಗುಣಗಳಿಂದಲೂ ಪ್ರದ್ಯುಮ್ನನು ಐಶ್ವರ್ಯ, ವೀರ್ಯಗಳೆಂಬ ಎರಡು ಗುಣಗಳಿಂದಲೂ ಅನಿರುದ್ಧನು ಶಕ್ತಿ, ತೇಜಸ್ಸು ಎಂಬ ಎರಡು ಗುಣಗಳಿಂದಲೂ ವಾಸುದೇವನು ಈ ಆರೂ ಗುಣಗಳಿಂದಲೂ ಶೋಭಿಸುವರು.

೩. ವಿಭವಗಳು ಅಥವಾ ಅವತಾರಗಳ ರೂಪ.

೪. ಅಂತರ್ಯಾಮಿ ರೂಪ. ಈ ರೂಪದಿಂದ ಜೀವಿಗಳ ಹೃದಯದಲ್ಲಿ ವಾಸಿಸುವನು. ಈ ರೂಪದಲ್ಲಿರುವಾಗ ಯೋಗಿಗಳಿಗೆ ಮಾತ್ರ ಕಾಣಿಸುವನು.

ಜೀವನು ಸ್ವರ್ಗಕ್ಕೆ ಹೋಗಲಿ ನರಕಕ್ಕೆ ಹೋಗಲಿ ಎಲ್ಲಿ ಹೋದರೂ ಅವನನ್ನು ಪರಮಾತ್ಮನು ಈ ಅಂತರ್ಯಾಮಿ ರೂಪದಿಂದ ಅನುಸರಿಸುವನು.

೫. ಅರ್ಚಾಸ್ವರೂಪವೆಂದರೆ ಗೃಹ, ಆರಾಮ, ದೇವಾಲಯ ಮೊದಲಾದುವುಗಳಲ್ಲಿ ಭಕ್ತನು ಆರಿಸಿದ ವಸ್ತುವಿನಿಂದ ನಿರ್ಮಿತವಾದ ಮೂರ್ತಿಸ್ವರೂಪ. ಮೂರ್ತಿಗಳಲ್ಲಿ ಪರಮಾತ್ಮನು ಭೌತಿಕವಲ್ಲದ ಸೂಕ್ಷ್ಮರೂಪದಿಂದ ವಾಸಿಸುವನು.

ಜೀವಾತ್ಮರ ಸ್ವರೂಪ

ಜೀವನು ಸ್ವಪ್ರಕಾಶಯುಕ್ತ, ಆನಂದಮಯ, ನಿತ್ಯ, ಅಣವ, ಅದೃಶ್ಯ, ಮನಸ್ಸು ಮತ್ತು ಇಂದ್ರಿಯಗಳಿಗೆ ಅತೀತ, ನಿಷ್ಕಲ, ಅಕ್ಷರ, ಜ್ಞಾನಸ್ವರೂಪನು, ಪರಮಾತ್ಮನಿಗೆ ಶರೀರದಂತೆ ಅಧೀನನು, ದೇವರ ವಿಶೇಷಣ ಸ್ವರೂಪನು ಮತ್ತು ದೇವರೊಡನೆ ಸಂಬಂಧಿಸಿದ ಅಸ್ತಿತ್ವ ಉಳ್ಳವನು.

ಜೀವಾತ್ಮರು ಅಸಂಖ್ಯರಾಗಿರುವರು. ಅವರಲ್ಲಿ ಬದ್ಧ, ಮುಕ್ತ ಮತ್ತು ನಿತ್ಯರೆಂದು ಮೂರು ವಿಧ. ಬದ್ಧರಲ್ಲಿ ಸುಖೇಚ್ಛುಗಳೆಂದೂ ಮೋಕ್ಷೇಚ್ಛುಗಳೆಂದೂ ಎರಡು ವಿಧ; ಸುಖೇಚ್ಛುಗಳಲ್ಲಿ ಕೆಲವರು ಧನವನ್ನು ಗಳಿಸಿ ಸಂಸಾರಸುಖವನ್ನನುಭವಿಸುವರು. ಬೇರೆಯವರು ತೀರ್ಥಯಾತ್ರೆ ಯಜ್ಞಯಾಗಾದಿ ಕರ್ಮಗಳನ್ನು ಮಾಡಿ ಸ್ವರ್ಗಸುಖವನ್ನನುಭವಿಸುವರು. ಮೋಕ್ಷೇಚ್ಛುಗಳಲ್ಲಿ ಮೂರು ವಿಧ. ೧. ಕೇವಲಿಗಳು. ೨. ಶಾಶ್ವತ ಸುಖೇಚ್ಛುಗಳು. ೩. ಪ್ರಪನ್ನರು: ಕೇವಲಿಗಳು ಆತ್ಮಜ್ಞಾನ ಜಿಜ್ಞಾಸುಗಳು. ಶಾಶ್ವತ ಸುಖೇಚ್ಛುಗಳಲ್ಲಿ ಕೆಲವರು ಭಕ್ತಿಮಾರ್ಗದವರು; ಉಳಿದವರು ಕರ್ಮಾನುಷ್ಠಾನ, ವೇದ, ವೇದಾಂತಗಳ ಅಭ್ಯಾಸ ಇವುಗಳಿಂದ ಶಾಶ್ವತಸುಖವನ್ನು ಬಯಸುವವರು. ಪ್ರಪನ್ನರು ಸರ್ವಭಾರವನ್ನೂ ಪರಮಾತ್ಮನಲ್ಲಿ ಹಾಕಿ ಆತನನ್ನೇ ನಂಬಿಕೊಂಡಿರುವವರು. ಶೂದ್ರರು ಕೂಡ ಪ್ರಪತ್ತಿಮಾರ್ಗವನ್ನು ಅನುಸರಿಸಬಹುದು. ಉಳಿದುವೆರಡು ಮೇಲಿನ ಮೂರು ವರ್ಣದವರಿಗಷ್ಟೇ ಅನ್ವಯಿಸುವುದು.

ಭಕ್ತಿಗೆ ಕರ್ಮಯೋಗ ಮತ್ತು ಜ್ಞಾನಯೋಗಗಳೆರಡೂ ಅಗತ್ಯವಾಗಿವೆ. ಕರ್ಮಯೋಗದಿಂದ ಆತ್ಮ ಶುದ್ಧವಾಗಿ ಜ್ಞಾನಯೋಗದ ಅನುಷ್ಠಾನ ಸಾಧ್ಯವಾಗುವುದು. ಯೋಗಗಳ ಅಷ್ಟಾಂಗಗಳಿಂದ ಕೂಡಿ ಭಕ್ತಿಯೋಗ ಸಮಾಧಿಯಿಂದ ಯುಕ್ತವಾದುದು. ಇದನ್ನು ಕೆಳಗಿನ ಏಳು ಪ್ರಕಾರದಿಂದ ಸಾಧಿಸಬಹುದು.

೧. ಶುದ್ಧ ಮತ್ತು ನಿಷಿದ್ಧವಲ್ಲದ ಆಹಾರದಿಂದ ಶರೀರವನ್ನು ಶುದ್ಧಮಾಡಿಕೊಳ್ಳುವುದು. ೨. ಬ್ರಹ್ಮಚರ್ಯ. ೩. ಸತತೋದ್ಯೋಗ. ೪. ಪಂಚಮಹಾಯಜ್ಞಗಳನ್ನು ಶಕ್ತ್ಯನುಸಾರ ಮಾಡುವುದು. ೫. ಸತ್ಯ, ಪ್ರಾಮಾಣಿಕತನ, ದಯೆ, ಅಹಿಂಸೆ, ದಾನ ಮೊದಲಾದ ಸದ್ಗುಣಗಳು. ೬. ನಿರಾಶನಾಗಿರುವುದು ಮತ್ತು ಆಶಾವಾದಿತ್ವ. ೭. ನಿಗರ್ವಿತ್ವ.

ಈ ಏಳು ಪ್ರಕಾರದಿಂದ ದೊರಕಿಸಿದ ಭಕ್ತಿ ದೇವರನ್ನು ಪ್ರತ್ಯಕ್ಷವಾಗಿ ಕಾಣಲು ಅನುಕೂಲ ವಮಾಡುವುದು. ಮತ್ತು ಮನಸ್ಸಿನಲ್ಲಿ ದೇವರ ಪ್ರತ್ಯಕ್ಷತೆಯನ್ನು ನೆಲೆಗೊಳಿಸುವುದು.

ಪ್ರಪತ್ತಿಯಲ್ಲಿ ಆರು ಭಾಗಗಳು:-

೧. ಅನುಕೂಲಸ್ಯ ಸಂಕಲ್ಪಃ ೨. ಪ್ರತಿಕೂಲಸ್ಯ ವರ್ಜನಂ. ೩. ರಕ್ಷಿಷ್ಯತೀತಿ ವಿಶ್ವಾಸೋ. ೪. ಗೋಪ್ತೃತ್ವವರಣಂ (ತಥಾ). ೫. ಆತ್ಮನಿಕ್ಷೇಪ. ೬. ಕಾರ್ಪಣ್ಯೇ (ಷಡ್ವಿಧಾ ಶರಣಾಗತಿಃ).

ವಿಷ್ಣುವನ್ನು ಪೂಜಿಸುವ ೧೬ ವಿಧಾನಗಳು:-

೧. ಸ್ಮರಣ. ೨. ನಾಮೋಚ್ಚಾರಣ. ೩. ನಮಸ್ಕಾರ. ೪. ಪಾದವನ್ನು ಮರೆಹೋಗುವುದು. ೫. ಸತತ ಭಕ್ತಿಯಿಂದ ಪೂಜೆ ಮಾಡುವುದು. ೬. ಪ್ರಪತ್ತಿ. ೭. ಶ್ರವಣ. ೮. ಸೇವೆ. ೯. ಶಂಖ, ಚಕ್ರ ಮೊದಲಾದ ವಿಷ್ಣುವಿನ ಆಯುಧಗಳ ಗುರುತುಗಳನ್ನು ದೇಹದ ಮೇಲೆ ಧರಿಸುವುದು. ೧೦. ಊರ್ಧ್ವ ಪುಂಡ್ರಧಾರಣೆ. ೧೧. ಹಾಗೆ ಧರಿಸುವಾಗ ಮಂತ್ರಗಳನ್ನು ಉಚ್ಚರಿಸುವುದು. ೧೨. ಹರಿಯ ಪಾದತೀರ್ಥವನ್ನು ಸೇವಿಸುವುದು. ೧೩. ಹರಿಯ ಪ್ರಸಾದವನ್ನು ಸೇವಿಸುವುದು. ೧೪. ಹರಿಯ ಭಕ್ತರ ಸೇವೆ ಮಾಡುವುದು. ೧೫. ಏಕಾದಶಿ ಉಪವಾಸ ಮಾಡುವುದು. ೧೬. ಹರಿಗೆ ತುಲಸಿ ಪತ್ರಗಳನ್ನು ಏರಿಸುವುದು.

ರಾಮಾನುಜರು ತಮ್ಮ ತತ್ತ್ವಗಳನ್ನು ಉಪನಿಷತ್ತುಗಳಿಂದ, ಬ್ರಹ್ಮಸೂತ್ರ ಜಗದುತ್ಪತ್ತಿಯ ತತ್ತ್ವಗಳನ್ನು ಪುರಾಣಗಳಿಂದ ಮತ್ತು ಸಾಂಖ್ಯರ ದರ್ಶನದಿಂದ ತೆಗೆದುಕೊಂಡಿರುವರು. ರಾಮಾನುಜರ ಮತ ಪಾಂಚರಾತ್ರ ಮತದ ವಾಸುದೇವ ಧರ್ಮ. ಅದರೊಳಗೆ ನಾರಾಯಣ ಮತ್ತು ವಿಷ್ಣು ಇವರ ಸಮಾವೇಶವಾಗಿದೆ. ರಾಮಾನುಜರು ಮುಖ್ಯತ್ವವನ್ನು ನಾರಾಯಣನಿಗೆ ಕೊಟ್ಟಿರುವರು. ವ್ಯೂಹಗಳನ್ನು ಹೇಳುವಾಗ ಮಾತ್ರ ವಾಸುದೇವನ ಹೆಸರು ಬರುವುದು. ರಾಮಾನುಜರು ಹೇಳುವ ಪರಮಾತ್ಮನನ್ನು ಕಾಣುವ ಮಾರ್ಗಗಳು ಭಗವದ್ಗೀತೆಯೊಳಗೆ ಹೇಳಿದುವೇ. ಆದರೆ ಅವರು ಹೇಳುವ ಭಕ್ತಿ ಉಪಾಸನೆಯನ್ನು ಹೆಚ್ಚಾಗಿ ಹೋಲುವುದು.

ವೇದಾಂತದೇಶಿಕ

ರಾಮಾನುಜರ ತರುವಾಯ ಶ್ರೀವೈಷ್ಣವ ಮತಕ್ಕೆ ಮುಖ್ಯ ಪುರುಷನಾದವನು ರಾಮಾನುಜರ ಶಿಷ್ಯನೂ ತಿರುವಾಯ್‌ಮೊಟಿಗೆ ವ್ಯಾಖ್ಯಾನವನ್ನು ಬರೆದವನೂ ಆದ ಕುರುಕೇಶನು. ರಾಮಾನುಜರ ಮತ್ತೊಬ್ಬ ಶಿಷ್ಯನಾದ ಆತ್ರೇಯ ಗೋತ್ರದ ಪ್ರಣತಾರ್ತಿಹರನೆಂಬವನು ದೊಡ್ಡ ಪಂಡಿತನೂ ರಾಮಾನುಜರ ಸಮೀಪದ ಆಪ್ತನೂ ಆಗಿದ್ದನು. ಈತನು ಪ್ರತಿದಿವಸ ರಾಮಾನುಜರಿಗೆ ತಾನೇ ಸ್ವತಃ ಅಡಿಗೆ ಮಾಡಿ

ಹಾಕುತ್ತಿದ್ದನು. ಇವನು ರಾಮಾನುಜರ ಪ್ರೀತಿಗೆ ಬಹಳವಾಗಿ ಪಾತ್ರನಾಗಿದ್ದನು. ಈ ಪ್ರಣತಾರ್ತಿಹರನಿಗೆ ರಾಮಾನುಜ ಅಥವಾ ಅಪ್ಪುಳಾರ್ ಎಂಬ ಹೆಸರಿನ ಒಬ್ಬ ಮರಿಮಗನಿದ್ದನು. ಈ ರಾಮಾನುಜನ ತಂಗಿಯ ಮಗನೇ ಮುಂದೆ ವೇದಾಂತದೇಶಿಕನೆಂದು ಪ್ರಸಿದ್ಧನಾದ ವೆಂಕಟನಾಥನು. ಕ್ರಿ.ಶ. ೧೨೬೮ನೆಯ ಸೆಪ್ಟೆಂಬರ್ ತಿಂಗಳಲ್ಲಿ ಕಂಚಿಯ ಸಮೀಪವಿರುವ ತೂಪ್ಪುಲ್ ಎಂಬ ಊರಲ್ಲಿ ಹುಟ್ಟಿದನು. ಈತನ ತಂದೆ ಅನಂತಸೂರಿ. ಈತನು ತನ್ನ ಸೋದರಮಾವನಾದ ಆತ್ರೇಯ ರಾಮಾನುಜನಲ್ಲಿ ಅಭ್ಯಾಸ ಮಾಡಿದನು. ದಕ್ಷಿಣ ಹಿಂದೂಸ್ಥಾನದಲ್ಲಿ ಕಡಲೂರಿನ ಹತ್ತಿರವಿರುವ ತಿರುವಹೀಂದ್ರಪುರ ಎಂಬಲ್ಲಿ ಕೆಲಕಾಲ ವಾಸಿಸುತ್ತಿದ್ದನು. ಇವನಿಗೆ ಕವಿತಾರ್ಕಿಕಸಿಂಹನೆಂದೂ ಸರ್ವತಂತ್ರಸ್ವತಂತ್ರನೆಂದೂ ವೇದಾಂತಾ ಚಾರ್ಯನೆಂದೂ ಬಿರುದುಗಳಿದ್ದುವು. ಈತನು ತಮಿಳಿನಲ್ಲಿಯೂ ಸಂಸ್ಕೃತದಲ್ಲಿಯೂ ಅನೇಕ ಗ್ರಂಥಗಳನ್ನು ಬರೆದು ವಿಶಿಷ್ಟಾದ್ವೈತ ಮತ ಪ್ರಸಾರಕಾರ್ಯವನ್ನು ಬಹಳವಾಗಿ ಮಾಡಿದ್ದಾನೆ. ಈತನು ವಿದ್ಯಾರಣ್ಯರ ಸಮಕಾಲೀನನು. ಇವರಿಬ್ಬರಲ್ಲಿ ಪರಸ್ಪರ ಪ್ರೇಮಾದರಗಳಿದ್ದಂತೆ ಕಂಡುಬರುತ್ತದೆ. ಈತನು ಉತ್ತರ ಹಿಂದೂಸ್ಥಾನದ ಪ್ರವಾಸವನ್ನು ಮಾಡಿದನು. ಮುಂದೆ ಶ್ರೀರಂಗಕ್ಕೆ ಹೋಗಿ ಅಲ್ಲಿ ಪ್ರವಚನಗಳ ಮತ್ತು ಗ್ರಂಥರಚನೆಯ ಮೂಲಕ ವಿಶಿಷ್ಟಾದ್ವೈತ ಮತವನ್ನು ಬಹಳವಾಗಿ ಪ್ರಸಾರ ಮಾಡಿದನು. ಈತನು ರಚಿಸಿದ ತಮಿಳು ಮತ್ತು ಸಂಸ್ಕೃತ ಗ್ರಂಥಗಳ ಸಂಖ್ಯೆ ಒಂದು ನೂರಕ್ಕೆ ಮೇಲ್ಪಟ್ಟು ಇರುತ್ತದೆ. ಈತನು ವೇದಾಂತ ಗ್ರಂಥಗಳಲ್ಲದೆ 'ಸಂಕಲ್ಪ ಸೂರ್ಯೋದಯ' ಎಂಬ ಹತ್ತು ಅಂಕದ ಒಂದು ಸಂಸ್ಕೃತ ನಾಟಕವನ್ನೂ ಬರೆದಿದ್ದಾನೆ. ವೇದಾಂತದೇಶಿಕನು ಕ್ರಿ.ಶ. ೧೩೬೯ರಲ್ಲಿ ವೈಕುಂಠವಾಸಿಯಾದನು.

ವೇದಾಂತದೇಶಿಕನಿಗೆ ವರದಾಚಾರ್ಯನೆಂಬ ಒಬ್ಬ ಮಗನೂ ಬ್ರಹ್ಮತಂತ್ರ ಸ್ವತಂತ್ರಜೀಯರ್ ಎಂಬ ಒಬ್ಬ ಸಂನ್ಯಾಸಿಯಾದ ಶಿಷ್ಯನೂ ಇದ್ದರು. ಈ ಬ್ರಹ್ಮತಂತ್ರ ಸ್ವತಂತ್ರಜೀಯರೇ ಮೈಸೂರ ಪರಕಾಲಮಠದ ಸ್ಥಾಪಕರು. ವೇದಾಂತದೇಶಿಕನ ಮೂರ್ತಿಗಳನ್ನು ದಕ್ಷಿಣ ಹಿಂದೂಸ್ಥಾನದ ವೈಷ್ಣವ ಗುಡಿಗಳಲ್ಲಿ ಸ್ಥಾಪಿಸಿ ಪೂಜಿಸುತ್ತಿರುವರು. ವೇದಾಂತದೇಶಿಕನು ಶ್ರೀರಂಗದಲ್ಲಿದ್ದಾಗ ಅಂದರೆ ಕ್ರಿ.ಶ. ೧೩೧೨ರಲ್ಲಿ ಮಲಿಕ್‌ಕಾಫೂರನು ದಕ್ಷಿಣದ ದಾಳಿಯನ್ನು ಮಾಡಿದನು. ಅವನು ಶ್ರೀರಂಗವನ್ನು ಹಾಳುಗೆಡವಿದನು. ಆ ಕಾಲಕ್ಕೆ ೧೨೦೦೦ ವೈಷ್ಣವರು ಕೊಲ್ಲಲ್ಪಟ್ಟರೆಂದು ಪ್ರತೀತಿಯಿದೆ. ಮುಂದೆ ಕ್ರಿ.ಶ. ೧೩೬೫ರಲ್ಲಿ ವಿಜಯನಗರದ ದಳವಾಯಿ ಗೋಪಣ್ಣನೆಂಬವನು ಗುಡಿಯ ಜೀರ್ಣೋದ್ಧಾರವನ್ನು ಮಾಡಿಸಿ ಮೂರ್ತಿಯನ್ನು ಪುನಃ ಸ್ಥಾಪಿಸಿದನು. ಈ ಸ್ಥಾಪನೆಯ ಕಾರ್ಯ ವೇದಾಂತದೇಶಿಕನ ಕಾಲದಲ್ಲಿಯೇ ಆಯಿತೆಂದು ಹೇಳುವರು.

ವೇದಾಂತದೇಶಿಕನ ಕಾಲದಲ್ಲಿಯೇ ವೈಷ್ಣವ ವಡಗಲೈ ಮತ್ತು ತೆಂಗಲೈ ಎಂಬ ಪಂಗಡಗಳ ಭೇದ ಕಾಣಿಸಿತು. ಅದುವರೆಗೆ ನಡೆಯುತ್ತಿದ್ದ ವಿಚಾರಗಳು ಮತ್ತು ವಿವರಣೆಗಳು ವೇದಾಂತದೇಶಿಕನಿಗೆ ಸರಿದೋರುತ್ತಿರಲಿಲ್ಲ. ಪೆರಿಯ ವಾಚ್ಚಾನ್ ಪಿಳ್ಳೈ, ಪಿಳ್ಳೈ ಲೋಕಾಚಾರ್ಯರ್ ಮುಂತಾದ ತೆಂಗಲೈ ಆಚಾರ್ಯರ ಅಭಿಪ್ರಾಯಗಳನ್ನು ಖಂಡಿಸಿದ್ದಾನೆ.

ಮನವಾಳ ಮಹಾಮುನಿ

ಈತನು ಸುಮಾರು ಕ್ರಿ.ಶ ೧೩೭೦ರಲ್ಲಿ ಆಳ್ವಾರ್ ತಿರುನಗರಿ ಎಂಬಲ್ಲಿ ಹುಟ್ಟಿದನು. ಈತನು ಶರೀರದಿಂದ ಸುದೃಢನೂ ಬಹಳ ಶ್ವೇತಕಾಯನೂ ಆಗಿದ್ದು ಬಹಳ ದೊಡ್ಡ ವಿದ್ವಾಂಸನೂ ನಿಷ್ಣಾತನೂ ಆಗಿದ್ದನು. ಈತನ ಗುರು ತಿರುವಾಯ್ ಮೋೞಿಪ್ಪಿಳ್ಳೈ ಎಂಬ ಹೆಸರನ್ನು ಹೊಂದಿದ ಶ್ರೀಶೈಲೇಶನು. ಈತನು ಗುರು ತಿರುನಗರಿಯಿಂದ ಶ್ರೀರಂಗಕ್ಕೆ ಬಂದು ಅಲ್ಲಿ ವಾಸವಾಗಿದ್ದನು. ಈತನ ಮುಖ್ಯ ಕಾರ್ಯ ಪ್ರಾಚೀನ ಸಂಪ್ರದಾಯವನ್ನನುಸರಿಸಿ ವ್ಯಾಖ್ಯಾನ ಗ್ರಂಥಗಳನ್ನು ರಚಿಸುವುದು, ಉಪದೇಶ ಮಾಡುವುದು. ಈತನು ವೈಷ್ಣವ ಗುಡಿಗಳ ಜೀರ್ಣೋದ್ಧಾರ ಮಾಡಿಸಿ ಗುಡಿಗಳ ಪೂಜೆ ಸರಿಯಾಗಿ ನಡೆಯುವಂತೆ ತನ್ನ ಶಿಷ್ಯರನ್ನು ನೇಮಿಸಿ ವೈಷ್ಣವ ಸಮಾಜವನ್ನು ಸುವ್ಯವಸ್ಥಿತವನ್ನಾಗಿ ಮಾಡಲು ಪ್ರಯತ್ನಿಸಿದನು. ಈತನಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಕೆಲವರು ಸಂನ್ಯಾಸಿಗಳೂ ಆಗಿದ್ದರು. ಈತನಿಗೆ ರಾಮಾನುಜನೆಂಬ ಒಬ್ಬ ಮಗನೂ ಜೀಯರ್‌ನಾಯನಾರ್ ಎಂಬ ಒಬ್ಬ ಮೊಮ್ಮಗನೂ ಇದ್ದರು. ಈತನು ಸುಮಾರು ಕ್ರಿ.ಶ. ೧೪೪೩ರಲ್ಲಿ ಸಮಾಧಿಸ್ಥನಾದಂತೆ ತಿಳಿಯುತ್ತದೆ.

ಶ್ರೀವೈಷ್ಣವರಲ್ಲಿ ಆದ ವಡಗಲೈ ಎಂಬ ಎರಡು ಪಂಗಡಗಳಲ್ಲಿ ಈತನು ತೆಂಗಲೈ ಪಂಗಡದ ಮುಖ್ಯಸ್ಥನು. ಇವೆರಡು ಪಂಗಡಗಳಲ್ಲಿಯ ಮುಖ್ಯ ಭೇದಗಳು:

ರಾಮಾನುಜ ಮತದಲ್ಲಿಯೂ ತೆಂಗಲೈ, ವಡಗಲೈ (=ತೆನ್, ವಡ, + ಕಲೈ) ಎಂದು ಶಾಸ್ತ್ರವ್ಯಾಸಂಗದಲ್ಲಿ ಭೇದವುಂಟಾಯಿತು. ಅದ್ವೈತದಲ್ಲಿ ವಿವರಣಮತ ಮತ್ತು ಭಾಮತೀಮತಗಳಂತೆ ಇವೂ ವ್ಯಾಸಂಗಭೇದದಿಂದ ಉಂಟಾದುವು. ನಮ್ಮಾಳ್ವಾರ್ ರಚಿಸಿದ ತಿರುವಾಯ್‌ಮೊೞಿಯನ್ನು ಮುಖ್ಯ ವ್ಯಾಖ್ಯಾನವನ್ನಾಗಿ ಉಪಯೋಗಿಸಿಕೊಂಡು ವೇದಾರ್ಥನಿರ್ಣಯವನ್ನು ಪ್ರಚಾರಪಡಿಸುತ್ತ ಬರುವುದು ತೆಂಗಲೈ ಸಂಪ್ರದಾಯ. ತಿರುವಾಯ್‌ಮೊೞಿಗೆ ಅಂತಹ ಉನ್ನತ ಸ್ಥಾನವನ್ನು ಅಂಗೀಕರಿಸದೆ ಇತರ ವ್ಯಾಖ್ಯಾನ ಸದೃಶವೆಂದು ಅದನ್ನು ಭಾವಿಸಿ ಸಿದ್ಧಾಂತಿಸುವುದು ವಡಗಲೈ ಸಂಪ್ರದಾಯ. ಈ ಎರಡು ಸಂಪ್ರದಾಯಗಳಿಗೂ ಶಾಸ್ತ್ರೀಯವಾದ ಭೇದಗಳು ಹದಿನೆಂಟಿವೆ. ಅವುಗಳಲ್ಲಿ ಪ್ರಪತ್ತಿ ಸ್ವರೂಪಭೇದವೊಂದನ್ನು ಇಲ್ಲಿ ಉದಾಹರಿಸಲಾಗುತ್ತದೆ. ದೇವರನ್ನು ಶರಣು ಹೊಂದುವುದು ಮನುಷ್ಯ ಕರ್ತವ್ಯವೆಂದು ವಡಗಲೈಯುವರೂ, ಆ ಪ್ರಯತ್ನವೂ ಭಗವದನುಗ್ರಹ ಕಾರ್ಯವೆಂದು

ತೆಂಗಲೈಯವರೂ, ಅಭಿಪ್ರಾಯಪಡುತ್ತಾರೆ. ಉದಾಹರಣೆಯಾಗಿ ಮಂಗನ ಮರಿ ತನ್ನ ತಾಯನ್ನು ಗಟ್ಟಿಯಾಗಿ ಅವಚಿಕೊಂಡಾಗ ಮಾತ್ರ ಅದನ್ನು ತಾಯಿ ಸುರಕ್ಷಿತ ಸ್ಥಳಕ್ಕೆ ಒಯ್ಯುವಂತೆ ಭಕ್ತನು ದೇವರನ್ನು ನಿಷ್ಠೆಯಿಂದ ನಂಬಿದಾಗ ಮಾತ್ರ ದೇವರು ಅವನನ್ನು ಅನುಗ್ರಹಿಸುವನೆಂದು ವಡಗಲೈಯವರು ಹೇಳುವರು. ತೆಂಗಲೈಯವರು ಬೆಕ್ಕು ಕಣ್ಣುಮುಚ್ಚಿಕೊಂಡು ಸುಮ್ಮನೆ ಬಿದ್ದಿರುವ ತನ್ನ ಮರಿಯನ್ನು ಬಾಯಿಯಲ್ಲಿ ಕಚ್ಚಿಕೊಂಡು ಸುರಕ್ಷಿತ ಸ್ಥಳಕ್ಕೆ ಒಯ್ಯುವಂತೆ ಪರಮಾತ್ಮನು, ತನ್ನ ಅನುಗ್ರಹಕ್ಕೆ ಪಾತ್ರರಾದ ಜೀವಿಗಳನ್ನು ಅನುಗ್ರಹಿಸುವನು, ಎಂದು ಹೇಳುವರು.

ಹೀಗೆಯೆ ಆಚಾರದಲ್ಲಿ ಮತ್ತು ವೇಷದಲ್ಲಿ ಹಲಕೆಲವು ಗಮನಾರ್ಹವಲ್ಲದ ಭೇದಗಳು ತೋರಿಬರುತ್ತವೆ.

ದ್ವೈತಮತ

ವೈಷ್ಣವ ಸಂಪ್ರದಾಯಗಳಲ್ಲಿ ದ್ವೈತಮತ ಬ್ರಹ್ಮಸಂಪ್ರದಾಯಕ್ಕೆ ಸೇರಿರುವುದು. ಇದು ಭಕ್ತಿಮಾರ್ಗದ ಪಂಥ. ಸುಮಾರು ಹದಿಮೂರನೆಯ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ಇದನ್ನು ಸ್ಥಾಪಿಸಿ ಪ್ರಸಾರಮಾಡಿದರು. ವಿಷ್ಣುವೇ ಉಪನಿಷತ್ತುಗಳಲ್ಲಿ ಹೇಳಿದ ಪರಬ್ರಹ್ಮನೆಂದೂ ಅವತಾರವನ್ನು ಹೊಂದುವಾಗ ಆತನು ತನ್ನ ಮಗನಾದ ವಾಯುವನ್ನು ತನ್ನ ಸಹಾಯಕ್ಕಾಗಿ ಅವತರಿಸುವಂತೆ ಮಾಡುವನೆಂದೂ ದ್ವಾಪರಯುಗದಲ್ಲಿ ವಾಯು ಹನುಮಂತ ಭೀಮರ ರೂಪದಿಂದ ಅವತರಿಸಿ ಭಗವಂತನ ಅವತಾರಗಳಾದ ರಾಮಕೃಷ್ಣರ ಭಕ್ತನೂ ಸಹಾಯಕನೂ ಆಗಿದ್ದನೆಂದೂ, ಕಲಿಯುಗದಲ್ಲಿ ಮಧ್ವಾಚಾರ್ಯರ ರೂಪದಿಂದ ಅವತರಿಸಿ ನಿಜವಾದ ವೈಷ್ಣಧರ್ಮವನ್ನು ಪ್ರಸಾರಮಾಡಿದನೆಂದೂ ಈ ಪಂಥದವರು ನಂಬುವರು. ಮಧ್ವಾಚಾರ್ಯರ ಚರಿತ್ರೆ ಮಣಿಮಂಜರಿ, ಮಧ್ವವಿಜಯ ಮೊದಲಾದ ಗ್ರಂಥಗಳಲ್ಲಿ ಸಂಕಲಿತವಾಗಿರುವುದು. ಅದರ ಸಾರ ಹೀಗಿದೆ:

ಉಡುಪಿ ಕ್ಷೇತ್ರದಿಂದ ಸುಮಾರು ಏಳು ಎಂಟು ಮೈಲಿಗಳು ದೂರದಲ್ಲಿರುವ ಪಾವಕವೆಂಬ ಗ್ರಾಮದ ಒಂದು ಕುಲೀನ ಮತ್ತು ಆಚಾರ ಸಂಪನ್ನವಾದ ಬ್ರಾಹ್ಮಣ ಮನೆತನದಲ್ಲಿ ಕ್ರಿ.ಶ. ೧೨೩೮ರೊಳಗೆ ಮಧ್ವಾಚಾರ್ಯರು ಜನಿಸಿದರೆಂದು ಪಂಡಿತರ ಮತ. ಇವರ ತಂದೆಯ ಹೆಸರು ಮಧ್ಯಗೇಹಭಟ್ಟ. ತಾಯಿ ವೇದಾವತಿ. ಇವರ ಮನೆತನದ ಹೆಸರು ಮಧ್ಯಗೇಹ (ನಡ್ಡಂತಿಲ್ಲಾಯ=ನಡುಮನೆ) ಎಂಬುದು. ಇವರ ತಂದೆಯವರನ್ನು ಜನರು ನಡುಮನೆಯ ಭಟ್ಟರೆಂದು ಕರೆಯುತ್ತಿದ್ದರು. ಅದನ್ನೆ ಸಂಸ್ಕೃತಭಾಷೆಯಲ್ಲಿ ಮಧ್ಯಗೇಹಭಟ್ಟ ಎಂದು ಕರೆದಿದ್ದಾರೆ. ಮಧ್ವಾಚಾರ್ಯರಿಗೆ ಇಬ್ಬರು ಅಣ್ಣಂದಿರೂ, ಒಬ್ಬ ಅಕ್ಕನೂ ಒಬ್ಬ ತಮ್ಮನೂ ಇದ್ದರು. ಅಣ್ಣಂದಿರಿಬ್ಬರೂ ಅವರು ಹುಟ್ಟುವುದಕ್ಕಿಂತ ಮೊದಲೇ ತೀರಿಕೊಂಡಿದ್ದರು. ಇವರ ಮಹಾಪಿತರು

ದೀರ್ಘಾಯುಷ್ಯವುಳ್ಳ ಮಗನನ್ನು ದಯಪಾಲಿಸಬೇಕೆಂದು ಅನಂತೇಶ್ವರನನ್ನು ಭಜಿಸಿ ಇವರನ್ನು ಪಡೆದರೆಂದು ಪ್ರತೀತಿ. ಇವರ ಹುಟ್ಟು ಹೆಸರು ವಾಸುದೇವರೆಂಬುದು.

ವಾಸುದೇವರು ಶರೀರದಿಂದ ಸುದೃಢರೂ ಭಗವದ್ಭಕ್ತಿಯುಳ್ಳವರೂ ಆಗಿದ್ದರು. ತೋಟಂತಿಲ್ಲಾಯರೆಂಬ ಗುರುಗಳಲ್ಲಿ ವೇದಾಧ್ಯಯನವನ್ನು ಮಾಡಿ, ತಂದೆ ತಾಯಿಗಳಿಂದ ಅನುಜ್ಞೆಯನ್ನು ಪಡೆದು, ಅಚ್ಯುತಪ್ರೇಕ್ಷರಿಂದ ಸಂನ್ಯಾಸವನ್ನು ಸ್ವೀಕರಿಸಿ ಪೂರ್ಣಪ್ರಜ್ಞರೆಂದು ಹೆಸರನ್ನು ಹೊಂದಿ ವೇದಾಂತಾಧ್ಯಯನವನ್ನು ಪ್ರಾರಂಭಿಸಿದರು. ಕೆಲಕಾಲದಲ್ಲಿ ವೇದಾಂತ ವಿಷಯದಲ್ಲಿ ಪಾರಂಗತರಾಗಿ ಆನಂದತೀರ್ಥರೆಂದು ಪ್ರಖ್ಯಾತರಾದರು. ಆ ಕಾಲದಲ್ಲಿ ಅದ್ವೈತಮತ ಪ್ರಬಲವಾಗಿತ್ತು. ಅದ್ವೈತ ತತ್ತ್ವಗಳು ಸರ್ವಮಾನ್ಯವಾಗಿದ್ದುವು. ಆನಂದತೀರ್ಥರಿಗೆ ಅದ್ವೈತ ತತ್ತ್ವಗಳು ಸರಿದೋರಲಿಲ್ಲ ವಾದುದರಿಂದ ಅವುಗಳನ್ನು ಖಂಡಿಸಿ ವೇದೋಪನಿಷತ್ತುಗಳಲ್ಲಿ ಹೇಳಿದ ಮತ ದ್ವೈತವೆಂದು ಪ್ರತಿಪಾದಿಸಿ ಅದನ್ನು ಪ್ರತಿಷ್ಠಾಪಿಸಿದರು. ಇವರಿಗೆ ಮಧ್ವಾಚಾರ್ಯರೆಂದೂ ಇವರ ಮತಕ್ಕೆ ಮಧ್ವಮತವೆಂದೂ ಸಾಮಾನ್ಯವಾಗಿ ಹೆಸರುಂಟು.

ಆನಂದತೀರ್ಥರು ತಮ್ಮ ತತ್ತ್ವಗಳನ್ನು ಪ್ರಸಾರ ಮಾಡುವುದಕ್ಕಾಗಿ ದಕ್ಷಿಣ ದೇಶದಲ್ಲಿರುವ ಪ್ರಸಿದ್ಧ ಪುಣ್ಯಸ್ಥಳಗಳನ್ನು ಸಂದರ್ಶಿಸುವುದಕ್ಕಾಗಿ ತೀರ್ಥಯಾತ್ರೆಯನ್ನು ಕೈಕೊಂಡರು. ಮೊದಲು ಇವರು ವಿಷ್ಣುಮಂಗಲಕ್ಕೆ ಹೋದರು. ಇವರ ಸಂಗಡ ಇವರ ಗುರುಗಳಾದ ಅಚ್ಚುತಪ್ರೇಕ್ಷರು ಇದ್ದರು. ಆಮೇಲೆ ಅವರು ತ್ರಿವೇಂದ್ರಮಕ್ಕೆ ಹೋದರು. ಅಲ್ಲಿ ಅದ್ವೈತ ಪಂಥದ ಪಂಡಿತರ ಸಂಗಡ ವಿಚಾರ ಮಾಡಿದರು. ಈ ವಿವಾದದ ಪರಿಣಾಮ ಇವರು ಅದ್ವೈತ ಮತದ ಪ್ರಮುಖ ಆಚಾರ್ಯರ ಸಂಗಡ ವೈರ್ಯವನ್ನು ಕಟ್ಟಿಕೊಳ್ಳುವುದಾಯಿತು. ಅಲ್ಲಿಂದ ಅವರು ಹೋದ ಪ್ರಮುಖ ಸ್ಥಳಗಳಲ್ಲಿ ರಾಮೇಶ್ವರ ಒಂದು. ಅಲ್ಲಿಯೂ ಅವರು ಅದ್ವೈತ ಮತದ ಪಂಡಿತರ ಸಂಗಡ ಬಹಳವಾಗಿ ವಾದಮಾಡಬೇಕಾಯಿತು. ಅಲ್ಲಿಂದ ಅವರು ಶ್ರೀರಂಗಕ್ಕೆ ಹೋದರು. ಶ್ರೀರಂಗ, ಕಾಂಚಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ, ಅಲ್ಲಿ ತಮ್ಮ ವಿದ್ವತ್ತೆಯನ್ನು ತೋರಿಸಿ ದ್ವೈತಮತದ ತತ್ತ್ವಗಳನ್ನು ಪ್ರಸಾರಮಾಡಿ ಉಡುಪಿಗೆ ಬಂದರು. ಗೀತಾಭಾಷ್ಯವನ್ನು ರಚಿಸಿ ಗುರುಗಳಾದ ಅಚ್ಚುತಪ್ರೇಕ್ಷರಿಗೆ ಒಪ್ಪಿಸಿದರು.

ಕೆಲಕಾಲವನ್ನು ಉಡುಪಿಯಲ್ಲಿಯೇ ಕಳೆದು ಉತ್ತರ ದೇಶದ ಪ್ರವಾಸಕ್ಕಾಗಿ ಹೊರಟರು. ಅವರ ಸಂಗಡ ಅನೇಕ ಶಿಷ್ಯರಿದ್ದರು. ಅವರು ತಮ್ಮ ಪ್ರವಾಸದಲ್ಲಿ ಗೋವೆ, ಮಹಾರಾಷ್ಟ್ರ, ಕಾಶಿ ಮೊದಲಾದ ಸ್ಥಳಗಳಲ್ಲಿ ಅದ್ವೈತ ಮತದ ಪ್ರಭಾವವನ್ನು ಕಡಿಮೆಮಾಡಿ, ದ್ವೈತಮತವನ್ನು ಬೋಧಿಸಿ ಹರಿದ್ವಾರಕ್ಕೆ ಹೋದರು. ಅಲ್ಲಿ ಕೆಲಕಾಲವಿದ್ದು ಅಲ್ಲಿಂದ ಮುಂದೆ ಬದರಿಕಾಶ್ರಮಕ್ಕೆ ಮುಟ್ಟಿ ಅಲ್ಲಿಯೇ ಅನಂತ ಮಠದಲ್ಲಿ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆದರೆಂದೂ ಸೂತ್ರಗಳ ಅರ್ಥವನ್ನು ಭಗವಾನ್

ಬಾದರಾಯಣರ (ವ್ಯಾಸ) ಅನುಮತಿಯಿಂದ ಅವರ ಅಭಿಪ್ರಾಯವನ್ನನುಸರಿಸಿ ವಿವರಿಸಿದರೆಂದೂ ಈ ಮತದವರು ನಂಬುವರು. ದ್ವೈತಮತದ ತತ್ತ್ವಗಳನ್ನು ಪ್ರಸಾರವಮಾಡಲಿಕ್ಕೆ ಶ್ರೀಮಧ್ವಾಚಾರ್ಯರಿಗೆ ಭಗವಾನ್ ವ್ಯಾಸರೇ ಸ್ವತಃ ಪ್ರೋತ್ಸಾಹಿಸಿದರೆಂದು ನಂಬುಗೆ. ಹರಿದ್ವಾರದಲ್ಲಿ ಅವರು ವಿಷ್ಣುವಿನ ಹೆಚ್ಚಳವನ್ನು ಸಾರಿದರು; ಮತ್ತು ವೇದಾಂತಸೂತ್ರಗಳಿಗೆ ತಾವು ಬರೆದ ಭಾಷ್ಯವನ್ನು ಪ್ರಸಿದ್ಧಪಡಿಸಿದರು. ಅಲ್ಲಿಂದ ಅವರು ಮರಳಿ ಉಡುಪಿಗೆ ಬರುವಾಗ ದಾರಿಯಲ್ಲಿ ಪ್ರಸಿದ್ಧ ಸ್ಥಳಗಳನ್ನು ಸಂದರ್ಶಿಸಿದರು. ಉಡುಪಿಗೆ ಬಂದ ಮೇಲೆ ತಾವು ದ್ವಾರಕಿಯಿಂದ ತಂದ ಕೃಷ್ಣನ ಪ್ರತಿಮೆಯನ್ನು ಪ್ರತಿಷ್ಠೆಮಾಡಿದರು. ತಾವು ವಾದದಲ್ಲಿ ಸೋಲಿಸಿದ ಅದ್ವೈತಿಗಳಾಗಿದ್ದ ತ್ರಿವಿಕ್ರಮ ಪಂಡಿತರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ತ್ರಿವಿಕ್ರಮ ಪಂಡಿತರ ಮಕ್ಕಳಾದ ನಾರಾಯಣ ಪಂಡಿತರೇ ಮಧ್ವಾಚಾರ್ಯರ ಚರಿತ್ರೆಯನ್ನು ಬರೆದಿರುವರು. ಉತ್ತರ ಹಿಂದೂಸ್ಥಾನದ ಪ್ರವಾಸವನ್ನು ತೀರಿಸಿಕೊಂಡು ಉಡುಪಿಗೆ ಬಂದಮೇಲೆ ದ್ವೈತಮತದ ಪ್ರವಾಸಕ್ಕೆ ಪುಷ್ಟಿ ದೊರೆತಂತಾಯಿತು. ಮಧ್ವಾಚಾರ್ಯರ ಗುರುಗಳಾದ ಅಚ್ಯುತಪ್ರೇಕ್ಷರು ಅದ್ವೈತಿಗಳು. ಅವರು ಮಧ್ವಾಚಾರ್ಯರ ತತ್ತ್ವಗಳನ್ನು ಒಪ್ಪಿಕೊಂಡು ದ್ವೈತಮತವನ್ನು ಸ್ವೀಕರಿಸಿದರು. ಇದೇ ಸುಮಾರಿಗೆ ಮಧ್ವಾಚಾರ್ಯರ ಜನನೀಜನಕರು ದಿವಂಗತರಾದರು. ಅವರ ಅಂತ್ಯಕರ್ಮವನ್ನು ತೀರಿಸಿ ಇವರ ಚಿಕ್ಕತಮ್ಮನು ಇವರಿಂದಲೇ ಸಂನ್ಯಾಸವನ್ನು ಸ್ವೀಕರಿಸಿ ವಿಷ್ಣುತೀರ್ಥನೆಂಬ ಹೆಸರಿನಿಂದ ಪ್ರಸಿದ್ಧನಾದನು. ಗೋದಾವರಿಯಲ್ಲಿ ಇವರಿಂದ ಪರಾಜಿತನಾದ ಶೋಭನಭಟ್ಟನೆಂಬ ಅದ್ವೈತ ಮತದ ಪಂಡಿತನು ದ್ವೈತಮತವನ್ನು ಸ್ವೀಕರಿಸಿ ಮಧ್ವಾಚಾರ್ಯರಿಂದ ಸಂನ್ಯಾಸ ದೀಕ್ಷೆಯನ್ನು ಹೊಂದಿ ಪದ್ಮನಾಭತೀರ್ಥನೆಂಬ ಹೆಸರನ್ನು ಪಡೆದು ಆಚಾರ್ಯರ ಪರಮ ಪ್ರೀತಿಗೆ ಪಾತ್ರನಾದನು. ಆಚಾರ್ಯರ ಸಂಘದಲ್ಲಿದ್ದ ಮುಖ್ಯಶಿಷ್ಯರು ನರಹರಿತೀರ್ಥರು, ಉಪೇಂದ್ರತೀರ್ಥರು, ವಾಮನತೀರ್ಥರು, ರಾಮತೀರ್ಥರು. ಇವರಲ್ಲದೆ ಇನ್ನೂ ಅನೇಕ ಗೃಹಸ್ಥರು ಇವರ ಶಿಷ್ಯರಾಗಿದ್ದರು. ಆಚಾರ್ಯರು ದೇಶಾಟನವನ್ನು ಮಾಡಿಕೊಂಡು ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡುತ್ತ, ಗ್ರಂಥಗಳನ್ನು ರಚಿಸುತ್ತ, ಶಿಷ್ಯರಿಗೆ ಪಾಠಗಳನ್ನು ಹೇಳುತ್ತ ದ್ವೈತಮತವನ್ನು ಪ್ರಸಾರಮಾಡಿದರು. ಸುಮಾರು ೧೩೧೭ಕ್ಕೆ ಸರಿಯಾದ ಪಿಂಗಲ ಸಂವತ್ಸರದ ಮಾಘ ಶುದ್ಧ ನವಮಿಯ ದಿವಸ ಆಚಾರ್ಯರು ತಮ್ಮ ಜಡದೇಹವನ್ನು ತ್ಯಜಿಸಿ, ವಿಷ್ಣುಸನ್ನಿಧಿಯನ್ನೈದಿದರು. ಇವರು ೭೯ ವರುಷ, ೩ ತಿಂಗಳು ೨೯ ದಿವಸ ಭೂಮಿಯಲ್ಲಿದ್ದರು. ಆಚಾರ್ಯರು ಒಟ್ಟು ೩೨೦೦೦ ಗ್ರಂಥ ವಿಸ್ತಾರದ ೩೭ ಗ್ರಂಥಗಳನ್ನು ರಚಿಸಿರುವರು. ಅವುಗಳಲ್ಲಿ ಪ್ರಕರಣ ಗ್ರಂಥಗಳು, ಆಚಾರ ಗ್ರಂಥಗಳು, ಸಿದ್ಧಾಂತ ಗ್ರಂಥಗಳು, ಪ್ರಸ್ಥಾನತ್ರಯ ಭಾಷ್ಯಗಳು, ಪುರಾಣ ತಾತ್ಪರ್ಯ ನಿರ್ಣಯಗಳು ಅಡಕವಾಗಿವೆ. ಇವೆಲ್ಲವುಗಳಿಗೆ ಮೂಲಗ್ರಂಥಗಳೆನ್ನುವರು. ಈ ಮತದ ಆಚಾರ್ಯರೂ ಪಂಡಿತರೂ ಈ ಗ್ರಂಥಗಳಿಗೆ

ಟೀಕೆ ಟಿಪ್ಪಣಿಗಳನ್ನೂ ಇವುಗಳ ಮೇಲೆ ಸ್ವತಂತ್ರ ಗ್ರಂಥಗಳನ್ನೂ ಬರೆದು ಈ ಮತದ ಸಿದ್ಧಾಂತಗಳನ್ನೂ ವಿಶದೀಕರಿಸಿರುವರು.

ಸಕಲಶಾಸ್ತ್ರಗಳೂ ವಿಷ್ಣುವಿನ ಸರ್ವೋತ್ಕೃಷ್ಟತೆಯನ್ನು ಪ್ರತಿಪಾದಿಸುವುವೆಂದು ಈ ಮತದವರು ನಂಬುವರು. ವಿಷ್ಣುವಿನಲ್ಲಿ ಅಚಲವಾದ ಭಕ್ತಿಯನ್ನಿಟ್ಟು ಆತನ ಸರ್ವೋತ್ಕೃಷ್ಟತೆಯನ್ನು ದೃಢವಾಗಿ ನಂಬುವುದೇ ಮೋಕ್ಷಕ್ಕೆ ಸಾಧನವಾಗಿದೆ.

ಈ ಮತದಲ್ಲಿ ಭೇದಗಳು ವಿವಿಧ, ಅನಂತ, ಅಸಂಖ್ಯಾತ. ಅವೆಲ್ಲವುಗಳನ್ನು ಐದು ಗುಂಪುಗಳಾಗಿ ವಿಭಾಗಿಸುವರು. ಅವು ಜೀವೇಶ್ವರಭೇದ, ಪರಸ್ಪರ ಜೀವಭೇದ, ಜಡೇಶ್ವರ ಭೇದ, ಜಡಜೀವ ಭೇದ, ಪರಸ್ಪರ ಜಡಭೇದವೆಂಬುವು. ಇವಕ್ಕೆ ಪಂಚಭೇದಗಳೆಂದು ಹೆಸರು. ಆದರೂ ಮುಖ್ಯವಾಗಿ ಈಶ್ವರ, ಜೀವನ, ಜಡವೆಂದು ಮೂರೇ ಭೇದಗಳು. ಇವುಗಳಲ್ಲಿ ಪರಸ್ಪರ ಭೇದವಿದೆಯೆಂದೂ ಅದು ಶಾಶ್ವತವಾಗಿರುವುದೆಂದೂ ಈ ಮತದವರು ಪ್ರತಿಪಾದಿಸುವುದರಿಂದ ಇದಕ್ಕೆ ದ್ವೈತಮತ ಎಂದು ಹೆಸರು.

ಈಶ್ವರ:– ಶ್ರೀಹರಿಯೇ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತನಾದ ಪರಬ್ರಹ್ಮನು, ಈಶ್ವರನು, ಪರದೈವವು. ಈತನು ಸರ್ವೋತ್ತಮನು, ಅಪ್ರಾಕೃತನು, ಸಕಲ ಜ್ಞಾನಾನಂದಾದಿ ಗುಣಪೂರ್ಣನು, ದೋಷರಹಿತನು, ಸಚ್ಚಿದಾನಂದ ಸ್ವರೂಪನು, ಪುರುಷೋತ್ತಮನು, ಸರ್ವತ್ರ ವ್ಯಾಪ್ತನು, ಸ್ವತಂತ್ರನು, ಅದ್ಭುತ ಘಟನಾಶಕ್ತನು, ಆದ್ಯಂತರಹಿತನು, ಸೃಷ್ಟಿ ಸ್ಥಿತಿ ಲಯ ಮೊದಲಾದ ಅಷ್ಟಕಗಳಿಗೆ ಮುಖ್ಯ ಕರ್ತೃ, ನಿತ್ಯನು, ಸ್ವರೂಪ ಗುಣಾದಿಗಳಲ್ಲಿ ಜೀವರಿಂದ ಅತ್ಯಂತ ಭಿನ್ನನು. ಇಂತಹ ಸ್ವರೂಪವುಳ್ಳ ಶ್ರೀಹರಿ ಚೇತನ ಪ್ರಕೃತಿಯಾದ ಶ್ರೀಮಹಾಲಕ್ಷ್ಮಿಯಿಂದ ವ್ಯಾಪ್ತನಾಗಿರುವನು. ಆಕೆ ಗುಣ ಸ್ವರೂಪ ಶಕ್ತಿಗಳಲ್ಲಿ ಆತನಿಗಿಂತ ಕಡಿಮೆಯಾದವಳು. ಸೃಷ್ಟಿಕಾರ್ಯದಲ್ಲಿ ವಿಷ್ಣುವಿಗೆ ನೆರವಾಗುವಳು. ಅನಾದಿ ಮತ್ತು ನಿತ್ಯಳಾಗಿರುವಳು. ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನಾದಿ ರೂಪುಗಳಿಗನುಗುಣವಾಗಿ ಮಾಯಾ, ಜಯಾ, ಕೃತಿ, ಶಾಂತಿ ಎಂಬ ರೂಪುಗಳನ್ನು ಕ್ರಮವಾಗಿ ಧರಿಸಿರುವಳು. ರಾಮಕೃಷ್ಣಾದಿ ಅವತಾರಗಳಲ್ಲಿ ಸೀತಾ ರುಕ್ಮಿಣಿಯರಾಗಿ ಶ್ರೀವಿಷ್ಣುವನ್ನು ಅನುಸರಿಸಿರುವಳು.

ಜೀವರು:– ಜೀವರು ಅಸಂಖ್ಯಾತರು, ಅನಾದಿನಿತ್ಯರು, ಶರೀರದಿಂದ ಅತ್ಯಂತ ಭಿನ್ನರು, ಅಣು ಸ್ವರೂಪರು, ಸ್ವರೂಪ, ಯೋಗ್ಯತೆಯಿಂದ ಪರಸ್ಪರ ಭಿನ್ನರು. ಇವರಿಗೆ ಅನೇಕ ದೇಹಗಳುಂಟು. ಪಾಂಚಭೌತಿಕದೇಹ ನಶ್ವರವಾದುದು. ಹಳೆಯ ವಸ್ತುವನ್ನು ತ್ಯಜಿಸಿ ಹೊಸದನ್ನು ಧರಿಸುವಂತೆ ಶರೀರವನ್ನು ಜೀವನು ತ್ಯಜಿಸಿ ಪುನಃ ಶರೀರವಾಗಬಲ್ಲನು. ಜೀವನಿಗೆ ಇನ್ನೊಂದು ಲಿಂಗದೇಹವುಂಟು. ಅದು ಅನಾದಿಯಾದರೂ ನಿತ್ಯವಲ್ಲ; ಸಾಂತವಾದುದು. ಜೀವರು ಮಾಡುವ ಕರ್ಮ ದೇಹದಿಂದ ದೇಹಕ್ಕೆ ಹೋಗುವುದು. ಜೀವರುಗಳಲ್ಲಿ ಮುಕ್ತಿಯೋಗ್ಯರಾದ ಸಾತ್ವಿಕರು,

ಜನನ ಮರಣ ಪ್ರವಾಹ ರೂಪದಲ್ಲಿ ಸಂಚರಿಸುವ ನಿತ್ಯಸಂಸಾರಿಗಳು, ತಮೋಯೋಗ್ಯರಾದ ತಾಮಸಜೀವಿಗಳು ಎಂದು ಮೂರು ವಿಧ. ಜೀವರುಗಳಲ್ಲಿ ತಾರತಮ್ಯವಿದೆ. ಜಡಜೀವ, ಸ್ಥಾವರಜೀವ, ಚತುಷ್ಪಾದ ಜಂಗಮಜೀವ, ಶೂದ್ರ, ವೈಶ್ಯ, ಕ್ಷತ್ರಿಯ, ಬ್ರಾಹ್ಮಣ, ಚಕ್ರವರ್ತಿಗಳು ಉತ್ತರೋತ್ತರ ಶ್ರೇಷ್ಠರು. ಇದರಂತೆಯೇ ಮನುಷ್ಯಗಂಧರ್ವ, ದೇವಗಂಧರ್ವ, ಚಿರಪಿತೃಗಳು, ಅಜಾನುಜರು, ಪುಷ್ಕರ, ಶನೈಶ್ಚರ, ಬುಧ ಕೆಲವು ಮುಕ್ತಾತ್ಮರು, ಪರ್ಜನ್ಯ, ಕರ್ಮಜದೇವತೆಗಳು, ಜಯಂತ, ವಿನಾಯಕ, ಕುಬೇರ, ನಿಯತಿ, ಮರೀಚಿ, ಪ್ರಹ್ಲಾದ, ಅಗ್ನಿ, ನಾರದ, ವರುಣ, ಚಂದ್ರ, ಸೂರ್ಯ, ಯಮ, ಪ್ರವಹ, ಗರು, ಅಹಂಕಾರಿಕಪ್ರಾಣ, ಕಾಮ ಮತ್ತು ಇಂದ್ರ, ರುದ್ರ, ಶೇಷ ಮತ್ತು ಗರುಡ, ವಾಯು ಮತ್ತು ಚತುರ್ಮುಖ ಬ್ರಹ್ಮ, ಲಕ್ಷ್ಮಿ, ಶ್ರೀಹರಿ ಇವರು ಉತ್ತರೋತ್ತರ ಅಧಿಕರು. ಜೀವರು ಅಣುಸ್ವರೂಪರಿರುವುದರಿಂದ ಅತ್ಯಂತ ಸೂಕ್ಷ್ಮವಾದ ಪರಮಾಣು ಪ್ರದೇಶದಲ್ಲಿ ಅಸಂಖ್ಯ ಜೀವರಿರಬಹುದು. ಪರಮಾತ್ಮನು ಪ್ರತಿಯೊಂದು ಜೀವನಲ್ಲಿ ವ್ಯಾಪ್ತನಾಗಿರುವನು. ಅವನ ಪ್ರೇರಣೆಯಿಲ್ಲದೆ ಜೀವನು ಜೀವಿಸಲೂ ಚಲಿಸಲೂ ಶಕ್ತನಿರುವುದಿಲ್ಲ. ಆದರೂ ಪರಮಾತ್ಮನಿಂದ ಬಂದ ಮತ್ತು ಪರಮಾತ್ಮನ ಅಧೀನವಾದ ಸ್ವಾತಂತ್ರ್ಯದಿಂದ ಜೀವರು ತಮ್ಮ ಸುಖ ದುಃಖ ಸ್ಥಾನಗಳಾದ ವ್ಯವಹಾರಗಳನ್ನು ಮಾಡುವರು. ಪರಮಾತ್ಮನು ಜೀವರಲ್ಲಿ ವ್ಯಾಪ್ತನಾಗಿದ್ದರೂ ಅವರು ಮಾಡುವ ವ್ಯವಹಾರದಿಂದ ಅಲಿಪ್ತನಾಗಿರುವನು: ಆದರೂ ಜೀವರ ಸಕಲ ವ್ಯಾಪಾರಗಳಿಗೆ ಪರಮಾತ್ಮನೇ ಶಕ್ತಿಯನ್ನು ಒದಗಿಸಿಕೊಡುವನು ಮತ್ತು ಪ್ರೇರಕನಾಗಿರುವನು. ಜೀವರಿಗೆ ತಾವು ಮಾಡುವ ಕರ್ಮದಿಂದ ಬಂಧನ ವುಂಟಾಗುವುದು.

ಜಡ:– ಜಡಪ್ರಕೃತಿ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರಗಳೆಂದು ಎಂಟು ವಿಧ. ಇದು ಚಿತ್ಪ್ರಕೃತಿಗಳೊಡನೆ ಶ್ರೀಹರಿಯ ಅಧೀನದಲ್ಲಿದೆ. ವಿಶ್ವೋತ್ಪತ್ತಿಗೆ ಶ್ರೀಹರಿ ಮುಖ್ಯಕಾರಣನು. ಈ ಜಡಪ್ರಕೃತಿ ವಾಸ್ತವಿಕಕಾರಣ. ವಿಶ್ವವು ಪ್ರಕೃತಿಯ ಪ್ರಸಾರ. ಪ್ರಕೃತಿಯಿಂದ ತ್ರಿಗುಣಗಳು, ಅವುಗಳಿಂದ ಮಹತ್ತತ್ತ್ವ, ಅದರಿಂದ ತ್ರಿಗುಣಾತ್ಮಕವಾದ ಅಹಂಕಾರ, ಅದರಿಂದ ದೇವತೆಗಳ ಶರೀರ, ಮನಸ್ಸು, ಇಂದ್ರಿಯ ಮತ್ತು ಭೂತಾಕಾಶ ಇವೇ ಮೊದಲಾದುವು ಉದ್ಭವಿಸಿದುವು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಅಪ್ಪು, ಅಪ್ಪಿನಿಂದ ಪೃಥ್ವಿ, ಆಮೇಲೆ ಬ್ರಹ್ಮಾಂಡ ಮತ್ತು ಚತುರ್ಮುಖಬ್ರಹ್ಮ ಇವರ ಉತ್ಪತ್ತಿಯಾಯಿತು. ಈ ಪ್ರಕಾರ ಪರಮಾತ್ಮನ ಇಚ್ಛೆಯಿಂದ ಪ್ರಕೃತಿ ವಿಶ್ವವಾಗಿ ಬೆಳೆದು, ಬೆಳೆದ ಕ್ರಮಕ್ಕೆ ಪ್ರತಿಯಾಗಿ ಲಯವಾಗುವುದು.

ಮೋಕ್ಷ:– ಈ ಮತದಲ್ಲಿ ಬಂಧ ಮತ್ತು ಮೋಕ್ಷ ಇವೆರಡೂ ಈಶ್ವರನ ಅಧೀನವಾಗಿರುವುವು. ಮುಕ್ತಿಯ ಸ್ವರೂಪ ಸುಖಾನುಭವ. ಜೀವರುಗಳಿಗೆ ಇದು

ಲಿಂಗದೇಹ ಕಳೆದ ಮೇಲೆ ಆಗುತ್ತದೆ. ಲಿಂಗದೇಹ ಅನಾದಿಯಾದುದು. ಇದು ಸೂಕ್ಷ್ಮಗಳಾದ ಹತ್ತು ಇಂದ್ರಿಯಗಳು, ಐದು ಪ್ರಾಣಗಳು ಮತ್ತು ಮನಸ್ಸು ಈ ಹದಿನಾರು ಕಳೆಗಳುಳ್ಳದಾಗಿ ಕರ್ಮಾನುಷ್ಠಾನಕ್ಕೆ ಆಶ್ರಯವಾದುದು ಮತ್ತು ಜೀವರ ಜನನ ಮರಣಗಳಿಗೆ ಸಾಧನವಾದುದು. ಇದು ತ್ರಿಗುಣಾತ್ಮಕ. ಜೀವರ ಸುಖಾಪೇಕ್ಷೆಯಿಂದ ಪುಣ್ಯ ಪಾಪ ಸಾಧನಗಳಾದ ಕರ್ಮಗಳನ್ನು ಮಾಡುತ್ತಾರೆ. ಕರ್ಮದಿಂದ ಜೀವರು ಹೆಚ್ಚುಹೆಚ್ಚಾಗಿ ಬಂಧನಕ್ಕೊಳಗಾಗುವರು. ಶಾಸ್ತ್ರೋಕ್ತ ರೀತಿಯಿಂದ ಮಾಡಿದ ಕರ್ಮ ಐಹಿಕಾಮುಷ್ಮಿಕ ಕಲ್ಯಾಣವನ್ನುಂಟುಮಾಡುವುದು. ಮನಬಂದಂತೆ ನಡೆದರೆ ಇಹಪರಗಳಲ್ಲಿ ದುಃಖವುಂಟಾಗುವುದು. ಸಂಚಿತ, ಪ್ರಾರಬ್ಧ, ಆಗಾಮಿಯೆಂದು ಕರ್ಮ ಮೂರು ವಿಧ. ಹಿಂದಣ ಜನ್ಮದಲ್ಲಿ ಮಾಡಿದ ಕರ್ಮರಾಶಿಯಾಗಿರುವುದು ಸಂಚಿತ, ಈಗ ಅನುಭವಿಸುತ್ತಿರುವುದು ಪ್ರಾರಬ್ಧ, ಮುಂದೆ ಮಾಡಲಿರುವುದು ಆಗಾಮಿ. ಕರ್ಮಗಳಿಗೆ ಸಾಧಕವಾದ ಲಿಂಗ ಶರೀರವನ್ನು ಕಳೆದುಕೊಳ್ಳುವುದು ಕೇವಲ ಭಗವಂತನ ಪ್ರಸಾದದಿಂದ. ಈಶ್ವರಾರ್ಪಣ ಬುದ್ಧಿಯಿಂದ ಮಾಡಿದ ಸತ್ಕರ್ಮದಿಂದ, ಸಾತ್ವಿಕ ಜೀವನದಿಂದ, ತತ್ತ್ವಜ್ಞಾನ ಸಂವಾದನೆಯಿಂದ, ಭಗವಂತನಲ್ಲಿ ಅತ್ಯಂತ ಭಕ್ತಿಯನ್ನಿಡುವುದರಿಂದ ಶ್ರೀಹರಿ ಪ್ರಸನ್ನನಾಗಬಹುದು. ಅದರಿಂದ ಜೀವರುಗಳಿಗೆ ಅವರವರ ಸ್ವರೂಪಾನುಗುಣವಾಗಿ ಅಪರೋಕ್ಷ ಉಂಟಾಗುವುದು. ಅದರಿಂದ ಸಂಚಿತ ಮತ್ತು ಆಗಾಮಿ ಕರ್ಮಗಳು ನಾಶವಾಗುವುವು.

ಸಾತ್ವಿಕಜೀವರು ಪ್ರಾರಬ್ಧಕರ್ಮವನ್ನು ಭೋಗಿಸಿ ಪರಮಾತ್ಮನ ಪ್ರಸಾದದಿಂದ ಸ್ವರೂಪಾನಂದಾವಿರ್ಭಾವರೂಪ ಮೋಕ್ಷಸಾಧನವನ್ನು ಪೂರ್ತಿಮಾಡಿಕೊಂಡು, ಜನನ ಮರಣಗಳನ್ನು ದಾಟಿ, ತಮ್ಮ ತಮ್ಮ ಸ್ವರೂಪಾನುಗುಣವಾದ ಸ್ಥಳಗಳಲ್ಲಿರುವರು. ವಾಯುದೇವರೊಡನೆ ವಿರಜಾ ನದಿಯಲ್ಲಿ ಮುಳುಗಿದ ಮೇಲೆ ಇವರ ಲಿಂಗ ದೇಹ ಭಿನ್ನವಾಗುವುದು. ಆಮೇಲೆ ಚತುರ್ಮುಖ ಬ್ರಹ್ಮನ ನೂರು ವರ್ಷಗಳ ವರೆಗೆ ಕಾದು ಬ್ರಹ್ಮನನ್ನು ಹೊಕ್ಕು ಬ್ರಹ್ಮನೊಡನೆ ನಾರಾಯಣನ ಉದರವನ್ನು ಸೇರುವರು. ಮುಂದಣ ಕಲ್ಪದಲ್ಲಿ ಬ್ರಹ್ಮನೊಡನೆ ಹೊರಗೆ ಬರುವರು. ಶ್ವೇತದ್ವೀಪದಲ್ಲಿರುವ ಶ್ರೀವಾಸುದೇವನ ದರ್ಶನವನ್ನು ಹೊಂದಿ ತಮ್ಮತಮ್ಮ ಯೋಗ್ಯಸ್ಥಾನವನ್ನು ಸೇರುವರು. ಮತ್ತು ಸ್ವರೂಪಾನಂದಾವಿರ್ಭಾವ ಮುಕ್ತಿಯನ್ನನುಭವಿಸುವರು. ಈ ಮುಕ್ತಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂದು ನಾಲ್ಕು ವಿಧ. ಸ್ವರ್ಗಾದಿ ಲೋಕಗಳಲ್ಲಿ ಭಗವಂತನ ದರ್ಶನದಿಂದ ಸುಖವನ್ನನುಭವಿಸುವುದು ಸಾಲೋಕ್ಯ ಮುಕ್ತಿ. ಭಗವಂತನ ಸಮೀಪದಲ್ಲಿಯೇ ಯಥೇಷ್ಟ ಭೋಗವನ್ನನುಸರಿಸುವುದು ಸಾಮೀಪ್ಯ ಮುಕ್ತಿ. ರೂಪದಲ್ಲಿ ಭಗವಂತನಂತೆಯೇ ನಾಲ್ಕು ಭುಜಗಳುಳ್ಳವರೂ ಕಾಂತಿಯುತರೂ ಆಗಿರುವುದು ಸಾರೂಪ್ಯ ಮುಕ್ತಿ. ಭಗವಂತನ ಶರೀರವನ್ನು ಆತನ ಶರೀರದಿಂದಲೇ ಭೋಗವನ್ನನುಭವಿಸುವುದು ಸಾಯುಜ್ಯ ಮುಕ್ತಿ. ಸಾಯುಜ್ಯ ಮುಕ್ತನು

ಜ್ಞಾನಾನಂದಾತ್ಮಕದೇಹೇಂದ್ರಿಯನಾಗಿ ಭಗವಂತನನ್ನು ಪ್ರವೇಶಿಸಿ ಆತನ ಅಂಗಗಳಿಂದ ಅನುಗೃಹೀತಗಳಾದ ಸ್ವಾಂಗಗಳಿಂದ ಪ್ರವೃತ್ತಿಯನ್ನು ಮಾಡುತ್ತಿರುತ್ತಾನೆ.

ನಿತ್ಯಸಂಸಾರಿಗಳು ತಮ್ಮ ಲಿಂಗದೇಹ ಭಿನ್ನವಾದ ಮೇಲೆ ತಮ್ಮತಮ್ಮ ಯೋಗ್ಯತೆಯ ಪ್ರಕಾರ ಸ್ವರ್ಗ ಮರ್ತ್ಯ, ನರಲೋಕಗಳಲ್ಲಿ ಸಂಚರಿಸುತ್ತ ತಮ್ಮತಮ್ಮ ಸುಖ ದುಃಖ ಮಿಶ್ರ ಸ್ವರೂಪವನ್ನು ಅನುಭವಿಸುವರು.

ತಾಮಸಜೀವಿಗಳು ತಮಸ್ಸಾಧನ ರೂಪ ದ್ವೇಷ ಪರಿಪಾಕಾನಂತರ ಪಾಂಚಭೌತಿಕ ದೇಹದಿಂದ ಹೊರಟು ಕಲಿಯನ್ನು ಸೇರುವರು. ಆ ಕಲಿ ಮತ್ತು ಆತನಲ್ಲಿದ್ದ ಜೀವರುಗಳ ಲಿಂಗದೇಹ ವಾಯುದೇವನ ಗದಾಪ್ರಹಾರದಿಂದ ಭಿನ್ನವಾಗುವುದು. ಆಮೇಲೆ ಸ್ವರೂಪಭೂತ ದುಃಖಾನುಭವ ರೂಪ ತಮಃಪ್ರಾಪ್ತಿ ಆಗುವುದು. ಇದೇ ತಾಮಸಜೀವಿಗಳ ಮೋಕ್ಷ.

ಮಧ್ವಮತದ ಮುಖ್ಯ ತತ್ತ್ವಗಳನ್ನು ವ್ಯಾಸರಾಯ ಸ್ವಾಮಿಗಳು ತಮ್ಮ ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹಿಸಿರುವರು.

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ತ್ವತೋ

ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ

ಮುಕ್ತಿರ್ನೈಜಸುಖಾನುಭೂತಿರಮಾಲಾ ಭಕ್ತಿಶ್ಚ ತತ್ಸಾಧನಂ

ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ

ಹರಿಯೇ ಪರಬ್ರಹ್ಮನು. ಜಗತ್ತು ಸತ್ಯವಾದುದು. ನಿಜವಾಗಿಯೆ ಭೇದವಿದೆ. ಜೀವಾತ್ಮರುಗಳೆಲ್ಲ ಪರಮಾತ್ಮನ ಸೇವಕರು. ಅವರಲ್ಲಿ ಉಚ್ಚ ನೀಚ ಭಾವವಿದೆ. ಸ್ವಾಭಾವಿಕ ಸ್ವರೂಪ ಸುಖದ ಅನುಭವವೇ ಮುಕ್ತಿ. ನಿರ್ಮಲವಾದ ಭಕ್ತಿಯೇ ಆ ಮುಕ್ತಿಗೆ ಸಾಧನ. ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಮೂರೇ ಪ್ರಾಮಾಣಗಳು. ಎಲ್ಲ ವೇದಗಳಲ್ಲಿ ಪ್ರತಿಪಾದ್ಯನಾದ ಮುಖ್ಯ ದೇವತೆ ಶ್ರೀಹರಿ. ಇವುಗಳಿಗೆ ಮಧ್ವಮತದ ನವರತ್ನಗಳೆಂದೆನ್ನುವರು.

ಶ್ರೀಮಧ್ವಾಚಾರ್ಯರು ಕನ್ನಡ ನಾಡಿನಲ್ಲಿ ಜನಿಸಿದವರು. ಮತ್ತು ಧಾರ್ಮಿಕ ಪಂಥಗಳಲ್ಲಿ ಒಂದು ವಿಶಿಷ್ಟವಾದ ಪಂಥವನ್ನು ಪ್ರಸ್ತಾಪಿಸಿ ಭಕ್ತಿಮಾರ್ಗಕ್ಕೆ ಚಲನ ಕೊಟ್ಟವರು. ಉತ್ತರ ಹಿಂದೂಸ್ಥಾನದಲ್ಲಿ ಈಗ ಪ್ರಚಲಿತವಾಗಿರುವ ಮಹತ್ವದ ವೈಷ್ಣವ ಪಂಥಗಳಲ್ಲಿ ಒಂದಾದ ಚೈತನ್ಯಮತ ಮಧ್ವಮತದ ಶಾಖೆಯಾಗಿರುವುದು. ಶ್ರೀಮಧ್ವಾಚಾರ್ಯರು ಸಂಸ್ಕೃತದಲ್ಲಿಯೇ ಗ್ರಂಥಗಳನ್ನು ಬರೆದರೂ ಅವರ ಅನುಯಾಯಿಗಳು ಕನ್ನಡ ಭಾಷೆ ಮತ್ತು ಸಂಸ್ಕೃತಿ ಪ್ರಸಾರಕ್ಕೆ ಬಹಳವಾಗಿ ಸಹಾಯ ಮಾಡಿರುವರು. ಶಿಕ್ಷಣದ ಗಂಧವಿಲ್ಲದವರಿಗೂ ಕೂಡ ಸುಲಭವಾಗಿ ತಿಳಿಯುವಂತೆ ಅಧ್ಯಾತ್ಮಿಕ ವಿದ್ಯೆಯ ಗಡುಚಾದ ತತ್ತ್ವಗಳನ್ನು ಪದ್ಯ, ದೇವರ ನಾಮ, ಸುಳಾದಿ,

ತತ್ತ್ವ, ಸುವ್ವಾಲೆ, ತ್ರಿಪದಿ, ಚೌಪದಿ, ಕಂದ, ವಚನ ಮೊದಲಾದವುಗಳ ರೂಪದಿಂದ ತಿಳಿಗನ್ನಡದಲ್ಲಿ ಬೋಧಿಸಿ ಜನರನ್ನು ಸನ್ಮಾರ್ಗಕ್ಕೆ ಹಚ್ಚಲು ಸಹಾಯಕರಾಗಿರುವರು. ಇವರು ತಮ್ಮನ್ನು ಹರಿದಾಸರೆಂದು ಕರೆದುಕೊಂಡು ಜನತಾರೂಪ ಜನಾರ್ದನನ ಸೇವೆಯನ್ನು ಬಹಳವಾಗಿ ಮಾಡಿರುವರು. ವೀರಶೈವ ಶರಣರಂತೆ ಇವರು ಸಾಮಾನ್ಯ ಜನತೆಯಲ್ಲಿ ಬೆರೆತು, "ಈಶ್ವರನು ಒಬ್ಬನೇ, ಆತನು ಪರಮ ದಯಾಳು, ಎಲ್ಲರಿಗೂ ತಂದೆಯಾಗಿರುವನು, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುವನು, ಆತನಲ್ಲಿ ಅಚಲವಾದ ಭಕ್ತಿಯನ್ನಿಟ್ಟು ಈಶ್ವರಾರ್ಪಣ ಬುದ್ಧಿಯಿಂದ ಸಂಸಾರವನ್ನು ಮಾಡಬೇಕು" ಎಂದು ಬೋಧಿಸಿದರು. ಹರಿದಾಸರಲ್ಲಿ ದಾಸರು ಮತ್ತು ವ್ಯಾಸರೆಂದು ಎರಡು ವಿಧ. ಸಾಮಾನ್ಯವಾಗಿ ಕನ್ನಡದಲ್ಲಿ ಮಧ್ವಮತದ ತತ್ತ್ವಗಳನ್ನು ಬೋಧಿಸಿದವರಿಗೆ ದಾಸರೆಂದೂ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಮೂಲ ಗ್ರಂಥಗಳನ್ನು ಅಭ್ಯಾಸ ಮಾಡಿದ ಸಂಸ್ಕೃತ ಪಂಡಿತರಿಗೆ ವ್ಯಾಸರೆಂದೂ ಈಗ ಕರೆಯುವ ರೂಢಿಯುಂಟು. ಹರಿದಾಸರಲ್ಲಿ ಕೆಲವರು ಕೇವಲ ಮಧ್ವಮತದವರಿಗೋಸುಗ ಸಾಂಪ್ರದಾಯಿಕ ಗ್ರಂಥಗಳನ್ನು ಬರೆದಿರುವರು. ಇವರಲ್ಲಿ ವಿಜಯದಾಸ, ಜಗನ್ನಾಥದಾಸ, ವೆಂಕಟದಾಸ ಮೊದಲಾದವರು ಮುಖ್ಯರು. ಕೆಲವರು ಹಿಂದೂಧರ್ಮದ ತತ್ತ್ವಗಳನ್ನೊಳಗೊಂಡ ಗ್ರಂಥಗಳನ್ನು ಬ್ರಾಹ್ಮಣ ಸಮಾಜಕ್ಕಾಗಿ ಬರೆದಿರುವರು. ಇವರು ಕರ್ಮ, ಭಕ್ತಿ, ಜ್ಞಾನ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿರುವರು. ಇವರಲ್ಲಿ ವ್ಯಾಸರಾಯ, ಗೋಪಾಲದಾಸ, ಸುಬ್ಬಣ್ಣದಾಸ ಮೊದಲಾದವರು ಮುಖ್ಯರು. ಕೆಲವರು ಯಾವುದೂ ಭೇದವಿಲ್ಲದೆ ಎಲ್ಲ ಜನರಿಗಾಗಿ ಧಾರ್ಮಿಕ ಮತ್ತು ನೈತಿಕ ತತ್ತ್ವಗಳನ್ನು ಬೋಧಿಸಿರುವರು. ಇಂತಹವರಲ್ಲಿ ಶ್ರೀಪಾದರಾಯ, ವಾದಿರಾಜ, ಪುರಂದರದಾಸ, ಕನಕದಾಸ ಮೊದಲಾದವರು ಬರುವರು.

ಶಿವಶರಣರಂತೆ ಹರಿದಾಸರು ಅನುಭಾವಿಗಳು. ವಿಶ್ವವನ್ನೇ ತಮ್ಮ ಕುಟುಂಬವನ್ನಾಗಿ ಮಾಡಿಕೊಂಡವರು, ವಿಶ್ವಪ್ರೇಮಿಗಳು, ಪರಮಾತ್ಮನ ಕೃಪೆಗೆ ಪಾತ್ರರಾದವರು, ಸಂಸಾರದ ತಾಪದಲ್ಲಿ ಬಳಲಿದವರಿಗೆ ಮಾರ್ಗದರ್ಶಿಗಳು. ಇಂತಹ ದೇವದೂತರಾದ ಹರಿದಾಸರಲ್ಲಿ ಪ್ರಮುಖರಾದವರ ಚರಿತ್ರೆಗಳನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಸಂಗ್ರಹಿಸಲಾಗಿದೆ.

ನರಹರಿತೀರ್ಥರು

ನಮಗೆ ಗೊತ್ತಿದ್ದ ಹರಿದಾಸರಲ್ಲಿ ನರಹರಿತೀರ್ಥರು ಮೊದಲನೆಯವರೆಂದು ಹೇಳಬಹುದು. ಇವರು ಪದ್ಮನಾಭರ ತರುವಾಯ ಶಕ ೧೨೧೪-೧೨೨೧ರ ವರೆಗೆ ಸ್ವಾಮಿಗಳಾಗಿದ್ದರು. ಇವರ ಮೊದಲಿನ ಹೆಸರು ಶಾಮಶಾಸ್ತ್ರಿಯೆಂಬುದು. ಇವರು ಪೂರ್ವಾಶ್ರಮದಲ್ಲಿ ಗಂಜಾಮ ಭಾಗಕ್ಕೆ ದಫ್ತರದಾರರಾಗಿದ್ದರು. ಮಧ್ವಾಚಾರ್ಯರ ತತ್ತ್ವಗಳು ಇವರ ಮನಸ್ಸಿಗೆ ಸರಿಯೆಂದು ತೋರಿದುದರಿಂದ

ಇವರು ಅವರ ಶಿಷ್ಯರಾದರು. ಒಡಿಸಾ ದೇಶದ ರಾಜರಿಂದ ಸೀತಾರಾಮರ ಅತಿ ಸುಂದರವಾದ ಮೂರ್ತಿಗಳನ್ನು ಕಾಣಿಕೆಯಾಗಿ ಸ್ವೀಕರಿಸಿ, ಮಧ್ವಾಚಾರ್ಯರಿಗೆ ಕೊಟ್ಟರು. ಈಗ ಈ ಮೂರ್ತಿಗಳು ಮಂತ್ರಾಲಯ ಮಠದಲ್ಲಿ ಪೂಜಿಸಲ್ಪಡುವುವು. ನರಹರಿತೀರ್ಥರ ಕಾರ್ಯ ಶಕ ೧೧೮೬ರಿಂದ ಪ್ರಾರಂಭವಾಗಿದ್ದಂತೆ ತೋರುತ್ತದೆ. ಇವರ ಪದ್ಯಗಳಲ್ಲಿ ರಘುಕುಲತಿಲಕ ಅಥವಾ ಶ್ರೀರಘುಪತಿಯೆಂದು ಅಂಕಿತವಿದೆ.

ಶ್ರೀಪಾದರಾಯರು

ಶ್ರೀಪಾದರಾಯರ ಮೊದಲಿನ ಹೆಸರು ಲಕ್ಷ್ಮೀನಾರಾಯಣ ಎಂಬುದು. ಇವರ ತಾಯಿಯ ಹೆಸರು ಗಿರಿಯಮ್ಮ. ತಂದೆ ಶೇಷಗಿರಿಯಾಚಾರ್ಯ. ಊರು ಮುಳಬಾಗಿಲು. ಇವರ ಶಿಕ್ಷಣ ಮತ್ತು ಸಂನ್ಯಾಸ ದೀಕ್ಷೆ ಶ್ರೀರಂಗಮಠದ ಸ್ವಾಮಿಗಳಾದ ಸುವರ್ಣತೀರ್ಥರಿಂದ ಆದುವು. ವಿಜಯನಗರದ ರಾಜರು ಮತ್ತು ಚಂದ್ರಗಿರಿಯ ರಾಜರು ಇವರ ವಿದ್ವತ್ತಿಗಾಗಿ ಜಹಗೀರುಗಳನ್ನು ಕೊಟ್ಟಿರುವರು. ಶ್ರೀಪಾದರಾಯರು ತಮ್ಮ ಮಠದಲ್ಲಿ ಕನ್ನಡ ಪದಗಳನ್ನು ಅನ್ನಲು ಅನುಕೂಲತೆಯನ್ನು ಒದಗಿಸಿಕೊಟ್ಟರು. ಇವರು ಕನ್ನಡದಲ್ಲಿ ಬರೆದ ವೇಣುಗೀತೆ, ಭ್ರಮರಗೀತೆ, ಗೋಪಾಲಗೀತೆಗಳನ್ನು ಶ್ರೀರಂಗದೊಳಗಿನ ಮಠದಲ್ಲಿ ಪೂಜೆಯ ಕಾಲಕ್ಕೆ ಪಠಿಸುವರು. ಚಂದ್ರಗಿರಿಯ ರಾಜನಾದ ಸಾಳನರಸಿಂಹನು ಸುಮಾರು ಕ್ರಿ.ಶ. ೧೪೯೭ರಲ್ಲಿ ಇವರನ್ನು ತನ್ನ ಸಿಂಹಾಸನದ ಮೇಲೆ ಕೂಡಿಸಿ ಕನಕಾಭಿಷೇಕವನ್ನು ಮಾಡಿಸಿದನೆಂದು ಹೇಳುವರು. ಶ್ರೀಪಾದರಾಯರು ಅನೇಕ ಪಂಡಿತರನ್ನು ಸೋಲಿಸಿ ದ್ವೈತಮತವನ್ನು ಪ್ರಸಾರ ಮಾಡಿರುವರು. ಇವರ ಪದ್ಯಗಳಲ್ಲಿ ಶ್ರೀರಂಗವಿಠ್ಠಲವೆಂಬ ಅಂಕಿತವಿದೆ. ಇವರ ಪದ್ಯಗಳು ಸರಳ, ಸುಲಭ ಮತ್ತು ಗಂಭೀರವಾಗಿರುವುವು. ಭಕ್ತಿರಸದಿಂದ ತುಂಬಿ ತುಳುಕುತ್ತಿರುವುವು.

ವ್ಯಾಸರಾಯರು

ವ್ಯಾಸರಾಯರು ಕಾವೇರೀ ತೀರದಲ್ಲಿರುವ ಬನ್ನೂರು ಎಂಬ ಊರಲ್ಲಿ ೧೪೫೭ನೆಯ ಏಪ್ರಿಲ್ ತಿಂಗಳ ೨೨ನೆಯ ತಾರೀಖಿನ ದಿವಸ ಜನ್ಮತಾಳಿದರೆಂದೂ ಇವರು ವಿಜಯನಗರದ ರಾಜರಿಗೆ ಗುರುಗಳಾಗಿದ್ದರೆಂದೂ ಕೃಷ್ಣದೇವರಾಯನ ಕುಹು ಯೋಗವನ್ನು ತಪ್ಪಿಸಿದವರೆಂದೂ ಪ್ರತೀತಿಯಿದೆ. ಇವರು ಸ್ವತಃ ದೊಡ್ಡ ವಿದ್ವಾಂಸರಿದ್ದುದಲ್ಲದೆ ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು. ಇವರು ಸಂಸ್ಕೃತದಲ್ಲಿ ತರ್ಕ ತಾಂಡವ, ನ್ಯಾಯಾಮೃತ ಮತ್ತು ಚಂದ್ರಿಕೆಯೆಂಬ ಗ್ರಂಥಗಳನ್ನು ರಚಿಸಿರುವರು. ಕನ್ನಡದಲ್ಲಿ ಅನೇಕ ಕೀರ್ತನೆಗಳನ್ನೂ, ಭಜನೆಗಳನ್ನೂ ಬರೆದಿರುವರು. ಇವರು ಶ್ರೀಪಾದರಾಯರ ಕಡೆಯಿಂದ ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು. ಬಂಗಾಲಿ ದೇಶದ ವೈಷ್ಣವ ಪಂಥಕ್ಕೆ ಪ್ರಮುಖರಾದ ಶ್ರೀಕೃಷ್ಣ ಚೈತನ್ಯ ಅಥವಾ ಗೌರಾಂಗರೆಂಬವರು

ವ್ಯಾಸರಾಯರ ಶಿಷ್ಯರಿದ್ದಂತೆ ತಿಳಿಯುವುದು. ಪುರಂದರದಾಸ, ಕನಕದಾಸ, ವಿಜಯೀಂದ್ರಸ್ವಾಮಿ, ವಾದಿರಾಜ, ವೈಕುಂಠದಾಸ ಮೊದಲಾದವರು ಇವರ ಪ್ರಮುಖ ಶಿಷ್ಯರು. ವ್ಯಾಸರಾಯರು ಕ್ರಿ.ಶ. ೧೫೩೯ರಲ್ಲಿ ವೈಕುಂಠವಾಸಿಗಳಾದರು. ಇವರ ಸಮಾಧಿ ಹಂಪಿಯ ಹತ್ತಿರ ಇರುವ ಆನೆಗುಂದಿಯ ಸಮೀಪದ ತುಂಗಭದ್ರಾ ನದಿಯ ನಡುಗುಡ್ಡೆಯಲ್ಲಿದೆ. ಇವರಿಂದ ದ್ವೈತಮತಕ್ಕೆ ಬಹಳ ಉಪಕಾರವಾಗಿರುವುದು. ಇವರ ಕಾಲದಲ್ಲಿಯೇ ವ್ಯಾಸಕೂಟ ಮತ್ತು ದಾಸಕೂಟವೆಂಬುವು ಪ್ರಚಾರದಲ್ಲಿ ಬಂದುವು. ಇವರು ದಾಸಕೂಟಕ್ಕೆ ಮುಖ್ಯರು. ಕರ್ನಾಟಕದಲ್ಲಿ ವೈಷ್ಣವ ಧರ್ಮವನ್ನು ಹಬ್ಬಿಸಲು ದಾಸಕೂಟದವರಿಂದ ಬಹಳ ಉಪಕಾರವಾಗಿರುವುದು.

ಪುರಂದರದಾಸರು

ಪುಣೆ ಜಿಲ್ಲೆಗೆ ಸೇರಿದ ಪುರಂದರಗಡದಲ್ಲಿ ವರದಪ್ಪ ಮತ್ತು ಲಕ್ಷ್ಮಕ್ಕ ಎಂಬ ಶ್ರೀಮಂತ ದಂಪತಿಗಳ ಹೊಟ್ಟೆಯಲ್ಲಿ ಕ್ರಿ.ಶ. ೧೪೮೦ರ ಸುಮಾರಿಗೆ ಪುರಂದರದಾಸರು ಜನ್ಮವೆತ್ತಿದರು. ಇವರ ಮೊದಲಿನ ಹೆಸರು ಶ್ರೀನಿವಾಸನಾಯಕನೆಂಬುದು. ಇವರ ಹೆಂಡತಿಯ ಹೆಸರು ಸರಸ್ವತಿಯಮ್ಮ. ಇವರಿಗೆ ವರದಪ್ಪ, ಗುರಪ್ಪ, ಅಭಿನವಪ್ಪ ಮತ್ತು ಮಧ್ವಪತಿ ಎಂಬ ನಾಲ್ವರು ಮಕ್ಕಳಿದ್ದರು. ಇವರೆಲ್ಲರೂ ದಾಸಕೂಟಕ್ಕೆ ಸೇರಿದವರು ಪುರಂದರದಾಸರು ದಾಸಕೂಟದಲ್ಲಿ ಅಗ್ರಗಣ್ಯರು. ಇವರು ನಾರದರ ಅವತಾರವೆಂದು ನಂಬಿಕೆಯಿದೆ.

ಇವರು ಹೇಗೆ ಪುರಂದರದಾಸರಾದರೆಂಬ ಬಗ್ಗೆ ಒಂದು ಚಿಕ್ಕ ಕಥೆಯಿದೆ. ಇವರ ಹೆಂಡತಿಯಾದ ಸರಸ್ವತಿಯಮ್ಮನವರು ಒಳ್ಳೆಯ ಸಾತ್ತ್ವಿಕರೂ, ಉದಾರ ಮನಸ್ಸಿನವರೂ, ಸದ್ಗುಣಿಗಳೂ ಆಗಿದ್ದರು. ಪಾಂಡುರಂಗನು ಒಬ್ಬ ಬಡ ಬ್ರಾಹ್ಮಣನ ವೇಷದಿಂದ ಆರು ತಿಂಗಳವರೆಗೆ ಶೀನಪ್ಪನಾಯಕರ ಕಡೆಗೆ ದಾನವನ್ನು ಬೇಡಿ ಬೇಸತ್ತು ಸರಸ್ವತಿಯಮ್ಮನವರ ಕಡೆಗೆ ಹೋಗಿ ದೂರಿಟ್ಟು ಅವರಿಂದ ದಾನವನ್ನು ಯಾಚಿಸಿದನು. ಸರಸ್ವತಿಯಮ್ಮನವರು ಕನಿಕರಗೊಂಡು ತಮ್ಮ ಮೂಗಿನ ನತ್ತನ್ನು ಅವನಿಗೆ ದಾನವಾಗಿ ಕೊಟ್ಟರು. ಈ ನತ್ತಿನ ಕಾರಣದಿಂದ ಶೀನಪ್ಪನಾಯಕರಲ್ಲಿ ವೈರಾಗ್ಯ ಹುಟ್ಟಿ ಅವರು ದಾಸರಾದರು.

ಇವರು ವ್ಯಾಸರಾಯರ ಶಿಷ್ಯರಾಗಿದ್ದರು. ಇವರು ಭಕ್ತಿರಸಪೂರಿತವಾದ ಅನುಭವದ ಪದಗಳನ್ನು ರಚಿಸಿ, ಹಾಡಿ, ಕರ್ನಾಟಕದಲ್ಲಿ ಭಕ್ತಿಪಂಥದ ಪ್ರಸಾರಕ್ಕೆ ತುಂಬ ಸಹಾಯಕರಾದರು. ಇವರ ಪದ್ಯಗಳಲ್ಲಿ ಪುರಂದರವಿಠ್ಠಲ ಎಂಬ ಅಂಕಿತವಿದೆ. ಇವರು ಶಾಲಿವಾಹನ ಶಕ ೧೪೮೬ನೆಯ (ಇಸವಿ ಸನ್ ೧೫೬೪) ರಕ್ತಾಕ್ಷಿ ಸಂವತ್ಸರದ ಪುಷ್ಯಮಾಸದ ಅಮಾವಾಸ್ಯೆಯ ದಿವಸ ತಮ್ಮ ೮೪ನೆಯ ವಯಸ್ಸಿನಲ್ಲಿ ತೀರಿಕೊಂಡರು.

ಕನಕದಾಸರು

ಧಾರವಾಡ ಜಿಲ್ಲೆಗೆ ಸೇರಿದ ಬಂಕಾಪುರದ ಬಳಿಯಿರುವ ಬಾಡ ಎಂಬ ಊರು ಕನಕದಾಸರ ಜನ್ಮಸ್ಥಳ. ಇವರು ಜಾತಿಯಿಂದ ಹಂಡೆಕುರುಬರೆಂದು ಕೆಲವರೂ ಬೇಡರೆಂದು ಬೇರೆ ಕೆಲವರೂ ಹೇಳುತ್ತಾರೆ. ಇವರ ತಂದೆಯ ಹೆಸರು ಬೀರೇಗೌಡ; ತಾಯಿ ಬಚ್ಚಮ್ಮ. ಇವರು ಬಂಕಾಪುರದ ಸೀಮೆಗೆ ದಂಡನಾಯಕರಿದ್ದಂತೆ ತಿಳಿಯುತ್ತದೆ. ಇವರ ಇಷ್ಟದೇವತೆ ಕಾಗಿನೆಲೆಯ ಆದಿಕೇಶವಸ್ವಾಮಿ. ಇವರು ವ್ಯಾಸರಾಯರ ಶಿಷ್ಯರು. ಕರ್ನಾಟಕವನ್ನೆಲ್ಲ ಸಂಚರಿಸಿ ಉಡುಪಿಯಲ್ಲಿ ಕೆಲಕಾಲವಿದ್ದಂತೆ ತಿಳಿಯುತ್ತದೆ. ಇವರು ಹರಿಭಕ್ತಿಸಾರ, ನಳಚರಿತ್ರ, ರಾಮಧಾನ್ಯ ಚರಿತ್ರ, ಕೀರ್ತನೆಗಳು, ಮೋಹನ ತರಂಗಿಣಿ ಮೊದಲಾದವುಗಳನ್ನು ಬರೆದಿರುವರು. ಇವರು ೯೮ ವರ್ಷಕಾಲ ಬಾಳಿದ್ದರೆಂದು ಪ್ರತೀತಿಯಿದೆ.

ಭಾಗಣ್ಣದಾಸರು

ಇವರಿಗೆ ಗೋಪಾಲದಾಸರೆಂದು ಮತ್ತೊಂದು ಹೆಸರಿದೆ. ಇವರು ರಾಯಚೂರು ಜಿಲ್ಲೆಗೆ ಸೇರಿದ ಮೊಸರುಕಲ್ಲು ಎಂಬ ಊರಲ್ಲಿ ಶಾ.ಶ.೧೬೪೦ರಲ್ಲಿ (ಇಸವಿ ಸನ್ ೧೭೧೮) ಜನ್ಮವೆತ್ತಿದರು. ಇವರ ತಂದೆಯ ಹೆಸರು ಮುರಾರಿರಾಯ; ತಾಯಿ ವೆಂಕಮ್ಮ. ಇವರಿಗೆ ದಾಸಪ್ಪ, ಶೀನಪ್ಪ, ರಂಗಪ್ಪ ಎಂಬ ಮೂವರು ತಮ್ಮಂದಿರಿದ್ದರು. ಅವರೆಲ್ಲರೂ ದಾಸಕೂಟವನ್ನು ಸೇರಿದರು. ಇವರು ವಿಜಯದಾಸರ ಶಿಷ್ಯರು. ಇವರಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಜಗನ್ನಾಥದಾಸರು ಒಬ್ಬರು. ಗೋಪಾಲದಾಸರು ಚಿತ್ರಭಾನು ಸಂವತ್ಸರದ ಪುಷ್ಯ ಬಹುಳ ೮ ಶನಿವಾರ ಕಾಲವಾದರು.

ಜಗನ್ನಾಥದಾಸರು

ಇವರು ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಬ್ಯಾಗವಟ್ಟಿ ಎಂಬಲ್ಲಿ ಶಾ.ಸ ೧೬೪೯ನೆಯ (ಕ್ರಿ.ಶ. ೧೭೨೭) ಕೀಲಕ ಸಂ। ದ ಶ್ರಾವಣ ಶುದ್ಧ ೨ನೆಯ ದಿವಸ ಜನ್ಮವೆತ್ತಿದರು. ಇವರ ತಂದೆಯವರು ಪ್ರಸಿದ್ಧರಾದ ತಿಮ್ಮಣ್ಣದಾಸರ ಶಿಷ್ಯ ನರಸಪ್ಪನವರು. ಇವರ ಪದ್ಯಗಳಲ್ಲಿ ಜಗನ್ನಾಥವಿಠಲ ಎಂಬ ಅಂಕಿತವಿದೆ. ದಾಸ ವರ್ಗದಲ್ಲಿ ಇವರು ಸುಪ್ರಸಿದ್ಧರು, ಮಹಾವಿದ್ವಾಂಸರು, ಗೀತೆ, ಬ್ರಹ್ಮಸೂತ್ರ, ದಶೋಪನಿಷತ್ತು ಮೊದಲಾದವುಗಳಿಗೆ ವ್ಯಾಖ್ಯಾನಗಳನ್ನೂ, ಮಧ್ವಮತದ ತತ್ವಗಳನ್ನೊಳಗೊಂಡ ಹರಿಕಥಾಮೃತಸಾರವೆಂಬ ಕನ್ನಡ ಗ್ರಂಥವನ್ನೂ ಬರೆದಿರುವರು. ಇವಲ್ಲದೆ ಅನೇಕ ಕೀರ್ತನೆ, ಪದ್ಯ, ಸುಳಾದಿಗಳನ್ನೂ ರಚಿಸಿರುವರು. ಇವರು ಶಾ.ಶ. ೧೭೩೧ನೆಯ (ಕ್ರಿ.ಶ. ೧೮೦೯) ಶುಕ್ಲ ಸಂ।ದ ಭಾದ್ರಪದ ಶುದ್ಧ ೯ಕ್ಕೆ ವೈಕುಂಠವಾಸಿಗಳಾದರು. ಇವರು ಟೀಪುಸುಲ್ತಾನರ ದಿವಾನರಾಗಿದ್ದ ಪೂರ್ಣಯ್ಯನವರ ಆದರಕ್ಕೆ ಪಾತ್ರರಾಗಿದ್ದರು.

ವಾದಿರಾಜ ತೀರ್ಥ ಅಥವಾ ಸೋದೆರಾಜರು

ವಾದಿರಾಜರು ಮಂಗಳೂರು ಜಿಲ್ಲೆಗೆ ಸೇರಿದ ಹೂವಿನ ಕೆರೆಯೆಂಬ ಊರಲ್ಲಿ ಶಾ.ಶ. ೧೪೦೨ರಲ್ಲಿ (ಕ್ರಿ.ಶ. ೧೪೮೦) ಹುಟ್ಟಿದರು ಇವರ ತಂದೆ ರಾಮಭಟ್ಟ; ತಾಯಿ ಗೌರಮ್ಮ. ಇವರು ಮುಂದೆ ವಿದ್ಯಾನಗರದಲ್ಲಿ ರಾಜಗುರುಗಳಾಗಿದ್ದ ಶ್ರೀ ವ್ಯಾಸರಾಯ ಸ್ವಾಮಿಗಳವರ ಕೃಪೆಗೆ ಪಾತ್ರರಾಗಿದ್ದರು. ಇವರು ದೊಡ್ಡ ವಿದ್ವಾಂಸರು. ಸಂಸ್ಕೃತ ಮತ್ತು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವರು. ಶಾಲಿವಾಹನ ಶಕ ೧೫೨೨ನೆಯ (ಇಸವಿ ಸನ್ ೧೬೦೦) ಶಾರ್ವರಿ ಫಾಲ್ಗುಣ ಕೃಷ್ಣ ತೃತೀಯ ಬುಧವಾರ ದಿನ ತಮ್ಮ ೧೨೦ನೆಯ ವಯಸ್ಸಿನಲ್ಲಿ ವೈಕುಂಠವಾಸಿಗಳಾದರು.

ವಿಜಯದಾಸರು

ವಿಜಯದಾಸರು ನಿಜಾಮಪ್ರಾಂತಕ್ಕೆ ಸೇರಿದ ಮಾನವಿಯ ಬಳಿಯಲ್ಲಿರುವ ಚೀಕಲಪರಿ ಎಂಬಲ್ಲಿ ಶಾ.ಶ. ೧೬೦೪ರಲ್ಲಿ (ಇಸವಿ ಸನ್ ೧೬೮೨ನೆಯು) ರುಧಿರೋದ್ಗಾರಿ ಸಂವತ್ಸರದಲ್ಲಿ ಹುಟ್ಟಿದರು. ಇವರ ತಂದೆಯು ಹೆಸರು ಶ್ರೀನಿವಾಸಪ್ಪನವರು; ತಾಯಿ ಮಾಸಮ್ಮ. ಇವರ ಮೊದಲ ಹೆಸರು ದಾಸಪ್ಪನವರೆಂದು. ಇವರ ೩೦ನೆಯ ವಯಸ್ಸಿನಲ್ಲಿ ಒಂದು ದಿವಸ ಶ್ರೀಪುರಂದರದಾಸರು ಸ್ವಪ್ನದಲ್ಲಿ ತಮಗೆ ದರ್ಶನಕೊಟ್ಟು ತಮ್ಮನ್ನು ದಾಸಕೂಟದಲ್ಲಿ ಸೇರಿಸಿಕೊಂಡಂತೆ ಇವರಿಗೆ ಭಾಸವಾಯಿತು. ಅಂದಿನಿಂದ ಇವರು ದಾಸರಾದರು. ಇವರ ಪದಗಳಲ್ಲಿ ವಿಜಯವಿಠಲ ಎಂಬ ಅಂಕಿತವಿದೆ. ಇವರು ೩೫ ವರ್ಷ ಬಾಳಿ ಶಾ. ಶ. ೧೬೭೭ನೆಯ (ಇಸವಿ ಸನ್ ೧೭೫೫) ಕಾರ್ತಿಕ ಶುದ್ಧ ಹತ್ತಕ್ಕೆ ತಿಪ್ಪಗೇರಿ ಎಂಬಲ್ಲಿ ಪರಂಧಾಮವನ್ನು ಹೊಂದಿದರು. ಇವರ ಪದ್ಯಗಳಿಗೆ ದಾಸಸಾಹಿತ್ಯದಲ್ಲಿ ಮಹತ್ವದ ಸ್ಥಳವಿದೆ. ಇವರ ಶಿಷ್ಯವರ್ಗದಲ್ಲಿ ತಿಮ್ಮಣ್ಣದಾಸ, ಮೋಹನದಾಸ, ಹಯವದನದಾಸ ಮೊದಲಾದವರಿದ್ದರು.

ಹೆಳವನಕಟ್ಟೆ ಗಿರಿಯಮ್ಮ

ಧಾರವಾಡ ಜಿಲ್ಲೆಗೆ ಸೇರಿದ ರಾಣಿಬೆನ್ನೂರು ಈಕೆಯ ಜನ್ಮಸ್ಥಳ. ಸುಮಾರು ೧೮ನೆಯ ಶತಮಾನ ಮಧ್ಯದಲ್ಲಿ ಹುಟ್ಟಿದಳು. ಈಕೆಯ ತಂದೆಯ ಹೆಸರು ಬಿಷ್ಟಪ್ಪ ದೀಕ್ಷಿತ. ಗಿರಿಯಮ್ಮನು ಹೆಳವನಕಟ್ಟೆಯ ರಂಗನಾಥನನ್ನು ಪೂಜಿಸುತ್ತ ಇರುತ್ತಿದ್ದಳು. ಈಕೆ ಶ್ರೀರಂಗನನ್ನೂ ಲಿಂಗವನ್ನೂ ಪೂಜಿಸುತ್ತಿದ್ದಳು. ಎಲ್ಲ ಜನರ ಭಕ್ತಿ ಈಕೆಯ ಬಗ್ಗೆ ಬಹಳವಾಗಿತ್ತು. ಈಕೆ ಮಾಡಿದ ಪದಗಳನ್ನು ಈಗಲೂ ಜನರು ಭಕ್ತಿಯಿಂದ ಅನ್ನುತ್ತಿರುವರು.

ಹರಿದಾಸರು ಅನುಭಾವಿಗಳು. ಎಲ್ಲ ಧರ್ಮಗಳ ಅನುಭಾವಿಗಳಂತೆ ಇವರಾದರೂ ನಿಜಸ್ವರೂಪದ ಅನುಭವಕ್ಕಾಗಿ ಬಹಳವಾಗಿ ಬಳಲಿ ಕಡೆಗೆ ಅದನ್ನು ಕಂಡು, ಅನುಭವಿಸಿ ಇತರರಿಗೂ ತೋರಿಸಿಕೊಡಲು ಯತ್ನಿಸಿದರು. ಪರಮಾತ್ಮನ ಅನುಭವವನ್ನು ಹೊಂದಲು

ವಿದ್ವತ್ತೆಯೇ ಮುಖ್ಯವಾದುದಲ್ಲ, ಅಚಲವಾದ ಸಾತ್ವಿಕ ಭಕ್ತಿ ಬೇಕು. ಅದರಿಂದ ಪರಮಾತ್ಮನು ಒಲಿಯುವನು. ಆತನ ಕರುಣೆಯಿಂದ ಜೀವನು ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುವನು ಎಂಬುದೇ ಇವರ ಉಪದೇಶದ ತಿರುಳು. ತಮ್ಮ ಪ್ರಾಸಾದಿಕ ವಾಣಿಯಿಂದ ಈ ಉಪದೇಶವನ್ನು ಅನೇಕ ರೀತಿಯಿಂದ ವಿವರಿಸಿ, ಅದನ್ನು ಲೋಕಪ್ರಿಯ ಮತ್ತು ಲೋಕಪ್ರಚಲಿತ ಮಾಡಿರುವರು. ಉತ್ಕಟವಾದ ದೈವಭಕ್ತಿಯಿಂದ ಪ್ರೇರಿತರಾದ ಈ ದಾಸರು ವಿವಿಧ ಭಾವಗಳನ್ನು ಅನುಭವಿಸಿ ಅವನ್ನು ತಮ್ಮ ಹಾಡುಗಳಲ್ಲಿ ಪ್ರತಿಬಿಂಬಿಸಿದ್ದಾರೆ. ದಾಸಸಾಹಿತ್ಯ ಭಕ್ತಿಮಾರ್ಗದ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಆಕ್ರಮಿಸಿರುವುದಲ್ಲದೆ ಕನ್ನಡ ಸಾಹಿತ್ಯಕ್ಕೆ ಮಹೋಪಕಾರಿಯಾಗಿದೆ.

ಅದ್ವೈತಮತ

ಭರತ ಖಂಡದ ಆಧ್ಯಾತ್ಮಿಕ ವಿಚಾರದಲ್ಲಿ ಕ್ರಾಂತಿಯನ್ನು ಮಾಡಿ ಹಿಂದೂ ಧರ್ಮದ ಪ್ರತಿಷ್ಠೆಗೆ ಕಾರಣಗಳಾದ ಪಂಥಗಳಲ್ಲಿ ಅದ್ವೈತಮತ ಉನ್ನತಸ್ಥಾನವನ್ನು ಪಡೆದಿರುವುದು. ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತವಾದ ತತ್ವಜ್ಞಾನವನ್ನು ವಿವರಿಸುವುದೇ ಈ ಮತದ ಧ್ಯೇಯವೆಂದು ಈ ಮತದ ಅಧ್ವರ್ಯುಗಳು ಸಾರುವರು. ಕನ್ನಡ ಸಾಹಿತ್ಯ, ಸಂಸ್ಕೃತಿ, ಉಜ್ವಲವಾದ ಇತಿಹಾಸಗಳಿಗೆ ಅದ್ವೈತಮತದ ಆಚಾರ್ಯರಿಂದ ಬಹಳ ಉಪಕಾರವಾಗಿದೆ. ಆದುದರಿಂದ ಈ ಮತದ ಅವಲೋಕನವನ್ನು ಹಕ್ಕಿನೋಟದಿಂದಲಾದರೂ ಮಾಡದಿದ್ದರೆ ನಮ್ಮ ಈ ಧರ್ಮಗಳ ಅಭ್ಯಾಸವು ಅಪೂರ್ಣವಾಗಿ ಉಳಿಯುವುದು.

ಅದ್ವೈತಮತ ಅತಿಪ್ರಾಚೀನವಾದುದೆಂದೂ, ವೇದೋಪನಿಷತ್ತುಗಳು ಇದೊಂದೇ ಮತವನ್ನು ಪ್ರತಿಪಾದಿಸುವುದೆಂದೂ ಜೈನ, ಬೌದ್ಧ ಮೊದಲಾದ ಧರ್ಮಗಳ ಪ್ರಭಾವದಿಂದ ಜನರು ಈ ಮತದ ತತ್ವಗಳನ್ನು ಮರೆಯುಹತ್ತಲು ಶ್ರೀ ಶಂಕರಾಚಾರ್ಯರು ಅವತರಿಸಿ, ಇದನ್ನು ಶಾಶ್ವತಗೊಳಿಸಿದರೆಂದೂ ಅಭಿಪ್ರಾಯ. ಆದರೆ ಐತಿಹಾಸಿಕ ದೃಷ್ಟಿಯಿಂದ ನಿರೀಕ್ಷಿಸಿದರೆ ಶ್ರೀಶಂಕರಾಚಾರ್ಯರ ಪೂರ್ವದಲ್ಲಿ ಹಲವು ವಿದ್ವಾಂಸರು ಈ ಮತದ ತತ್ವಗಳನ್ನು ಕಂಡು ಜನರಿಗೆ ಉಪದೇಶಿಸುತ್ತಿದ್ದರೆಂದೂ ತಿಳಿಯುವುದು. ಸುಮಾರು ಕ್ರಿ.ಶ. ೬೫೦ರಲ್ಲಿ ಪ್ರಸಿದ್ಧ ತಾರ್ಕಿಕರೂ ವೈಯಾಕರಣಿಗಳೂ ಆದ ಭರ್ತೃಹರಿ ಎಂಬುವರು ಬರೆದ ವಾಕ್ಯಪದೀಯ ೧.೧. ರಲ್ಲಿರುವ "ಅನಾದಿ ನಿಧನಂ ಬ್ರಹ್ಮಶಬ್ದ ತತ್ವಂ ಯದಕ್ಷರಂ। ವಿಪರ್ತತೇರ್ಥ ಭಾವೇನ ಪ್ರತಿಯಾ ಜಗತೋಯತಃ," ಜಗತ್ತು ಕಾಲ್ಪನಿಕ; ಜಗತ್ತಿನೊಳಗಿನ ವಸ್ತುಗಳು ನೈರಾತ್ಮಯುಕ್ತ ಮೊದಲಾದ ವಿಚಾರಗಳು ಅದ್ವೈತ ವಿಚಾರಗಳನ್ನು ಹೋಲುವುವು. ಭರ್ತೃಹರಿ ಹಲಕೆಲವು ಸಾರೆ ಬೌದ್ಧಭಿಕ್ಷುಕನಾಗಿದ್ದನೆಂದು ಚೀನ ಪ್ರವಾಸಿಯಾದ ಇತ್ಸಿಂಗನು ಹೇಳುವನು.

ಸುಮಾರು ೮ನೆಯ ಶತಮಾನದಲ್ಲಿದ್ದ ಗೌಡಪಾದರೆಂಬುವರು ಬೌದ್ಧಧರ್ಮದ ತತ್ವಜ್ಞಾನದಲ್ಲಿ ಬಲ್ಲಿದರಾಗಿದ್ದು ಅದ್ವೈತಮತ ತತ್ವಗಳನ್ನು ಕ್ರಮಬದ್ಧವಾಗಿ ಉಪದೇಶಿಸಿದರು. ಇವರು ಬರೆದ ಉತ್ತರಗೀತೆಯ ಭಾಷ್ಯದಲ್ಲಿ ಬೌದ್ಧಧರ್ಮ ತತ್ವಗಳ ಛಾಯೆ ಅಲ್ಲಲ್ಲಿ ಕಂಡುಬರುವುದು. ವೇದಧರ್ಮಕ್ಕೆ ವಿರೋಧವಿಲ್ಲದಂತೆ ವೇದಗಳ ಆಧಾರದಿಂದ ಬೌದ್ಧತತ್ವಗಳನ್ನು ವಿವರಿಸುವ ಜಾಣ್ಮೆ ಇವರಲ್ಲಿತ್ತು. ಆದುದರಿಂದ ಬೌದ್ಧ ಮತ್ತು ವೈದಿಕ ಧರ್ಮಗಳ ಅನುಯಾಯಿಗಳ ವಿರೋಧವನ್ನು ಕಟ್ಟಿಕೊಳ್ಳದೆ ತಮ್ಮ ಧರ್ಮತತ್ವಗಳ ಬೋಧನೆಯನ್ನು ಮಾಡಿದರು. ಇವರು ಸಾಂಖ್ಯಕಾರಿಕೆಗೆ ಭಾಷ್ಯವನ್ನು ಬರೆದ ಗೌಡಪಾದರಿಂದ ಬೇರೆಯವರೆಂದು ತಿಳಿಯುವುದು. ಇವರ ಶಿಷ್ಯರು ಗೋವಿಂದಯತಿಗಳೆಂಬುವರು. ಗೋವಿಂದಯತಿಗಳು ನರ್ಮದೆಯ ದಡದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಶಿಷ್ಯರಿಗೆ ಉಪದೇಶ ಮಾಡುತ್ತಿದ್ದರು. ಅವರೇ ಶ್ರೀಶಂಕರಾಚಾರ್ಯರ ಗುರುಗಳು. ಶ್ರೀ ಶಂಕರಾಚಾರ್ಯರು ತಮ್ಮ ಗ್ರಂಥಗಳ ಅಧ್ಯಾಯಗಳ ಕೊನೆಯಲ್ಲಿ "ಶ್ರೀಮದ್ಗೋವಿಂದ ಭಗವತ್ಪೂಜ್ಯಪಾದಶಿಷ್ಯ" ರೆಂದು ಬರೆದುಕೊಂಡಿರುವರು. ಚರ್ಪಟ ಪಂಜರಿಕಾ ಸ್ತೋತ್ರದಲ್ಲಿ "ಭಜಗೋವಿಂದಂ ಭಜಗೋವಿಂದಂ" ಎಂಬುದು ಈ ಗೋವಿಂದರಿಗೆ ಪರ್ಯಾಯ ದಿಂದ ಅನ್ವಯಿಸುವುದು.

ಶ್ರೀಶಂಕರಾಚಾರ್ಯರ ಚರಿತೆಯನ್ನು ಅನೇಕರು ಬರೆದಿರುವರು. ಸುಮಾರು ೨೦ ಗ್ರಂಥಗಳು ಉಪಲಬ್ಧವಿದೆ. ಆದರೆ ಅವೆಲ್ಲವೂ ಪೌರಾಣಿಕ ರೀತಿಯಿಂದ ಪವಾಡಯುಕ್ತ ಅಂಶಗಳನ್ನು ಹೆಚ್ಚಾಗಿ ಹೇಳುವುವು. ಅವುಗಳಲ್ಲಿ ಮಾಧವಾಚಾರ್ಯರ ಶಂಕರ ದಿಗ್ವಿಜಯವೂ, ಆನಂದಗಿರಿಯ ಶಂಕರವಿಜಯವೂ ಮಹತ್ವವಾದುದೆನ್ನಬಹುದು. ಶ್ರೀಶಂಕರಾಚಾರ್ಯರ ಪ್ರತಿಸ್ಪರ್ಧಿಗಳೂ ಕೂಡ ತಮಗೆ ತೃಪ್ತಿಯಾಗುವಂತೆ ಅವರ ಚರಿತೆಯನ್ನು ಬರೆದುಕೊಂಡಿರುವರು. ಈ ಎಲ್ಲ ಸಾಹಿತ್ಯವನ್ನು ಶೋಧಿಸಿದರೆ ನಮಗೆ ಬೇಕಾಗುವ ಆಚಾರ್ಯರ ಕಾಲದ ಬಗ್ಗೆ ಬಹಳ ಚರ್ಚೆಯಾಗಿ ಅವರು ೮ನೆಯ ಶತಮಾನದ ಉತ್ತರಾರ್ಧದಲ್ಲಿ ಅಂದರೆ ಕ್ರಿ.ಶ. ೭೮೮ರಲ್ಲಿ ಹುಟ್ಟಿರಬಹುದೆಂಬ ಕೈ.ವಾ. ಕೆ.ಬಿ. ಪಾಠಕರವರ ಅಭಿಪ್ರಾಯವನ್ನು ಬಹುಜನ ಪಂಡಿತರು ಮನ್ನಿಸುವರು. ಅದನ್ನೇ ಇಲ್ಲಿ ತಾತ್ಪೂರ್ತಿಕವಾಗಿ ಇಟ್ಟುಕೊಳ್ಳಬಹುದು.[1]

ಕೇರಳ ದೇಶದ ಕಾಲಟಿಯೆಂಬ ಗ್ರಾಮದಲ್ಲಿ ವಾಸಿಸುತ್ತಿದ್ದ ಶಿವಗುರುವೆಂಬ ಶಾಸ್ತ್ರಪಾರಂಗತನಾದ ಬ್ರಾಹ್ಮಣನಿಗೆ ಗತವಯಸ್ಸಿನಲ್ಲಿ ಶಿವನ ಪ್ರಸಾದದಿಂದ ಒಬ್ಬ

---

1. ಈ ವಿಷಯದ ಬಗ್ಗೆ ಹೆಚ್ಚು ಸಂಗತಿಯಗಳನ್ನು ತಿಳಿದುಕೊಳ್ಳಲಪೇಕ್ಷಿಸುವವರು ಈ ಗ್ರಂಥಗಳನ್ನು ನೋಡಬಹುದು. : J. R. A. S. Bo. XVI (೧೮೮೫) ೧೯೯. XVII pl.೨. (೧೮೯೯) ೬೩. XVIII (೧೮೯೪) ೧೪೭, ೮೮, ೨೧೩. IA. XI. ೧೭೪, XVIII (೧೮೮೪) ೯೫, XVI (೧೮೮೭) ೪೧, ೧೬೦.

ಮಗನಾದನು[1]. ಆ ಮಗುವಿಗೆ ಶಂಕರರೆಂದು ಹೆಸರಿಟ್ಟರು. ಚಿಕ್ಕವರಿರುವಾಗಲೇ ಶಂಕರರು ತಮ್ಮ ಮೇಧಾಶಕ್ತಿಯನ್ನು ತೋರಿಸಿ ಲವಲವಿಕೆಯಿಂದ ಶಾಸ್ತ್ರಗಳನ್ನು ಅಭ್ಯಾಸ ಮಾಡಿ, ಅವುಗಳಲ್ಲಿ ಪಾರಂಗತರಾದರು. ತಾಯಿಯಿಂದ ಅನುಜ್ಞೆಯನ್ನು ಪಡೆದು ಸನ್ಯಾಸಧರ್ಮವನ್ನು ಸ್ವೀಕರಿಸಿ ಗೋವಿಂದಯತಿಗಳ ಶಿಷ್ಯರಾಗಿ ಆಧ್ಯಾತ್ಮಿಕ ವಿದ್ಯೆಯನ್ನು ಪಡೆದರು. ಗುರುಗಳಿಗೆ ಅತ್ಯಂತ ಪ್ರೀತಿಪಾತ್ರರಾದರು. ವೇದವೇದಾಂತಗಳಲ್ಲಿ ನಿಷ್ಣಾತರಾದರು. ವಾದವಿವಾದಗಳಲ್ಲಿ ಅದ್ಭುತ ಶಕ್ತಿಯನ್ನು ಪಡೆದು ತಮ್ಮ ಮತವನ್ನು ಮಂಡಿಸುವುದರಲ್ಲಿ ಮತ್ತು ಅದನ್ನೇ ಸಿದ್ಧಮಾಡುವುದರಲ್ಲಿ ನಿಪುಣರಾದರು. ಗುರುಗಳ ಅಪ್ಪಣೆಯಿಂದ ದಿಗ್ವಿಜಯಕ್ಕಾಗಿ ಹೊರಟು, ಪ್ರಸಿದ್ಧ ವಿದ್ವಾಂಸರಿದ್ದ ಸ್ಥಳಗಳಿಗೆ ಹೋಗಿ ಅವರನ್ನು ವಾದದಲ್ಲಿ ಸೋಲಿಸಿ, ರಾಜಾಸ್ಥಾನಗಳಲ್ಲಿ ವಿವಾದ ಮಾಡಿ, ರಾಜಾಶ್ರಯದಿಂದ ಅನ್ಯಮತಗಳನ್ನು ಭಂಗಿಸಿ, ಅದ್ವೈತಮತವನ್ನು ಸ್ಥಾಪಿಸಹತ್ತಿದರು. ಕಾಶಿಯಲ್ಲಿ ವಿದ್ವಾಂಸರನ್ನು ತಮ್ಮ ಮತಕ್ಕೆ ಒಲಿಸಿಕೊಂಡು ಅಲ್ಲಿಯೇ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದರು. ಆ ಕಾಲದಲ್ಲಿ ಉತ್ತರಾಪಥದಲ್ಲಿ ಅತಿ ವಿದ್ವಾಂಸರೂ ಪ್ರತಿಭಾಶಾಲಿಗಳೂ ಎಂದು ಖ್ಯಾತಿಯನ್ನು ಹೊಂದಿದ್ದ ಮೀಮಾಂಸಾಧರ್ಮದ ಪ್ರಚಾರಕರಾದ ಕುಮಾರಿಲ ಭಟ್ಟರನ್ನು ಪ್ರಯಾಗದಲ್ಲಿ ಕಂಡು ಅವರಿಗೆ ತಮ್ಮ ಭಾಷ್ಯವನ್ನು ತೋರಿಸಿದರು. ಭಟ್ಟರು ತಾವು ದೀಕ್ಷಾಬದ್ಧರಾಗಿರುವುದರಿಂದ ಸ್ವಲ್ಪಕಾಲದಲ್ಲಿಯೇ ಇಹಲೋಕದ ಯಾತ್ರೆಯನ್ನು ಮುಗಿಸತಕ್ಕವರಿರುವುದರಿಂದ ಮಂಡನಮಿಶ್ರರ ಕಡೆಗೆ ಹೋಗಬೇಕೆಂದೂ, ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂದೂ ಸೂಚಿಸಿದರು. ಆ ಕಾಲದಲ್ಲಿ ವಿದ್ವಾಂಸರೂ ಇದ್ದುದರಿಂದ ಅವರನ್ನು ಅದ್ವೈತಮತಕ್ಕೆ ಸೇರಿಸಿಕೊಂಡರೆ ಒಂದು ಅಲಭ್ಯ ಲಾಭವಾಗುತ್ತಿತ್ತು. ಆದುದರಿಂದ ಶ್ರೀಶಂಕರಾಚಾರ್ಯರು ಮಾಹಿಷ್ಮತೀ ನಗರಕ್ಕೆ ಹೋಗಿ ಮಂಡಲಮಿಶ್ರರನ್ನು ವಾದಕ್ಕೆ ಕರೆದರು. ಇವರಿಬ್ಬರ ವಾದವಿವಾದವನ್ನು ಕೇಳಿ ನಿರ್ಣಯಕೊಡಲು ಮಂಡನಮಿಶ್ರನ ಹೆಂಡತಿಯಾದ ಭಾರತೀದೇವಿ ಇಬ್ಬರ ಅನುಮತಿಯಿಂದ ನಿಯಮಿಸಲ್ಪಟ್ಟಳು. ಮಂಡಮಿಶ್ರರು ವಾದದಲ್ಲಿ ಸೋತರು. ಭಾರತೀದೇವಿ ಶ್ರೀಶಂಕರಾಚಾರ್ಯರನ್ನು ತನ್ನ ಸಂಗಡ ವಾದಿಸಲು ಕರೆದಳು. ಆಕೆಯನ್ನು ಜಯಿಸಲೋಸುಗ ಆಚಾರ್ಯರು ಅಮರುಕರಾಜನ ಶರೀರದಲ್ಲಿ ಪರಕಾಯ ಪ್ರವೇಶ ಮಾಡಿ ಕಾಮಶಾಸ್ತ್ರದ ಗುಟ್ಟನ್ನು ಕಲಿಯಬೇಕಾಯಿತಂತೆ ಮಂಡನಮಿಶ್ರರು

---

1. ಆನಂದಗಿರಿ ಹೇಳಿಕೆ ಬೇರೆಯಿದೆ. ಚಿದಂಬರಪುರದಲ್ಲಿ ವಿಶ್ವಜಿತ್ ವಿಶಿಷ್ಟಾ ಎಂಬ ಸಜ್ಜನರಾದ ಬ್ರಾಹ್ಮಣ ಗಂಡ ಹೆಂಡರಿಗೆ ಬಹುದಿವಸಗಳವರೆಗೆ ಮಕ್ಕಳಾಗಲಿಲ್ಲ. ವಿಶಿಷ್ಟೆ ಚಿದಂಬರೇಶ್ವರನ್ನು ಭಕ್ತಿಯಿಂದ ಭಜಿಸಿ ಮಗುವನ್ನು ಹೆತ್ತಳು. ಚಿದಂಬರ ಲಿಂಗದ ಪ್ರಸಾದದಿಂದ ಹುಟ್ಟಿದುದರಿಂದ ಈ ಮಗುವಿಗೆ ಶಂಕರನೆಂದು ಹೆಸರಿಡಲಾಯಿತು.

ಗೃಹಸ್ಥಾಶ್ರಮವನ್ನು ತ್ಯಜಿಸಿ, ಸನ್ಯಾಸಿಗಳಾಗಿ ಆಚಾರ್ಯರು ಶಿಷ್ಯಮತವನ್ನು ವಹಿಸಿದರು. ಇವರೇ ಶ್ರೀಶಂಕರಾಚಾರ್ಯರ ತರುವಾಯು ಜಗದ್ಗುರು ಪೀಠವನ್ನಲಂಕರಿಸಿ ಸುರೇಶ್ವರಾಚಾರ್ಯರೆಂದು ಪ್ರಸಿದ್ಧರಾದರು. ಇವರು ಆಚಾರ್ಯರ ಬೃಹದಾರಣ್ಯಕೋಪನಿಷದ್ಭಾಷ್ಯಕ್ಕೆ ವಾರ್ತಿಕವನ್ನು ಬರೆದಿರುವರು.

ಶ್ರೀ ಶಂಕರಭಗವತ್ಪಾದಕರೂ ಕಾಮರೂಪದಿಂದ ಕಾಶ್ಮೀರ, ಹಿಮಾಲಯದಿಂದ ರಾಮೇಶ್ವರದವರೆಗೆ ಭರತಖಂಡವನ್ನೆಲ್ಲ ಸಂಚರಿಸಿ ತಮ್ಮ ಸಿದ್ಧಾಂತವನ್ನು ಭದ್ರಗೊಳಿಸಿದರು. ಕಾಶ್ಮೀರದೇಶದಲ್ಲಿ ಶಾರದಾದೇವಿಯ ದೇವಾಲಯದಲ್ಲಿಯ ಸರ್ವಜ್ಞ ಪೀಠವನ್ನು ಆರೋಹಣ ಮಾಡಿ ತಮ್ಮ ಸರ್ವಜ್ಞತ್ವವನ್ನು ಪ್ರಕಟಿಸಿದರು. ಒಳ್ಳೆಯ ವಿದ್ವಾಂಸರೂ, ವೇದಾಂತದಲ್ಲಿ ನಿಷ್ಠೆಯುಳ್ಳವರೂ ಆದ ಪದ್ಮಪಾದ, ತೋಟಕ, ಹಸ್ತಾಮಲಕ ಮೊದಲಾದ ಶಿಷ್ಯರನ್ನು ಪ್ರೋತ್ಸಾಹಿಸಿ ಅದ್ವೈತಮತ ಪ್ರಸಾರವನ್ನು ಪೂರ್ಣ ಮಾಡಿದರು. ದಕ್ಷಿಣಕ್ಕೆ ಶೃಂಗೇರಿ ಬೆಟ್ಟದಲ್ಲಿ ಶೃಂಗೇರಿ ಮಠ, ಪಶ್ಚಿಮಕ್ಕೆ ದ್ವಾರಕೆಯಲ್ಲಿ ಶಾರಾದಾಪೀಠ, ಪೂರ್ವಕ್ಕೆ ಪುರಿಯಲ್ಲಿ ಗೋವರ್ಧನ ಮಠ, ಉತ್ತರಕ್ಕೆ ಬದರಿಕಾಶ್ರಮದಲ್ಲಿ ಜ್ಯೋತಿರ್ಮಠ ಹೀಗೆ ಹಿಂದುಸ್ಥಾನದ ನಾಲ್ಕು ದಿಕ್ಕಿಗೆ ನಾಲ್ಕುಮಠಗಳನ್ನು ಸ್ಥಾಪಿಸಿದರು. ಇವು ಇನ್ನೂ ನಡೆಯುತ್ತಿವೆ. ಇಲ್ಲಿ ಸ್ವಾಮಿಗಳು ಅದ್ವೈತ ಮತಕ್ಕೆ ಆಧಾರವಾಗಿದ್ದಾರೆ.

ಮಾನವರಾದ ನಮಗೆ ಆಚಾರ್ಯರಲ್ಲಿ ಪ್ರೀತಿಯನ್ನುಂಟುಮಾಡಿ ಆತ್ಮೀಯತೆಯನ್ನು ತೋರಿಸಿಕೊಡುವ ಒಂದು ವಿಷಯವನ್ನು ಇಲ್ಲಿ ಹೇಳುವುದು ಅಗತ್ಯವಿದೆ. 'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಎಂಬ ಸಿದ್ಧಾಂತದ ಅಧ್ವರ್ಯುಗಳೂ ಸರ್ವಸಂಗ ಪರಿತ್ಯಾಗ ಮಾಡಿದ ಸಂನ್ಯಾಸಿಗಳಿಗೂ ಆದ ಇವರಿಗೆ ತಾಯಿಯ ಮೇಲೆ ಅತೀವ ಜೀವ. ಇವರ ಯಶೋದುಂದುಭಿ ಭರತಖಂಡದಲ್ಲೆಲ್ಲ ಮೊಳಗುತ್ತಿದ್ದಾಗ, ತಾಯಿ ಬೇನೆಯಿಂದ ಬಳಲುವ ಸುದ್ದಿಯನ್ನು ಕೇಳಿ ಆಕೆಯ ಹಾಸಿಗೆಯ ಹತ್ತಿರ ಧಾವಿಸಿದರು. ಶುಶ್ರೂಷೆಯನ್ನು ಮಾಡಿದರು. ತಮ್ಮ ಬ್ರಹ್ಮಜ್ಞಾನವನ್ನು ಬೋಧಿಸಲು ಯತ್ನಿಸಿದರು. ಪ್ರಾಣೋತ್ಕ್ರಮಣವಾದ ಮೇಲೆ ಅಂತ್ಯವಿಧಿಯನ್ನು ಮಾಡಲು ಪ್ರಾರಂಭಿಸಿದರು. ಜ್ಞಾತಿಗಳು ಒಪ್ಪಲಿಲ್ಲ; ಆದರೂ ಧರ್ಮಶಾಸ್ತ್ರದ ನಿಯಮಗಳನ್ನು ಲೆಕ್ಕಿಸದೆ ಸ್ಮಶಾನವಿಧಿಯನ್ನು ತಾವೇ ಮಾಡಿದರು. ಇದು ಶಂಕರಾಚಾರ್ಯರ ಜೀವನ ಚರಿತ್ರೆಯಲ್ಲಿ ನಮ್ಮ ದೃಷ್ಟಿಯಿಂದ ಮಹತ್ವದ ವಿಷಯ. ಇದರಲ್ಲಿ ಮನುಷ್ಯ ಹೃದಯದ (Human touch) ಪ್ರತಿಬಿಂಬವಿದೆ.

ಶ್ರೀ ಶಂಕರಾಚಾರ್ಯರೇ ರಚಿಸಿರುವರೆಂದು ಪ್ರತೀತಿಯುಳ್ಳ ಸುಮಾರು ೨೦ ಗ್ರಂಥಗಳು ದೊರೆಯುವುವು. ಆದರೆ ಅವೆಲ್ಲ ಆದ್ಯ ಶಂಕರಾಚಾರ್ಯರ ಕೃತಿಗಳೆಂದು ಒಪ್ಪಲು ಶಕ್ಯವಿಲ್ಲವೆಂದು ಪಂಡಿತರ ಮತ. ಆದರೂ ಅವುಗಳಲ್ಲಿ ಮುಖ್ಯವಾದುವನ್ನು ನೋಡುವ. ಪ್ರಸ್ಥಾನತ್ರಯವೆನಿಸಿದ ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳ ಭಾಷ್ಯ ಅತಿ ಮಹತ್ವವಾದುದು. ಇದರ ಕರ್ತೃಗಳು ಆದ್ಯ ಶಂಕರಾಚಾರ್ಯರೇ ಎಂದು

ಎಲ್ಲ ಪಂಡಿತರೂ ಒಪ್ಪುವರು. ಉಪನಿಷತ್ತುಗಳಲ್ಲಿ ಛಾಂದೋಗ್ಯ, ಬೃಹದಾರಣ್ಯಕ, ತೈತ್ತಿರೀಯ, ಐತರೇಯ, ಶ್ವೇತಾಶ್ವತರ, ಕೇನ, ಕಠ, ಈಶ, ಪ್ರಶ್ನ, ಮುಂಡಕ, ಮಾಂಡೂಕ್ಯಗಳು ಮುಖ್ಯವಾದವು. ಅಥರ್ವಶಿಖಾ, ಅಥರ್ವಶಿರಸ್, ನೃಸಿಂಹತಾಪನೀಯಗಳ ಭಾಷ್ಯವನ್ನು ಮೇಲಿನ ಉಪನಿಷತ್ತುಗಳ ಭಾಷ್ಯದಲ್ಲಿ ಕೆಲವರು ಸಮಾವೇಶ ಮಾಡುವರು. ಇದಲ್ಲದೆ ಉಪದೇಶ ಸಹಸ್ರೀ, ವಿವೇಕಚೂಡಾಮಣಿ, ದಕ್ಷಿಣಾಮೂರ್ತಿ ಸ್ತೋತ್ರ, ಹರಿಮೀಢೇ ಸ್ತೋತ್ರ, ಆನಂದಲಹರಿ, ಸೌಂದರ್ಯಲಹರಿ, ಆಪ್ತ ವಜ್ರಸೂಚೀ, ಆತ್ಮಬೋಧ, ಮೋಹ ಮುದ್ಗರ, ದಶಶ್ಲೋಕೀ, ಅಪರೋಕ್ಷಾನುಭೂತಿ, ವಿಷ್ಣುಸಹಸ್ರನಾಮ, ಸನತ್ಸುಜಾತೀಯಗಳ ಮೇಲಿನ ವ್ಯಾಖ್ಯೆ ಮೊದಲಾದವುಗಳನ್ನು ಆಚಾರ್ಯರೇ ಬರೆದರೆಂದು ಪ್ರತೀತಿ. ಹೀಗಿದ್ದ ಪಕ್ಷದಲ್ಲಿ ಇವುಗಳಲ್ಲಿ ಆಚಾರ್ಯರ ವ್ಯಕ್ತಿತ್ವವು ಒಡಮೂಡಿರುವುದು.

ಶ್ರೀಶಂಕರಾಚಾರ್ಯರು ಅದ್ವಿತೀಯ ತತ್ವಜ್ಞಾನಿಗಳೂ, ಶ್ರೇಷ್ಠ ಕವಿಗಳೂ, ವಾದಿ ವಾಗ್ಮಿಗಳೂ ಇದ್ದರೆಂಬುದು ಅವರ ಗ್ರಂಥಗಳಿಂದ ಸ್ಪಷ್ಟವಾಗುವುದು. ಅವರ ಸಂಸ್ಕೃತ ಶೈಲಿ ಅತ್ಯುತ್ತಮವಾಗಿದೆ. ಗಡುಚಾದ ತತ್ವಗಳನ್ನು ಅತಿ ಸುಲಭವಾದ ವಾಕ್ಯಗಳಲ್ಲಿ ಹೇಳುವ ಕೌಶಲ್ಯ ಇವರಿಗೆ ಸಾಧಿಸಿದಷ್ಟು ಇನ್ನಾರಿಗೂ ಸಾಧಿಸಿಲ್ಲವೆಂದು ಧೈರ್ಯದಿಂದ ಹೇಳಬಹುದು. ಸಂಸ್ಕೃತ ಭಾಷೆಯ ಮೇಲಿನ ಇವರ ಪ್ರಭುತ್ವ ಪ್ರಖ್ಯಾತ ಸಾಹಿತ್ಯ ಚಕ್ರವರ್ತಿಗಳಾದ ಕಾಳಿದಾಸರಂತಹ ಕವಿಗಳ ಪ್ರಭುತ್ವವನ್ನು ಮೀರಿಸಿರುವುದು. ಇವರ ಬರವಣಿಗೆಯಲ್ಲಿ ಪ್ರತಿಭೆ, ವಿಚಾರಶಕ್ತಿ, ತರ್ಕಬದ್ಧಯುಕ್ತಿ, ಹಾಸ್ಯ ಮೊದಲಾದವು ಸ್ಪಷ್ಟವಾಗಿ ಒಡೆದುಕಾಣುವುವು.

ಶ್ರೀಶಂಕರಭಗವತ್ಪಾದರು ಅಪ್ರತಿಮ ಕರ್ತೃತ್ವಶಾಲಿಗಳೂ ಮೇಧಾವಿಗಳೂ ಇದ್ದು ವೈದಿಕಧರ್ಮದ ಪುನರುದ್ಧಾರಕ್ಕೆ ಮತ್ತು ಪ್ರತಿಷ್ಠೆಗೆ ಕಾರಣರಾಗಿದ್ದಾರೆ. ಅವರ ಕಾಲದಲ್ಲಿ ಬೌದ್ಧ ಜೈನಧರ್ಮಗಳ ಪ್ರಭಾವ ದೇಶದಲ್ಲಿ ಬಹಳವಾಗಿತ್ತು. ಸಾಮಾನ್ಯರಿಗೂ ಮನದಟ್ಟಾಗುವಂಥ ನೈತಿಕ ಬೋಧನೆಯಿಂದ ಜನತೆಯೂ ಅತಿಗಡುಚಾದ ಮತ್ತು ಖಂಡಿಸಲು ಸುಲಭವಲ್ಲದ ತಾತ್ವಿಕ ವಿಚಾರಗಳ ಪಂಡಿತರೂ ಮುಗ್ಧರಾಗಿಹೋಗಿದ್ದರು. ಆದರೂ ಶಂಕರಯುಗ ಪ್ರಾರಂಭವಾಗುವ ಪೂರ್ವದಲ್ಲಿ ದಕ್ಷಿಣ ದೇಶಗಳಲ್ಲಿ ಶೈವ ಮತ್ತು ವೈಷ್ಣವಧರ್ಮದ ಸಾಧುಗಳು ತಮ್ಮ ಭಕ್ತಿಪೂರಿತ ಮತ್ತು ದೈವಿಕ ಭಾವನೆಗಳಿಂದೊಡಮೂಡಿದ ಪದಗಳಿಂದ ಪೌರಾಣಿಕ ಹಿಂದೂಧರ್ಮದ ಬಗ್ಗೆ ಜನರಲ್ಲಿ ಭಕ್ತಿ ವಿಶ್ವಾಸಗಳನ್ನು ಹುಟ್ಟಿಸಿದ್ದರು. ಬೌದ್ಧಧರ್ಮದ ಓಘ ಕಡಮೆಯಾಗಹತ್ತಿತ್ತು. ಜೈನಧರ್ಮ ರಾಜಾಶ್ರಯದಿಂದ ಇನ್ನೂ ಪ್ರಬಲವಿದ್ದರೂ ಅದರ ಶಕ್ತಿ ಬಲುಮಟ್ಟಿಗೆ ಕಡಿಮೆಯಾಗಿತ್ತು. ಚಾಲುಕ್ಯ, ಚೋಳ, ಪಲ್ಲವರು ದೇಶದ ಬಹುಭಾಗದಲ್ಲಿ ಸುಖ ಶಾಂತಿಯನ್ನುಂಟುಮಾಡುತ್ತಿದ್ದರು. ಉತ್ತರದಲ್ಲಿ ಕುಮಾರಿಲ ಭಟ್ಟ ಮೊದಲಾದವರು ಬೌದ್ಧಧರ್ಮದ ಓಘವನ್ನು ತಡೆದು ಮೀಮಾಂಸಾ ಧರ್ಮವನ್ನು ಪ್ರಸಾರ

ಮಾಡಹತ್ತಿದರು. ಇಂಥ ಕಾಲದಲ್ಲಿ ಆಚಾರ್ಯರು ಉದಯಿಸಿ ತಮ್ಮ ಮೇಧಾಶಕ್ತಿಯ ಪ್ರಭಾವದಿಂದ ಅದ್ವೈತ ವೇದಾಂತವೇ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಜ್ಞಾನವೆಂದೂ ಅದು ಉಳಿದ ಎಲ್ಲ ಮತಗಳ ಜ್ಞಾನಕ್ಕಿಂತ ಮಿಗಿಲಾದುದೆಂದೂ ಆ ಕಾಲದ ಜನರಿಗೆ ತೋರಿಸಿಕೊಟ್ಟು ಬಹುಜನರನ್ನು ತಮ್ಮ ಮತಕ್ಕೆ ಒಲಿಸಿಕೊಂಡರು. ಆ ಕಾಲದಲ್ಲಿ ಜನತೆಯಲ್ಲಿ ರೂಢವಾಗಿದ್ದ ಅನೇಕ ಹೀನವಾದ ಆಚಾರಗಳನ್ನು ತಡೆದರು. ಭೈರವ, ಮಲ್ಲಾರಿ, ಕಾಳಿ ಮೊದಲಾದ ದೇವತೆಗಳ ಹೆಸರಿನಿಂದ ನಡೆಯುತ್ತಿದ್ದ ಅಸಹ್ಯವಾದ ಕ್ರಿಯೆಗಳನ್ನು ಬಿಡಿಸಿದರು. ಶಿವ, ವಿಷ್ಣು, ಶಕ್ತಿ, ಸೂರ್ಯ ಮೊದಲಾದ ದೇವತೆಗಳ ಸ್ತೋತ್ರಗಳನ್ನು ರಚಿಸಿ, ಹಾಡಿ ಜನರಲ್ಲಿ ಶುದ್ಧಭಕ್ತಿಯನ್ನು ಬೆಳೆಸಿದರು. ತಮ್ಮ ಅನುಯಾಯಿಗಳಿಗೆ ವಿಚಾರ ಸ್ವಾತಂತ್ರ್ಯ, ಮೂಢಭಾವನೆಯ ತ್ಯಾಗ, ಕ್ರಮಬದ್ಧವಾದ ಪದ್ಧತಿಗಳನ್ನು ಕಲಿಸಿದರು. ಒಂದೇ ವಾಕ್ಯದಲ್ಲಿ ಆಚಾರ್ಯರ ಬಗ್ಗೆ ಹೇಳಬೇಕಾದಲ್ಲಿ, "ಅವರು ತತ್ವಜ್ಞಾನಿಗಳು, ಕವಿಗಳು, ಪಂಡಿತರು, ಸಾಧುಸಂತರು, ಅನುಭಾವಿಗಳ ಮತ್ತು ಧಾರ್ಮಿಕ ಸುಧಾರಕರು" ಎಂದು ಡಾ। ರಾಧಾಕೃಷ್ಣನ್ ಅವರ ವಾಕ್ಯದಲ್ಲಿ ಹೇಳಬಹುದು[1].

ಅದ್ವೈತಮತದ ಮುಖ್ಯತತ್ವಗಳು.

ಅದ್ವೈತ ಮುಖ್ಯತತ್ವಗಳನ್ನು ಸಂಕ್ಷೇಪವಾಗಿ, "ಬ್ರಹ್ಮಸತ್ಯಂ ಜಗನ್ಮಿಥ್ಯಾ। ಜೀವೋ ಬ್ರಹ್ಮೈವ ನಾಪರಃ" ಎಂಬ ವಾಕ್ಯದಲ್ಲಿ ಹೇಳಬಹುದು. ಉಪನಿಷತ್ತುಗಳಲ್ಲಿ "ಸರ್ವಂ, ಖಲಿದ್ವಂ ಬ್ರಹ್ಮ," "ನೇಹನಾನಾಸ್ತಿ ಕಿಂಚನ", "ತತ್ಸತ್", "ತತ್ವಮಸಿ", "ಅಹಂಬ್ರಹ್ಮಾಸ್ಮಿ" ಮೊದಲಾದ ವಾಕ್ಯಗಳು ಬ್ರಹ್ಮನೇ ನಿಜವಾದ ವಸ್ತು, ಆತ್ಮನು ಪರಬ್ರಹ್ಮನೇ ಅಹುದು, ಬ್ರಹ್ಮನ ವ್ಯತಿರಿಕ್ತ ಬೇರೊಂದು ವಸ್ತು ಇಲ್ಲವೇ ಇಲ್ಲ ಎಂಬ ಅರ್ಥವನ್ನು ಸೂಚಿಸುತ್ತಿದ್ದರೂ, "ದ್ವಾಸುಪರ್ಣಾ ಸಯುಜಾ ಸಖಾಯಃ। ಸಮಾನಂ ವೃಕ್ಷಂ ಪರಿಷಸ್ವಜಾತೆ ॥" ಮೊದಲಾದ ವಾಕ್ಯಗಳು ಪರಬ್ರಹ್ಮನ ವ್ಯತಿರಿಕ್ತ ಬೇರೆ ವಸ್ತುಗಳುಂಟೆಂಬ ಅರ್ಥವನ್ನು ಸೂಚಿಸುತ್ತವೆ. ಜೀವಾತ್ಮನು ಪರಬ್ರಹ್ಮನೇ ಆಗಿದ್ದಲ್ಲಿ ಜಗತ್ತಿನಲ್ಲಿ ಕಾಣುವ ಸುಖ ದುಃಖ, ಉಚ್ಚ ನೀಚ ಭೇದಗಳು ಉಂಟಾಗಲು ಕಾರಣವೇನು? ದುಃಖ ಎಲ್ಲರಿಗೂ ಬೇಡವಾಗಿದ್ದರೂ ಪ್ರಾಣಿಗಳು ಅದನ್ನು ಭೋಗಿಸಲೇಬೇಕು. ಹುಟ್ಟು, ಇರುವಿಕೆ, ಸಾವು, ಪ್ರಾಣಿಗಳಿಗೆ ಬಿಟ್ಟಿದ್ದಲ್ಲ. ಜಗತ್ತು ಅನುಭವದಿಂದ ಅಸ್ತಿತ್ವದಲ್ಲಿದೆ ಎಂದು ಸಿದ್ಧವಾಗುವುದು. ಆದರೂ ಇದು ಮಿಥ್ಯಾ ಹೇಗೆ? ಇವುಗಳಿಗೆ ಶ್ರೀ ಶಂಕರಾಚಾರ್ಯರ ಉತ್ತರವೇನು?

1, "He is a philosopher, a poet, a savant and a saint, a mystic and religious reformer: - Indian philosophy Vol; II, Revised second edition,1931.

ವೈವಿಧ್ಯವನ್ನು ಸರಿಯಾಗಿ ವಿವರಿಸಲೋಸುಗ ಶ್ರೀಕಂಠರು ತಮ್ಮ ಸಿದ್ಧಾಂತವನ್ನು ಪರಮಾರ್ಥ ಮತ್ತು ವ್ಯವಹಾರ ಎಂದು ಎರಡು ವಿಧವಾಗಿ ಕಲ್ಪಿಸಿರುವರು. ಪರಮಾರ್ಥವೇ ನಿಜವಾದುದು. ವ್ಯವಹಾರ ನಿಜವಲ್ಲದಿದ್ದರೂ ಉಪಯುಕ್ತವಾದುದು. ಮೇಲಿನ "ಸರ್ವಂ ಖಲಿದ್ವಂ ಬ್ರಹ್ಮ," "ತತ್ವಮಸಿ," "ಅಹಂ ಬ್ರಹ್ಮಾಸ್ಮಿ" ಮೊದಲಾದ ವಾಕ್ಯಗಳು ಪರಮಾರ್ಥವನ್ನು ಬೋಧಿಸುವುವು. ಅವು ಸತ್ಯವಾದವು. ಪರಮಾರ್ಥದ ದೃಷ್ಟಿಯಿಂದ ಜಗತ್ತು ಸುಳ್ಳು. ಪರಬ್ರಹ್ಮನೇ ನಿಜವಾದ ಒಂದೇ ವಸ್ತು. "ದ್ವಾ ಸುಪರ್ಣಾ" ಮೊದಲಾದ ವಾಕ್ಯಗಳೂ, ಪ್ರಪಂಚದೊಳಗಿನ ಸುಖ, ದುಃಖ, ಉಚ್ಚ, ನೀಚ ಭೇದಗಳೂ ವ್ಯವಹಾರದ ದೃಷ್ಟಿಯಿಂದ ನಿಜವಾದವು. ಜಗತ್ತು ವ್ಯವಹಾರದ ದೃಷ್ಟಿಯಿಂದ ಅಸ್ತಿತ್ವದಲ್ಲಿದೆ. ಈ ವ್ಯವಹಾರ ಜ್ಞಾನ ಇರುವವರೆಗೆ ಈ ಭೇದಗಳು ಇರುವುವು. ಸ್ವಸ್ವರೂಪ ಜ್ಞಾನವಾದ ಕೂಡಲೇ ಈ ಎಲ್ಲ ಭೇದಗಳು ಇಲ್ಲದಂತಾಗುವುವು. ಸ್ವಪ್ನ ಪ್ರಪಂಚ ಎಷ್ಟೇ ನಿಜವೆಂದು ಕಂಡುಬಂದರೂ ನಿದ್ರೆಯಿಂದೆದ್ದ ಕೂಡಲೇ ಅದು ಸುಳ್ಳೆಂದು ಮನಸ್ಸಿಗೆ ಹೊಳೆಯುವುದು. ಪರಮಾರ್ಥದ ಪ್ರಕಾರ ಪರಬ್ರಹ್ಮನೊಬ್ಬನೇ ನಿಜವಸ್ತುವಾದರೂ ವ್ಯವಹಾರದ ಪ್ರಕಾರ ಸೃಷ್ಟಿಯುಂಟು, ಅದರ ಕರ್ತೃವಾದ ಈಶ್ವರನುಂಟು, ಸಕಲ ಪ್ರಪಂಚವುಂಟು. ಪ್ರಪಂಚದಲ್ಲಿ ತೊಳಲುವ ಜೀವರುಂಟು, ಪುಣ್ಯಾಪಾಪಗಳುಂಟು, ಸ್ವರ್ಗನರಕಗಳುಂಟು. ಇವೆಲ್ಲವೂ ಮಾಯೆಯ ಪ್ರಭಾವದಿಂದ ನಿಜವಾಗಿ ತೋರುವುವು.

ಪರಮಾರ್ಥದ ಪ್ರಕಾರ ಪರಬ್ರಹ್ಮನು ಶುದ್ಧ, ನಿತ್ಯ, ನಿರ್ವಿಕಲ್ಪ, ನಿರ್ಲೇಪ, ನಿರವಯವ, ನಿರಂಜನ, ಜ್ಯೋತಿಸ್ವರೂಪ, ಸರ್ವಜ್ಞ, ಶಾಶ್ವತ, ಆದಿಮಧ್ಯಾಂತರಹಿತ, ಚೈತನ್ಯಮಯ, ನಾಮರೂಪರಹಿತ, ಕಾಲನಿಯಮಗಳಿಗೆ ಅತೀತ, ಸರ್ವವ್ಯಾಪಿ ಪರಬ್ರಹ್ಮನೊಬ್ಬನೇ ನಿಜವಾದ ವಸ್ತು. ಉಳಿದೆಲ್ಲ ಸುಳ್ಳು. ಅದಕ್ಕೆ ಅಸ್ತಿತ್ವವೇ ಇಲ್ಲ.

ಜೀವಾತ್ಮನು ಪರಬ್ರಹ್ಮನೇ ಅಹುದು. ಬೇರೆಯಲ್ಲ. ಪರಬ್ರಹ್ಮನ ಸ್ವರೂಪ ಶಕ್ತಿ ಗುಣಗಳೆಲ್ಲ ಜೀವಾತ್ಮನಲ್ಲಿರುವುವು; ಆದರೂ ಪ್ರಪಂಚದಲ್ಲಿ ಅನೇಕ ಜೀವಿಗಳುಂಟೆಂಬ ಭಾವನೆ ಅವಿದ್ಯೆಯ ಪರಿಣಾಮ. ಜೀವನು ಪರಬ್ರಹ್ಮನೇ ಆಗಿದ್ದರೂ ಉಪಾಧಿ ಅಂಟಿಕೊಂಡಿರುವುದರಿಂದ ತನ್ನ ಸ್ವರೂಪಜ್ಞಾನವನ್ನು ಮರೆತು ಪ್ರಪಂಚ ಸತ್ಯವೆಂದೇ ನಂಬುವನು. ಈ ಉಪಾಧಿಯಿಂದ ಬಿಡುಗಡೆಯಾದ ಕೂಡಲೇ ಜೀವಾತ್ಮನ ಈ ಭಾವನೆ ಹಾರಿಹೋಗುವುದು.

ಜಗತ್ತು ಮಿಥ್ಯಾ. ಇದರ ಅಸ್ತಿತ್ವವೇ ಇಲ್ಲ. ಆದರೂ ಮಾಯೆಯ ಪ್ರಭಾವದಿಂದ ಜಗತ್ತು ಸತ್ಯವೆಂದು ಭಾಸವಾಗುವುದು. ನಿಜವಾದ ಜ್ಞಾನವಾದ ಕೂಡಲೇ ಮಾಯೆ ಇಲ್ಲದಂತಾಗುವುದು. ಕಡೆಗೆ ಉಳಿಯುವುದು ಒಂದೇ ವಸ್ತು. ಅದೇ ಪರಬ್ರಹ್ಮ. ವ್ಯವಹಾರದ ದೃಷ್ಟಿಯಿಂದ ಈಶ್ವರನು ಮೃತ್ ಸುವರ್ಣಾದಿಗಳು ಘಟ, ರುಚಕಾದಿ

ಗಳಿಗಿರುವಂತೆ ಜಗತ್ತಿನ ಉತ್ಪತ್ತಿಗೆ ಕಾರಣನು. ಉತ್ಪನ್ನವಾದ ಜಗತ್ತಿನ ಸ್ಥಿತಿಗೆ ಮಾಯೆಯನ್ನು ನಿಲ್ಲಿಸಲು ಮಾಯಾದಿ ಕಾರಣನಾಗಿರುವಂತೆ, ಅಂಡಜ, ಪಿಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ಚತುರ್ವಿಧ ಗ್ರಾಮಗಳನ್ನು ಪೃಥ್ವಿ ತನ್ನೊಳಗೆ ಅಡಗಿಸಿಕೊಳ್ಳುವಂತೆ, ಪ್ರಸಾರಿತವಾದ ಜಗತ್ತನ್ನು ತನ್ನೊಳಗೆ ಅಡಗಿಸಿಕೊಳ್ಳಲು ಕಾರಣನು. ಮಹಾಕಾಶ, ಘಟಾಕಾಶ, ಮಠಾಕಾಶವೆಂಬ ಭೇದವನ್ನು ಹೊಂದುವಂತೆ ಮಾಯೆಯ ವಶವರ್ತಿಯಾಗಿ ಅನೇಕ ಬದ್ಧರಾದ ಜೀವಾತ್ಮರ ರೂಪದಿಂದ ತೋರುವನು. ಇಂಥ ಜೀವಾತ್ಮರು ಅನೇಕರಿರುವರು. ಇವರು ಉಪಾಧಿಗ್ರಸ್ತರಾಗಿ ಸರ್ವಕರ್ಮಫಲವನ್ನು ಭೋಗಿಸಲು ಕರ್ಮ ಮತ್ತು ಸೂಕ್ಷ್ಮ ಶರೀರಗಳಿಂದೊಡಗೂಡಿ ಜನ್ಮಜನ್ಮಾಂತರಗಳಲ್ಲಿ ತಿರುಗುವರು. ಜೀವಿಗಳ ಕರ್ಮಫಲವನ್ನು ಭೋಗಿಸಲು ಅನುಕೂಲವಾಗಬೇಕೆಂದು ನಾನಾ ಪ್ರಕಾರದ ಪ್ರಪಂಚವು ರೂಪವನ್ನು ಹೊಂದಿದೆ. ವಿಶ್ವವು ಉತ್ಪನ್ನವಾದುದು ಪರಮಾತ್ಮನ ಶ್ರೇಷ್ಠತೆಯ ದ್ಯೋತಕವಾಗಲಿ, ಆತನ ಕ್ರೀಡೆಯಾಗಲಿ ಅಥವಾ ಜೀವಿಗಳ ಮೇಲಿನ ಆತನ ಮಮತೆಯಾಗಲಿ, ಆಗಿರದೆ ಜೀವಗಳ ಕರ್ಮಫಲಭೋಗಕ್ಕಾಗಿರುವುದು. ಇದಕ್ಕೆ ಉತ್ಪತ್ತಿಯಿದ್ದಾಗ್ಗೂ ಅನಾದಿಯಾಗಿರುವುದು. ಅನೇಕ ಸಾರಿ ಇದು ಸೃಷ್ಟಿ ಸ್ಥಿತಿ ಲಯಗಳನ್ನು ಹೊಂದಿದೆ ಮತ್ತು ಹೊಂದುತ್ತಲಿರುವುದು. ಬೀಜವೃಕ್ಷನ್ಯಾಯದಂತೆ ಇರುವ ಉಗಮವನ್ನು ಹುಡುಕಲು ಬರುವುದಿಲ್ಲ. ಪಾರಮಾರ್ಥದ ಪ್ರಕಾರ ವಿಶ್ವವು ಮಾಯೆಯ ವ್ಯಾಪ್ತಿಯಾಗಿದ್ದರೂ ವ್ಯವಹಾರದ ಪ್ರಕಾರ ಇದು ಸ್ವಪ್ನದಲ್ಲಿ ಕಾಣುವ ದೃಶ್ಯದಂತೆ ಅಥವಾ ಮೃಗಜಲದಂತೆ ನಿಜವಾಗಿ ತೋರುವುದು. ಇದರ ನಿಜಜ್ಞಾನ ಅನುಭವದಿಂದ ಆಗುವುದು.

ಪರಮಾರ್ಥ ಮತ್ತು ವ್ಯವಹಾರಕ್ಕನುಸರಿಸಿ ಮೋಕ್ಷದಲ್ಲಿಯೂ ಎರಡು ವಿಧಗಳನ್ನು ಕಲ್ಪಿಸಲಾಗಿದೆ. ಉಪಾಧಿಯಿಂದ ಬಿಡುಗಡೆ ನಿಜಜ್ಞಾನವನ್ನು ಹೊಂದಿ ಘಟ ಒಡೆದ ಮೇಲೆ ಬೆರೆಯುವುದು ಪಾರಮಾರ್ಥಿಕ ಮುಕ್ತಿ. ಇದು ನಿಜವಾದುದು. ಉಪಾಧಿಯಿಂದೊಡಗೂಡಿದ ಜೀವನು ಸೃಷ್ಟಿಕರ್ತನಾದ ಪರಮಾತ್ಮನ ಉಪಾಸನೆಯಿಂದ ಸತ್ಕರ್ಮಗಳಿಂದ ಇಹದಲ್ಲಿ ಮತ್ತು ಪರದಲ್ಲಿ ಸುಖವನ್ನು ಹೊಂದಿ ಕರ್ಮಮುಕ್ತಿಯನ್ನು ಪಡೆಯುವನು. ಇದು ಎರಡನೆಯ ವಿಧದ ಮುಕ್ತಿ. ಇದು ಕೆಳಗಿನ ತರಗತಿಯದು; ಆದರೂ ಪಾರಮಾರ್ಥಿಕ ಮುಕ್ತಿಯನ್ನು ಪಡೆಯಲು ಸಹಾಯಮಾಡುವುದು. ಸ್ವಸ್ವರೂಪಜ್ಞಾನವೇ ನಿಜವಾದ ಮುಕ್ತಿ.

ವ್ಯಾವಹಾರಿಕ ದೃಷ್ಟಿಯಿಂದ ವಿಶ್ವದ ಅಸ್ತಿತ್ವವು ವಿವರ್ತವಾದವನ್ನವಲಂಬಿಸಿದೆ. ಸಮುದ್ರದ ತರಂಗಗಳಿಗೆ ವೀಚಿ, ತರಂಗ, ಬದ್ಬುದಗಳು ಹುಟ್ಟಿ ಕೆಲಕಾಲವಿದ್ದು ಸಮುದ್ರದಲ್ಲಿಯೇ ಲಯವಾಗುವಂತೆ, ಪರಮಾತ್ಮನಿಂದ ವಿಶ್ವವು ಉದ್ಭವಿಸಿ ಬಾಳಿ ಆತನಲ್ಲಿಯೇ ಲಯವಾಗುವುದು. ಪರಮಾತ್ಮನು ವಿಕಾರವನ್ನು ಹೊಂದದೆ ವಿಶ್ವದ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣನಾಗುವನು. ಇದರಿಂದ (ವಿವರ್ತತೇ) ಈ ಸಿದ್ಧಾಂತಕ್ಕೆ

ವಿವರ್ತವಾದವೆನ್ನುವರು. ಅದ್ವೈತ ಸಿದ್ಧಾಂತಕ್ಕೂ ಉಳಿದ ಸಿದ್ಧಾಂತಗಳಿಗೂ ಇರುವ ವ್ಯತ್ಯಾಸವು ಈ ವಾದದಲ್ಲಿದೆ. ಅದ್ವೈತಿಗಳು ಪ್ರತ್ಯಕ್ಷ ಅನುಮಾನ ಆಗಮಗಳೆಂಬ ಮೂರು ಪ್ರಮಾಣಗಳನ್ನು ಒಪ್ಪಿಕೊಳ್ಳುವರು.

ಶ್ರೀ ಶಂಕರಭಗವತ್ಪಾದರು ಬೋಧಿಸಿದ ಅದ್ವೈತ ತತ್ತ್ವಗಳನ್ನು ಜನರ ಮೇಲೆ ಪರಿಣಾಮವಾಗುವಂತೆ ಉಪದೇಶಿಸುವ ಪ್ರಸಂಗಗಳು ಆಚಾರ್ಯರ ಅನುಯಾಯಿಗಳಿಗೆ ಅನೇಕ ಸಾರಿ ಬಂದಿರುವುವು. ವಿಶಿಷ್ಟಾದ್ವೈತ, ದ್ವೈತ ಮತದವರು ಅದ್ವೈತಮತದ ಪ್ರಭಾವವನ್ನು ಕೆಲಮಟ್ಟಿಗೆ ಕಡಿಮೆ ಮಾಡಲು ಕಾರಣರಾದರು. ಶ್ರೀಶಂಕರರ ಮತ್ತು ಗೌಡಪಾದರ ತತ್ತ್ವಗಳು ಬೌದ್ಧಧರ್ಮ ತತ್ತ್ವಗಳನ್ನು ಕೆಲಮಟ್ಟಿಗೆ ಹೋಲುವುದರಿಂದ ಆಚಾರ್ಯರನ್ನು ಕೆಲವರು 'ಪ್ರಚ್ಛನ್ನ ಬೌದ್ಧ'ರೆಂದು ಕೂಡ ಕರೆದಿರುವರು. ಆದುದರಿಂದ ಆಚಾರ್ಯರ ಗ್ರಂಥಗಳಿಗೆ ಟೀಕೆಟಿಪ್ಪಣಿಗಳನ್ನು ಬರೆದು ಸ್ವತಂತ್ರ ಗ್ರಂಥಗಳನ್ನು ರಚಿಸಿ ಅದ್ವೈತವನ್ನು ನಿಲ್ಲಿಸಲು ಅನೇಕರು ಕಾರಣರಾಗಿದ್ದಾರೆ. ಸುರೇಶ್ವರಾಚಾರ್ಯರು ವಾರ್ತಿಕ ನೈಷ್ಕರ್ಮಸಿದ್ಧಿ, ವಾಚಸ್ಪತಿಮಿಶ್ರರು ಭಾಮತಿ, ಪದ್ಮಪಾದರು ಪಂಚಪದಿಕಾ, ಆನಂದಗಿರಿಗಳು ನ್ಯಾಯನಿರ್ಣಯ ಮೊದಲಾದ ಗ್ರಂಥಗಳನ್ನು ರಚಿಸಿ ಅದ್ವೈತಮತಕ್ಕೆ ಆಧಾರಸ್ತಂಭರಾಗಿದ್ದಾರೆ. ಕ್ರಿ.ಶ. ೧೧೯೦ರಲ್ಲಿದ್ದ ಹರ್ಷನು ಖಂಡನ ಖಂಡಖಾದ್ಯವೆಂಬ ಗ್ರಂಥವನ್ನು ಬರೆದಿರುವನು. ಇದರಲ್ಲಿ ಅನ್ಯಸಿದ್ಧಾಂತಗಳ ತತ್ತ್ವವನ್ನು ಖಂಡಿಸಿರುವನು. ಕ್ರಿ.ಶ ೧೨೦೦ರಲ್ಲಿದ್ದ ಪ್ರಕಾಶಾತ್ಮರೆಂಬುವರು ಪದ್ಮಪಾದರ ಪಂಚಪಾದಿಕೆಯ ಮೇಲೆ ವಿವರಣವನ್ನು ಬರೆದಿರುವರು. ವಿಜಯನಗರದ ರಾಜ್ಯಸ್ಥಾಪನೆ ಮತ್ತು ಬೆಳವಣಿಗೆಗೆ ಕಾರಣರಾದ ವಿದ್ಯಾರಣ್ಯರು ವಿವರಣಪ್ರಮೇಯ ಸಂಗ್ರಹ, ಪಂಚದಶೀ, ಜೀವನ್ಮುಕ್ತಿ ವಿವೇಕಗಳನ್ನು ರಚಿಸಿರುವರು. ವಿದ್ಯಾರಣ್ಯರ ಕಾಲದಲ್ಲಿ ಅವರ ಮತ್ತು ವಿಜಯನಗರ ರಾಜ್ಯದ ಪ್ರೋತ್ಸಾಹದಿಂದ ಅದ್ವೈತಕ್ಕೆ ಬಲ ಬಂದಿದೆ. ಅವರ ಬಂಧುಗಳಾದ ಸಾಯಣರು ವೇದಗಳಿಗೆ ಭಾಷ್ಯ ಬರೆದು ಹಿಂದೂ ಧರ್ಮಕ್ಕೆ ಪುಷ್ಟಿಕೊಟ್ಟಿರುವರು. ಹದಿಮೂರನೆಯ ಶತಮಾನದಲ್ಲಿದ್ದ ಅಮಲಾನಂದನು ಭಾಮತಿಗೆ ಕಲ್ಪತರುವೆಂಬ ವ್ಯಾಖ್ಯೆಯನ್ನು ಬರೆದಿರುವನು. ಅದ್ವೈತಾನಂದ (೧೫ನೆಯ ಶತಕ) ಬ್ರಹ್ಮವಿದ್ಯಾಭರಣ, ಸದಾನಂದ (೧೫ನೆಯ ಶತಕ) ವೇದಾಂತಸಾರ, ವಿಜ್ಞಾನಭಿಕ್ಷುವಿನ (೧೬ನೆಯ ಶತಕ) ವಿಜ್ಞಾನಾಮೃತ, ಪ್ರಕಾಶನಂದನ ಸಿದ್ಧಾಂತಮುಕ್ತಾವಲಿ, ಲಕ್ಷ್ಮೀಧರನ (೧೬ನೆಯ ಶತಕ) ಕಲ್ಪತರು ಪರಿಮಲಾ, ಸಿದ್ಧಾಂತ ಲೇಶಗಳನ್ನು, ಬರೆದು ಅದ್ವೈತಮತವನ್ನು ಬಲಪಡಿಸಿದರು. ಸುರೇಶ್ವರ, ವಾಚಸ್ಪತಿ ಪದ್ಮಪಾದ, ಶ್ರೀಹರ್ಷ, ವಿದ್ಯಾರಣ್ಯ, ಚಿತ್ಸುಖ, ಸರ್ವಜ್ಞಾನಮುಖಿ, ಮಧುಸೂದನಸರಸ್ವತಿ, ಅಪ್ಪಯ್ಯ ದೀಕ್ಷಿತರು ಅದ್ವೈತಮತದ ಮೇಲೆ ಬಹಳ ಪ್ರಕಾಶ ಕೆಡವಿರುವರು. ಕನ್ನಡದಲ್ಲಿ ನಿಜಗುಣಶಿವಯೋಗಿಗಳು ಕೈವಲ್ಯಪದ್ಧತಿ, ಪರಮಾನುಭವ ಬೋಧೆ, ಪರಮಾರ್ಥಗೀತೆ, ಅನುಭವಸಾರ ಮೊದಲಾದ ಗ್ರಂಥಗಳನ್ನು ಬರೆದಿರುವರು. ರಂಗನಾಥನು ಅನುಭವಾಮೃತವನ್ನು

ಬರೆದಿರುವನು. ಇವರು ಕರ್ನಾಟಕದಲ್ಲಿ ಅದ್ವೈತ ವೇದಾಂತದ ಪ್ರಸಾರಕ್ಕೆ ಬಹಳ ಉಪಕಾರ ಮಾಡಿರುವರು. ವೇದಾಂತ ವಿವೇಕಸಾರವೆಂಬ ಗದ್ಯಗ್ರಂಥ ಒಂದುಂಟು.

ಶಾಕ್ತಮತ

ಒಂದು ಕಾಲದಲ್ಲಿ ಹಿಂದೂಸ್ಥಾನದ ಬಹುಭಾಗದಲ್ಲಿ ಈ ಮತ ವ್ಯಾಪಿಸಿತ್ತು. ಈಗಲೂ ಬಂಗಾಳದಲ್ಲಿ ಇದು ಅಸ್ತಿತ್ವದಲ್ಲಿರುವುದು. ಕರ್ನಾಟಕದಲ್ಲಿಯೂ ಕೂಡ ಹಲವು ಕಡೆಗೆ ಈ ಮತದ ಅನುಯಾಯಿಗಳು ಕಂಡುಬರುವರು. ಈ ಮತದ ಆರಾಧ್ಯದೇವತೆ ದೇವಿ, ಕಾಳಿ, ಅಥವಾ ಶಕ್ತಿ. ತ್ರಿಮೂರ್ತಿಗಳ ಆರಾಧನೆ ಪ್ರಚಲಿತವಿದ್ದಾಗ ಬ್ರಹ್ಮ, ವಿಷ್ಣು, ಮಹೇಶ್ವರ ಸಂಗಡ ಶಕ್ತಿ, ಸೂರ್ಯ, ಗಣಪತಿ, ಕುಮಾರ ಮೊದಲಾದವರ ಆರಾಧನೆಯನ್ನು ಮಾಡುತ್ತಿದ್ದರು. ಮತ್ತು ಆಯಾ ದೇವರುಗಳ ಹೆಸರಿನ ಮತಗಳು ಕೂಡ ಪ್ರಚಾರದಲ್ಲಿ ಬಂದಿದ್ದವು. ಬರಬರುತ್ತ ಈ ದೇವತೆಗಳು ಪರಬ್ರಹ್ಮನ ಪ್ರತೀಕಗಳಾದರು. ಈ ದೇವತೆಗಳ ಪರವಾಗಿ ಪುರಾಣಗಳೂ ಉಪನಿಷತ್ತುಗಳೂ ಬರೆಯಲ್ಪಟ್ಟಿವೆ.

ಅತಿ ಪ್ರಾಚೀನಕಾಲದಿಂದಲೂ ಶಕ್ತಿಗೆ ಒಂದು ಮಹತ್ವದ ಸ್ಥಾನವನ್ನು ನಮ್ಮ ಧರ್ಮಗ್ರಂಥಗಳು ಕೊಡುತ್ತಬಂದಿವೆ. ವೇದಗಳಲ್ಲಿ ಉಷಾ ಮೊದಲಾದ ಸ್ತ್ರೀದೇವತೆಗಳ ಪರವಾಗಿ ಮಂತ್ರಗಳಿವೆ. ಇಂದ್ರ ಮೊದಲಾದ ಪ್ರಬಲ ದೇವತೆಗಳಿಗೆ ಇಂದ್ರಾಣಿ ಮೊದಲಾದ ಸ್ತ್ರೀದೇವತೆಗಳನ್ನು ಜೋಡಿಸಿರುವರು. ತ್ರಿಮೂರ್ತಿಗಳ ಮತ ಪ್ರಚಲಿತವಿದ್ದಾಗ ಅವರ ಹೆಂಡತಿಯರಾದ ಪಾರ್ವತಿ, ಲಕ್ಷ್ಮಿ, ಸರಸ್ವತಿಯವರು ಬಲಾಢ್ಯರಾದ ದೇವತೆಗಳಾಗಿದ್ದರು. ಬರುಬರುತ್ತ ಬ್ರಹ್ಮನ ವರ್ಚಸ್ಸು ಕಡಿಮೆಯಾಗಿ ಶಿವ ಮತ್ತು ವಿಷ್ಣು ಇವರಿಬ್ಬರ ಪ್ರಭಾವ ಸರ್ವತ್ರ ವ್ಯಾಪಿಸಿತು. ಅವರ ಕೂಡ ಪಾರ್ವತಿ ಲಕ್ಷ್ಮಿಯರು ಮಹತ್ವದ ದೇವತೆಗಳಾದರು.

ಸಾಂಖ್ಯಶಾಸ್ತ್ರದಲ್ಲಿ ಪ್ರಕೃತಿ ಅತಿ ಮಹತ್ವವಾದ ತತ್ವ. ಪುರುಷನು ಉದಾಸೀನ ವಿರುವುದರಿಂದ ಈ ಪ್ರಪಂಚವನ್ನು ಅಸ್ತಿತ್ವದಲ್ಲಿ ತರುವುದು ಪ್ರಕೃತಿ. ಇದಕ್ಕೆ ಮಾಯೆಯೆಂದೂ ಹೆಸರು. ಬರಬರುತ್ತ ಈ ಪ್ರಕೃತಿಯ ರೂಪಿಣಿಯರಾದ ಪಾರ್ವತಿ, ಲಕ್ಷ್ಮಿ ಇವರು ಮುಖ್ಯದೇವತೆಗಳಾಗಿ ವಿಶ್ವಕರ್ತೃಗಳಾದರು. ಮುಂದೆ ಪೌರಾಣಿಕ ಯುಗದಲ್ಲಿ ಇವರು ಸಮ್ಮಿಲಿತರಾಗಿ ತ್ರಿಮೂರ್ತಿಗಳನ್ನು ಮೀರಿ ವಿಶ್ವದ ಉತ್ಪತ್ತಿ ಸ್ಥಿತಿ ಲಯ ಕರ್ತೃಗಳಾದರು.

ಐತಿಹಾಸಿಕ ಯುಗ ಪ್ರಾರಂಭವಾಗುವುದಕ್ಕಿಂತ ಮೊದಲು ಈ ದೇಶದಲ್ಲಿ ದೇವಿಯೇ ಮುಖ್ಯಪೂಜೆಗೆ ತಕ್ಕ ದೇವತೆಯಾಗಿದ್ದಳೆಂದು ಮೊಹೆಂಜೋದಾರೋದಲ್ಲಿ ದೊರೆತ ವಸ್ತುಗಳಿಂದ ತಿಳಿಯುತ್ತದೆ. ಆರ್ಯರು ಭರತಖಂಡವನ್ನಾಕ್ರಮಿಸಿ ತಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರಚಾರದಲ್ಲಿ ತರುವುದಕ್ಕೆ ಮೊದಲು, ದೇವಿಯ

ಉಪಾಸನೆ ಇಲ್ಲಿ ಬಹಳವಾಗಿತ್ತೆಂದು ತಿಳಿಸುವ ಅನೇಕ ಆಧಾರಗಳುಂಟು. ಆದುದರಿಂದ ಈಗ ಪ್ರಚಾರವಲ್ಲಿರುವ ಶಾಕ್ತಮತ ಒಂದಿಲ್ಲೊಂದು ರೂಪದಿಂದ ನಡೆಯುತ್ತ ಬಂದಿದೆ ಯೆಂಬುದನ್ನು ಒಪ್ಪಿಕೊಳ್ಳಬೇಕಾಗುವುದು.

ಮಹಾಭಾರತದ ಭೀಷ್ಮಪರ್ವದಲ್ಲಿ ಕೃಷ್ಣನ ಹೇಳಿಕೆಯ ಮೇರೆಗೆ ಅರ್ಜುನನು ತನಗೆ ಯುದ್ಧದಲ್ಲಿ ಜಯವಾಗಲೆಂದು ದುರ್ಗಾದೇವಿಯ ಸ್ತೋತ್ರವನ್ನು ಮಾಡಿರುವನು. ಈ ಸ್ತೋತ್ರದಿಂದ ದುರ್ಗಾದೇವಿ ಪ್ರಬಲ ದೇವತೆಯಾಗಿದ್ದು ಜನರ ವಾಂಛಿತಗಳನ್ನು ಪೂರ್ತಿಮಾಡುತ್ತಿದ್ದಳೆಂದೂ ಆಕೆಗೆ ಕುಮಾರೀ, ಕಾಲೀ, ಕಾಪಾಲಿ, ಮಾಹಾಕಾಲೀ, ಚಂಡೀ, ಕಾತ್ಯಾಯಿನೀ, ಕರಾಲಾ, ವಿಜಯಾ, ಕೌಶಿಕೀ, ಉಮಾ, ಕಾಂತಾರವಾಸಿನೀ ಎಂಬುದಾಗಿ ಹೆಸರುಗಳಿದ್ದವೆಂದು ತಿಳಿಯುತ್ತದೆ. ಈಕೆ ಮಹಿಷಾಸುರನನ್ನು ನಾಶ ಮಾಡಿದಳೆಂದೂ, ಈಕೆಗೆ ಸೇರುವ ಆಹಾರವು ಮದ್ಯ ಮಾಂಸ ಪಶುಗಳೆಂದೂ, ವಿಂಧ್ಯಪರ್ವತ ಈಕೆಯ ಆವಾಸ ಸ್ಥಾನವಾದುದರಿಂದ ಈಕೆಗೆ ವಿಂಧ್ಯವಾಸಿನಿಯೆಂದು ಕರೆಯುವರೆಂದೂ, ಶಬರ ಪುಳಿಂದ ಬರ್ಬರರ ಕುಲದೇವತೆಯೆಂದೂ ಗೊತ್ತಾಗುವುದು. ಮಾರ್ಕಂಡೇಯ ಪುರಾಣದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರ ಮತ್ತು ಉಳಿದ ದೇವತೆಗಳ ತೇಜಸ್ಸನ್ನು ತನ್ನೊಳಗೆ ಸಂಗ್ರಹಿಸಿ ಮಹಿಷಾಸುರನನ್ನು ಮರ್ದಿಸಿದಳೆಂದು ಹೇಳಿದೆ. ಶುಂಭನಿಶುಂಭ ದೈತ್ಯರ ಕಾಟವನ್ನು ತಾಳಲಾರದೆ ದೇವತೆಗಳೆಲ್ಲರೂ ಕೈಲಾಸ ಪರ್ವತಕ್ಕೆ ಹೋಗಿ ಪಾರ್ವತಿದೇವಿಗೆ ಮೊರೆಯಿಟ್ಟರು. ದೇವಿ ಗಂಗಾಸ್ನಾನಕ್ಕೆ ಹೋದಾಗ ಆಕೆಯ ಶರೀರದಿಂದ ಶಿವೆ ಹೊರಬಿದ್ದಳು, ಈಕೆಯೇ ಅಂಬಿಕೆ. ಶುಂಭನಿಶಂಭರನ್ನು ನಾಶಮಡಲು ಉದ್ಭವಿಸಿದಳು. ಈಕೆಗೆ ಕೋಶದಿಂದ (ಪಾರ್ವತಿಯ ಶರೀರದಿಂದ) ಹುಟ್ಟಿದಳಾದುದರಿಂದ ಕೌಶಿಕೆಯೆಂದು ಹೆಸರು. ದೈತ್ಯರ ಸಂಗಡ ಯುದ್ಧಮಾಡುವಾಗ ಸಿಟ್ಟಿನಿಂದ ಉಗ್ರಸ್ವರೂಪವನ್ನು ತಾಳಿ ವ್ಯಾಘ್ರಚರ್ಮವನ್ನು ಹೊದ್ದು ಮುಂಡಮಾಲೆ ಖಟ್ವಾಂಗಧಾರೆಯಾಗಿ ಕಾಳಿ ಕರಾಳಿಯಾದಳು.. ಚಂಡಮುಂಡ ದೈತ್ಯರನ್ನು ಕೊಂದು ಪಾರ್ವತಿಯೆಡೆಗೆ ಹೋಗಲು ದೇವಿ ಈಕೆಗೆ ಚಾಮುಂಡಿಯೆಂದು ಹೆಸರಿಟ್ಟಳು. ಈಕೆಯಲ್ಲಿ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ನಾರಸಿಂಹಿ, ಐಂದ್ರಿಯರೆಂಬ ಸಪ್ತಶಕ್ತಿಗಳುಂಟು. ಇವು ಈಕೆಯ ವಿಭೂತಿಗಳು. ಈಕೆಗೆ ನಂದಾ ಕಾದಂಬರಿ ಭೀಮಾ ಭ್ರಾಮರಿ ಮೊದಲಾದ ಬೇರೆ ಹೆಸರುಗಳುಂಟು. ದೇವಿಗೆ ಅನೇಕ ನಾಮಗಳಿರುವುವು. ಅವುಗಳನ್ನೆಲ್ಲ ಸೂಕ್ಷ್ಮವಾಗಿ ಪರೀಕ್ಷಿಸಿದರೆ ದೇವತೆಯೂ ಮೂಲನಿವಾಸಿಗಳ ಮುಖ್ಯದೇವತೆ ಅಥವಾ ಶಕ್ತಿಯಾಗಿರುವುದು ಸ್ಪಷ್ಟವಾಗುವುದು.

ಕ್ರಿ.ಶ ೬ರಿಂದ ೧೧ನೆಯ ಶತಮಾನದವರೆಗೆ ಶಾಕ್ತಮತದ ಪ್ರಬಾವ ಹಿಂದು ಸ್ಥಾನದಲ್ಲಿ ಬಹಳವಾಗಿತ್ತೆಂದು ಐತಿಹಾಸಿಕ ಆಧಾರಗಳಿಂದ ಸ್ಪಷ್ಟವಾಗುವುದು. ಶ್ರೀ ಶಂಕರಾಚಾರ್ಯರಂಥ ಮತಸ್ಥಾಪಕರು ಶಾಕ್ತರಿದ್ದರೆಂದೂ, ದೇವಿಯನ್ನು ಭಕ್ತಿಯಿಂದ

ಪೂಜಿಸುತ್ತಿದ್ದರೆಂದೂ ಕೆಲವರ ಮತ. ಶಾಕ್ತಮತದ ಪ್ರಭಾವ ಹಿಂದೂ ಮತ್ತು ಬೌದ್ಧಧರ್ಮಗಳ ಮೇಲೆ ವಿಪುಲವಾಗಿ ಬಿದ್ದಿರುವುದಕ್ಕೆ ಆಯಾ ಧರ್ಮಗಳಲ್ಲಿ ಈ ಕಾಲದಲ್ಲಿ ಉಂಟಾದ ಮಾರ್ಪಾಟೇ ಸಾಕ್ಷಿಯಾಗಿದೆ. ತಾಂತ್ರಿಕ ಬೌದ್ಧಧರ್ಮ ಪ್ರಚಾರವು ಇದೇ ಕಾಲದಲ್ಲಿ ಬಂದಿತು. ಪ್ರತಿಯೊಬ್ಬ ಬೋಧಿಸತ್ವನಿಗೆ ಹೆಂಡತಿಯುಂಟಾದುದು ಶಾಕ್ತಧರ್ಮದ ಪ್ರಭಾವದಿಂದಲೇ. ಈಗಲೂ ಚೀನ, ಟಿಬೇಟ ಮೊದಲಾದ ದೇಶಗಳಲ್ಲಿ ತಾರಾದೇವಿಯ ಉಪಾಸನೆ ಪ್ರಚಾರದಲ್ಲಿದೆ. ಹಿಂದೂಧರ್ಮದ ಮೇಲಿನ ಶಾಕ್ತಮತದ ಪ್ರಭಾವವನ್ನು ತೋರಿಸಿಕೊಡುವ ಅಗತ್ಯವಿಲ್ಲ. ಏಕೆಂದರೆ ಹಿಂದೂಧರ್ಮದ ಒಂದು ಅಂಗ ಶಾಕ್ತಮತ. ಶೈವ ವೈಷ್ಣವಮತಗಳಲ್ಲಿ ಮಂತ್ರತಂತ್ರಗಳ ಪ್ರಸಾರ ಉಂಟಾದುದು ಈ ಮತದ ಪ್ರಬಾವದಿಂದ. ಜೈನಧರ್ಮದಲ್ಲಿಯೂ ಸ್ತ್ರೀದೇವತೆಗಳು ಪ್ರಚಾರದಲ್ಲಿ ಈ ಧರ್ಮದ ಪ್ರಭಾವದಿಂದ ಬಂದಿರುವರು.

ಮುಖ್ಯದೇವತೆಯಾದ ಕಾಲಿ ಅಥವಾ ದುರ್ಗಾದೇವಿ ಪಾರ್ವತಿಯ ರೂಪ. ಈ ಮತದ ಮುಖ್ಯಗ್ರಂಥಗಳು ತಂತ್ರಗಳು; ಅವು ೬೪ ಇವೆ. ಇವುಗಳಲ್ಲಿ ಈಗ ಅನೇಕ ಉಪಲಬ್ಧವಿಲ್ಲ. ಹಲಕೆಲವು ಉಪಲಬ್ಧವಿದೆ. ಗ್ರಂಥಗಳಲ್ಲಿ ದೊರೆಯುವ ಉಲ್ಲೇಖಗಳಿಂದ ಈ ತಂತ್ರಗಳ ಸಂಖ್ಯೆ ೬೪ಕ್ಕೆ ಮಿಕ್ಕಿದೆಯೆಂದು ತಿಳಿಯುವುದು. ಕುಬ್ಜಕಾ ಮತತಂತ್ರದ ಪ್ರತಿ ಗುಪ್ತಾಕ್ಷರದಲ್ಲಿ ಬರೆಯಲ್ಪಟ್ಟಿದೆ. ಅದರ ಕಾಲ ಏಳನೆಯ ಶತಮಾನ. ಮಹಾಕಾಲಜ್ಞಾನ ನಿರ್ಣಯವೆಂಬ ಕೈಬರಹದ ಗ್ರಂಥ ಅಷ್ಟೇ ಹಳೆಯದಿದೆ. ಶಾಕ್ತಧರ್ಮದ ಆಚಾರ ವಿಚಾರಗಳನ್ನು ವಿವರಿಸುವ ನಿಶ್ವಾಸ ತಂತ್ರ ಸಂಹಿತೆಯ ಕೈಬರಹ ಪ್ರತಿ ೮ನೆಯ ಶತಮಾನದಲ್ಲಿ ಹುಟ್ಟಿದೆ. ಕ್ರಿ.ಶ. ೧೦೫೨ರಲ್ಲಿ ಬ್ರಹ್ಮಯಾಮಲ ತಂತ್ರದ ಪ್ರತಿಮಾಡಲಾಗಿದೆ. ಕಾಶ್ಮೀರ ಶೈವಾಚಾರ್ಯನಾದ ಅಭಿನವಗುಪ್ತ ಅವನ ಶಿಷ್ಯ ಕ್ಷೇಮರಾಜ ಇವರು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ದೇವಿಯಾಮಲಾ, ಕುಲಚೂಡಾಮಣಿ, ಕುಲೋತ್ರ, ಕುಲಸಾರ, ಅಮೃತೇಶ, ಮಾಲಿನೀ ಪ್ರಪಂಚಸಾರತಂತ್ರ, ಕೌಲೋಪನಿಷತ್ತು, ಪರಶುರಾಮ ಭಾರ್ಗವಸತ್ರ, ತ್ರಿಪುರ ತಾಪನೀಯ, ದೇವ್ಯುಪನಿಷತ್ತು, ದೇವೀಭಾಗವತ ಮೊದಲಾದವು ಶಾಕ್ತಮತದ ಗ್ರಂಥಗಳು. ದೇವೀಭಾಗವತ ಶಾಕ್ತಮತದಲ್ಲಿಯ ಭಕ್ತಿಯ ಸ್ಥಾನವನ್ನು ತೋರಿಸಿಕೊಡುವುದು.

ಶೈವ ವೈಷ್ಣವ ಆಗಮಗಳಂತೆ ಶಾಕ್ತಾಗಮವೂ. ಕ್ರಿಯಾ, ಚರ್ಯ, ಜ್ಞಾನ ಯೋಗಪಾದ ಗಳನ್ನೊಳಗೊಂಡಿರುವುದು. ಶಾಕ್ತಾಗಮದಲ್ಲಿ ವಿಶೇಷವಾಗಿ ಮಂತ್ರತಂತ್ರಗಳಿಗೆ ಮಹತ್ವವನ್ನು ಕೊಟ್ಟಿರುವರು. ಶಾಕ್ತಧರ್ಮದ ತತ್ವಜ್ಞಾನವು ಬಹುತರ ಅದ್ವೈತಪರವಾಗಿರುವುದು. ಆದರೂ ಅದರಲ್ಲಿ ಕೆಲವು ವೈಶಿಷ್ಟ್ಯವಿದೆ.

ಆನಂಧಭೈರವಿ, ತ್ರಿಪುರಸುಂದರಿ ಅಥವಾ ಲಲಿತಾದೇವಿ ಪರಾದೇವತೆ ಯಾಗಿರುವಳು. ಆನಂದಭೈರವ ಅಥವಾ ಮಹಾಭೈರವನೆಂದು ಕರೆಯಲ್ಪಡುವ

ಶಿವನು ಕಾಲ, ಕುಲ, ನಾಮ, ಜ್ಞಾನ, ಹೃದಯ, ಮನಸ್ಸು, ಬುದ್ಧಿ, ಚಿತ್ತ, ವ್ಯೂಹಗಳೆಂಬ ಮತ್ತು ದೇವಿಯರಲ್ಲಿ ಭೇದವಿಲ್ಲದಿರುವುದರಿಂದ ಮತ್ತು ಅವರಿಬ್ಬರೂ ಒಂದೇ ಆಗಿರುವುದರಿಂದ ದೇವಿ ಇವುಗಳ ಜೀವಾಳವಾಗಿರುವಳು. ಶಿವ ಮತ್ತು ದೇವಿಯರಲ್ಲಿ ಸಾಮರಸ್ಯವಾದಾಗ ಸೃಷ್ಟಿಗೆ ಆರಂಭವಾಗುವುದು. ಮಹಾಭೈರವಿ ಸೃಷ್ಟಿಗೂ ಮಹಾಭೈರವನು ಲಯಕ್ಕೂ ಕಾರಣ.

ಶಿವ ಮತ್ತು ಶಕ್ತಿ ಇವರು ವಿಶ್ವದ ಬೀಜ. ಪ್ರಕಾಶರೂಪನಾದ ಶಿವನು ವಿಮರ್ಶಾ ಅಥವಾ ಸ್ಫೂರ್ತಿರೂಪಿಣಿಯಾದ ದೇವಿಯಲ್ಲಿ ಪ್ರವೇಶಿಸಿ ಬಿಂದುರೂಪನಾಗುವನು. ಶಕ್ತಿ ಬಿಂದುರೂಪನಾದ ಶಿವನಲ್ಲಿ ಪ್ರವೇಶಿಸಿದಾಗ ಬಿಂದು ಬೆಳೆದು ಉದ್ಭವಿಸುವುದು. ನಾದ ಬಿಂದುಗಳು ಒಂದೇ ಆದಾಗ ಅದಕ್ಕೆ ಕಾಮವೆನ್ನುವರು. ಬಿಂದುವಿನಲ್ಲಿ ಬಿಳಿದು ಮತ್ತು ಕೆಂಪು ಎಂದು ಪ್ರಕಾರಗಳಿವೆ. ಬಿಳಿಯದು ಶಿವನದು, ಕೆಂಪು ಶಿವೆಯದು. ಇವುಗಳಿಗೆ ಕಲೆಯೆನ್ನುವರು. ನಾದಬಿಂದು ಕಲೆಗಳು ಒಂದುಗೂಡಿದಾಗ ಕಾಮಕಲೆ ಯಾಗುವುದು. ಆಗ ವಾಕ್, ಅರ್ಥಗಳ ಉತ್ಪತ್ತಿಯಾಗುವುದು.ಸೃಷ್ಟಿಯ ಪ್ರಾರಂಭವಾಗುವುದು. ಸೃಷ್ಟಿಯ ಕಾರ್ಯದಲ್ಲಿ ದೇವಿಯೇ ಮುಖ್ಯ ಕಾರ್ಯ ನಿರ್ವಹಿಸುವಳು. ಆದುದರಿಂದ ಆಕೆಗೆ ಪರಾ, ಲಲಿತಾ, ಭಟ್ಟಾರಿಕಾ, ತ್ರಿಪುರಸುಂದರೀ ಎಂದು ಕರೆಯುವರು. ಅಕ್ಷರಗಳಲಿ ಮೊದಲನೆಯದಾದ 'ಅ' ಶಿವನ ದ್ಯೋತಕ. ಕಡೆಯದಾದ 'ಹ' ದೇವಿಯ ದ್ಯೋತಕ. ದೇವಿ ಆದುದರಿಂದ 'ಅಹ' ಆಗಿರುವಳು. 'ಅಹಂ' ಇದು ವ್ಯಕ್ತಿದ್ಯೋತಕ. ಆದುದರಿಂದ ಆಕೆಯ ಸೃಷ್ಟಿಯಾದ ವಿಶ್ವವು 'ಅಹಂಭಾವನೆ'ಯದಾಗಿದೆ; ಜೀವಿಗಳೆಲ್ಲರೂ ತ್ರಿಪುರಸುಂದರಿಯ ರೂಪವಾಗಿರುವರು. ದೇವೀಚಕ್ರ ಮೊದಲಾದವುಗಳಿಂದ ಕಾಮಕಲಾವಿದ್ಯೆಗಳನ್ನು ಕಲಿತು ಆಚರಿಸಿದಾಗ ತ್ರಿಪುರಸುಂದರಿಯರಾಗುವರು. 'ಅ' ಮತ್ತು 'ಹ' ಅಕ್ಷರಗಳ ನಡುವಿನ ಅಕ್ಷರಗಳೂ ಅವುಗಳಿಂದುಂಟಾಗುವ ಶಬ್ದಗಳೂ ದೇವಿಯ ರೂಪ. ಆದುದರಿಂದ ಶಕ್ತಿ ಪರಾವಾಕ್ ಆಗಿರುವಳು. ಸೃಷ್ಟಿ ಅದ್ವೈತ ವೇದಾಂತದಂತೆ ವಿವರ್ತದಲ್ಲಿ ಪರಿಣಾಮವಾಗಿದೆ. ಈ ಶಾಕ್ತಜ್ಞಾನಕ್ಕೆ ಶಾಂಭವ ದರ್ಶನವೆಂದು ಹೆಸರು.

ಉಪನಿಷತ್ತುಗಳಲ್ಲಿ ಹೇಳಿದ ಪರಬ್ರಹ್ಮನಿಗೂ ಶಕ್ತಿಗೂ ಬೇಧವಿಲ್ಲ. ಸಾಂಖ್ಯರ ಪುರುಷನಂತೆ ಶಾಕ್ತರ ಪರಬ್ರಹ್ಮನು ಉದಾಸೀನನಾಗಿರುವನು. ದೇವೀ ಆತನ ಶಕ್ತಿರೂಪಳು. ದೃಶ್ಯಪ್ರಪಂಚದಲ್ಲಿರುವ ಎಲ್ಲ ವಸ್ತುಗಳಲ್ಲಿ ಕಾರ್ಯಪ್ರವೃತ್ತಿಯನ್ನುಂಟು ಮಾಡುವಳು. ಆದುದರಿಂದ ಪರಬ್ರಹ್ಮನಿಗಿಂತ ಶ್ರೇಷ್ಠಳು. 'ಓಂ' ಮಂತ್ರವು ಮಹತ್ವವಾದುದು. ನಾನಬಿಂದು, ಬೀಜ ಇವು ಸೃಷ್ಟಿಯ ನಿರ್ಮಾಣಕ್ಕೆ ಕಾರಣಗಳಾಗಿರುವುವು. ಶಕ್ತಿ ಶಾಶ್ವತ ಶಬ್ದರೂಪಳು. ಮಂತ್ರದ ಪ್ರತಿಯೊಂದು ಅಕ್ಷರದಲ್ಲಿ ಶಕ್ತಿ ಇರುವಳು. ಹ್ರಾಂ, ಹ್ರೀಂ, ಹ್ರೂಂ, ಫಟ್ ಮೊದಲಾದವು ಮಂತ್ರಗಳು.

ಮನುಷ್ಯರಲ್ಲಿ ಶರೀರದಲ್ಲಿ ಅಸಂಖ್ಯನಾಡಿಗಳಿರುವುವು. ಅವುಗಳಲ್ಲಿ ಸುಷುಮ್ನಾ ನಾಡಿ ಮಹತ್ವವಾದುದು. ಶರೀರದ ಬೇರೆ ಬೇರೆ ಸ್ಥಾನಗಳಲ್ಲಿ ಚಕ್ರಗಳುಂಟು. ಇವು ಆರು. ಇವುಗಳಲ್ಲಿ ಮೂಲಾಧಾರವು ಮುಖ್ಯವಾದುದು. ಅದರಲ್ಲಿ ಲಿಂಗ ರೂಪದಿಂದಿರುವ ಪರಬ್ರಹ್ಮನನ್ನು ಸರ್ಪರೂಪದಿಂದ ದೇವಿ ಸುತ್ತಿ ಮಲಗಿರುವಳು. ಇದಕ್ಕೆ ಕುಂಡಲಿನಿಯೆನ್ನುವರು. ಶಾಕ್ತಯೋಗದಿಂದ ಸರ್ಪರೂಪಿಣಿಯಾದ ದೇವಿಯನ್ನು ಎಬ್ಬಿಸಿ ಎಲ್ಲಕ್ಕೂ ಮೇಲಿನ ಚಕ್ರದವರೆಗೆ ಒಯ್ದರೆ ಮುಕ್ತಿಯಾಗುವುದು.

ಶಾಕ್ತರು ಮಂತ್ರ, ಯಂತ್ರ, ಮುದ್ರಾನ್ಯಾಸ ಮೊದಲಾದವುಗಳಿಗೆ ಬಹಳ ಮಹತ್ವಕೊಡುವರು. ತ್ರಿಪುಂಡ್ರವನ್ನು ಧರಿಸುವರು. ಸ್ತ್ರೀ, ಪುರುಷ, ಜಾತಿ, ವರ್ಣಗಳು ಭೇದವೆನ್ನೆಣಿಸುವುದಿಲ್ಲ. ಆದರೂ ಬ್ರಾಹ್ಮಣನು ತನ್ನ ಬ್ರಾಹ್ಮಣ್ಯವನ್ನು ಬಿಡದೆ ಶಕ್ತಿಯ ಉಪಾಸಕನಾಗಬಹುದು. ಪ್ರತಿಯೊಬ್ಬನೂ ತನ್ನ ಆಧ್ಯಾತ್ಮಿಕ ಉನ್ನತಿಗಾಗಿ ಗುರುವನ್ನು ಆಶ್ರಯಿಸಿ ಅವನಿಂದ ದೀಕ್ಷೆಯನ್ನು ಪಡೆಯಬೇಕು.

ಗಾಣಪತ್ಯಮತ

ಮರುತ್ ದೇವತೆಗಳು ರುದ್ರನ ಗಣಗಳು. ಈ ಗಣದ ಅಧಿಪತಿ ಗಣಪತಿ. ವಿನಾಯಕನೆಂಬುದು ಮತ್ತೊಂದು ಹೆಸರು. ಅಥರ್ವ ಶಿರೋಪನಿಷತ್ತಿನಲ್ಲಿ ವಿನಾಯಕನೆಂಬ ದೇವತೆಯನ್ನು ರುದ್ರನಿಗೆ ಹೋಲಿಸಿರುವರು. ಮಹಾಭಾರತದ ಅನುಶಾಸನದ ಪರ್ವದಲ್ಲಿ ಗಣೇಶ್ವರರು ಮತ್ತು ವಿನಾಯಕರು ಎಲ್ಲ ಕಡೆಗೂ ಇದ್ದು ಜನರ ಕೃತಿಗಳನ್ನು ನೋಡುತ್ತಿರುವರು. ಪ್ರಾರ್ಥನೆ ಮಾಡಿದಾಗ ವಿನಾಯಕರ ಉಲ್ಲೇಖವಿದೆ. ಶಾಲ, ಕಟಂಕಟ, ಕೂಷ್ಮಾಂಡ, ರಾಜಪುತ್ರ, ಉತ್ಸ್ಮಿತದೇವಯಜ್ಞ ಎಂಬಿವು ವಿನಾಯಕರ ಹೆಸರು. ಇವರು ಕೋಪಿಸಿಕೊಂಡರೆ ಪ್ರಪಂಚದಲ್ಲಿ ಅನೇಕ ವಿಘ್ನಗಳುಂಟು ಮಾಡುವರು. ಇವರಿಗೆ ಶಾಂತಿಯನ್ನು ಮಾಡಿಸಿದರೆ ವಿಘ್ನಗಳು ದೂರವಾಗುವುವು. ಬರಬರುತ್ತ ಗಣಪತಿಗಳೂ ವಿನಾಯಕರೂ ಒಬ್ಬನೇ ದೇವರಲ್ಲಿ ಸಮ್ಮಿಲಿತರಾದರು. ರುದ್ರ ಮತ್ತು ಬ್ರಹ್ಮ ಇವರು ವಿನಾಯಕನನ್ನು ಗಣಗಳಿಗೆ ಅಧಿಪತಿಯನ್ನಾಗಿ ಮಾಡಿ ಜನರಿಗೆ ವಿಘ್ನವನ್ನುಂಟು ಮಾಡುವ ಕೆಲಸವನ್ನು ಕೊಟ್ಟರೆಂದು ಯಾಜ್ಞವಲ್ಕ್ಯಸ್ಮೃತಿ ಹೇಳುವುದು. ಅದರಲ್ಲಿ ವಿನಾಯಕರಿಗೆ ಮಿತ್ರ ಸಮ್ಮಿತ್ರ, ಶಾಲ, ಕಟಂಕಟ, ಕೂಷ್ಮಾಂಡ, ರಾಜಪುತ್ರಗಳೆಂಬ ಆರು ಹೆಸರುಗಳುಂಟು. ವಿನಾಯಕನ ತಾಯಿ ಅಂಬಿಕಾ. ಭವಭೂತಿಯ ಮಾಲತೀಮಾಧವದ ನಾಂದೀ ಪದ್ಯದಲ್ಲಿ ಗಣಪತಿಯ ಸ್ತೋತ್ರವಿದೆ. ವರದ ತಾಪನೀಯ ಅಥವಾ ಗಣಪತ್ಯ ತಾಪನೀಯವೆಂಬ ಉಪನಿಷತ್ತು, ಗಣೇಶನನ್ನು ಪರಬ್ರಹ್ಮನಿಗೆ ಹೋಲಿಸಿ, ಗಾಣಪತ್ಯ ಮತವನ್ನು ಬೋಧಿಸುವುದು. ಶ್ರೀ ಗಣೇಶಾಯನಮಃ ಎಂಬುದು ಗಾಣಪತ್ಯ ಮಂತ್ರ. ಅಗ್ನಿ, ಗರುಡ, ಸ್ಕಂದಪುರಾಣಗಳಲ್ಲಿ ಗಣಪತಿಯ ಹೆಚ್ಚಳವನ್ನು ತಿಳಿಸುವ ಭಾಗಗಳಿವೆ.

ಗಣೇಶ ಪುರಾಣ ಮತ್ತು ಮುದ್ಗಲ ಪುರಾಣ ಗಾಣಪತ್ಯ ಮತದ ಗ್ರಂಥಗಳು. ಗಣಪತಿ ಪೂಜೆ ಕರ್ನಾಟಕದಲ್ಲಿ ಪ್ರಾರಂಭ ಬಹಳವಾಗಿತ್ತೆಂಬುದಕ್ಕೆ ಈಗಲೂ ಅನೇಕ ಕಡೆಗೆ ಉಪಲಬ್ಧವಿದ್ದ ಗಣಪತಿಯ ಗುಡಿಗಳೇ ಸಾಕ್ಷಿಯಾಗಿವೆ. ಶಂಕರ ದಿಗ್ವಿಜಯವನ್ನು ಬರೆದ ಆನಂದಗಿರಿ ಗಾಣಪತ್ಯರಲ್ಲಿ ಆರು ಪಂಗಡಗಳಿದ್ದುವೆಂದು ತಿಳಿಸುವನು. ಅವು (೧) ಮಹಾಗಣಪತಿ ಪೂಜಕರು: ಇವರು ಗಣಪತಿಯೇ ಸೃಷ್ಟಿಕರ್ತನು. ಪ್ರಳಯ ಕಾಲದಲ್ಲಿ ಬ್ರಹ್ಮ ಮೊದಲಾದ ದೇವತೆಗಳು ಲಯವನ್ನು ಹೊಂದುವರು: ಗಣಪತಿಯೊಬ್ಬನೇ ಉಳಿಯುವನು; ಗಣಪತಿ ಉಪಾಸಕನೇ ಮುಕ್ತಿಯನ್ನು ಪಡೆಯುವನು ಎಂದು ಹೇಳುವರು. (೨) ಹರಿದ್ರಾಗಣಪತಿಪೂಜಕರು: ಇವರು ಋಗ್ವೇದ ಮಂಡಲ, ೧ ಸೂಕ್ತ ೨೩ ಮಂತ್ರ ೧ರಲ್ಲಿ ಹೇಳಿದ ಬೃಹಸ್ಪತಿಯೇ ಗಣಪತಿಯೆನ್ನುವರು. ಈ ಗಣಪತಿಯ ಭಕ್ತರು ತಮ್ಮ ಭುಜಗಳ ಮೇಲೆ ಕಾದ ಕಬ್ಬಿಣದ ಗಣಪತಿ ಮುಖದ ಮುದ್ರೆಗಳನ್ನು ಒತ್ತಿಸಿಕೊಳ್ಳುವರು. (೩) ಉಚ್ಛಿಷ್ಠ ಗಣಪತಿ ಪೂಜಕರು: ಇವರ ಆಚಾರಗಳು ಹೀನವಾಗಿವೆ. ಶಾಕ್ತಮತದ ವಾಮಾಚಾರಿಗಳಂತೆ ಇವರು ನಡೆಯುವರು. (೪) ನವನವೀತ ಗಣಪತಿ ಪೂಜಕರು. (೫) ಸ್ವರ್ಣಗಣಪತಿ ಪೂಜಕರು. (೬) ಸಂತಾನ ಗಣಪತಿ ಪೂಜಕರು. ಶ್ರುತಿಗನುಸರಿಸಿ ಗಣಪತಿಯನ್ನು ಪೂಜಿಸುವರೆಂದು ಸಾಧಿಸುವರು. ಜಗತ್ತೇ ಗಣಪತಿರೂಪದಿಂದಿರುವುದೆಂದೂ ಎಲ್ಲ ಧಾರ್ಮಿಕ ಕಾರ್ಯಗಳಾರಂಭದಲ್ಲಿ ಗಣಪತಿ ಪೂಜೆ ಅತ್ಯಗತ್ಯವೆಂದೂ ಹೇಳುವರು. ಋಗ್ವೇದ ಮಂಡಲ ೨, ಸೂಕ್ತ ೨೩, ಮಂತ್ರ ೧ರಲ್ಲಿಯ 'ಗಣಪತಿಂತ್ವಹವಾಮಹೆ' ಎಂಬ ಬೃಹಸ್ಪತಿಗೆ ಸಂಬಂಧಿಸಿದ ಮಂತ್ರವನ್ನು ಗಣಪತಿಗೆ ಅನ್ವಯಿಸಿ ಗಣಪತಿ ಬೃಹಸ್ಪತಿಯರನ್ನು ಒಂದು ಮಾಡಿರುವುದೇ ಗಣಪತಿಯನ್ನು ವಿದ್ಯಾಧಿಪತಿಯನ್ನಾಗಿ ಮಾಡಲು ಕಾರಣವಾಗಿದೆ.

ಸ್ಕಾಂದಮತ

ಪ್ರಾಚೀನ ಕಾಲದಲ್ಲಿ ಹಿಂದೂಸ್ಥಾನದಲ್ಲಿ ಸ್ಕಂದನನ್ನು ಪೂಜಿಸುವವರು ಬಹು ಜನರಿದ್ದರು. ಕರ್ನಾಟಕದಲ್ಲಿ ಒಂದು ಕಾಲದಲ್ಲಿ ಈ ಮತದ ಪ್ರಭಾವ ಬಹಳವಾಗಿದ್ದಂತೆ ತೋರುವುದು. ಈ ಮತದ ಮುಖ್ಯ ದೇವತೆಗೆ ಸ್ಕಂದ, ಕಾರ್ತಿಕೇಯ, ಸೇನಾದಿ, ಷಣ್ಮುಖ, ಕುಮಾರ ಮೊದಲಾದ ಹೆಸರುಗಳಿರುವುವು. ಈತನು ಶಿವ ಪಾರ್ವತಿಯರ ಪುತ್ರನು. ತಾರಕನೆಂಬ ದೈತ್ಯನನ್ನು ಸಂಹರಿಸಿ ಆತನ ಬಾಧೆಯಿಂದ ಬಳಲುತ್ತಿರುವ ದೇವತೆಗಳನ್ನು ಉಳಿಸಿಕೊಂಡು ಈತನನ್ನು ಕೃತ್ತಿಕೆಯರು ಬೆಳೆಸಿದುದರಿಂದ ಕಾರ್ತ್ತಿಕೇಯನಾದನು. ಈತನಿಗೆ ಆರು ಮುಖಗಳಿರುವುದರಿಂದ ಷಣ್ಮುಖ ಅಥವಾ ಷಡಾನಾಥ. ಬ್ರಹ್ಮಚಾರಿಯಾಗಿರುವ ವ್ರತವನ್ನು ಕೈಕೊಂಡಿರುವುದರಿಂದ ಮತ್ತು ಶಿವನ ಕುಮಾರ

ನಾದುದರಿಂದ ಕುಮಾರ; ದೇವತೆಗಳ ಸೈನ್ಯವನ್ನು ತಾರಕನ ಮೇಲೆ ನಡೆಸಿದುದರಿಂದ ಸೇನಾನಿ. ಈತನ ವಾಹನ ನವಿಲು. ವಾಸಸ್ಥಾನ ಪರ್ವತದಲ್ಲಿ. ಪಾಣಿನಿಯ ವ್ಯಾಕರಣಕ್ಕೆ ಭಾಷ್ಯವನ್ನು ಬರೆದ ಪತಂಜಲಿ ಆ ಕಾಲದಲ್ಲಿ ಶಿವ, ಸ್ಕಂದ, ವಿಶಾಖ ದೇವತೆಗಳ ಪೂಜೆ ಬಳಕೆಯಲ್ಲಿತ್ತೆಂದು ತಿಳಿಸುವನು. ಕುಷಾಣವಂಶದ ರಾಜನಾದ ಕನಿಷ್ಕನ ನಾಣ್ಯಗಳ ಮೇಲೆ ಗ್ರೀಕ್ ಲಿಪಿಯಲ್ಲಿ 'ಸ್ಕಂದೋ', 'ಮಹಾಸೇನೋ', 'ಕುಮಾರೋ', ಬಿಝಗೋ' ಎಂಬ ಶಬ್ದಗಳಿವೆ. ಇವು ಸ್ಕಂದ, ಮಹಾಸೇನ ಕುಮಾರ, ವಿಶಾಖ ಶಬ್ದಗಳಿಗೆ ಸರಿಯಾದುವುಗಳೆಂದು ಪಂಡಿತರು ಒಪ್ಪುತ್ತಾರೆ. ಕ್ರಿ.ಶ. ೪೧೪ರಲ್ಲಿ ಧ್ರುವಸೇನನೆಂಬುವನು ಬಿಲ್ವಾಡದಲ್ಲಿ ಸ್ವಾಮಿ ಮಹಾಸೇನನ ಗುಡಿಯ ಪೌಳಿಯನ್ನು ಕಟ್ಟಿಸಿದನೆಂದು ಶಾಸನದಿಂದ ತಿಳಿಯುವುದು. ಕದಂಬ ಮತ್ತು ಪೂರ್ವದ ಚಾಲುಕ್ಯರ ಶಾಸನದಲ್ಲಿ "ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಾನಾಮ್," ಸಪ್ತಲೋಕ ಮಾತೃಭಿಸ್ಸಪ್ತಮಾತೃಭಿ ರಭಿವರ್ಧಿತಾನಾಂ ಕಾರ್ತಿಕೇಯ ಪರಿರಕ್ಷಣಪ್ರಾಪ್ತ ಕಲ್ಯಾಣಪರಂ ಪರಾಣಾಮ್" ಎಂಬ ಶಬ್ದಗಳಿವೆ. ಇವು ಆ ಕಾಲದಲ್ಲಿ ಸ್ಕಾಂದಮತದ ಪ್ರಬಲತೆ ರಾಜಾಶ್ರಯಗಳನ್ನೂ ಸೂಚಿಸುವುವು. ಸ್ಕಾಂದಪುರಾಣವು ಈ ಮತದ ಮೇಲ್ಮೆಯನ್ನು ಸೂಚಿಸುವುದು. ಮಹಾರಾಷ್ಟ್ರದಲ್ಲಿ ಪ್ರಸಿದ್ಧ ದೇವತೆಯ ಹೆಸರಾದ 'ಖಂಡೋಬಾ' ಎಂಬುದು 'ಸ್ಕಂದ' ಶಬ್ದದ ಪ್ರಾಕೃತ. ಕರ್ನಾಟಕದಲ್ಲಿ ಸೊಂಡೂರ ಬೆಟ್ಟದಲ್ಲಿ ಕುಮಾರಸ್ವಾಮಿಯ ಪ್ರಾಚೀನ ದೇವಾಲಯವಿದೆ. ತಿರುಪತಿಯಲ್ಲಿರುವ ಶ್ರೀ ವೆಂಕಟರಮಣನ ಮೂರ್ತಿ ಮೊದಲು ಕುಮಾರಸ್ವಾಮಿಯ ಮೂರ್ತಿಯಾಗಿರ ಬಹುದೆಂದು ಕೆಲವು ತಜ್ಞರ ಮತವಿದೆ.

ಸೌರಮತ

ಋಗ್ವೇದದಲ್ಲಿ ಸೂರ್ಯನು ದೊಡ್ಡ ದೇವತೆಯೆಂದು ಗಣಿಸಲ್ಪಡುವನು. ಅನೇಕ ಸೂಕ್ತಗಳಲ್ಲಿ ಅವನ ವರ್ಣನೆ ಮತ್ತು ಪ್ರಾರ್ಥನೆ ಇದೆ. ಒಂದು ಕಾಲದಲ್ಲಿ ಸೂರ್ಯನನ್ನು ಭಜಿಸುವ ಜನರು ಇಲ್ಲಿ ಬಹಳವಾಗಿದ್ದರು. ಹಿಂದೂಧರ್ಮದ ಉಪನಯನ ಮೊದಲಾದ ಸಂಸ್ಕಾರಗಳಲ್ಲಿ ಸೂರ್ಯನಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಬ್ರಾಹ್ಮಣರು ಪ್ರತಿದಿವಸ ಜಪಿಸುವ ಗಾಯತ್ರೀಮಂತ್ರ ಸೂರ್ಯ ಪರವಾಗಿರುವುದು. ಅವರು ಮಾಡುವ ಸಂಧ್ಯಾವಂದನ ಸೂರ್ಯನಿಗೆ ಸಂಬಂಧಿಸಿರುವುದು. ಮಂಡಸೂರ ಶಿಲಾಶಾನಸದಲ್ಲಿ ಕ್ರಿ.ಶ. ೪೩೭ರಲ್ಲಿ ಕಟ್ಟಿಸಿದ ಸೂರ್ಯದೇಗುಲವನ್ನು ನೇಕಾರರ ಸಂಘವು ಕ್ರಿ. ಶ. ೪೭೩ರಲ್ಲಿ ಜೀರ್ಣೋದ್ಧಾರ ಮಾಡಿದ ಸಂಗತಿಯಿದೆ. ಸಂಯುಕ್ತಪ್ರಾಂತದಲ್ಲಿರುವ ಇಂದೂರದಲ್ಲಿ ದೊರೆತ ಒಂದು ತಾಮ್ರಪಟದಲ್ಲಿ

ದೇವವಿಷ್ಣುವೆಂಬುವನು ಕ್ರಿ.ಶ. ೪೩೪ರಲ್ಲಿ ಸೂರ್ಯನ ಗುಡಿಯಲ್ಲಿ ನಂದಾದೀವಿಗೆಯನ್ನು ಹಚ್ಚಿಸಿದಂತೆ ಉಲ್ಲೇಖವಿದೆ. ಮಾರ್ತಾಂಡದೇವನ ಗುಡಿಗಳು ಇನ್ನೂ ಅನೇಕ ಕಡೆಗಳಲ್ಲಿ ದೊರೆಯುವುವು. ೭ನೆಯ ಶತಮಾನದಲ್ಲಿದ್ದ ಉತ್ತರಾಪಥದ ಅಧಿಪತಿಯಾದ ಹರ್ಷವರ್ಧನನ ತಂದೆ ಪ್ರಭಾಕರವರ್ಧನ; ಅಜ್ಜ ಆದಿತ್ಯವರ್ಧನ; ಮುತ್ತಜ್ಜ ರಾಜ್ಯವರ್ಧನ; ಇವರೆಲ್ಲರೂ ಪರಮಾದಿತ್ಯ ಭಕ್ತರಾಗಿದ್ದರು. ನಮ್ಮ ಕರ್ನಾಟಕದಲ್ಲಿ ಮಾರ್ತಂಡಮತ ಅಷ್ಟು ಪ್ರಬಲಾವಸ್ಥೆಯಲಿದ್ದಂತೆ ತೋರುವುದಿಲ್ಲ. ಈ ಮತದ ಒಂದು ಮಹತ್ವದ ಗ್ರಂಥವಾದ ಸೌರಸಂಹಿತೆಯ, ಕ್ರಿ.ಶ. ೯೪೧ರಲ್ಲಿ ಬರೆದ ಪ್ರತಿ ನೇಪಾಳದಲ್ಲಿ ದೊರೆತಿದೆ. ೭ನೆಯ ಶತಮಾನದಲ್ಲಿದ್ದ ಮಯೂರಕವಿ ಸೂರ್ಯಶತಕವನ್ನು ರಚಿಸಿ ತನ್ನ ರೋಗವನ್ನು ಕಳೆದುಕೊಂಡನಂತೆ. ಸತ್ರಾಜಿತನು ಸೂರ್ಯನಿಂದ ಶಮಂತಕಮಣಿಯನ್ನೂ, ಪಾಂಡವರು ಅಕ್ಷಯಪಾತ್ರೆಯನ್ನೂ ಪಡೆದರೆಂಬ ಕಥೆ ಇದೆ. ಜೈನನಾದ ಮಾನತುಂಗನು ಭಕ್ತಾಮರ. ಸ್ತೋತ್ರದಲ್ಲಿ ಸೂರ್ಯನನ್ನು ಸ್ತುತಿಸಿದ್ದಾನೆ. ಆನಂದಗಿರಿ ಶಂಕರದಿಗ್ವಿಜಯದಲ್ಲಿ ಈ ಮತದವನಾದ ದಿವಾಕರನ ಸಂಗಡ ಶಂಕರಾಚಾರ್ಯರು ವಾದಿಸಿದರೆಂದು ಹೇಳುತ್ತಾನೆ. ಸಾಂಬ ಪುರಾಣದಲ್ಲಿ ಸೌರಮತದ ಬಗ್ಗೆ ಮಹತ್ತರ ಸಂಗತಿಗಳಿವೆ. ಅದರಲ್ಲಿ ಸೂರ್ಯ ಪೂಜಾರಿಗಳಿಗೆ ಮಾಗಿ, ಭೋಜಕ, ಶಾಕದ್ವೀಪೀಯ ಬ್ರಾಹ್ಮಣರೆಂದು ಹೆಸರು. ಪಂಜಾಬಿನಲ್ಲಿದ್ದ ಚಂದ್ರಭಾಗಾ ಅಂದರೆ ಮುಲ್ತಾನ ಮೂಲಸ್ಥಾನದಲ್ಲಿ ಸೂರ್ಯದೇವನ ಪ್ರಸಿದ್ಧ ಗುಡಿಯಿತ್ತು. ಚೀನದ ಪ್ರವಾಸಿಯಾದ ಹುವೇನ್ ಚಿಯಾಂಗನು ಈ ಗುಡಿಯನ್ನು ನೋಡಿ ಬಹಳವಾಗಿ ಬಣ್ಣಿಸಿದ್ದಾನೆ. ಆಲ್ಬೆರೂನಿ ಕೂಡ ಈ ಗುಡಿಯನ್ನು ಕಂಡಿದ್ದನು. ಔರಂಗಜೇಬನು ಇದನ್ನು ನಾಶ ಮಾಡಿದನು. ಹಿಂದೂಸ್ಥಾನಕ್ಕೆ ಬಂದ ಪಾರಸೀ ಜನರು ಸೂರ್ಯನ ಪೂಜೆಗೆ ಕಾರಣರಾಗಿರಬೇಕೆಂದು ಕೆಲವು ಪಂಡಿತರ ಮತ. ಪಾರಸೀ ಜನರ ಆ ಉಪಾಧ್ಯಾಯರುಗಳಿಗೆ ಮಾಗಿಗಳೆಂದು ಈಗಲೂ ಕರೆಯುವರು. ಇರಾಣಕ್ಕೆ ಶಾಕದ್ವೀಪವೆಂದೂ ಅಂದಿರಬಹುದು. ಪಾರಸೀ ಜನರ ಆಗಮನದ ನಂತರ ಅವರೂ ಸೂರ್ಯಪೂಜಕರಿರುವುದರಿಂದ ಇಲ್ಲಿಯ ಜನರು ಅವರನ್ನು ತಮ್ಮೊಳಗೆ ಸೇರಿಸಿಕೊಂಡಿರಬಹುದು ಮತ್ತು ಸೌರಮತದ ಸವರೂಪವನ್ನು ಕೆಲಮಟ್ಟಿಗೆ ಬದಲಿಸಿರಬಹುದು.

ಜೈನಧರ್ಮ

"ಜೈನಧರ್ಮ ಹಿಂದೂಧರ್ಮದಿಂದ ಭಿನ್ನವಾಗಿದ್ದು ಬೌದ್ಧಧರ್ಮದಂತೆ ಒಂದು ಪ್ರಾಚೀನ ಸ್ವತಂತ್ರಧರ್ಮವಾಗಿರುವುದು. ಇದರ ಉಗಮ ಹಿಂದೂಸ್ಥಾನದಲ್ಲಿಯೇ ಆಗಿದೆಯಾದರೂ ಬೌದ್ಧಧರ್ಮದಂತೆ ಹಿಂದೂಸ್ಥಾನದ ಹೊರಗೆ ಇದರ ಪ್ರಸಾರವಾಗಿಲ್ಲ. ಈಗ ಹಿಂದೂಸ್ಥಾನದಲ್ಲಿ ೧೯೩೧ರಲ್ಲಿ ಜನಗಣನೆಯ ಪ್ರಕಾರ ೧೩ ಲಕ್ಷ ಜೈನಮತಾವಲಂಬಿಗಳಿರುವರು." ಜೈನಮತ ಬೌದ್ಧಧರ್ಮಕ್ಕೂ ಸ್ವಲ್ಪ ಹಳೆಯದು.

೧೫ನೆಯ ಶತಮಾನದ ಒಂದು ಶಾಸನದಲ್ಲಿ ಕವಿ ಕರ್ನಾಟಕವನ್ನು ಹೀಗೆ ಬಣ್ಣಿಸಿದ್ದಾನೆ.[1]

ಜಿನಧರ್ಮಾವಾಸಮಾದತ್ತಮಳ ವಿನಯದಾಗಾರಮಾದತ್ತು ಪದ್ಮಾ
ಸನನಿರ್ಪಾಸದ್ಮಮಾದತ್ತತಿ ವಿಶದ ಯಶೋಧಾಮಮಾದತ್ತು ವಿದ್ಯಾ।
ಧನ ಜನ್ಮಸ್ಥಾನಮಾದತ್ತಸಮ ತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂ ಚಾರುಕರ್ಣಾಟಕದೇಶಂ॥

ಈ ವರ್ಣನೆ ಕವಿಕಲ್ಪಿತವಲ್ಲ. ಇದರಲ್ಲಿ ಬಹುಮಟ್ಟಿಗೆ ಸತ್ಯವಿದೆ. ಜೈನಧರ್ಮ ಕ್ರಿಸ್ತಶಕ ಪೂರ್ವದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಿತ್ತು. ಶ್ರವಣಬೆಳಗೊಳದ ಒಂದು ಶಾಸನದಲ್ಲಿ ಭದ್ರಬಾಹುಸ್ವಾಮಿಗಳು ಉತ್ತರ ದೇಶದಲ್ಲಿ ದ್ವಾದಷ ವರ್ಷಕ್ಷಾಮವಾಗುವುದನ್ನು ತಮ್ಮ ದಿವ್ಯಜ್ಞಾನದಿಂದ ತಿಳಿದು ಜೈನಸಂಘವನ್ನು ದಕ್ಷಿಣಕ್ಕೆ ತಂದರೆಂದೂ, ಕಟವಪ್ರ ಅಥವಾ ಕಳ್ವಪ್ಪು (ಚಂದ್ರಗಿರಿ) ಎಂಬ ಬೆಟ್ಟದಲ್ಲಿ ಅವರೂ ಅವರ ಶಿಷ್ಯನಾದ ಚಂದ್ರಗುಪ್ತ ಮೌರ್ಯನೂ ಸಂಲೇಖನವ್ರತದಿಂದ ಸಮಾಧಿಯನ್ನು ಹೊಂದಿದರೆಂದೂ ಹೇಳಿದೆ. ಇದು ನಿಜವಾದುದೆಂದು ಇತಿಹಾಸವನ್ನು ಬಲ್ಲವರು ಹೇಳುತ್ತಾರೆ. ಕ್ರಿ.ಶ. ಪ್ರಾರಂಭದಿಂದ ಇಲ್ಲಿಯವರೆಗೆ ಜೈನಮತಾವಲಂಬಿಗಳು ಇಲ್ಲಿ ವಾಸಿಸುವರು. ಕರ್ನಾಟಕದ ಪ್ರಸಿದ್ಧ ಅರಸುಮನೆತನಗಳು ಒಂದಿಲ್ಲೊಂದು ರೀತಿಯಿಂದ ಜೈನಮತಕ್ಕೆ ಪ್ರೋತ್ಸಾಹವನ್ನು ಕೊಟ್ಟಿರುವುವು. ಕೆಲವರು ಈ ಧರ್ಮದ ಅನುಯಾಯಿಗಳಾಗಿದ್ದರು. ಅಂತಹವರಲ್ಲಿ ತಲಕಾಡಿನ ಗಂಗರೂ, ಮಳಖೇಡದ ರಾಷ್ಟ್ರಕೂಟರೂ, ಹಳೇಬೀಡಿನ ಹೊಯ್ಸಳರೂ ಪ್ರಮುಖರು. ಗಂಗವಂಶದ ಮೊದಲನೆಯ ಕೊಂಗುಣಿವರ್ಮನು ಅರ್ಹದ್ಭಟ್ಟಾರಕರಾದ ಸಿಂಹನಂದ್ಯಾಚಾರ್ಯರ ವರದಿಂದ ರಾಜ್ಯವನ್ನು ಪಡೆದನೆಂದು ಕಡ್ಲೂರು ಶಾಸನದಲ್ಲಿ ಹೇಳಿದೆ. ಗಂಗರು ಕ್ರಿ.ಶ. ಸು. ೨೦೦ರಿಂದ ೧೨೦೦ರವರೆಗೆ ಜೈನಮತಕ್ಕೆ ದೊಡ್ಡ ಆಶ್ರಯವನ್ನು ಕೊಟ್ಟು ಅದರ ಅಭ್ಯುದಯಕ್ಕೆ ಮುಖ್ಯ ಕಾರಣರಾಗಿರುವರು. ರಾಷ್ಟ್ರಕೂಟದಲ್ಲಿ ಅನೇಕ ಅರಸರು ಸ್ವತಃ ಜೈನಮತವನ್ನು ಸ್ವೀಕರಿಸಿ, ಗ್ರಂಥಗಳನ್ನು ರಚಿಸಿ, ಎಲ್ಲ ರೀತಿಯಿಂದಲೂ ಜೈನಮತಕ್ಕೆ ಆಶ್ರಯ ಕೊಟ್ಟಿರುವರು. ಇವರ ಅಭ್ಯುದಯ ಕಾಲದಲ್ಲಿ ದೊಡ್ಡ ಜೈನವಿದ್ವಾಂಸರಿಗೆ ಪ್ರೋತ್ಸಾಹಕೊಟ್ಟು ಧರ್ಮಗ್ರಂಥಗಳನ್ನು ರಚಿಸಲು ಅನುಕೂಲತೆಯನ್ನುಂಟು ಮಾಡಿಕೊಟ್ಟಿರುವರು. ಹೊಯ್ಸಳರು ಜೈನಮುನಿಯ ವರದಿಂದ ರಾಜ್ಯವನ್ನು ಪಡೆದಂತೆ ವದಂತಿ ಇದೆ. ಕದಂಬ ಚಾಳುಕ್ಯ ವಿಜಯನಗರ ರಾಜರು ಸ್ವತಃ ಜೈನ ಧರ್ಮಾನುಯಾಯಿಗಳಲ್ಲದಿದ್ದರೂ ಜೈನಮತಕ್ಕೂ ಪಂಡಿತರಿಗೂ ಅನೇಕ ರೀತಿಯಿಂದ ಸಹಾಯುಮಾಡಿ ಪ್ರೋತ್ಸಾಹ ಮಾಡಿಕೊಟ್ಟಿರುವರು. ಜೈನಸಾಹಿತ್ಯದಲ್ಲಿ ಮೇಲಿಂದ ಮೇಲೆ ಸ್ಮರಿಸಲ್ಪಡುವ ಜೈನಾಚಾರ್ಯರಲ್ಲಿ ಕುಂದಕುಂದ, ಸಂತಭದ್ರ, ಪೂಜ್ಯಪಾದ, ಅಕಲಂಕ ಮೊದಲಾದವರು ಪ್ರಮುಖರು.

---

1 *ಶಾಸನಪದ್ಯ ಮಂಜರಿ,೨೫೦*

ಕರ್ನಾಟಕದ ಪ್ರಸಿದ್ಧ ಜೈನಾಚಾರ್ಯರಲ್ಲಿ ಕೆಲವರು ತಾವು ಕುಂದಕುಂದಾನ್ವಯದವರೆಂದು ಹೇಳಿಕೊಳ್ಳುವರು. ಕುಂದಕುಂದಾಚಾರ್ಯರು ದಕ್ಷಿಣದೇಶದ ಜೈನಾಚಾರ್ಯರು. ಕನ್ನಡಿಗರು, ತಮಿಳರು, ತೆಲಗರು ಇವರನ್ನು ತಮ್ಮ ತಮ್ಮ ದೇಶದವರೆಂದು ಸಾಧಿಸುವರು. ಇವರಿಗೆ ಏಲಾಚಾರ್ಯ, ಪದ್ಮನಾಭ, ವಕ್ರಗ್ರೀವ, ಗೃಧ್ರಪಿಂಛ ಮೊದಲಾದ ಹೆಸರುಗಳಿದ್ದಂತೆ ತಿಳಿಯುವುದು. ಇವರು ೪೮ ಗ್ರಂಥಗಳನ್ನು ಬರೆದಿರುವರೆಂದು ಐತಿಹ್ಯವಿದೆ. ಅವುಗಳಲ್ಲಿ ೧) ಪಂಚಾಸ್ತಿಕಾಯ, ೨) ಪ್ರವಚನಸಾರ, ೩) ಸಮಯಸಾರ, ೪) ನಿಯಮಾನುಸಾರ, ೫) ರಯನಸಾರ ೬) ಅಷ್ಟ ಪಾಹುಡ, (೭) ಬಾರಹ ಅನುಪೇಕ್ಷ ಎಂಬುವು ಮುಖ್ಯವಾದುವು. ಪಟ್ಟಾವಲಿಯ ಪ್ರಕಾರ ಇವರು ವಿಕ್ರಮಸಂವತ್ ೪೯ ರಲ್ಲಿ ಇದ್ದರೆಂದು ತಿಳಿಯುತ್ತದೆ.

ಕುಂದಕುಂದಾಚಾರ್ಯರ ಶಿಷ್ಯರಲ್ಲಿ ಉಮಾಸ್ವಾತಿಯೆಂಬುವರು ಅತಿ ಪ್ರಸಿದ್ಧರು. ಇವರು ೫೦೦ ಗ್ರಂಥಗಳನ್ನು ಬರೆದಿರುವರೆಂದು ಪ್ರತೀತಿ. ಉಪಲಬ್ಧವಿದ್ದಂಥಗಳಲ್ಲಿ ೧) ತತ್ವಾರ್ಥಾಧಿಗಮಸೂತ್ರ. ೨) ತತ್ವಾಧಿಗಮ ಸೂತ್ರಭಾಷ್ಯ, ೩) ಪೂಜಾಪ್ರಕರಣ, ೪) ಜಂಬೂದ್ವೀಪಸಮಾಸ, ೫) ಪ್ರಶಮರತಿ ಎಂಬುದು ಮುಖ್ಯವಾದುವು. ಇವರು ವಿಕ್ರಮ ಸಂವತ್ ೧೪೨ರಲ್ಲಿ ತೀರಿಕೊಂಡರೆಂದು ತಿಳಿಯುವುದು. ಇವರ ತತ್ವಾರ್ಥಾಧಿಗಮ ಸೂತ್ರಕ್ಕೆ ಸಮಂತಭದ್ರಪೂಜ್ಯಪಾದ ಅಕಲಂಕ ವಿದ್ಯಾನಂದ ಪ್ರಭಾಚಂದ್ರ ಶ್ರುತಸಾಗರ ಮೊದಲಾದ ಪ್ರಸಿದ್ಧ ಜೈನಾಚಾರ್ಯರು ವ್ಯಾಖ್ಯೆಯನ್ನು ಬರೆದಿರುವರು. ಇದರಿಂದ ಈ ಗ್ರಂಥದ ಮಹತ್ವವು ವಿದಿತವಾಗುವುವು.

ಸಮಂತಭದ್ರಸ್ವಾಮಿಯ ಬಗ್ಗೆ ನಮಗೆ ನಿಶ್ಚಿತವಾದ ಸಂಗತಿಗಳು ದೊರೆತಿಲ್ಲ. ಇವರು ೧೪೦೦೦ ಶ್ಲೋಕ ಪರಿಮಿತಿಯುಳ್ಳ ಗಂಧಹಸ್ತಿ ಮಹಾಭಾಷ್ಯವೆಂಬುದನ್ನು ತತ್ವಾರ್ಥಾಧಿಗಮ ಸೂತ್ರಕ್ಕೆ ವ್ಯಾಖ್ಯಾನುರೂಪವಾಗಿ ಬರೆದಿರುವರು. ಅದು ಈಗ ಉಪಲಬ್ಧವಿಲ್ಲ. ರತ್ನಕರಂಡಕ ಶ್ರಾವಕಾಚಾರ, ಆಪ್ತಮೀಮಾಂಸಾ, ಜಿನಸ್ತುತಿ ಶತಕ, ಸ್ವಾಯಂಭುವಸೂತ್ರ ಮೊದಲಾದವು ಇವರು ಬರೆದ ಗ್ರಂಥಗಳು. ಇವರು ಬಲು ಪ್ರಸಿದ್ಧ ಜೈನಾಚಾರ್ಯರು. ಕಾಶ್ಮೀರದಿಂದ ಕಾಂಚಿಯವರೆಗೆ ಎಲ್ಲರನ್ನು ವಾದದಲ್ಲಿ ಸೋಲಿಸಿ ವಾದಿಮುಖ್ಯರೆಂದು ಹೆಸರಾಗಿದ್ದರು. ಇವರ ಕಾಲ ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಮೀಮಾಂಸಾಧರ್ಮದ ಅಧ್ವರ್ಯುಗಳಾದ ಕುಮಾರಿಲಭಟ್ಟರು, ಇವರ ಹೆಸರನ್ನು ಉಲ್ಲೇಖಿಸಿರುವರು. ಇವರು ವಿ.ಸ. ೪೬೬ (ಕ್ರಿ.ಶ. ೪೧೯)ರಲ್ಲಿ ಇದ್ದರೆಂದು ಶ್ವೇತಾಂಬರ ಜೈನರು ನಂಬುವರು. ಇವರ ಆಪ್ತ ಮೀಮಾಂಸೆಯ ಒಂದು ಕೈಬರಹದ ಪ್ರತಿಯಲ್ಲಿ "ದಿವಿ ಫಣಿಮಂಡಲಾಲಂಕಾ ರಸ್ಯೋರಗ ಪುರಾಧಿಪಸೂನೋಃ ಶ್ರೀಸ್ವಾಮಿಸಮಂತಭದ್ರಮುನೇಃ ಕೃತೌ ಆತ್ಮಮೀಮಾಂಸಾಯಾಮ್"[1] ಎಂದಿದೆ.

---

1. *Jaina Sahitya Samsodhaka,* P. XI

ಉರಗಪುರ ಚೋಳರ ರಾಜಧಾನಿಯಾಗಿತ್ತೆಂದು ಕಾಳಿದಾಸನು ರಘುವಂಶದಲ್ಲಿ ತಿಳಿಸುವನು. ಪಂಡಿತರು ಇದನ್ನು ತಮಿಳು ದೇಶದಲ್ಲಿರುವ ಉಗ್ಯೆಯೂರಿಗೆ ಹೋಲಿಸುವರು. ಬೇರೆ ಪ್ರಮಾಣಗಳಿಂದ ಇದನ್ನು ಸಿದ್ಧಮಾಡಬೇಕಾಗಿದೆ.

ಪೂಜ್ಯಪಾದರು ಪ್ರಸಿದ್ಧ ವೈಯಾಕರಣಿಗಳು. ಇವರು ಬರೆದ ವ್ಯಾಕರಣಕ್ಕೆ ಜೈನೇಂದ್ರ ವ್ಯಾಕರಣವೆಂದು ಹೆಸರು. ಇವರಿಗೆ ದೇವನಂದಿ, ಜೈನೇಂದ್ರಬುದ್ಧಿ ಎಂಬ ಅಪರನಾಮಗಳಿದ್ದವು. ಜೈನೇಂದ್ರ ವ್ಯಾಕರಣಕ್ಕೆ ಪಂಚವಾಸ್ತುಕವೆಂಬ ವ್ಯಾಖ್ಯಾನವನ್ನೂ ಪಾಣಿನಿಯ ಶಬ್ದಾವತಾರವೆಂಬ ಗ್ರಂಥವನ್ನೂ ಬರೆದಿರುವರೆಂದು ತಿಳಿಯುವುದು. ಕಲ್ಯಾಣಕಾರವೆಂಬುದು ಇವರು ಬರೆದ ವೈದ್ಯಗ್ರಂಥ. ಇದನ್ನು ೧೨ನೆಯ ಶತಮಾನದವನಾದ ಜಗದ್ದಳ ಸೋಮನಾಥನು ಕನ್ನಡಿಸಿರುವನು. ಮಂಗರಾಜನ (ಕ್ರಿ.ಶ. ೧೩೬೦ರಲ್ಲಿ) ವೈದ್ಯಗ್ರಂಥವಾದ ಖಗೇಂದ್ರಮಣಿ ದರ್ಪಣದಲ್ಲಿ ಪೂಜ್ಯಪಾದರ ಸ್ಮರಣೆಯಿದೆ. ಉಮಾಸ್ವಾತಿಯ ತತ್ವಾರ್ಥಾಧಿಗಮ ಸೂತ್ರಕ್ಕೆ ಸರ್ವಾರ್ಥಸಿದ್ದಿಯೆಂಬ ೫೫೦೦ ಶ್ಲೋಕಗಳುಳ್ಳ ವ್ಯಾಖ್ಯಾನವನ್ನೂ, ಸಾಮಾನ್ಯರಿಗೋಸುಗ ಉಪಾಸಕಾಚಾರವೆಂಬ ಗ್ರಂಥವನ್ನೂ ಬರೆದಿರುವರು. ಇವರು ದಕ್ಷಿಣ ಹಿಂದೂಸ್ಥಾನದಲ್ಲೆಲ್ಲ ಸಂಚರಿಸಿ ಉತ್ತರದಲ್ಲಿ ವಿದೇಹದವರಗೆ ಹೋಗಿದ್ದರು. ಮಧುರೆಯಲ್ಲಿ ದ್ರಾವಿಡ ಸಂಘವನ್ನು ಸ್ಥಾಪಿಸಿದ ವಜ್ರನಂದಿಯೂ (ಶಾ.ಶ. ೫೨೬) ಗಂಗರಾಜನಾದ ದುರ್ವಿನೀತನು (ಕ್ರಿ.ಶ. ೪೮೩-೫೧೨) ಇವರ ಶಿಷ್ಯರಾಗಿದ್ದರೆಂದು ಡಾ। ಭಂಡಾರಕರರೂ, ಕ್ರಿ.ಶ. ೫೦೦ ರಲ್ಲಿದ್ದಿರಬೇಕೆಂದು ಶ್ರೀಯುತ ಹೀರಾಲಾಲರವರೂ ಅಭಿಪ್ರಾಯ ಪಡುವರು.

ಅಕಲಂಕದೇವರು ರಾಷ್ಟ್ರಕೂಟರಾಜನಾದ ಶುಭತುಂಗನ ಮಕ್ಕಳೆಂದೂ ಕಾಂಚಿಯಲ್ಲಿ ಬೌದ್ಧರನ್ನು ವಾದದಲ್ಲಿ ಸೋಲಿಸಿ ಸಿಂಹಳ ದ್ವೀಪಕ್ಕೆ ಅಟ್ಟಿದ್ದರೆಂದೂ ಐತಿಹ್ಯವಿದೆ. ಉಮಾಸ್ವಾತಿಯ ತತ್ವಾರ್ಥಾಧಿಗಮಸೂತ್ರಕ್ಕೆ ವ್ಯಾಖ್ಯೆಯಾದ ತತ್ವಾರ್ಥವಾರ್ತಿಕ-ವ್ಯಾಖ್ಯಾಲಂಕಾರ ಇವರ ಪ್ರಸಿದ್ಧ ಗ್ರಂಥ. ಇದಲ್ಲದೆ ಇವರು ಬರೆದ ಅಷ್ಟಶತಿಯೆಂಬ ಗ್ರಂಥಕ್ಕೆ ವಿದ್ಯಾನಂದನು ಅಷ್ಟಸಹಸ್ರಿಯೆಂಬ ವ್ಯಾಖ್ಯಾನವನ್ನು ಬರೆದಿರುವನು. ಅಕಲಂಕದೇವರು ತಾರ್ಕಿಕರಲ್ಲಿ ಅಗ್ರಗಣ್ಯರು.

ಅಕಲಂಕದೇವರ ತರುವಾಯ ಪ್ರಸಿದ್ಧನಾದ ಗ್ರಂಥಕಾರನು ಪ್ರಭಾವಚಂದ್ರನು. ಇವನು ನ್ಯಾಯಕುಮುದ ಚಂದ್ರೋದಯ, ಪ್ರಮೇಯ ಕಮಲ ಮಾರ್ತಾಂಡಗಳನ್ನು ಬರೆದಿರುವನು. ಜೈನೇಂದ್ರನ್ಯಾಸ ಅಮೋಘವೃತ್ತಿ ನ್ಯಾಸಗಳೆಂಬ ವ್ಯಾಕರಣ ಗ್ರಂಥಗಳನ್ನು ಬರೆದಿರುವನು. ರಾಷ್ಟ್ರಕೂಟ ರಾಜನಾದ ಅಮೋಘವರ್ಷನ ಆಸ್ಥಾನದಲ್ಲಿದ್ದ ಶಾಕಟಾಯನನು ಅಮೋಘವೃತ್ತಿಯನ್ನು ಬರೆದಿರುವನು. ಸುಮಾರು ಇದೇ ಕಾಲದಲ್ಲಿದ್ದ ರವಿಷೇಣನು ರಾಮಾಯಣ ಕಥೆಯನ್ನು ಜೈನಧರ್ಮಕ್ಕನುಸರಿಸಿ ಹೇಳುವ

ಪದ್ಮಪುರಾಣವನ್ನು ಬರೆದಿರುವನು. ಇದನ್ನೇ ಅನುಸರಿಸಿ ಕನ್ನಡದಲ್ಲಿ ನಾಗಚಂದ್ರನು ರಾಮಚಂದ್ರಚರಿತ್ರಪುರಾಣ ಅಥವಾ ಪಂಪರಾಮಾಯಣವನ್ನು ಬರೆದಿರುವನು.

ರಾಷ್ಟ್ರಕೂಟ ವಂಶದ ರಾಜನಾದ ಅಮೋಘವರ್ಷನ ಕಾಲದಲ್ಲಿ ಜಿನಸೇನನು ಪ್ರಸಿದ್ಧ ಜೈನಾಚಾರ್ಯನಾಗಿದ್ದು, ಜೈನಧರ್ಮದ ಪ್ರಭಾವವನ್ನು ಬಹಳವಾಗಿ ಬೆಳೆಸಲು ಕಾರಣನಾಗಿದ್ದಾನೆ. ಈತನು ವೀರಸೇನನ ಶಿಷ್ಯ. ಜೈನ ಮಹಾಭಾರತವಾದ ಹರಿವಂಶಪುರಾಣವನ್ನು ಬರೆದಿದ್ದಾನೆ. ಇದನ್ನನುಸರಿಸಿ ಆದಿಪಂಪನು ಪಂಪ ಭಾರತ ಅಥವಾ ವಿಕ್ರಮಾರ್ಜುನ ವಿಜಯವನ್ನು ಕನ್ನಡದಲ್ಲಿ ಬರೆದಿದ್ದಾನೆ. ಜಿನಸೇನನು ಷಟ್ಖಂಡಾಗಮ ಸೂತ್ರಕ್ಕೆ ಜಯಧವಲ ಟೀಕೆಯನ್ನು ಬರೆದು ಗುರುವಾದ ವೀರಸೇನನಿಗೆ ಅರ್ಪಿಸಿರುವನು. ಆದಿಪುರಾಣ, ಪಾರ್ಶ್ವಾಭ್ಯುದಯವೆಂಬುದು ಇವನು ಬರೆದ ಬೇರೆ ಗ್ರಂಥಗಳು. ಡಾ। ಭಂಡಾರಕರವರು ಆದಿಪುರಾಣವನ್ನು ಜ್ಞಾನಕೋಶಕ್ಕೆ ಹೋಲಿಸಿರುವರು. ಪಾರ್ಶ್ವಾಭ್ಯುದಯದಲ್ಲಿ ಒಂದು ವೈಶಿಷ್ಟ್ಯವಿದೆ. ಇದರಲ್ಲಿಯ ಪ್ರತಿಯೊಂದು ಪದ್ಯದ ನಾಲ್ಕನೆಯ ಚರಣ ಕಾಳಿದಾಸನ ಮೇಘದೂತದಿಂದ ಉದ್ಧೃತವಾಗಿದೆ. ಸಂಪೂರ್ಣ ಮೇಘದೂತ ಇದರಲ್ಲಿ ಅಡಕವಾಗಿದೆ.

ಜಿನಸೇನನ ಶಿಷ್ಯನಾದ ಗುಣಭದ್ರನು ಆದಿಪುರಾಣ ಉತ್ತರಭಾಗವಾದ ಉತ್ತರ ಪುರಾಣವನ್ನು ಶಕ ೮೨೦ರಲ್ಲಿ ಬರೆದಿರುವನು. ಭರ್ತೃಹರಿಯ ವೈರಾಗ್ಯ ಶತಕವನ್ನನುಸರಿಸಿ ಆತ್ಮಾನುಶಾಸನವೆಂಬುದನ್ನು ರಚಿಸಿರುವನು.

ಸೋಮದೇವನು ಜೈನಪಂಡಿತರಲ್ಲಿ ಅಗ್ರಗಣ್ಯನು. ಇವನು ರಾಷ್ಟ್ರಕೂಟ ಮೂರನೆಯ ಕೃಷ್ಣನ (ಶಕೆ ೮೮೧) ಮಾಂಡಲಿಕ ಚಾಲುಕ್ಯ ಅರಿಕೇಸರಿಯ ಆಸ್ಥಾನದಲ್ಲಿದ್ದನು. ಈತನ ಗುರು ನೇಮಿದೇವ. ಈತನು ವಾಗೀಂದ್ರ ಕಾಲಾನಲ ಶ್ರೀಮಹೇಂದ್ರಭಟ್ಟಾರಕನ ಬಂಧು. ತನ್ನನ್ನು ಸ್ಯಾದ್ವಾದಾಚಲ ಸಿಂಹ, ತಾರ್ಕಿಕ ಚಕ್ರವರ್ತಿ, ವಾದೀಪಂಚಾನನ, ವಾಕ್ಕಲ್ಲೋಲಪಯೋನಿಧಿ, ಕವಿಕುಲರಾಜ ಎಂದು ಕರೆದುಕೊಂಡಿರುವನು. ಈತನು ಯಶಸ್ತಿಲಕ ಚಂಪು, ನೀತಿ ವಾಕ್ಯಾಮೃತ, ಷಣ್ಣವತಿ ಪ್ರಕರಣ, ಯುಕ್ತಿಚಿಂತಾಮಣಿಸೂತ್ರ, ಮಹೇಂದ್ರಮಾತಲಿಸಂಜಲ್ಪ ಮೊದಲಾದ ಗ್ರಂಥಗಳನ್ನು ಬರೆದಿರುವನು. ನೀತಿ ವಾಕ್ಯಾಮೃತವು ಕೌಟಿಲ್ಯನ ಅರ್ಥಶಾಸ್ತ್ರದ ಅನುಕರಣವಾಗಿದೆ.

ಮೇಲಿನ ಜೈನಾಚಾರ್ಯರೆಲ್ಲರೂ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಗ್ರಂಥಗಳನ್ನು ಬರೆದಿರುವರು. ಕನ್ನಡ ಭಾಷೆಯಲ್ಲಿಯೇ ಜೈನಧರ್ಮವನ್ನು ಬೋಧಿಸಿದ ಆಚಾರ್ಯರು ಅನೇಕರಿರುವರು. ಅವರೆಲ್ಲರ ಹೆಸರನ್ನು ಇಲ್ಲಿ ಉಲ್ಲೇಖಿಸುವುದು ಸಾಧ್ಯವಿಲ್ಲ; ಮೇಲಾಗಿ ಅವರಲ್ಲಿ ಬಹುಜನರು ಕನ್ನಡಿಗರಿಗೆ ಅಪರಿಚಿತರು. ಆದುದರಿಂದ ಹಲಕೆಲವರ ಹೆಸರನ್ನು ಮಾತ್ರ ಇಲ್ಲಿ ಸೂಚಿಸಲಾಗುವುದು. ಅಂತಹವರಲ್ಲಿ ಕವಿ ಪರಮೇಷ್ಠಿಯೆಂಬುವರು ಮೊದಲನೆಯವರು ಎನ್ನಬಹುದು. ಇವರು ಸುಮಾರು

ಕ್ರಿ.ಶ. ೪ನೆಯ ಶತಮಾನದಲ್ಲಿದ್ದಿರಬಹುದೆಂದು ಪಂಡಿತರು ಹೇಳುವರು. ಇವರನ್ನು ಜಿನಸೇನನೂ ಗುಣಭದ್ರನೂ ಸ್ಮರಿಸುವರು. ಶ್ರೀವರ್ಧದೇವ ಅಥವಾ ತುಂಬುಳೂರಾಚಾರ್ಯರೆಂಬುವರು ತತ್ವಾರ್ಥ ಮಹಾಶಾಸ್ತ್ರಕ್ಕೆ ೯೬೦೦೦ ಪದ್ಯಗಳುಳ್ಳ ಚೂಡಾಮಣಿಯೆಂಬ ವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದಿರುವರೆಂದು ತಿಳಿಯುವುದು. ಇದು ಈಗ ಉಪಲಬ್ಧವಿಲ್ಲ. ದಂಡಿ "ಶಿವನು ಜಡೆಯಲ್ಲಿ ಗಂಗೆಯನ್ನು ಧರಿಸಿದಂತೆ ಶ್ರೀವರ್ಧದೇವನು ನಾಲಗೆಯ ತುದಿಯಲ್ಲಿ ಸರಸ್ವತಿಯನ್ನು ಧರಿಸುವ"[1]ನೆಂದು ಅಂದಿರುವನು. ಭಟ್ಟಾಕಲಂಕನು ಕನ್ನಡ ಭಾಷೆಗೆ ಇದು ಮಹತ್ವದ ಗ್ರಂಥವೆಂದು ಹೇಳಿರುವನು. ಇದು ದೊರೆತರೆ ಕನ್ನಡಕ್ಕೆ ಮಹೋಪಕಾರವಾಗುವುದು. ಇವರಲ್ಲದೆ, ದುರ್ವಿನೀತ, ಐಹೊಳೆಯ ಶಾಸನಕರ್ತೃ ರವಿಕೀರ್ತಿ, ಅಮೋಘವರ್ಷ, ಗುಣವರ್ಮ, ಚಾವುಂಡರಾಯ, ಪಂಪ, ಪೊನ್ನ, ರನ್ನ, ನಾಗವರ್ಮ ಮೊದಲಾದವರು ಕನ್ನಡ ಸಾಹಿತ್ಯ ಮಂದಿರದ ಆಧಾರಸ್ತಂಭವಾಗಿರುವರು. ಕನ್ನಡ ನುಡಿ ಇರುವವರೆಗೆ ಇವರ ಕೀರ್ತಿ ಅಚ್ಚಳಿಯದೆ ಪ್ರಕಾಶಮಾನವಾಗಿರುವುದು.

ಸುಮಾರು ಎರಡು ಸಾವಿರ ವರ್ಷಗಳಿಂದ ಕರ್ಣಾಟಕದಲ್ಲಿ ನೆಲೆಸಿ, ಕರ್ಣಾಟಕ ಇತಿಹಾಸ, ಸಾಹಿತ್ಯ, ಕಲೆಗಳಿಗೆ ವಿಪುಲವಾಗಿ ಸಹಾಯಮಾಡಿ ಕನ್ನಡಿಗರ ಸಂಸ್ಕೃತಿಗೆ ಒಪ್ಪನ್ನು ಹಾಕಿ ತೇಜೋಮಯವಾಗಿ ಮಾಡಿದ ಈ ಜೈನಧರ್ಮದ ಉತ್ಪಾದಕರು ೨೪ನೆಯ ತೀರ್ಥಂಕರರಾದ ಶ್ರೀವರ್ಧಮಾನ ಮಹಾವೀರರು. ಇವರು ಕ್ರಿ.ಪೂ. ೬೫೯[2]ರಲ್ಲಿ ವೈಶಾಲೀ ದೇಶದ ವೈಶಾಲೀ ಪಟ್ಟಣದಲ್ಲಿ ಜ್ಞಾತವೆಂಬ ಪ್ರಸಿದ್ಧ ಕ್ಷತ್ರಿಯ ರಾಜಕುಲದಲ್ಲಿ ಜನ್ಮವೆತ್ತಿದರು. ಇದು ಈಗಿನ ಪಾಟ್ನಾ ನಗರದಿಂದ ಉತ್ತರಕ್ಕೆ ೨೭ ಮೈಲಿ ದೂರದಲ್ಲಿರುವುದು. ಇದಕ್ಕೆ ಬೇಸಾರ್ಹವೆಂದೆನ್ನುವರು. ತಮ್ಮ ವಯಸ್ಸಿನ ೨೮ನೆಯ ವರ್ಷಗಳವರೆಗೆ ಪ್ರಪಂಚವನ್ನು ಮಾಡಿದರೆಂದೂ ಇವರಿಗೆ ಕೌಂಡಿನ್ಯ ಗೋತ್ರದ ಯಶೋದೆಯೆಂಬ ಹೆಂಡತಿ, ಅನೋಜ್ಞಾ ಅಥವಾ ಪ್ರಿಯದರ್ಶಿಕಾ ಎಂಬ ಮಗಳು ಬಂಧು ಭಗಿನಿಯರಿದ್ದರೆಂದೂ ಶ್ವೇತಾಂಬರರು ನಂಬುವರು. ಶ್ರೀಮಹಾವೀರರು ಆಜನ್ಮ ಬ್ರಹ್ಮಚಾರಿಗಳಾಗಿದ್ದರೆಂದೂ, ಹೆಂಡತಿ ಮಗಳು ಇದ್ದುದು ನಿಜವಲ್ಲವೆಂದೂ ದಿಗಂಬರರು ಹೇಳುವರು. ಶ್ರೀವರ್ಧಮಾನರು ತಮ್ಮ ೨೮ನೆಯ ವಯಸ್ಸಿನಲ್ಲಿ ಮನೆಯನ್ನೂ ಆಪ್ತೇಷ್ಟರನ್ನೂ ತ್ಯಜಿಸಿ ದುಃಖಪೂರಿತವಾದ ಪ್ರಪಂಚವನ್ನು ದಾಟುವ ಮಾರ್ಗವನ್ನು ಶೋಧಿಸಲು ತಪಸ್ಸಿಗಾಗಿ ವನಕ್ಕೆ ತೆರಳಿದರು. ಅಲ್ಲಿ ೧೪ವರ್ಷ

---

1. ಜನ್ಹೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ
ಶ್ರೀವರ್ಧದೇವ ಸಂಧತ್ತೇ ಜಿಹ್ವಾಗ್ರೇಣ ಸರಸ್ವತೀಂ

2. ದಿಗಂಬರ ಜೈನರಿಗೂ ಶ್ವೇತಾಂಬರ ಜೈನರಿಗೂ ಮಹಾವೀರರ ಕಾಲದ ಬಗ್ಗೆ ೬೦ ವರುಷಗಳ ಅಂತರವಿದೆ. ಮಹಾವೀರರು ಕ್ರಿ.ಶ ೫೯೯ರಲ್ಲಿ ಜನ್ಮವೆತ್ತಿದ್ದರೆಂದು ಶ್ವೇತಾಂಬರರು ನಂಬುವರು. ಇದರಂತೆಯೆ ಎಲ್ಲ ವರ್ಷಗಳನ್ನು ಸರಿಪಡಿಸಿಕೊಳ್ಳಬೇಕು.

ತಪಸ್ಸು ಮಾಡಿ ಜೈನಧರ್ಮದ ತತ್ತ್ವಗಳನ್ನು ಕಂಡುಕೊಂಡು ಜಗತ್ತಿಗೆ ಬೋಧಿಸಹತ್ತಿದರು. ಮೂವತ್ತು ವರ್ಷಗಳವರೆಗೆ ಸುತ್ತಲೂ ಸಂಚರಿಸಿ ಕ್ರಿ.ಶ. ಪೂರ್ವ ೫೮೭ರಲ್ಲಿ[1] ಬಿಹಾರ ದೇಶದ ಪಾವಾಪುರಿಯಲ್ಲಿ ನಿರ್ವಾಣವನ್ನು ಪಡೆದರು. ಈಗಲೂ ಪಾವಾಪುರಿಯಲ್ಲಿ ದೀಪಾವಳಿಯಿಂದ ಚೈತ್ರದವರೆಗೆ ಯಾತ್ರೆಯಾಗುವುದು.

ಭಗವಾನ್ ಬುದ್ಧನಿಗೆ ಜಿನನೆಂದು ಹೆಸರಿದ್ದುದರಿಂದ ಜೈನಧರ್ಮವೂ ಬೌದ್ಧಧರ್ಮವೂ ಒಂದೇ ಎಂದು ಪಾಶ್ಚಾತ್ಯ ಪಂಡಿತರಲ್ಲಿ ಬಹುಕಾಲದವರೆಗೆ ಗ್ರಹಿಕೆಯಾಗಿತ್ತು. ಈ ಕಲ್ಪನೆಯನ್ನು ಪ್ರೊ। ಯಕೋಬಿ ಮೊದಲಾದವರು ದೂರಮಾಡಿರುವರು. ಜೈನಧರ್ಮವು ಬೌದ್ಧಧರ್ಮಕ್ಕೂ ಮೊದಲಿನದು. ಶ್ರೀ ಮಹಾವೀರಸ್ವಾಮಿ ಬುದ್ಧನಿಗಿಂತ ಹಿರಿಯನೆಂದು ಈಗ ಗೊತ್ತಾಗಿದೆ. ಜೈನಧರ್ಮದ ಸ್ಥಾಪನೆ ಶ್ರೀ ಮಹಾವೀರರಿಂದ ಆಯಿತೆಂದು ಇತಿಹಾಸಜ್ಞರ ಮತ; ಆದರೆ ಜೈನರು ತಮ್ಮ ಮತ ಅನಾದಿಯಾಗಿರುವುದೆಂದೂ ಅವಸರ್ಪಿಣಿಯ ದುಷ್ಷಮಕಾಲದಲ್ಲಿ ೨೪ ತಿರ್ಥಂಕರರು ಉದ್ಭವಿಸಿ, ಪರಿಪೂರ್ಣಜ್ಞಾನವನ್ನು ಪಡೆದು ಜೈನಧರ್ಮವನ್ನು ಬೋಧಿಸಿ ಮುಕ್ತಿಯನ್ನು ಪಡೆಯುವರೆಂದೂ ಅಂತಹವರಲ್ಲಿ ಮಹಾವೀರರು ಕಡೆಯವರೆಂದೂ, ಮೊದಲನೆಯವರು ಋಷಭ ಅಥವಾ ಆದಿನಾಥನೆಂದೂ ಹೇಳುವರು[2]. ಇತಿಹಾಸದಿಂದ ಆದಿನಾಥರ ಕಾಲವನ್ನು ನಿರ್ಣಯಿಸಲು ಸಾಧ್ಯವಿಲ್ಲ. ಇವರು ಅತಿ ಪ್ರಾಚೀನರು. ಇತಿಹಾಸಜ್ಞರು ತೀರ್ಥಂಕರರಲ್ಲಿ ಹಲವರು ಐತಿಹಾಸಿಕ ವ್ಯಕ್ತಿಗಳಿರುವರೆಂದು ಒಪ್ಪಿಕೊಳ್ಳುವರು. ೨೨ನೆಯ ತೀರ್ಥಂಕರರಾದ ನೇಮಿನಾಥರು ಯಾದವ ವಂಶದಲ್ಲಿ ಜನಿಸಿ ಶ್ರೀಕೃಷ್ಣನ ಸಮೀಪದ ಬಂಧುಗಳಾಗಿದ್ದರು. ಗಿರಿನಾರ ಪರ್ವತದಲ್ಲಿ ನಿರ್ವಾಣವನ್ನು ಪಡೆದರು. ಇವರು ಪಾರ್ಶ್ವನಾಥರಿಗಿಂತ ೫೦೦೦ ವರುಷ ಮೊದಲಿನವರೆಂದು ಜೈನರು ನಂಬುವರು. ಪಾರ್ಶ್ವನಾಥರ ನಿರ್ವಾಣವು ಮಹಾವೀರರ ನಿರ್ವಾಣಕ್ಕೂ ಮೊದಲು ೨೫೦ ವರ್ಷ ಆಯಿತೆಂದು ಜೈನಗ್ರಂಥದಲ್ಲಿ ಇಲ್ಲೇಖವಿದೆ.

---

1. ಪ್ರೊ॥ ಯಕೋಬಿಯವರು ಮಹಾವೀರರ ನಿರ್ವಾಣವು ಕ್ರಿ.ಶ.ಪೂ. ೪೭೭-೬ರಲ್ಲಿ ಸಂಭವಿಸಿತೆಂದು ಹೇಳುವರು.

2. ತೀರ್ಥಂಕರರ ಹೆಸರುಗಳು : ೧) ಆದಿನಾಥ ಅಥವಾ ಋಷಭದೇವ ೨) ಅಜಿತನಾಥ. ೩) ಸಂಭವನಾಥ. ೪) ಅಭಿನಂದನ. ೫) ಸುಮತಿನಾಥ. ೬) ಪದ್ಮಪ್ರಭು. ೭) ಸುಪಾರ್ಶ್ವನಾಥ. ೮) ಚಂದ್ರಪ್ರಭ. ೯) ಸುವಿಧಿನಾಥ. ೧೦) ಶೀತಳನಾಥ. ೧೧) ಶ್ರೇಯಾಂಸನಾಥ. ೧೨) ವಾಸೂಪೂಜ್ಯ. ೧೩) ವಿಮಳನಾಥ. ೧೪) ಅನಂತನಾಥ. ೧೫) ಧರ್ಮನಾಥ. ೧೬) ಶಾಂತಿನಾಥ. ೧೭) ಕುಂಥನಾಥ. ೧) ಅರನಾಥ. ೧೯) ಮಲ್ಲಿನಾಥ. ೨೦) ಮುನಿಸುವ್ರತ ೨೧) ನಮಿನಾಥ. ೨೨) ನೇಮಿನಾಥ ೨೩) ಪಾರ್ಶ್ವನಾಥ. ೨೪) ವರ್ಧಮಾನ.

ಜೈನಧರ್ಮದ ಪ್ರಕಾರ ಕಾಲವು ಅನಾದಿ ಮತ್ತು ಅನಂತವಿದೆ. ಅದರಲ್ಲಿ ಕಲ್ಪಗಳಿವೆ. ಪ್ರತಿಯೊಂದು ಕಲ್ಪಗಳಲ್ಲಿ ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ಎರಡು ಭಾಗಗಳಿವೆ. ಉತ್ಸರ್ಪಿಣಿಯಲ್ಲಿ ಧರ್ಮವೃದ್ಧಿಯಾಗುವುದು. ಅವಸರ್ಪಿಣಿಯಲ್ಲಿ ಅಧರ್ಮ ಬೆಳೆದು ಕಡೆಗೆ ಪ್ರಳಯವಾಗುವುದು. ಪ್ರತಿಯೊಂದು ಭಾಗದಲ್ಲಿ ಆರು ಅವಾಂತರಗಳ ಭಾಗಗಳನ್ನು ಮಾಡಿ ಅವಕ್ಕೆ ಸುಷಮಸುಷಮ- ಬಹಳ ಸುಖದ ಕಾಲ, ಸುಷಮ--ಸುಖದ ಕಾಲ, ಸುಷಮ ದುಷ್ಷಮ-ಸ್ವಲ್ಪ ದುಃಖಮಿಶ್ರಿತ ಸುಖದ ಕಾಲ, ದುಷ್ಷಮ ದುಷ್ಷಮ-ಬಹಳ ದುಃಖದ ಕಾಲ ಎಂದು ಕರೆಯುವರು. ಅವಸರ್ಪಿಣಿಯಲ್ಲಿ ಈ ಕ್ರಮಕ್ಕೆ ಪ್ರತಿಯಾಗಿ ಎಣಿಸಬೇಕು. ಉತ್ಸರ್ಪಿಣಿಯ ಮೊದಲಿನ ಮೂರು ಮತ್ತು ಅವಸರ್ಪಿಣಿಯ ಕಡೆಯ ಮೂರು ಕಾಲಗಳು ಸುಖದಾಯಕ ವಿರುವುದರಿಂದ ಇದಕ್ಕೆ ಭೋಗಭೂಮಿಯೆನ್ನುವರು. ಈ ಕಾಲಗಳಲ್ಲಿ ಜನರು ಕಲ್ಪವೃಕ್ಷಗಳಿಂದ ತಮ್ಮ ವಾಂಛಿತಗಳನ್ನು ಪೂರೈಸಿಕೊಳ್ಳುವರು. ಉಳಿದ ಆರು ಕಾಲಗಳಿಗೆ ಕರ್ಮಭೂಮಿಯೆನ್ನುವರು. ಇವುಗಳಲ್ಲಿ ಜನರು ತಮಗೆ ಬೇಕಾದ ವಸ್ತುಗಳನ್ನು ದೊರಕಿಸಿಕೊಳ್ಳಲು ಕೆಲಸ ಮಾಡಬೇಕಾಗುವುದು. ಅವಸರ್ಪಿಣಿಯ ಕಡೆಯಕಾಲದಲ್ಲಿ ತೀರ್ಥಂಕರರುದ್ಭವಿಸಿ ಜೈನಧರ್ಮವನ್ನು ಪ್ರಸಾರ ಮಾಡುವರು. ಈ ತೀರ್ಥಂಕರರಲ್ಲಿ ಕಡೆಯವರೇ ಶ್ರೀ ಮಹಾವೀರರು. ಇವರು ಐತಿಹಾಸಿಕ ಪುರುಷರು.

ಶ್ರೀಮಹಾವೀರರು ಉಪದೇಶಿಸಿದ ತತ್ತ್ವಗಳಲ್ಲಿ ದ್ವಾದಶಾಂಗ, ಅಂಗಬಾಹ್ಯ ಶ್ರುತಗಳಲ್ಲಿ ಸಮಗ್ರಹಿತವಾಗಿವೆ. ಅವು:

ದ್ವಾದಶಾಂಗಗಳು: ೧) ಆಚಾರಾಂಗ- ಇದರಲ್ಲಿ ಜೈನಸನ್ಯಾಸಿಗಳ ಆಚಾರಗಳನ್ನು ವಿವರಿಸಲಾಗಿದೆ. ೨) ಸೂತ್ರಕೃತಾಂಗ- ಇದರಲ್ಲಿ ಜೈನವಿಧಿ ಮೊದಲಾದವುಗಳನ್ನು ವಿವರಿಸಲಾಗಿದೆ, ೩) ಸ್ಥಾನಾಂಗ- ಜೀವ ಪುದ್ಗಲ ಮೊದಲಾದವುಗಳ ಬಗ್ಗೆ ಇದರಲ್ಲಿ ಚರ್ಚಿಸಲಾಗಿದೆ. ೪) ಸಮವಾಯಾಂಗ- ದ್ರವ್ಯಕ್ಷೇತ್ರ ಕಾಲ ಭಾವ ಮೊದಲಾದವುಗಳ ಬಗ್ಗೆ ಚರ್ಚಿಸುವಾಗ ಉದ್ಭವಿಸುವ ಸಾಮ್ಯತೆಗಳನ್ನು ಇದರಲ್ಲಿ ವಿವರಿಸಲಾಗಿದೆ. ೫) ವ್ಯಾಖ್ಯಾ ಪ್ರಜ್ಞಪ್ತಿ, ಭಗವತಿ ಅಥವಾ ವಿವಾದ ಪ್ರಜ್ಞಪ್ತಿ- ಇದರಲ್ಲಿ ತೀರ್ಥಂಕರರ ಶಿಷ್ಯರು ಕೇಳಿದ ೬೦,೦೦೦ ಪ್ರಶ್ನೆಗಳೂ ಉತ್ತರಗಳೂ ಇವೆ. ೬) ಜ್ಞಾತೃಧರ್ಮ ಕಥಾಂಗ ಅಥವಾ ಧರ್ಮಕಥಾಂಗ- ಇದು ಜೀವ ಮೊದಲಾದ ಒಂಭತ್ತು ಪದಾರ್ಥ ಗಳ ಸ್ವರೂಪವನ್ನೂ ಗುಣಧರರು ಕೇಳಿದ ಪ್ರಶ್ನೆಗಳನ್ನೂ ವಿವರಿಸುವುದು. ೭) ಉಪಾಸಕಾಧ್ಯಯನಾಂಗ- ಇದರಲ್ಲಿ ಗೃಹಸ್ಥನ ಕರ್ತವ್ಯ ಕರ್ಮಗಳನ್ನು ಹೇಳಿದೆ. ೮) ಅಂತಕೃದ್ದಶಾಂಗ- ಇದರಲ್ಲಿ ತೀರ್ಥಂಕರರ ಕಾಲದಲ್ಲಿದ್ದ ಹತ್ತು ಜೈನಮುನಿಗಳು ಮಾಡಿದ ಅತಿ ಕಠೋರ ವ್ರತದ ವಿವರವಿದೆ. ೯) ಅನುತ್ತರೋಪಪಾದಕದಶಾಂಗ ಇದರಲ್ಲಿ ತೀರ್ಥಂಕರರ ಕಾಲದ ಮುನಿಗಳು ಮಾಡಿದ ತಪಸ್ಸಿನ ಮತ್ತು ಅದರ

ಪರಿಣಾಮವಾಗಿ ಅವರು ಅನುತ್ತರ ವಿಮಾನಗಳೆಂಬ ಸ್ವರ್ಗದಲ್ಲಿ ಜನ್ಮವೆತ್ತಿದ ವಿವರವಿದೆ. ೧೦) ಪ್ರಶ್ನವ್ಯಾಕರಣಾಂಗ – ಇದರಲ್ಲಿ ಭೂತ ಭವಿಷ್ಯಕಾಲದ ಪ್ರಶ್ನೆಗಳಿಗೆ ಹೇಗೆ ಉತ್ತರ ಕೊಡಬೇಕೆಂಬುದೂ ಅಕ್ಷೇಪಣೀ, ಸಂವೇದನೀ, ನಿರ್ವೇದನೀಗಳನ್ನು ಹೇಳುವುದನ್ನೂ ತಿಳಿಸುವುದು. ೧೧) ವಿಪಾಕ-ಸೂತ್ರಾಂಗ – ಇದು ಕರ್ಮಬಂಧನ ಫಲ ಮೊದಲಾದವುಗಳನ್ನು ವಿವರಿಸುವುದು. ೧೨) ದೃಷ್ಟಿಪ್ರವಾದಾಂಗ- ಇದರಲ್ಲಿ ಐದು ಭಾಗಗಳಿವೆ.

೧) ಪರಿಕರ್ಮ –ಅ) ಚಂದ್ರಪ್ರಜ್ಞಪ್ತಿ ಪರಿಕರ್ಮ – ಚಂದ್ರನಿಗೆ ಸಂಬಂಧಿಸಿದ ಗತಿ, ತಿಂಗಳು, ದಿವಸ, ಚಂದ್ರಗ್ರಹಣ ಮೊದಲಾದವುಗಳ ಜ್ಞಾನಮಾಡಿ ಕೊಡುವುದು. ಆ) ಸೂರ್ಯಪ್ರಜ್ಞಪ್ತಿ ಪರಿಕರ್ಮ- ಸೂರ್ಯನ ಪ್ರಭಾವ, ಸೂರ್ಯಗ್ರಹಣ ಮೊದಲಾದವುಗಳ ಬಗೆ ವಿವರಿಸುವುದು. ಇ) ಜಂಜೂದ್ವೀಪಪ್ರಜ್ಞಪ್ತಿ ಪರಿಕರ್ಮ- ಜಂಜೂದ್ವೀಪ, ಮೇರುಪರ್ವತ, ನದಿ, ಸರೋವರ ಮೊದಲಾದವುಗಳ ವಿವರ. ಈ) ದ್ವೀಪ ಪ್ರಜ್ಞಪ್ತಿ ಪರಿಕರ್ಮ-ಎಲ್ಲ ಖಂಡಗಳ ಸಮುದ್ರಗಳ, ದೇವರುಗಳ ವಾಸಸ್ಥಾನ ಜೈನಚೈತ್ಯಾಲಯಗಳ ವರ್ಣನೆ. ಉ) ವ್ಯಾಖ್ಯಾಪ್ರಜ್ಞಪ್ತಿ ಪರಿಕರ್ಮ- ನವಪದಾರ್ಥಗಳ ವಿವರ.

೨) ಸೂತ್ರ- ಇವುಗಳಲ್ಲಿ ೩೬೩ ಧರ್ಮಗಳ ಸಿದ್ಧಾಂತಗಳನ್ನು ಖಂಡಿಸಲಾಗಿದೆ.

೩) ಪ್ರಥಮಾನುಯೋಗ- ಇದರಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ನಾರಾಯಣರು, ೯ ಪ್ರತಿನಾರಾಯಣರು, ೯ ಬಲಭದ್ರರು ಹೀಗೆ ೬೩ ಶಲಾಕಾಪುರುಷರ ವರ್ಣನೆಯಿದೆ.

೪) ಪೂರ್ವಗತಗಳ ಹದಿನಾಲಕ್ಕು. ಅವು ಯಾವುವೆಂದರೆ ೧) ಉತ್ಪಾದಪೂರ್ವ ೨) ಆಗ್ರಾಮಣೀಯ ಪೂರ್ವ ೩) ವೀರ್ಯಾನುವಾದ ಪೂರ್ವ ೪) ಅಸ್ತಿನಾಸ್ತಿ ಪ್ರವಾದ ಪೂರ್ವ ೫) ಜ್ಞಾನಪ್ರವಾದ ಪೂರ್ವ ೬) ಸತ್ಯಪ್ರವಾದ ೭) ಆತ್ಮಪ್ರವಾದ ಪೂರ್ವ ೮) ಕರ್ಮಪ್ರವಾದ ಪೂರ್ವ ೯) ಪ್ರತ್ಯಾಖ್ಯಾನ ಪೂರ್ವ ೧೦) ವಿದ್ಯಾನುವಾದ ಪೂರ್ವ ೧೧) ಕಲ್ಯಾಣವಾದ ಪೂರ್ವ ೧೨) ಪ್ರಾಣಾವಾದ ಪೂರ್ವ ೧೩) ಕ್ರಿಯಾವಿಶಾಲ ಪೂರ್ವ ೧೪) ತ್ರಿಲೋಕಬಿಂದುಸಾರ ಪೂರ್ವ.

೫) ಚೂಲಿಕೆಗಳು ಐದು. ಅವು ೧) ಜಲಗತ ಚೂಲಿಕಾ ೨) ಸ್ಥಲಗತ ಚೂಲಿಕಾ ೩) ಮಾಯಾಗತ ಚೂಲಿಕಾ ೪) ರೂಪಗತ ಚೂಲಿಕಾ ೫) ಆಕಾಶಗತ ಚೂಲಿಕಾ.

ಅಂಗಬಾಹ್ಯ ಶ್ರುತಗಳು ಹದಿನಾಲ್ಕು. ಅವು :

೧) ಸಾಮಯಿಕ ಪ್ರಕೀರ್ಣಕ – ನಾಮ, ಸ್ಥಾಪನಾ, ದ್ರವ್ಯ, ಕ್ಷೇತ್ರ, ಕಾಲ, ಭಾವಗಳೆಂಬ ಸಾಮಯಿಕಗಳನ್ನು ವಿವರಿಸುವುದು.

೨) ಸಂಸ್ತವ ಪ್ರಕೀರ್ಣಕ-ಇದರಲ್ಲಿ ತೀರ್ಥಂಕರರ ಚರಿತ್ರೆ, ಅವರ ೩೨ ಶಕ್ತಿಗಳು, ೮ ಪ್ರತಿಹಾರ್ಯ ಸಮವಸರಣಗಳ ವಿವರಣೆಯಿದೆ.

೩) ವಂದನಾಪ್ರಕೀರ್ಣಕ-ಇದರಲ್ಲಿ ಚೈತ್ಯಾಲಯ ಮೊದಲಾದ ಪವಿತ್ರ ಸ್ಥಾನಗಳ ವಿವರಣೆಯಿದೆ.

೪) ಪ್ರತಿಕ್ರಮಣ ಪ್ರಕೀರ್ಣಕ-ಇದರಲ್ಲಿ ದಿವಸ ರಾತ್ರಿ ಪಕ್ಷ ಮಾಸ ಮೊದಲಾದವುಗಳಿಗೆ ಸಂಬಂಧಿಸಿದ ದೋಷಗಳನ್ನು ದೂರಮಾಡುವ ವಿವರವಿದೆ.

೫) ವಿನಯಪ್ರಕೀರ್ಣಕ-ಐದು ಪ್ರಕಾರದ ವಿನಯಗಳ ವರ್ಣನೆಯಿದೆ.

೬) ಕೃತಿಕರ್ಮ ಪ್ರಕೀರ್ಣಕ-ಇದರಲ್ಲಿ ಜನರ ಪರಮೇಷ್ಠಿಗಳ ಪೂಜಾಪದ್ಧತಿಯನ್ನು ಹೇಳಿದೆ.

೭) ದಶವೈಕಾಲಿಕ ಪ್ರಕೀರ್ಣಕ-ಜೈನಮುನಿಗಳ ಆಹಾರ ಮತ್ತು ಆಚಾರಗಳ ವಿವರವಿದೆ.

೮) ಉತ್ತರಾಧ್ಯಯನ ಪ್ರಕೀರ್ಣಕ-ಜೈನಮುನಿಗಳು ಅನುಭವಿಸಬಹುದಾದ ನಾಲ್ಕು ಮತ್ತು ಇಪ್ಪತ್ತೆರಡು ಪ್ರಕಾರದ ತೊಂದರೆಗಳ ವರ್ಣನೆ.

೯) ಕಲ್ಪವ್ಯವಹಾರ ಪ್ರಕೀರ್ಣಕ

೧೦) ಕಲ್ಪಾಕಲ್ಪಾ ಪ್ರಕೀರ್ಣಕ

೧೧) ಮಹಾಕಲ್ಪ ಸಂಜ್ಞಕಪ್ರಕೀರ್ಣಕ-ಇವು ಮೂರು ಜೈನಮುನಿಗಳಿಗೆ ಸಂಬಂಧಿಸಿರುವುವು.

೧೨) ಪುಂಡರೀಕ ಪ್ರಕೀರ್ಣಕ-ದಾನ ಪೂಜೆ ತಪಸ್ಸು ಮೊದಲಾದವುಗಳ ವಿವರವಿದೆ.

೧೩) ಮಹಾಪುಂಡರೀಕ ಪ್ರಕೀರ್ಣಕ-ಜೀವನು ಇಂದ್ರ ಪ್ರತೀಂದ್ರ ಜನ್ಮವನ್ನು ಧರಿಸಲು ಬೇಕಾಗುವ ಕಾರಣ ತಪಸ್ಸು ಮೊದಲಾದವುಗಳ ವರ್ಣನೆಯಿದೆ.

೧೪) ನಿಷಿದಿತಾಪ್ರಕೀರ್ಣಕ-ಎಚ್ಚರತಪ್ಪಿ ಆದ ದೋಷಗಳನ್ನು ದೂರಮಾಡಲು ಮತ್ತು ಅವುಗಳಿಂದ ಶುದ್ಧಿಯಾಗಲು ಉಪಾಯಗಳಿವೆ.

ಶ್ರೀಮಹಾವೀರರ ನಿರ್ವಾಣದ ನಂತರ ಸುಮಾರು ೬೮೩ ವರ್ಷಗಳವರೆಗೆ ಮೇಲಿನ ಶಾಸ್ತ್ರಗಳು ಅಂದರೆ ೧೧ ಅಂಗಗಳು, ೧೪ ಪೂರ್ವಗಳು ನಡೆಯುತ್ತ ಬಂದವು. ಜೈನ ಪಟ್ಟಾವಲಿಗಳಲ್ಲಿ ಉಲ್ಲೇಖಿಸಿದ ವಿವರವು ಹೀಗಿದೆ: ಮಹಾವೀರರ ನಿರ್ವಾಣದ ನಂತರ ೬೨ ವರ್ಷಗಳವರೆಗೆ ಗೌತಮ, ಸುಧರ್ಮ, ಜಂಬೂ ಎಂಬ ಮೂವರು ಕೇವಲಿಗಳು ಧರ್ಮವನ್ನು ಬೋಧಿಸಿದರು. ಆಮೇಲೆ ಒಂದುನೂರು ವರ್ಷಗಳ ವರೆಗೆ ವಿಷ್ಣುನಂದಿ, ನಂದಿಮಿತ್ರ, ಅಪರಾಜಿತ, ಗೋವರ್ಧನ, ಭದ್ರಬಾಹುಗಳೆಂಬ ಐವರು ಶ್ರುತಕೇವಲಿಗಳು ಧರ್ಮವನ್ನು ಕಾಯ್ದುಕೊಂಡರು. ಆಮೇಲೆ ೫೨೧ ವರ್ಷಗಳವರೆಗೆ ದಶಪೂರ್ವಿಗಳು, ಏಕಾದಶ ಅಂಗಿಗಳು,

ಚತುರಂಗಿಗಳು, ಏಕ ಅಂಗಿಗಳು ಧರ್ಮವನ್ನು ರಕ್ಷಿಸಿದರು. ಅವರ ತರುವಾಯ ಮಹಾವೀರರಿಂದ ಬೋಧಿಸಲ್ಪಟ್ಟ ಅವರ ಮುಖ್ಯ ಗಣಧರರಿಗೆ ವಿವರಿಸಲ್ಪಟ್ಟ ಒಂದಾದರೂ ಅಂಗವನ್ನು ಬಲ್ಲವರು ಉಳಿಯಲಿಲ್ಲ.

ಜೈನರಿಗೆ ನಿರ್ಗ್ರಂಥಿಗಳೆಂದು ಹೆಸರು. ಅವರು ತಮ್ಮ ಧರ್ಮಶಾಸ್ತ್ರಗಳನ್ನು ಬರೆದಿಡುವ ಗೊಡವೆಗೆ ಹೋಗಲಿಲ್ಲ. ಮಹಾವೀರರ ಕಾಲದಲ್ಲಾಗಲಿ, ಅವರ ತರುವಾಯ ಬಹುಕಾಲದವರೆಗಾಗಲಿ ಗ್ರಂಥಗಳನ್ನು ಮುಖಪಾಠ ಮಾಡುವ ರೂಢಿಯಿತ್ತು. ಬರಬರುತ್ತ ಅಷ್ಟು ಸ್ಮರಣಶಕ್ತಿಯುಳ್ಳ ವ್ಯಕ್ತಿಗಳ ಅಭಾವದ ಮೂಲಕ ಜೈನಶಾಸ್ತ್ರವು ಅಚ್ಚಳಿಯದೆ ಉಳಿಯುವುದು ಕಠಿಣವಾಯಿತು. ಸುಮಾರು ಇದೇ ಕಾಲಕ್ಕೆ ಜೈನರಲ್ಲಿ ಶ್ವೇತಾಂಬರ ದಿಗಂಬರ ಎಂದು ಭೇದವುಂಟಾಯಿತು. ಆದುದರಿಂದ ಶಾಸ್ತ್ರಗಳನ್ನು ಬರೆದಿಡಲು ಪ್ರಾರಂಭಿಸಿದರು.

ಶಾಸ್ತ್ರಗಳನ್ನು ಕ್ರಿ.ಶ ಪೂರ್ವ ನಾಲ್ಕನೆಯ ಶತಮಾನದಲ್ಲಿ ಪಾಟಲೀಪುತ್ರದಲ್ಲಿ ಕೂಡಿದ ಸಭೆ ನಿಶ್ಚಯಿಸಿ, ಅವು ಉಳಿಯುವ ವ್ಯವಸ್ಥೆ ಮಾಡಿತೆಂದೂ, ಸುಮಾರು ೮೦೦ ವರ್ಷಗಳ ನಂತರ ಕ್ರಿ.ಶ. ೪೫೪ರಲ್ಲಿ ದೇವರ್ಧಿಗಣಿಯ ನೇತೃತ್ವದಲ್ಲಿ ವಲಭಿಯಲ್ಲಿ ಕೂಡಿದ ಸಭೆಯಲ್ಲಿ ೪೧ ಸೂತ್ರಗಳು ೩೦ ಪ್ರಕೀರ್ಣಕಗಳು ೧೨ ನಿರ್ಯುಕ್ತಿಗಳು ಒಂದು ಮಹಾಭಾಷ್ಯ ಹೀಗೆ ೮೪ ಗ್ರಂಥಗಳು ಪ್ರಮಾಣಗಳೆಂದು ನಿರ್ಣಯಿಸಲಾಯಿತೆಂದೂ, ೪೧ ಸೂತ್ರಗಳಲ್ಲಿ ೧೧ ಅಂಗಗಳು ೧೨ ಉಪಾಂಗಗಳು ೬ ಭೇದಗಳು ೪ ಮೂಲಗಳು ಭದ್ರಬಾಹುವಿನಿಂದ ರಚಿತವಾದ ಕಲ್ಪಸೂತ್ರವನ್ನೊಳಗೊಂಡ ಎಂಟು ಇತರ ಗ್ರಂಥಗಳು ಅಡಕವಾಗಿವೆಯೆಂದೂ ಶ್ವೇತಾಂಬರ ಜೈನರು ಒಪ್ಪುವರು.

ಶ್ರೀಮಹಾವೀರರು ಮತ್ತು ಕೇವಲಿಗಳು ಹೇಳಿದ ಏಳು ತತ್ವಗಳು ಒಂಭತ್ತು ಪದಾರ್ಥಗಳು, ಆರು ದ್ರವ್ಯಗಳು, ಐದು ಅಸ್ತಿಕಾಯಗಳು, ನರಕಗಳು, ಸ್ವರ್ಗಗಳು, ಸಿದ್ಧಕ್ಷೇತ್ರಗಳು, ಮಧ್ಯಲೋಕ, ಅದರಲ್ಲಿಯ ಸಮುದ್ರ, ದೇಶ, ಜೀವಿಗಳು ಮತ್ತು ಎಂಭತ್ತುನಾಲ್ಕು ಲಕ್ಷ ಯೋನಿಗಳು ಮೊದಲಾದ ವಿಷಯಗಳನ್ನೊಳಗೊಂಡ ಜೈನ ಧರ್ಮ ಗ್ರಂಥಗಳನ್ನು ವಿಕ್ರಮ ಸಂವತ್ ೧೧೪ (ಕ್ರಿ.ಶ, ೫೭)ರಲ್ಲಿ ಬರೆದಿಡಲಾಯಿತೆಂದು ದಿಗಂಬರ ಜೈನರು ನಂಬುವರು.

ಜೈನಧರ್ಮದ ತತ್ವಗಳು

ಜೀವನು ಅಥವಾ ಆತ್ಮನು ಉಂಟು. ಆದರೆ ಕರ್ಮಬದ್ಧನು[1]. ಈತನು ದೇಹದಿಂದ ಭಿನ್ನನು. ದೇಹಯುಕ್ತನಾಗಿ ಸರ್ವ ಕರ್ಮಗಳನ್ನು ಮಾಡುವನು[2]. ಜೀವರುಗಳು ಅನಂತ. ದೇಹಯುಕ್ತ ಆತ್ಮನಿಗೆ ದೇಹಿನ್ ಎನ್ನುವರು. ದೇಹಿ ಪರಿಪೂರ್ಣನಿರುವುದಿಲ್ಲ;

---

1. ಜೀವೋತ್ತಿ....ಕಮ್ಮ ಸಂಜುತ್ತೋ॥ ಪಂಚಾಸ್ತಿಕಾಯ ೨೨

2. ದೇಹಮಿಲಿದೋವಿ ಜೀವೋ ಸವ್ವ ಕುವ್ವದೇ ॥

ಅನುಪ್ರೇಕ್ಷಾ ಶ್ಲೋಕ, ೧೮೪.

ಆದರೆ ಪೂರ್ಣನಾಗಬಲ್ಲನು. ಕರ್ಮಪಲದಿಂದ ಶುದ್ಧನಾದ ದೇಹಿ ಸರ್ವಜ್ಞನೂ ಅನಂತ ಸುಖಿಯೂ ಆಗುವನು. ಇಂತಹ ದೇಹಿಗೆ ಅನಂತ ದರ್ಶನ, ಅನಂತಜ್ಞಾನ, ಅನಂತವೀರ್ಯ, ಅನಂತಸುಖ ಪ್ರಾಪ್ತವಾಗುವುದು. ಮುಕ್ತರಾದ ಜೀವರುಗಳಲ್ಲಿ ದೇಹಯುತ ದೇಹರಹಿತ ಎಂದು ಎರಡು ವಿಧ. ದೇಹರಹಿತ ಜೀವಿಗಳು ನಿರ್ವಾಣಾವಸ್ಥೆಯಲ್ಲಿ ಅನಂತಸುಖಿಗಳಾಗುವರು. ಇವರಿಗೆ ಸಿದ್ಧರೆನ್ನುವರು. ಇವರಲ್ಲಿ ತೀರ್ಥಂಕರಸಿದ್ಧ ಸಾಮಾನ್ಯಸಿದ್ಧರೆಂದು ಎರಡು ವಿಧ. ದೇಹವಿದ್ದಾಗ ಧರ್ಮವನ್ನು ಬೋಧಿಸಿದವರಿಗೆ ನಿರ್ವಾಣಾವಸ್ಥೆಯಲ್ಲಿ ತೀರ್ಥಂಕರಸಿದ್ಧರೆಂದೂ ಧರ್ಮವನ್ನು ಬೋಧಿಸದವರಿಗೆ ಸಾಮಾನ್ಯಸಿದ್ಧರೆಂದೂ ಹೆಸರು. ದೇಹಯುತ ಜೀವರುಗಳು ಸರ್ವಜ್ಞತ್ವವನ್ನು ಪಡೆದು ಅರ್ಹಂತರಾಗುವರು. ಇವರಲ್ಲದೆ ಸಾಧುಗಳು ಅಥವಾ ಮುನಿಗಳುಂಟು. ಅವರಲ್ಲಿ ಆಚಾರ್ಯರು ಉಪಾಧ್ಯಾಯರು ಸಾಧುಗಳು ಕ್ರಮವಾಗಿ ೩೨, ೨೫, ೨೮ ಗುಣಗಳನ್ನು ಪಡೆದಿರುವರು. ಅರ್ಹಂತರು ಸಿದ್ಧರು ಆಚಾರ್ಯರು ಉಪಾಧ್ಯಾಯರ ಸಾಧುಗಳು ಇವರಿಗೆ ಪಂಚಪರಮೇಷ್ಠಿಗಳೆಂದು ಹೆಸರು. ಜೈನಧರ್ಮದಲ್ಲಿ ಮುಕ್ತಿಯನ್ನು ಪಡೆಯುವುದು ಪೂರ್ಣವಾಗಿ ಮನುಷ್ಯನ ಸ್ವತಂತ್ರವಿದೆ. ದೇವರ ಅಥವಾ ದೇವರ ಪ್ರತಿನಿಧಿಯ ಅಗತ್ಯವಿಲ್ಲ.

ಜೀವರುಗಳು –ಜೀವರುಗಳಲ್ಲಿ ಸ್ಥಾವರ ಮತ್ತು ತ್ರಸ ಎಂದು ಎರಡು ವಿಧ. ಸ್ಥಾವರ ಜೀವರುಗಳ "ಪೃಥಿವ್ಯಪ್ತೇಜೋವಾಯು ವನಸ್ಪತಯಃ ಸ್ಥಾವರಾಃ[1] ಎಂದು ಐದು ಪ್ರಕಾರವಾಗಿರುವುವು. "ದ್ವೀಂದ್ರಿಯಾದಯಸ್ತ್ರಸಾಃ[2]" ಜೀವರುಗಳಿಗೆ ೧) ಜೀವ ೨) ಉಪಯೋಗಮಯ ೩) ಅಮೂರ್ತ ೪) ಕರ್ತಾ ೫) ಸ್ವದೇಹ ಪರಿಮಾಣ ೬) ಭೋಕ್ತಾ ೭) ಸಂಸಾರಸ್ಥಾ ೮) ಸಿದ್ಧ ೯) ಊರ್ಧ್ವಗತಿ ಎಂಬ ಒಂಭತ್ತು ಗುಣಗಳುಂಟು. ಅವುಗಳಲ್ಲಿ ಜೀವ-ಚೈತನ್ಯವೇ ಮುಖ್ಯವಾದುದು. ಕ್ರಿಮಿಕೀಟಕ ಮೊದಲುಮಾಡಿಕೊಂಡು ಪ್ರಾಣವುಳ್ಳ ಪ್ರತಿಯೊಂದು ಜಂತುವು ಜೀವವೆಂದು ಹೇಳಲಾಗುವುದು. ಇದಕ್ಕೆ ನೋಡಲು ತಿಳಿದುಕೊಳ್ಳಲು ಸುಖವನ್ನು ಪಡೆಯಲು ದುಃಖವನ್ನು ಪರಿಹರಿಸಲು ಶಕ್ತಿಯುಂಟು. ಜೀವ ಶರೀರ ಇವೆರಡರಲ್ಲಿ ಜೀವನು ಹೆಚ್ಚಿನವನು; ಶರೀರವು ಜೀವನಿಗೆ ಅಧೀನವಾಗಿರುವುದು. ಜೀವನಲ್ಲಿ ಅಪರಿಮಿತ ಶಕ್ತಿಯಿದೆ. ಅದರ ಜ್ಞಾನ, ದರ್ಶನವ್ಯಾಪ್ತಿ ಸರ್ವತ್ರವಿದೆ. ಸುಖ ಕಾಲಾತೀತವಿದೆ; ಇದಕ್ಕೆ ಸರ್ವಜ್ಞತ್ವವನ್ನು ಪಡೆಯುವ ಸಾಮರ್ಥ್ಯವಿರುವುದರಿಂದ ಇದರ ಶಕ್ತಿ ದೈವಿಕವಿದೆ. ಜೀವನು ನಿತ್ಯ. ಪುದ್ಗಲ ಜೀವನನ್ನು ವ್ಯಾಪಿಸಿ ಜೀವದ ಸ್ವರೂಪವನ್ನು ಮುಚ್ಚಬಹುದು. ಆದರೆ ಅದನ್ನು ನಾಶಮಾಡಲಾರದು. ಜೀವನಿಗೆ ಕಲ್ಪಾಂತರದವರೆಗೂ ಜನನ ಮರಣಗಳು ಬರಬಹುದು. ಜೀವನು ರೂಪರಸಗಂಧಸ್ಪರ್ಶರಹಿತನು; ಶಕ್ತಿ ಜ್ಞಾನಮಯ

---

1. ತತ್ವಾರ್ಥ ಸೂತ್ರ. ೨, ೧೩

2. ಅದೆ. ೨ ೧೪.

ನಾಗಿದ್ದು ಶಾಶ್ವತ ಸುಖಿಯಾಗಿರುವನು. ಪುದ್ಗಲ ಸಂಯೋಗದಿಂದ ತನ್ನ ಸ್ವರೂಪವನ್ನು ಮರೆತು ಸಂಸಾರದಲ್ಲಿ ತೊಳಲುವನು. ಮಲದಿಂದ ಬಿಡುಗಡೆಯಾದ ಕೂಡಲೇ ನಿಜಸ್ವರೂಪ ಪ್ರಾಪ್ತವಾಗುವುದು.

ಷಡ್ದ್ರವ್ಯಗಳು :– ೧) ಜೀವ ೨) ಪುದ್ಗಲ ೩) ಧರ್ಮ ೪) ಅಧರ್ಮ ೫) ಆಕಾಶ ೬) ಕಾಲ.

ಜೀವದ್ರವ್ಯವು ಚೈತನ್ಯಯುಕ್ತವಾದುದು. ಉಳಿದ ದ್ರವ್ಯಗಳು ಚೈತನ್ಯರಹಿತವಾದುವು. ಪುದ್ಗಲ ದ್ರವ್ಯಕ್ಕೆ ರೂಪರಸಗಂಧದರ್ಶನಸ್ಪರ್ಶಗಳುಂಟು. ಪುದ್ಗಲಗಳು ಅಸಂಖ್ಯವಾಗಿರುವುವು. ಧರ್ಮದ್ರವ್ಯಕ್ಕೆ ರುಚಿ, ಸ್ಪರ್ಶನ, ಶಬ್ದ, ವರ್ಣಗಳಿಲ್ಲ. ಇದು ಲೋಕವಿರುವವರೆಗಿರುವುದು. ಇದು ಚಲನವಲನವನ್ನುಂಟುಮಾಡುವ ತತ್ತ್ವ. (Principle of motion). ನೀರು ಮೀನಿನ ಚಲನಕ್ಕೆ ಹೇಗೆ ಉಪಯುಕ್ತವಾದುದೋ ಹಾಗೆ ಜೀವನ ಚಲನಕ್ಕೆ ಧರ್ಮವು ಉಪಯುಕ್ತವಾದುದು. ನೀರು ಸ್ವತಃ ಉದಾಸೀನವಾಗಿದೆ. ಮೀನಿಗೆ ಅತ್ತಿತ್ತ ಹೋಗಲು ಆಪೇಕ್ಷೆಯಾದಾಗಲೇ ನೀರು ಅದರ ಚಲನಕ್ಕೆ ಉಪಯೋಗ ಬೀಳುವುದು. ಮೀನಿನ ಇಚ್ಛೆಯ ವಿರುದ್ಧ ನೀರು ಅದನ್ನು ಚಲಿಸದು. ಅದರಂತೆಯೇ ಜೀವನು ಚಲಿಸಲು ಇಚ್ಛಿಸಿದಾಗ ಧರ್ಮವು ಉಪಯೋಗವಾಗುವುದು. ಜೀವನ ಇಚ್ಛೆಯ ವಿರುದ್ಧ ಧರ್ಮವು ಜೀವನಲ್ಲಿ ಚಲನವನ್ನುಂಟು ಮಾಡಲು ಶಕ್ತವಿಲ್ಲ. ಏಕೆಂದರೆ ಇದು ಉದಾಸೀನ. ಪ್ರೇರಕವಲ್ಲ. ಧರ್ಮಲೋಕದ ಆಚೆಗಿಲ್ಲ. ಇದು ಒಂದೇ ಆಗಿದೆ. ಜೀವನು ಲೋಕವನ್ನು ದಾಟದ ಮೇಲೆ ಮುಕ್ತರಾದ ಜೀವರುಗಳು ವಾಸಿಸುವ ಸಿದ್ಧಶಿಲಾಸ್ಥಾನಕ್ಕೆ ಮುಟ್ಟಿ ಅಲ್ಲಿ ವಿಶ್ರಾಂತಿಯನ್ನು ಹೊಂದುವನು. ಅಧರ್ಮದ್ರವ್ಯವು ಚಲನವಲನವನ್ನು ತಡೆಯುವ ತತ್ವ (Principle of rest). ಇದು ಲೋಕದ ಅಂತ್ಯದವರೆಗೆ ಇರುವುದು. ಇದು ಉದಾಸೀನವಾಗಿದ್ದು ವಸ್ತುಗಳನ್ನು ಇದ್ದಲ್ಲಿಯೇ ಇರುವಂತೆ ಮಾಡುವುದು. ಎತ್ತರದ ಮೇಲಿಂದ ಒಂದು ವಸ್ತುವನ್ನು ಬಿಟ್ಟರೆ ಅದು ಭೂಮಿಯನ್ನು ಮುಟ್ಟಿದ ಮೇಲೆ ತಡೆದು ನಿಲ್ಲುವಂತೆ ಧರ್ಮವು ಜೀವದ ಊರ್ಧ್ವಗತಿಯನ್ನು ತಡೆಯುವುದು. ಇದು ಒಂದೇ ಇದ್ದು ಪುದ್ಗಲರಹಿತವಿದೆ. ಆಕಾಶದ್ರವ್ಯವು ಜೀವ ಮೊದಲಾದ ದ್ರವ್ಯಗಳಿಗೆ ಅವಕಾಶವನ್ನುಂಟು ಮಾಡಿಕೊಡುವುದು. ಇದು ಒಂದೇ ಇದೆ. ಇದು ಲೋಕಾಲೋಕಗಳಲ್ಲಿರುವುದು. ಉಳಿದ ದ್ರವ್ಯಗಳು ಲೋಕದಲ್ಲಿಯಷ್ಟೆ ಇರುವುವು. ಕಾಳದ್ರವ್ಯವು ಜೀವನನ್ನು ಉಳಿದ ದ್ರವ್ಯಗಳನ್ನೂ ಮಾರ್ಪಾಟು ಮಾಡಲು ಕಾರಣವಾಗಿದೆ ಇದು ಪುದ್ಗಲ ರಹಿತವಾಗಿದೆ. ಇದಕ್ಕೆ ರುಚಿ, ಗಂಧ, ವರ್ಣ, ಸ್ಪರ್ಶಗಳಿಲ್ಲ. ಇದು ಅಸಂಖ್ಯವಾಗಿದೆ.

ಪಂಚಾಸ್ತಿಕಾಯ :– ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಇವುಗಳಿಗೆ ಪಂಚಾಸ್ತಿಕಾಯಗಳೆನ್ನುವರು. ಪ್ರದೇಶಯುಕ್ತ ವಸ್ತುವಿಗೆ ಕಾಯುವೆನ್ನುವರು. ಆ ಸೂಕ್ಷ್ಮವಾದ ಭಾಗಕ್ಕೆ (Infinitesimal unit of space) ಪ್ರದೇಶವೆನ್ನುವರು. ಯಾವುದರಲ್ಲಿ ಪ್ರದೇಶವುಂಟೊ ಅದಕ್ಕೆ ಅಸ್ತಿಕಾಯವೆನ್ನುವರು. ಕಾಲದಲ್ಲಿ ಒಂದೇ

ಪ್ರದೇಶವಿದೆಯಾದುದರಿಂದ ಅದು ಅಸ್ತಿಕಾಯವಲ್ಲ. ಉಳಿದವುಗಳಲ್ಲಿ ಪ್ರದೇಶಗಳುಂಟು. ಅಸ್ತಿಕಾಯಗಳಿಗೆ ನಿರ್ಮಾಣವಿಲ್ಲ. (Uncreated).ಇವುಗಳಲ್ಲಿ ಸತ್ತಾ ಲಕ್ಷಣವಿದ್ದು ತಮ್ಮ ಮೂಲಸ್ವರೂಪ (Substratum) ವನ್ನು ಬದಲಿಸದೆ ಪರಿಸ್ಥಿತಿಯನ್ನು ಬದಲಾಯಿಸುವ ಶಕ್ತಿ ಇದೆ.

ಜೀವವು ಸಿದ್ಧ (ಮುಕ್ತ) ಮತ್ತು ಬದ್ಧವೆಂದು ಎರಡು ಪ್ರಕಾರವಾಗಿರುವುದು. ಸಿದ್ಧಜೀವವು ಕಾರ್ಮಿಕ ಮಲದಿಂದೊಡಗೂಡಿದ ತನ್ನ ನಿಜಸ್ವರೂಪವನ್ನು ಮರೆತು ದೇಹವೇ ತಾನೆಂಬ ಭಾವನೆಯಿಂದಿರುವುದು. ಇಂತಹ ಜೀವವು ಭೂತವರ್ತಮಾನ ಭವಿಷ್ಯತ್ಕಾಲಗಳಲ್ಲಿ ಇರುವುದು. ಇದಕ್ಕೆ ಜ್ಞಾನವೂ ಜ್ಞಾನಮಾಡಿಕೊಳ್ಳುವ ಶಕ್ತಿಯೂ ಉಂಟು. ಇದು ಪುದ್ಗಲ ರಹಿತವಾಗಿದ್ದು, (Immaterial) ಸ್ಪರ್ಶ, ರುಚಿ, ಗಂಧ, ರೂಪಗಳಿಲ್ಲದಿರುವುದು. ತಾನು ಮಾಡುವ ಕೃತಿಗಳಿಗೆಲ್ಲ ತಾನೇ ಹೊಣೆಗಾರನಾಗಿರುವುದು. ತಾನು ವಾಸಿಸುವ ಶರೀರದಲ್ಲಿ ತುಂಬಾ ವ್ಯಾಪಿಸಿರುವುದು. ಇರುವೆಯ ಶರೀರದಲ್ಲಿ ಇರುವೆಯಷ್ಟು ಆನೆಯ ಶರೀರದಲ್ಲಿ ಆನೆಯಷ್ಟು ಆಗುವುದು. ತನ್ನ ಕರ್ಮಫಲಗಳನ್ನು ತಾನೇ ಭೋಗಿಸುವುದು. ಸಂಸಾರದಲ್ಲಿ ಸಂಚರಿಸುವುದು. ಪರಿಪೂರ್ಣಾವಸ್ಥೆಯಲ್ಲಿ ಸಿದ್ಧನಾಗಿರುವುದು. ಮೇಲಕ್ಕೆ ಹೋಗಬಲ್ಲದು.

ಪುದ್ಗಲ ಜೀವಕ್ಕೆ ಅಂಟಿಕೊಂಡಿರುವುದು. ಒಂದೇ ಪ್ರದೇಶವುಳ್ಳ ಪುದ್ಗಲಕ್ಕೆ ಅಣು ಎನ್ನುವರು. ಅಣುಗಳು ಒಂದಕ್ಕೊಂದು ಕೂಡಿಕೊಂಡು ಸ್ಕಂದವನ್ನುಂಟು ಮಾಡುವುದು. (Molecule) ಅತಿ ಸೂಕ್ಷ್ಮವಾದ ಪುದ್ಗಲ ಕರ್ಮದಿಂದಾಗುವುದು. ಕಾರ್ಮಿಕ ಮಲದ ಪ್ರವೃತ್ತಿ ಜೀವರುಗಳಿಗೆ ಅಂಟಿಕೊಳ್ಳುವದಿರುತ್ತದೆ. ಅಂಟಿಕೊಂಡ ಮಲವನ್ನು ತೆಗೆದುಹಾಕಲು ಅತಿಶಯ ಯತ್ನ ಮಾಡಬೇಕಾಗುವುದು. ಪ್ರಪಂಚದ ಇರುವಿಕೆ ಇದಕ್ಕಾಗಿಯೇ. ಕರ್ಮದ ಅಣುಗಳ ಗುಂಪುಗಳಿಗೆ ಕರ್ಮವರ್ಗಣಾ ಎಂದೆನ್ನುತ್ತಾರೆ. ಪುದ್ಗಲವು ಅತಿಸ್ಥೂಲ, ಸ್ಥೂಲ, ಸ್ಥೂಲಸೂಕ್ಷ್ಮ, ಸೂಕ್ಷ್ಮಸ್ಥೂಲ. ಸೂಕ್ಷ್ಮ, ಅತಿಸೂಕ್ಷ್ಮ ಎಂದು ಆರು ಪ್ರಕಾರವಾಗಿರುವುದು. ಕಲ್ಲು, ಪರ್ವತ, ಕಟ್ಟಿಗೆ ಮೊದಲಾದವು ಅತಿಸ್ಥೂಲ (Gross). ಇವುಗಳನ್ನು ಒಡೆದರೆ ಬೇರೆ ಪದಾರ್ಥದ ಸಹಾಯವಿಲ್ಲದೆ ಕೂಡಲಾರವು. ನೀರು, ಎಣ್ಣೆ ಮೊದಲಾದುವು ಸ್ಥೂಲ (Liquid) ಇದನ್ನು ಬೇರ್ಪಡಿಸಿದರೆ ಬೇರೊಂದು ಪದಾರ್ಥದ ಸಹಾಯವಿಲ್ಲದೆ ಕೂಡುವುವು. ಛಾಯಾ ಸೂರ್ಯಪ್ರಕಾಶ ಮೊದಲಾದವು ಸ್ಥೂಲಸೂಕ್ಷ್ಮ. ಇವು ಕಣ್ಣಿಗೆ ಕಾಣುವುವು, ಆದರೆ ಹಿಡಿಯಲು ಬರುವುದಿಲ್ಲ. ಗಂಧ ಶಬ್ದ ರುಚಿ ಮೊದಲಾದವು ಸೂಕ್ಷ್ಮ ಸ್ಥೂಲ. ಇವು ಇಂದ್ರಿಯ ಗ್ರಾಹ್ಯವಾದವು. ಕಾರ್ಮಿಕ ಶರೀರವು ಸೂಕ್ಷ್ಮ. ಇದು ಇಂದ್ರಿಯ ಗ್ರಾಹ್ಯವಲ್ಲ. ಕಾರ್ಮಿಕ ಪರಮಾಣುಗಳು ಅತಿಸೂಕ್ಷ್ಮ.

ಆಕಾಶವು ವಿಶ್ವದಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಸ್ಥಾನವನ್ನು ಕಲ್ಪಿಸಿಕೊಡುವುದು. ಇದರಲ್ಲಿ ಲೋಕ ಅಲೋಕವೆಂದು ಎರಡು ವಿಧ. ಲೋಕದಲ್ಲಿ ಷಡ್ದ್ರವ್ಯಗಳಿರುವುವು. ಲೋಕದ ಸ್ವಲ್ಪಭಾಗದಲ್ಲಿಯೇ ಜೀವಿಗಳಿರುವರು. ಮನುಷ್ಯರು ಮಧ್ಯಲೋಕದಲ್ಲಿರುವರು.

ಅಲೋಕದಲ್ಲಿ ಅನಂತ ಆಕಾಶವಿರುವುದು. ಲೋಕಾಕಾಶದ ತುದಿಯಲ್ಲಿ ಮುಕ್ತ ಜೀವರುಗಳು ವಾಸಿಸುವರು.

ಧರ್ಮಾಧರ್ಮಗಳು ಜೈನಪಾರಿಭಾಷಿಕ ಶಬ್ದಗಳು. ಇವನ್ನು ಸಾಮಾನ್ಯವಾದ ಅರ್ಥದಲ್ಲಿ ಉಪಯೋಗಿಸಲಾಗದು. "ಧರ್ಮಾಸ್ತಿಕಾಯವು ಅರಸ, ಅವರ್ಣ, ಅಗಂಧ, ಅಶಬ್ಧ, ಅಸ್ಪರ್ಶ, ಲೋಕವ್ಯಾಪ್ತ, ವಿಭಾಗರಹಿತ, ಸರ್ವತ್ರವ್ಯಾಪ್ತ, ಅಸಂಖ್ಯ ಪ್ರದೇಶಯುಕ್ತ, ನಿತ್ಯವಾಗಿರುವುದು. ಚಲನವಲನವುಳ್ಳ ವಸ್ತುಗಳ ಗತಿಗೆ ಆಸ್ಪದವನ್ನೊದಗಿಸಿ ಕೊಡುವುದು. ಇದು ಯಾವುದರ ಉತ್ಪತ್ತಿಗೂ ಕಾರಣವಲ್ಲ. ಸಾಮಾನ್ಯವಾಗಿ ನೀರು ಮೀನಿನ ಗತಿಗೆ ಆಸ್ಪದವಾದಂತೆ ಜೀವಾಜೀವಗಳಿಗೆ ಧರ್ಮವು ಆಸ್ಪದವಾಗಿದೆ." "ಅಧರ್ಮಾಸ್ತಿಕಾಯವು ಧರ್ಮಾಸ್ತಿಕಾಯಕದಂತೆಯೇ ಇದೆ. ಇದರಲ್ಲಿ ವಸ್ತುವನ್ನು ತಡೆಯುವ ಗುಣವಿದೆ." (ಪಂಚಾಸ್ತಿ ಕಾಯ ೮೩-೮೬)

ಪಂಚಾಸ್ತಿ ಕಾಯಗಳಲ್ಲಿ ಪುದ್ಗಲಕ್ಕೆ ರೂಪರಸಗಂಧಸ್ಪರ್ಶವುಂಟು. ಉಳಿದವುಗಳಿಗೆ ಇಲ್ಲ. ಎಲ್ಲ ಅಸ್ತಿಕಾಯಗಳು ಅನಾದಿಯಿಂದ ಬಂದವು. ಅವು ನಾಶವಾಗಲಾರವು. ಅವು ಯಾರಿಂದಲೂ ನಿರ್ಮಿಸಲ್ಪಟ್ಟಿಲ್ಲ. ಅವುಗಳಲ್ಲಿ ಪರಸ್ಪರ ಸಂಬಂಧವಿಲ್ಲ. ಪ್ರತಿಯೊಂದು ಸ್ವತಂತ್ರವಾಗಿ ತಮ್ಮ ಕಾರ್ಯಗಳನ್ನು ಮಾಡಿ ಲೋಕದ ಅಸ್ತಿತ್ವಕ್ಕೆ ಕಾರಣಗಳಾಗಿರುವುವು. ಪುದ್ಗಲವು ಜೀವನ ಸಂಗಡ ಕಲಹವನ್ನು ಪ್ರಾರಂಬಿಸಿಸುವುದು. ಕಾಲವು ಸಮಯವನ್ನೂ ಅವಕಾಶವು ಆಕಾಶವನ್ನೂ ಉಂಟುಮಾಡಿಕೊಡುವವು. ಧರ್ಮ ಈ ಕಲಹಕ್ಕೆ ಗತಿಯನ್ನೊದಗಿಸಿಕೊಡುವುದು. ಅಧರ್ಮ ವಿಶ್ರಾಂತಿ ಬೇಕಾದಾಗ ಅದನ್ನುಂಟು ಮಾಡಿಕೊಡುವುದು. ಈ ಕಲಹ ವಿಶ್ವದಲ್ಲಿ ನಡೆಯಲೇಬೇಕು. ಅದನ್ನು ತಡೆಯುವುದು ಅಥವಾ ಬದಲಿಸುವುದು ಶಕ್ಯವಿಲ್ಲ. ಜೀವನು ಈ ಕಲಹದಲ್ಲಿ ತನ್ನ ಕರ್ಮಮಲವನ್ನು ತೆಗೆದೊಗೆಯಲು ಶಕ್ತನಾದ ಕೂಡಲೇ ಪ್ರಪಂಚವು ಅಡಗುವುದು. ಮಲದಿಂದ ಮುಕ್ತನಾದ ಜೀವನು ಸರ್ವಜ್ಞತ್ವ ಮೊದಲಾದ ಗುಣಗಳನ್ನು ಪಡೆಯುವನು.

ಕರ್ಮ :- ಚೈತನ್ಯಾಮಯನಾದ ಜೀವನಿಗೆ ಚೈತನ್ಯರಹಿತ ಪುದ್ಗಲಗಳ ಸಂಯೋಗವು ಬಂಧನವನ್ನುಂಟುಮಾಡುವುದು. ಈ ಬಂಧನ ಕರ್ಮದಿಂದಾಗುವುದು. ಜೀವನು ಮಾಡುವ ಪ್ರತಿಯೊಂದು ಕೃತಿಯಿಂದ ಸೂಕ್ಷ್ಮವಾದ ಕಾರ್ಮಿಕ ಮಲವು ಉಂಟಾಗಿ ಅದು ಜೀವನಿಗೆ ಅಂಟಿಕೊಳ್ಳುವುದರಿಂದ ಜೀವನು ತನ್ನ ಸ್ವಭಾವಸಿದ್ಧವಾದ ಅನಂತಜ್ಞಾನ ಮೊದಲಾದವುಗಳಿಂದ ದೂರವಾಗುವುದು. ಜೀವನಿಗೆ ಈ ದೆಶೆಯನ್ನುಂಟುಮಾಡುವ ಕರ್ಮಕ್ಕೆ ಘಾತಿಕರ್ಮವೆನ್ನುವರು. ಇದು ನಾಲ್ಕು ವಿಧ. ೧) ಜ್ಞಾನಾವರಣೀಯ- ಜ್ಞಾನವು ಮತಿ, ಶ್ರುತ, ಅವಧಿ, ಮನಃಪರ್ಯಾಯ, ಕೇವಲವೆಂದು ಐದು ಪ್ರಕಾರವಾಗಿರುವುದು. ಈ ಐದನ್ನು ಆವರಿಸುವ ಕರ್ಮಕ್ಕೆ ಜ್ಞಾನಾವರಣೀಯವೆಂದು ಹೆಸರು. ೨) ದರ್ಶನಾವರಣೀಯ- ದರ್ಶನವನ್ನು ಮುಚ್ಚುವ ಕರ್ಮ. ಒಂಬತ್ತು ವಿಧ. ೧) ಚಕ್ಷುದರ್ಶನಾವರಣೀಯ- ಕಣ್ಣಿಗೆ ಕಾಣದಂತೆ

ಮಾಡುವ ಕರ್ಮ. ೨) ಅಚಕ್ಷುದರ್ಶನಾವರಣೀಯ- ಇತರ ಇಂದ್ರಿಯ ಜ್ಞಾನವಾಗದಂತೆ ಮಾಡುವ ಕರ್ಮ. ೩) ಅವಧಿದರ್ಶನಾವರಣೀಯ- ಭೂತಕಾಲದ ಇಂದ್ರಿಯ ಜ್ಞಾನವನ್ನು ಮುಚ್ಚುವ ಕರ್ಮ. ೪) ಕೇವಲ ದರ್ಶನಾವರಣೀಯ- ಸಂಪೂರ್ಣವಾಗಿ ಇಂದ್ರಿಯಜ್ಞಾನವಾಗದಂತೆ ಮಾಡುವ ಕರ್ಮ. ೬) ನಿದ್ರಾನಿದ್ರಾವೇದನೀಯ - ಗಾಢನಿದ್ರೆಯಲ್ಲಿ ಇಂದ್ರಿಯಜ್ಞಾನವಿಲ್ಲದಂತೆ ಮಾಡುವ ಕರ್ಮ. ೭) ಪ್ರಚಲವೇದನೀಯ- ಅರೆನಿದ್ರೆ ಅಥವಾ ವಿಶ್ರಾಂತಿಯಿಲ್ಲದ ನಿದ್ರೆಯಲ್ಲಿ ಇಂದ್ರಿಯ ಜ್ಞಾನವನ್ನು ತಡೆಯುವ ಕರ್ಮ. ೮) ಪ್ರಚಲಪ್ರಚಲಾವೇದನೀಯ- ಸ್ವಲ್ಪ ವಿಶ್ರಾಂತಿ ಕೂಡ ಇಲ್ಲದ ನಿದ್ರೆಯಲ್ಲಿ ಇಂದ್ರಿಯಜ್ಞಾನವನ್ನು ತಡೆಯುವ ಕರ್ಮ. ೯) ಸ್ತ್ಯಾನಗೃದ್ಧಿವೇದನೀಯ- ಎಚ್ಚರತಪ್ಪಿ ಇಂದ್ರಿಯಜ್ಞಾನವಿಲ್ಲದೆ ಮಾಡುವ ಕರ್ಮ ೩) ಅಂತರಾಯ. ಈ ಕರ್ಮ ಮಾಡುವುದನ್ನು ಆಗದಂತೆ ಮಾಡುವುದು. ಇದರಲ್ಲಿ ಐದು ಪ್ರಕಾರ : [೧] ದಾನಾಂತರಾಯ [೨] ಲಾಭಾಂತರಾಯ [೩] ಭೋಗಾಂತರಾಯ ೪] ಉಕಭೋಗಾಂತರಾಯ [೫] ವೀರ್ಯಾಂತರಾಯ ೬) ಮೋಹನೀಯ- ಇದರಲ್ಲಿ ದರ್ಶನಮೋಹನೀಯ ಚಾರಿತ್ರಮೋಹನೀಯವೆಂದು ದ್ವಿವಿಧ. ದರ್ಶನ ಮೋಹನೀಯದಲ್ಲಿ ಸಮ್ಯಕ್ತ್ವ, ಮಿಥ್ಯಾತ್ವ, ಮಿಶ್ರವೆಂದು ಮೂರು ವಿಧ. ಚಾರಿತ್ರ ಮೋಹನಿಯದಲ್ಲಿ ೧೬ ಕಷಾಯಗಳು ೯ ನೋಕಷಾಯಗಳು. ಅವು ೪ ಅನಂತಾನುಬಂಧಿಗಳು, ೪ ಅಪ್ರತ್ಯಾಖ್ಯಾನಾವರಣೀಯಗಳು, ೪ ಪ್ರತ್ಯಾಖ್ಯಾವರಣೀಯಗಳು, ೪ ಸಂಜ್ವಲನಗಳು ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸಾ, ಸ್ತ್ರೀ, ಪುರುಷ, ನಪುಂಸಕ ಎಂದು ೨೫ ವಿಧ. ಅಂತರಾಯ ಕರ್ಮವು ಜೀವನ ಗತಿಯನ್ನು ತಡೆಯುವುದು. ಮೋಹನೀಯ ಕರ್ಮವು ಮೋಹಕ್ಕೆ ಒಳಪಡಿಸಿ ಮರವೆಯನ್ನುಂಟು ಮಾಡುವುದು. ಘಾತಿಕರ್ಮಗಳು ಜೀವನವನ್ನು ಸಂಸಾರದಲ್ಲಿ ತೊಳಲುವಂತೆ ಮಾಡುವುವು. ಇವಲ್ಲದೆ ಅಘಾತಿ ಕರ್ಮಗಳೆಂದು ಬೇರೆ ನಾಲ್ಕು ಪ್ರಕಾರದ ಕರ್ಮಗಳಿವೆ. ಇವು ಈ ಸಂಸಾರದಲ್ಲಿ ಜೀವನಿಗೆ ಅನುಕೂಲವಾದ ದೇಹ ಮತ್ತು ಪರಿಸ್ಥಿತಿಯನ್ನುಂಟುಮಾಡಿಕೊಡುವವು. ಇವು [೧] ಆಯಸ್-ಜೀವನ ಇರುವಿಕೆಯ ಕಾಲಪ್ರಮಾಣವನ್ನು ನಿರ್ಣಯಿಸುವ ಕರ್ಮ. ಇದು ದೇವತೆಗಳು, ನರಕವಾಸಿಗಳು, ಮನುಷ್ಯೇತರರ ಇರುವಿಕೆಯನ್ನು ನಿರ್ಣಯಿಸುವುದು. [೨] ನಾಮ--ಜೀವನ ವ್ಯಕ್ತಿತ್ವ, ಶರೀರದ ಆಕೃತಿ, ಎತ್ತರ, ಬಣ್ಣ ಮೊದಲಾದವುಗಳನ್ನು ನಿರ್ಣಯಿಸುವ ಕರ್ಮ. ಇದರಲ್ಲಿ ಮುಖ್ಯವಾಗಿ ಪಿಂಡ ಪ್ರಕೃತಿಯೆಂದು ಎರಡು ವಿಧ. ಪಿಂಡಪ್ರಕೃತಿಯಲ್ಲಿ ೬೪ ಪ್ರಕಾರ. ಅಪಿಂಡ ಪ್ರಕೃತಿಯಲ್ಲಿ ೨೯ ಪ್ರಕಾರ. [೩] ಗೋತ್ರ- ಇದು ಜೀವನ ಕುಲ, ಗೋತ್ರ, ವಂಶ ಮೊದಲಾದವನ್ನು ನಿರ್ಣಯಿಸುವ ಕರ್ಮ. ಇದರಲ್ಲಿ ಉಚ್ಚಗೋತ್ರ ನೀಚಗೋತ್ರವೆಂದು ಎರಡು ವಿಧ. [೪] ವೇದನೀಯ - ಜೀವನು ಸಂಸಾರದಲ್ಲಿ ಸುಖ ದುಃಖ ಮೊದಲಾದವುಗಳನ್ನುಂಟು ಮಾಡುವ ಮರ್ಮ. ಇದರಲ್ಲಿ ಸಾತ ಅಸಾತವೆಂದು ಎರಡು ವಿಧ.

ಜೀವನಿಗೆ ಜನ್ಮಾಂತರವನ್ನೊದಗಿಸಿಕೊಡುವುದು ಕರ್ಮ. ಕರ್ಮ ಜೈನಧರ್ಮದಲ್ಲಿ ಬಲು ಮಹತ್ವವಾದುದು. ಜೀವನು ತಾನು ಮಾಡಿದುದನ್ನು ಭೋಗಿಸಲೇಬೇಕು. ಇತರ ಧರ್ಮಗಳಲ್ಲಿ ಇರುವಂತೆ ದೇವರು ಕರುಣಿಸಿ ಜೀವನನನ್ನು ಕರ್ಮಬಂಧನದಿಂದ ಬಿಡಿಸುವುದು ಜೈನಧರ್ಮದಲ್ಲಿ ಇಲ್ಲ. ಜೀವನೇ ಕರ್ಮವನ್ನು ಸಂಪೂರ್ಣವಾಗಿ ಗೆಲ್ಲಬೇಕು. ಇದು ಜೈನಧರ್ಮದ ವೈಶಿಷ್ಟ್ಯ. ಮೇಲಿನ ಎಂಟು ಪ್ರಕಾರದ ಕರ್ಮವನ್ನು ಪ್ರಕೃತಸ್ಥಿತಿ ಅನುಭಾಗ ಪ್ರದೇಶಗಳ ದೃಷ್ಟಿಯಿಂದ ವಿವೇಚಿಸಿ ಇವುಗಳಲ್ಲಿ ೧೪೮ ವಿಭಾಗಗಳನ್ನು ಮಾಡಿರುವರು.

ಸಪ್ತತತ್ತ್ವಗಳು :– ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷವೆಂಬವು ಸಪ್ತತತ್ವಗಳು. ಜೀವನನ್ನು ಆತನ ಸ್ವರೂಪ ಮೊದಲಾದುವನ್ನು ಮೇಲೆ ತಿಳಿಸಲಾಗಿದೆ. ಅದರಂತೆಯೇ ಅಜೀವದ ಸ್ವರೂಪವನ್ನು ಕಂಡುಕೊಂಡಿರುವೆವು. ಜೀವ ಅಜೀವಗಳ ಸಂಯೋಗವೇ, ಪ್ರಪಂಚವೆಂದು ಮೇಲೆ ತಿಳಿಸಲಾಗಿದೆ. ಪ್ರಪಂಚ ಕರ್ಮದಿಂದಾಗುವದು. ಕರ್ಮವನ್ನು ಜೀವನಿಗೆ ತೊಡೆಯುಲು ಮತ್ತು ಬಂಧನವನ್ನುಂಟುಮಾಡಲು ಆಸ್ರವ ಮತ್ತು ಬಂಧ ತತ್ತ್ವಗಳು ಕಾರಣ. ತೊಡೆವ ಮಲವನ್ನು ತೊಳೆಯಲು, ಬಂಧನವನ್ನು ಹರಿಯಲು ಸಮವರನಿರ್ಜರ ತತ್ತ್ವಗಳು ಕಾರಣ. ಮೋಕ್ಷತತ್ತ್ವ ಸಂಸಾರದಿಂದ ಬಿಡುಗಡೆಯಾದ ಜೀವನ ಸ್ವರೂಪವನ್ನು ತಿಳಿಸುವುದು. ಜೀವನ ಕಾಯ, ವಾಕ್, ಮನಸ್ಸಿನಿಂದ ಮಾಡಿದ ಕರ್ಮದ ಪರಿಣಾಮಗಳಾದ ರಾಗ ದ್ವೇಷ ರತಿ–ಮೋಹಗಳಿಂದುಂಟಾಗುವ ಮಲವನ್ನು ಅಂಟಿಸಿಕೊಳ್ಳುವನು. ಇದಕ್ಕೆ ಯೋಗವೆನ್ನುವರು. ಈ ಪ್ರಕಾರ ಉಂಟಾದ ಕರ್ಮದ ಗತಿಗೆ ಆಸ್ರವ ಎಂದು ಹೆಸರು.[1] ಆಸ್ರವವನ್ನು ಶಕ್ಯವನ್ನಾಗಿ ಮಾಡಿದ ಜೀವನ ಸ್ಥಿತಿಗೆ ಭಾವಾಸ್ರವವೆನ್ನುವರು. ಇದು ೩೨ ಪ್ರಕಾರವಾಗಿದೆ. ನಾನಾ ಪ್ರಕಾರದ ಬಣ್ಣಗಳಿಂದೊಡಗೂಡಿದ ಜೀವನಿಂದ ಆಕರ್ಷಿಸಲ್ಪಡುವ ಆಸ್ರವಕ್ಕೆ ದ್ರವ್ಯಾಸ್ರವ ವೆಂದೆನ್ನುವರು. ಭಾವಾಸ್ರವಯುಕ್ತನಾದ ಜೀವನು ಸುಳ್ಳುಧರ್ಮಗಳನ್ನು ನಂಬಿ, ವ್ರತ ನಿಯಮ ಶೀಲಗಳಿಲ್ಲದೆ ಸ್ವಚ್ಛಂದ ವ್ಯಕ್ತಿಯನ್ನನುಸರಿಸಿ ಇಂದ್ರಿಯ ವಶವರ್ತಿಯಾಗಿರುವನು. ದ್ರವ್ಯಾಸ್ರವವು ಅತಿ ಸೂಕ್ಷ್ಮವಾಗಿರುವುದರಿಂದ ಅಪ್ರತ್ಯಕ್ಷವಾಗಿರುವದು.

ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ ಈ ಜನ್ಮದಲ್ಲಿ ಪರಿಣಮಿಸಬಹುದು. ಈ ಜನ್ಮದಲ್ಲಿ ಮಾಡುತ್ತಲಿರುವ ಕರ್ಮ ಇಂದಿನ ಜನ್ಮದ ಕರ್ಮಫಲವನ್ನು ಹೆಚ್ಚು ಕಡಿಮೆ ಮಾಡಬಹುದು. ಎರಡೂ ಕೂಡಿ ಈ ಜನ್ಮದಲ್ಲಿ ಜೀವನ ಸುತ್ತಮುತ್ತಲಿನ ಪರಿಸ್ಥಿತಿ ಗಳನ್ನುಂಟು ಮಾಡಬಹುದು. ಜೀವನು ಕರ್ಮಫಲವನ್ನು ಸ್ವೀಕರಿಸುವ ಸ್ಥಿತಿಯಲ್ಲಿದ್ದಾಗ ಲೋಹಚುಂಬಕವು ಲೋಹದ ಕಣಗಳನ್ನು ಆಕರ್ಷಿಸುವಂತೆ ಕರ್ಮಮಲವನ್ನು ಅಂಟಿಸಿಕೊಳ್ಳುವನು. ಇದಕ್ಕೆ ಆಸ್ರವವೆಂದೆನ್ನುವರು.

---

1. ಕಾಯವಾಙ್ಮನಃ ಕರ್ಮಯೋಗಃ ಸ ಆಸ್ರವಃ

ತತ್ತ್ವಾರ್ಥಸೂತ್ರ, ೬ ೧೨.

ಬಂಧ :- ಜೀವನಿಗೆ ಕರ್ಮಫಲವು ಅಂಟಿಕೊಂಡುದಕ್ಕೆ ಬಂಧನವೆನ್ನುವರು. ಇದರಲ್ಲಿ ಭಾವಬಂಧ ದ್ರವ್ಯಬಂಧವೆಂದು ಎರಡು ವಿಧ. ಭಾವಬಂಧವು ಭಾವಾಸ್ರವಕ್ಕೆ ಸರಿಯಾದುದು. ಅದು ಸುಳ್ಳುಧರ್ಮಗಳಲ್ಲಿ ನಂಬುಗೆ, ಸ್ವಚ್ಛಂದವೃತ್ತಿ ಮೊದಲಾದವುಗಳನ್ನುಂಟು ಮಾಡಬಹುದು. ಬಂಧವು ಪ್ರಕೃತಿ, ಸ್ಥಿತಿ, ಅನುಭಾಗ, ಪ್ರದೇಶ ಎಂದು ನಾಲ್ಕು ವಿಧ.

ಸಂವರ :- ಜೀವನು ಸ್ವತಂತ್ರನಾಗಿರುವುದರಿಂದ ಅಂಟಿಕೊಳ್ಳುವ ಮಲವನ್ನು ತಡೆಯಬಲ್ಲನು. ಇದು ಮನಸ್ಸು ಶರೀರಗಳ ವ್ಯಾಪಾರವನ್ನು ನಿಗ್ರಹಿಸುವದರಿಂದಲೂ ಜೀವನಿಗೆ ಸಮತ್ವವನ್ನೂ ಶಾಂತಿಯನ್ನೂ ಉಂಟುಮಾಡಿಕೊಡುವುದರಿಂದಲೂ ಪ್ರಾಪ್ತವಾಗುವುದು. ಮನಸ್ಸು ರಾಗ ಮೋಹ ದ್ವೇಷ ವಿರೋಧಿಗಳಿಂದ ದೂರವಾಗಿರುವುದರಿಂದ ಕರ್ಮಫಲ ಜೀವನಿಗೆ ಅಂಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಆಸ್ರವ ತಡೆಯುವದು.

ನಿರ್ಜರಾ :- ಜೀವನಿಗೆ ಅಂಟಿಕೊಂಡ ಕರ್ಮ ಕಳಚಿ ಬೀಳಹತ್ತುವದಕ್ಕೆ ನಿರ್ಜರಾ ಎನ್ನುವರು. ಕರ್ಮ ತಾನಾಗಿ ಫಲಿಸಿ ಬೀಳಬಹುದು. ಇದಕ್ಕೆ ಸವಿಪಾಕ ನಿರ್ಜರಾ ಎನ್ನುವರು. ತಪಸ್ಸು ಶರೀರಧರ್ಮನಿಗ್ರಹ ಪುಣ್ಯ ಕರ್ಮ ಮೊದಲಾದವುಗಳಿಂದ ಕರ್ಮವನ್ನು ತೀವ್ರವಾಗಿ ಫಲಿಸುವಂತೆ ಮಾಡಬಹುದು. ಇದಕ್ಕೆ ಅವಿಪಾಕ ನಿರ್ಜರಾ ಎನ್ನುವರು.

ಮೋಕ್ಷ :- ಜೀವನು ಕರ್ಮಬಂಧನದಿಂದ ಬಿಡುಗಡೆಯಾಗುವುದಕ್ಕೆ ಮೋಕ್ಷವೆಂದು ಹೆಸರು. ಇದೇ ಜೀವನ ಅಂತಿಮಧ್ಯೇಯವಾಗಿರುವುದು. ಬಿಡುಗಡೆಯಾದ ಜೀವನು ಕೇವಲಜ್ಞಾನ ಮೊದಲಾದವುಗಳನ್ನು ಪಡೆಯುವನು. ಸರ್ವಜ್ಞನಾಗುವನು. ಸಂಸಾರಕ್ಕೆ ಬರುವುದಿಲ್ಲ. ಲೋಕಾಕಾಶದ ತುದಿಯವರೆಗೆ ಹೋಗಿ ಅಲ್ಲಿ ಇರುವನು.

ನವಪದಾರ್ಥಗಳು :- ಮೇಲಿನ ಏಳು ತತ್ವಗಳಿಗೆ ಪುಣ್ಯಪಾಪಗಳೆರಡನ್ನೂ ಕೂಡಿಸಿದರೆ ೯ ಪದಾರ್ಥಗಳಾಗುವುವು. ಪುಣ್ಯ ಹಿತಕರವಾದ ಕರ್ಮ, ಸಾತ್ವಿಕ ಜೀವನದ ಮೇಲೆ ಪ್ರೀತಿ, ಅರ್ಹಂತರ ಮೇಲಿನ ಭಕ್ತಿ, ; ಸಜ್ಜನರ ಮೇಲಿನ ವಿಶ್ವಾಸ ಮೊದಲಾದವು ಹಿತಕರವಾದ ಕರ್ಮ. ಉತ್ತಮ ಮತ್ತು ಹಿತಕರ ವಿಚಾರಸರಣಿಗೆ ಪುಣ್ಯವೆನ್ನುವರು. ಪಾಪ ಅಹಿತಕರವಾದ ಕರ್ಮ. ಇಂದ್ರಿಯ ವಶವರ್ತಿಯಾಗಿರುವುದು. ಎಚ್ಚರತಪ್ಪಿ ನಡೆಯುವುದು, ಎರಡನೆಯವರಿಗೆ ಅಪಾಯ ಮಾಡುವುದು, ಎರಡನೆಯವರ ಬಗ್ಗೆ ಕೆಟ್ಟ ಮಾತನಾಡುವುದು ಮೊದಲಾದವು ಅಹಿತಕರ ಕರ್ಮ. ಇವುಗಳಿಂದ ಪಾಪಕರ್ಮದ ಆಸ್ರವ ಉಂಟಾಗುವುದು.

ಪುದ್ಗಲದಿಂದ ಆಚ್ಛಾದಿತನಾದ ಜೀವನಿಗೆ ಐದು ದೇಹಗಳುಂಟು. ಅವು [೧] ಕಾರ್ಮಣ ಶರೀರ; ಅತಿ ಸೂಕ್ಷ್ಮವಾದ ಕಾರ್ಮಿಕ ಮಲವು ಜೀವನಿಗೆ ಅಂಟಿಕೊಂಡು

ಅತಿ ಸೂಕ್ಷ್ಮವಾದ ಆಂತರಿಕ ಶರೀರವನ್ನುಂಟು ಮಾಡುವುದು; ಇದು ಕಾರ್ಮಣ ಶರೀರ. [೨] ತೈಜಸಶರೀರ : ಅತಿ ಸೂಕ್ಷ್ಮ ಮತ್ತು ಅದೃಶ್ಯವಾದುದು [೩] ಆಹಾರಕ: ವ್ರತಬದ್ಧನಾದ ಜೈನಮುನಿ ಜೈನತತ್ತ್ವಗಳ ಅರ್ಥ ಸ್ಪಷ್ಟವಾಗಿ ತಿಳಿಯದಂತೆ ಆದಾಗ ಗುರುವಿನ ಹತ್ತಿರ ಹೋಗಿ ಸಂಶಯ ನಿವಾರಣ ಮಾಡಿಕೊಳ್ಳಲಾರನು. ಆಗ ಆತನ ಶರೀರದಿಂದ ಒಂದು ಸೂಕ್ಷ್ಮವಾದ ಶರೀರ ಹೊರಟು ಗುರುವಿನೆಡೆಗೆ ಹೋಗಿ ಸಂಶಯವನ್ನು ನಿವಾರಣ ಮಾಡಿಕೊಂಡು ತಿರುಗಿ ಬಂದು ಮುನಿಯ ಶರೀರದಲ್ಲಿ ಸೇರುವದು. ಇದಕ್ಕೆ ಆಹಾರಕ ಶರೀರವೆನ್ನುವರು. [೪] ವೈಕ್ರಿಯಿಕ : ದೇವತೆಗಳು. ಯಕ್ಷರು ಮೊದಲಾದವರು ಧರಿಸಿರುವ ಶರೀರ ; [೫] ಔದಾರಿಕ ಶರೀರ : ತಾಯಿಯ ಉದರದಿಂದ ಬಂದ ಶರೀರ. ಕಾರ್ಮಿಕ ತೈಜಸ ಶರೀರಗಳು ಕರ್ಮದಿಂದ ಮುಕ್ತರಾಗದ ಜೀವರುಗಳಿಗೆ ಉಂಟು. ದೇವತೆಗಳಿಗೆ ಕಾರ್ಮಿಕ, ತೈಜಸ, ವೈಕ್ರಿಯಿಕ ಶರೀರಗಳುಂಟು. ಉಳಿದ ಎಲ್ಲ ಪ್ರಾಣಿಗಳಿಗೆ ಈ ಐದೂ ಶರೀರಗಳುಂಟು.

ದೇಹಿಗಳಿಗೆ ದೇವ ನಾರಕ ಮಾನುಷ್ ತಿರ್ಯಕ್ ಎಂದು ನಾಲ್ಕು ಗತಿಗಳು ಉಂಟು. ಜೀವನಿಗೆ ಕರ್ಮಾಣು ಅಂಟಿಕೊಂಡು ಅವನನ್ನು ಬಂಧನಕ್ಕೀಡು ಮಾಡುವವೆಂದೂ, ಇದು ಯೊಗದಿಂದ ಮತ್ತು ಕಷಾಯದಿಂದಾಗುವುದೆಂದೂ ಮೇಲೆ ಹೇಳಿದೆ. ಕಾಯ ವಾಕ್ ಮನಸ್ಸಿನಿಂದ ಹುಟ್ಟುವ ಸಿಟ್ಟು, ಸೊಕ್ಕು, ಮೋಸ, ಆಸೆ ಮೊದಲಾದ ವಿಕಾರಗಳು ಕರ್ಮಾಣುಗಳಿಗೆ ಚಲನವನ್ನು ಕೊಟ್ಟು ಬೇರೆಬೇರೆ ಬಣ್ಣವನ್ನುಂಟು ಮಾಡುವುವು. ಇದಕ್ಕೆ ಲೇಶ್ಯವೆನ್ನುವರು. ಇದು ಕಪ್ಪು, ನೀಲಿ, ಬೂದಿ, ಕೆಂಪು, ಕಮಲ, ಬಿಳುಪು ಹೀಗೆ ಆರು ಪ್ರಕಾರವಾಗಿರುವದು. ಮೊದಲಿನ ಮೂರು, ಕಪ್ಪು, ನೀಲಿ, ಬೂದಿಬಣ್ಣದ ಲೇಶ್ಯಗಳು ಪಾಪಮಯವಾದವು. ಕಡೆಯ ಮೂರು, ಕೆಂಪು, ಬಿಳುಪು, ಕಮಲದ ಬಣ್ಣದ ಲೇಶ್ಯಗಳು ಪುಣ್ಯಮಯವಾದವು.

ಆತ್ಮನು ಮುಕ್ತನಾಗಬೇಕಾದರೆ ಹದಿನಾಲ್ಕು ಸ್ಥಾನಗಳನ್ನು ಏರಬೇಕಾಗುವುದು. ಇವಕ್ಕೆ ಗುಣಸ್ಥಾನವೆನ್ನುವರು. ಗುಣಸ್ಥಾನದಲ್ಲಿ ಕರ್ಮದ ಉದಯ ಉಪಶಮ ಕ್ಷಯ ಕ್ಷಯೋಪಶಮ ಉಂಟಾಗುವುದು. ಗುಣಸ್ಥಾನಗಳು[1] [೧] ಮಿಥ್ಯಾತ್ವ [೨] ಸಾಸಾದನ [೩] ಮಿಶ್ರ [೪] ಅವಿರತ ಸಮ್ಯುಕ್ತ್ವ [೫] ದೇಶವಿರತ [೬] ಪ್ರಮತ್ತ ವಿರತ [೭] ಅಪ್ರಮತ್ತವಿರತ [೮] ಅಪೂರ್ವಕರಣ [೯] ಅನಿವೃತ್ತಿ ಕರಣ [೧೦] ಸೂಕ್ಷ್ಮ ಸಂಪರಾಯ [೧೧] ಉಪಶಾಂತಮೋಹ [೧೨] ಕ್ಷೀಣ ಮೋಹ [೧೩] ಸಯೋಗ ಕೇವಲಿನ್ [೧೪] ಅಯೋಗ ಕೇವಲಿನ್.

1. *ಗೊಮ್ಮಟಸಾರದಲ್ಲಿ ಇವುಗಳ ಸಂಪೂರ್ಣ ವಿವರಣೆಯಿದೆ.*

ರತ್ನತ್ರಯ[1]ಗಳಾದ ಸಮ್ಯಕ್‌ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯಗಳು ಜೀವನಿಗೆ ಮೋಕ್ಷವನ್ನು ಒದಗಿಸಿಕೊಡುವುದರಲ್ಲಿ ಉಪಯುಕ್ತವಾಗುವವು.

ಬೌದ್ಧಧರ್ಮ

ಜಗತ್ತಿನೊಳಗಿನ ದೊಡ್ಡ ಧರ್ಮಗಳಲ್ಲಿ ಬೌದ್ಧಧರ್ಮವು ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ಈಗಲೂ ಕೂಡ ೧೫ ಕೋಟಿ ಜನರು ಬೌದ್ಧಧರ್ಮಾನುಯಾಯಿಗಳಾಗಿರುವರು. ಈ ಧರ್ಮ ಈಗ ಚೀನ, ಜಪಾನ್, ತಿಬೇಟ್, ಬ್ರಹ್ಮದೇಶ, ಥಾಯಿಲೆಂಡ್, ಸಿಂಹಳದ್ವೀಪ, ಮಲಯ, ಸುಮಾತ್ರಾ, ಜಾವಾ ಮೊದಲಾದ ದೇಶಗಳಲ್ಲಿ ಪ್ರಚಲಿತವಿದೆ. ಒಂದು ಕಾಲದಲ್ಲಿ ಹಿಂದುಸ್ಥಾನವನ್ನು ವ್ಯಾಪಿಸಿತ್ತು. ನಮ್ಮ ಕರ್ನಾಟಕದಲ್ಲಿಯೂ ಇತ್ತೆಂಬುದಕ್ಕೆ ಇಲ್ಲಿ ದೊರೆಯುವ ಶಾಸನಗಳು ಸಾಕ್ಷಿಯಾಗಿವೆ. ಕ್ರಿ.ಶ. ೧೦೬೭ರಲ್ಲಿ ಹುಟ್ಟಿದ ಒಂದು ಶಾಸನವು[2] ಬೌದ್ಧರಿಗೆ ಸಂಬಂಧಿಸಿದೆ. ಬೌದ್ಧಧರ್ಮದ ಪ್ರಭಾವ ಕರ್ನಾಟಕದಲ್ಲಿದ್ದ ಮತಗಳ ಮೇಲೆ ಬಿದ್ದಿದೆ. ಜೈನಧರ್ಮ ಕನ್ನಡ ಸಾಹಿತ್ಯಕ್ಕೆ ಉಪಕಾರ ಮಾಡಿದಂತೆ ಬೌದ್ಧಧರ್ಮ ತಮಿಳು ಸಾಹಿತ್ಯಕ್ಕೆ ಉಪಕಾರ ಮಾಡಿದೆ. ಅಶೋಕ ಚಕ್ರವರ್ತಿ ಬೌದ್ಧಧರ್ಮದ ಪ್ರಸಾರಕ್ಕೆಂದು ತನ್ನ ಮಗನಾದ ಮಹೇಂದ್ರ ಮಗಳಾದ ಸಂಘಮಿತ್ರೆ ಇವರನ್ನು ದಕ್ಷಿಣಕ್ಕೆ ಕಳಿಸಿದ್ದನು. ನಾಗಾರ್ಜುನನೆಂಬ ಪ್ರಸಿದ್ಧ ಬೌದ್ಧಗುರುವು ನಾಗಾರ್ಜುನ ಕೊಂಡವೆಂಬ ಹೆಸರಿನ ಸ್ಥಾನದಲ್ಲಿದ್ದನೆಂದು ತಿಳಿಯುವುದು. ಅಮರಾವತಿಯಲ್ಲಿ ಬೌದ್ಧವಿಹಾರವಿತ್ತು. ಶಿಲ್ಪಕಲೆಯ ದೃಷ್ಟಿಯಿಂದ ಅಲ್ಲಿಯ ಅವಶೇಷಗಳು ಬಹಳ ಮಹತ್ವವಿದೆಯೆಂದು ಅದನ್ನು ಲಂಡನ್ ನಗರದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ(British Museum) ಇಟ್ಟಿದ್ದಾರೆ. ಪುಣೆ, ಮುಂಬಯಿ ದಾರಿಯಲ್ಲಿರುವ ಲೋಣಾವಳ ಸ್ಟೇಶನದ ಸಮೀಪದ ಸಹ್ಯಾದ್ರಿಯಲ್ಲಿ ಕೊರೆದ ಸಭಾಮಂಟಪವನ್ನು ಬನವಾಸಿ (ವೈಜಯಂತಿಯ) ಭೂಪಾಳನೆಂಬ ವರ್ತಕನು ಮಾಡಿಸಿದನೆಂದು ಅಲ್ಲಿ ಕೆತ್ತಿರುವ ಲೇಖನದಿಂದ ತಿಳಿದುಬರುವುದು. ಈ ಎಲ್ಲ ಸಂಗತಿಗಳು ಬೌದ್ಧಧರ್ಮಕ್ಕೂ ಕನ್ನಡ ನಾಡಿಗೂ ಇರುವ ಸಂಬಂಧವನ್ನು ವಿಶದ ಪಡಿಸುವವು.

ಭಗವಾನ್ ಬುದ್ಧದೇವನು ಮಹಾವೀರನಂತೆ ತನ್ನ ತತ್ತ್ವಗಳನ್ನು ಜನರಾಡುವ ಮಾತಿನಲ್ಲಿ ಬೋಧಿಸಿದನು. ಉಪಲಬ್ಧವಿರುವ ಬೌದ್ಧಗ್ರಂಥಗಳು ಪಾಲಿ ಮತ್ತು ಸಂಸ್ಕೃತ ಭಾಷೆಗಳಲ್ಲಿವೆ. ಬುದ್ಧನ ನಿರ್ವಾಣದ ನಂತರ ಅವನ ಶಿಷ್ಯರೆಲ್ಲರೂ ಕೂಡಿ ಅವನ ಉಪದೇಶಗಳನ್ನೆಲ್ಲ ಸಾಧ್ಯವಿದ್ದಷ್ಟು ಅವನ ಶಬ್ದಗಳಲ್ಲಿಯೇ ಸಂಗ್ರಹಿಸಿ

---

1. ಇವುಗಳನ್ನು ಚೆನ್ನಾಗಿ ಪರಿಶೀಲಿಸಬೇಕೆನ್ನುವವರು : ಪಂಚಾಸ್ತಿ ಕಾಯ, ತತ್ತ್ವಾರ್ಥಸೂತ್ರ, ದ್ರವ್ಯ ಸಂಗ್ರಹ ಮೊದಲಾದ ಗ್ರಂಥವನ್ನು ನೋಡಿಕೊಳ್ಳಬೇಕು.

2. ಡಂಬಳ ಕಿಲ್ಲೇದೊಳಗಿರುವ ಶಾಸನ-ಇಲಿಯಟ್ಟದ ನಂಬರು ೩೩ ಚಾಲುಕ್ಯವಿಕ್ರಮಪೀಠ, ೨೨೬-೨೨೭.

ಬರೆದಿಟ್ಟಿರುವರು. ಇವಕ್ಕೆ ಪಿಟಕ ಅಥವಾ ಪೆಟ್ಟಿಗೆಗಳೆಂದು ಹೆಸರು. ಇವು ಮೂರು ೧) ವಿನಯ ಪಿಟಕ – ಇದರಲ್ಲಿ ಬೌದ್ಧ ಭಿಕ್ಷು ಭಿಕ್ಷುಕಿಯರು ನಡೆದುಕೊಳ್ಳತಕ್ಕ ನಿಯಮಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಖಂಡಕ, ಸುತ್ತವಿಭಂಗ ಎಂದು ಎರಡು ಭಾಗ. ಖಂಡಕದಲ್ಲಿ ಮಹಾವಗ್ಗ, ಚುಲ್ಲವಗ್ಗ ಎಂದು ೨ ವರ್ಗ. ಸುತ್ತವಿಭಂಗದಲ್ಲಿ ಪಾತಿಮೊಕ್ಖ, ಪಾತಿಮೊಕ್ಖ ಭಾಷೆಯ ಎಂದು ಎರಡು ಭಾಗ. ೨) ಸುತ್ತಪಿಟಕ – ಇದರಲ್ಲಿ ಬೌದ್ಧಧರ್ಮದ ತತ್ವಗಳೂ ಭಗವಾನ್ ಬುದ್ಧದೇವನು ಸ್ವತಃ ಹೇಳಿದ ಉಪದೇಶಗಳೂ ಶಿಷ್ಯರ ಸಂಗಡ ಮಾಡಿದ ಸಂವಾದಗಳೂ ಸಂಗ್ರಹಿತವಾಗಿವೆ. ಇದರಲ್ಲಿ ದೀರ್ಘ ನಿಕಾಯ, ಮಜ್ಝಿಮನಿಕಾಯ, ಸಂಯುತ್ತನಿಕಾಯ, ಅಂಗುರತ್ತರನಿಕಾಯ, ಖುದ್ದಕ ನಿಕಾಯ ಎಂದು ಐದು ಭಾಗ. ೩) ಅಭಿಧಮ್ಮಪಿಟಕ – ಇದರಲ್ಲಿ ಬೌದ್ಧಧರ್ಮದ ಆಚಾರ ವಿಚಾರಗಳ ಸಂಗ್ರಹವಿದೆ. ಧಮ್ಮಸಂಗಾನಿ, ವಿಭಂಗ, ಧಾತು ಕಥಾ, ಪುಗ್ಗಲಪಞತ್ತಿ, ಕಥಾವತ್ತು, ಯಮಕ, ಪತ್ಥಾನವೆಂದು ಏಳು ವಿಭಾಗ.

ಬುದ್ಧದೇವನು ಪರಿನಿರ್ವಾಣವನ್ನು ಪಡೆದ ಸ್ವಲ್ಪದಿನಗಳಲ್ಲಿಯೇ ಅವನ ಅನುಯಾಯಿಗಳಲ್ಲಿ ಪ್ರಮುಖರಾದ ೫೦೦ ಭಿಕ್ಷುಗಳು ರಾಜಗೃಹದಲ್ಲಿ ಕೂಡಿ, ಅವನ ವಚನಗಳನ್ನು ಸಂಗ್ರಹಿಸಿ, ಉಪಲಿ ಮತ್ತು ಆನಂದ ಇವರು ಎಲ್ಲರಿಗೂ ಪಠನ ಮಾಡಿಸಿದರು. ಇದು ಬೌದ್ಧರ ಮೊದಲನೆಯ ಮಹಾಸಭೆ. ಇದಾದ ಕೆಲವು ವರ್ಷಗಳಲ್ಲಿ ಭಿಕ್ಷುಗಳ ಆಚಾರ ವಿಷಯಕನಿಯಮಗಳಲ್ಲಿ ಶಿಥಿಲತೆ ಕಂಡುಬರುತ್ತಿತ್ತು. ಧರ್ಮಕ್ಕೆ ಸಂಬಂಧಿಸಿದ ಹೊಸ ಪ್ರಶ್ನೆಗಳೂ ಉದ್ಭವಿಸಿದವು. ಇವುಗಳನ್ನು ನಿರ್ಣಯಿಸಲು ಬುದ್ಧದೇವನು ಪರಿನಿರ್ವಾಣದ ನಂತರ ೧೦೦ ವರ್ಷಗಳ ಸುಮಾರಕ್ಕೆ ವೈಸಾಲಿಯಲ್ಲಿ ಮತ್ತೊಂದು ಮಹಾಸಭೆ (ಮಹಾಸಂಗೀತ) ನೆರೆಯಿತು. ಇದರಲ್ಲಿ ವಿನಯ ಮತ್ತು ಧರ್ಮಗಳಿಗೆ ಸಂಬಂಧಿಸಿದ ಬುದ್ಧದೇವನ ವಚನಗಳ ಪಠನ ಮಾಡಲಾಯಿತು. ಮೂರನೆಯ ಸಭೆ ಅಶೋಕ ಮಹಾರಾಜನ ಕಾಲದಲ್ಲಿ ಪಾಟಲಿಪುತ್ರದಲ್ಲಿ ಕೂಡಿತ್ತು. ಈ ಸಭೆಯ ಅಧ್ಯಕ್ಷ ಮಗ್ಗಲಿಪುತ್ತಶಿಷ್ಯ. ಈ ಸಭೆಯ ಉದ್ದೇಶವು ಬೌದ್ಧರಲ್ಲಿ ಆ ಕಾಲದಲ್ಲಿ ತಲೆದೋರಹತ್ತಿದ್ದ ಭೇದಗಳನ್ನು ತೆಗೆದುಹಾಕಿ ಎಲ್ಲರನ್ನೂ ಒಂದುಗೂಡಿಸಿ ಧರ್ಮವನ್ನು ಶುದ್ಧಗೊಳಿಸುವುದಾಗಿತ್ತು. ಕ್ರಿ.ಶ. ಸುಮಾರು ೧೦೦ರಲ್ಲಿ ಕುಷಾಣ ವಂಶದ ಕನಿಷ್ಕನು ಮತ್ತೊಂದು ಸಭೆಯನ್ನು ಕರೆದನು. ಈ ಸಭೆಗಳ ಪರಿಣಾಮ ನಮಗೆ ಉಪಲಬ್ಧವಿದ್ದ ತ್ರಿಪಿಟಕಗಳ ಸಂಗ್ರಹವಾಗಿದೆ. ಇವುಗಳಲಿದ್ದ ವಿಷಯಗಳನ್ನೆಲ್ಲ ಬುದ್ಧದೇವನು ಒಂದು ವೇಳೆ ಸ್ವತಃ ಬೋಧಿಸದಿದ್ದರೂ ಅನೇಕ ವಿಷಯಗಳು ಬುದ್ಧದೇವನ ಚರಿತೆಗೆ ಸಂಬಂಧಿಸಿರುವವು. ಅಶ್ವಘೋಷನೆಂಬ ಬೌದ್ಧಭಿಕ್ಷುವು ಸಂಸ್ಕೃತದಲ್ಲಿ ಬುದ್ಧಚರಿತೆಯನ್ನು ಬರೆದಿರುವನು. ಪಾಲಿ ಭಾಷೆಯಲ್ಲಿಯೂ ಬುದ್ಧನ ಚರಿತ್ರೆಯನ್ನು ವಿವರಿಸುವ ಗ್ರಂಥಗಳಿವೆ. ಇವೆಲ್ಲ ಗ್ರಂಥಗಳನ್ನು ಶೋಧಿಸಿ ಬುದ್ಧ ದೇವನ ಚರಿತೆಯನ್ನು ಬರೆಯಲು ಯತ್ನಿಸಿದರೆ ನಮಗೆ ದೊರೆಯುವ ವಿಷಯಗಳು ತೀರ ಸ್ವಲ್ಪ.

ನೇಪಾಳದ ದಕ್ಷಿಣಕ್ಕೆ ಹಿಮಾಲಯದ ಅಡಿಯಲ್ಲಿ ಸುಮಾರು ೯೦೦ ಚೌರಸ ಮೈಲು ವಿಸ್ತಾರವಾದ ಒಂದು ಸಣ್ಣ ರಾಜ್ಯವಿತ್ತು. ಅದರ ರಾಜಧಾನಿ ಕಾಶಿಯಿಂದ ಉತ್ತರಕ್ಕೆ ೧೩೦ ಮೈಲು ಅಂತರದ ಮೇಲೆ ರೋಹಿಣಿ ನದಿಯ ದಡದಲ್ಲಿರುವ ಕಪಿಲ ವಸ್ತು. ಇದನ್ನು ಶಾಕ್ಯವಂಶದ ಶುದ್ಧೋದನನೆಂಬ ಕ್ಷತ್ರಿಯ ರಾಜನು ಆಳುತ್ತಿದ್ದನು. ನೆರೆಯವನಾದ ಕೋಲಿಯ ವಂಶದ ರಾಜನ ಪುತ್ರಿಯರಿಬ್ಬರು ಈತನಿಗೆ ರಾಣಿಯರಾಗಿದ್ದರು. ಬಹುದಿನಗಳವರೆಗೆ ಈತನಿಗೆ ಸಂತಾನವಾಗಲಿಲ್ಲ. ಇದರಿಂದ ಈತನಿಗೆ ವ್ಯಸನವಾಗಿತ್ತು. ಒಂದು ದಿನ ಹಿರಿಯ ಹೆಂಡತಿಯಾದ ಮಾಯಾದೇವಿ ತಾನು ಗರ್ಭಿಣಿಯಾಗಿರುವುದನ್ನು ರಾಜನಿಗೆ ತಿಳಿಸಿದಳು. ರಾಜನಿಗೆ ಬಹಳ ಸಂತೋಷವಾಯಿತು. ಆಗ ಮಾಯಾದೇವಿಗೆ ೪೫ ವರ್ಷ ವಯಸ್ಸಾಗಿತ್ತು. ಪ್ರಸವ ಕಾಲ ಸಮೀಪಿಸಿದಾಗ ದೇವಿ ತವರುಮನೆಗೆ ಹಡೆಯಲಿಕ್ಕೆ ಕಳಿಸಿಕೊಡಬೇಕೆಂದು ಬೇಡಿಕೊಂಡಳು. ಮಾರ್ಗದಲ್ಲಿ ವಿಶ್ರಾಂತಿಗಾಗಿ ಇಳಿದಾಗ ಸುಂದರವಾದ ಲುಂಬಿನಿ ವನದಲ್ಲಿ ಹೂಮೊಗ್ಗೆಗಳಿಂದ ಶೋಭಿಸುವ ಸಾಲವೃಕ್ಷದ ಬುಡದಲ್ಲಿ ದೇವಿ ಗಂಡುಮಗುವನ್ನು ಹೆತ್ತಳು. ಅಸಿತನೆಂಬ ಮಹರ್ಷಿ ಬುದ್ಧನ ಜನ್ಮವನ್ನು ದಿವ್ಯಜ್ಞಾನದಿಂದ ತಿಳಿದು ಅಲ್ಲಿಗೆ ಬಂದು ಕೂಸನ್ನು ನೋಡಿ ಅಳಹತ್ತಿದನು. ರಾಜನು ಕೇಳಲು 'ಈ ಮಗು ಬುದ್ಧನಾಗುವನು; ಲೋಕವನ್ನು ಜರಾ ವ್ಯಾಧಿ ಮರಣಗಳಿಂದ ಪಾರು ಮಾಡುವನು. ಇವನು ದೊಡ್ಡವನಾಗುವವರೆಗೆ ನಾನು ಇರಲಾರೆ. ಈತನ ಉಪದೇಶವನ್ನು ಕೇಳುವ ಭಾಗ್ಯ ನನ್ನಲ್ಲಿ ಇಲ್ಲ' ಎಂದು ದುಃಖಿಸುವೆನೆಂದು ಹೇಳಿದನು. ಹೀಗೆ ಹೇಳಿ ಮುನಿ ಪವನ ಮಾರ್ಗವಾಗಿ ಹೋದನು. ರಾಜನು ರಾಣಿಯನ್ನೂ ಶಿಶುವನ್ನೂ ಒಳ್ಳೆಯ ಜಾಗ್ರತೆಯಿಂದ ರಾಜಧಾನಿಗೆ ತರಿಸಿದನು. ಹತ್ತನೆಯ ದಿನಕ್ಕೆ ಕೂಸಿಗೆ ಸಿದ್ಧಾರ್ಥನೆಂದು ಹೆಸರಿಟ್ಟರು. ಜೋಯಿಸರು ಈತನ ಜನ್ಮಕುಂಡಲಿಯನ್ನು ಹಾಕಿ ಈತನು ಏಕಚಕ್ರಾಧಿಪತಿಯಾಗುವನು, ಇಲ್ಲವೇ ಬುದ್ಧನಾಗುವನೆಂದು ಹೇಳಿದರು. ಶುದ್ಧೋದನನು ತನ್ನ ಮಗನು ಬುದ್ಧನಾಗಲು ಯಾವುದು ಕಾರಣವಾಗುವುದೆಂದು ಕೇಳಲು ಅವರು "ಮುಪ್ಪು ಆವರಿಸಿದವ, ವ್ಯಾಧಿಯಿಂದ ಬಳಲುವವ, ಹೆಣ ಮತ್ತು ಸನ್ಯಾಸಿ" ಈ ನಾಲ್ಕು ಕಾರಣರಾಗುವರೆಂದು ಹೇಳಿದರು. ರಾಜನು ತನ್ನ ಮಗನ ದೃಷ್ಟಿಗೆ ಇವು ಬೀಳದಂತೆ ಎಚ್ಚರಪಡಲು ನಿಶ್ಚಯಿಸಿದನು. ಸ್ವಲ್ಪದಿನಗಳಲಿಯೇ ಮಾಯಾದೇವಿ ತೀರಿಕೊಂಡಳು. ಸಿದ್ಧಾರ್ಥನ ಚಿಕ್ಕಮ್ಮನಾದ ಪ್ರಜಾಪತಿದೇವಿ ತನ್ನ ಹೊಟ್ಟೆಯ ಮಗನಂತೆ ಪ್ರೇಮದಿಂದ ಆತನನ್ನು ಸಲಹಿದಳು. ರಾಜನು ಮುದುಕರೂ, ರೋಗಿಗಳೂ, ಸನ್ಯಾಸಿಗಳೂ ಮಗುವಿನ ದೃಷ್ಟಿಗೆ ಬೀಳದಂತೆ ಮತ್ತು ಮಗು ಸುಖವಾಗಿ ಬೆಳೆಯುವಂತೆ ಬಲು ಎಚ್ಚರಪಡುತ್ತಿದ್ದನು. ಸತ್ತ ಪಶು ಪಕ್ಷಿಗಳೂ ಕೂಡ ಆತನ ದೃಷ್ಟಿಗೆ ಬೀಳದಂತೆ ವ್ಯವಸ್ಥೆಯಾಗಿತ್ತು. ಸಿದ್ಧಾರ್ಥನು ಸಮವಯಸ್ಕರಾದ ರಾಜಪುತ್ರರಿಂದೊಡಗೂಡಿ ಆಹ್ಲಾದಕರವಾದ ವಸ್ತುಗಳ ಮಧ್ಯದಲ್ಲಿ ಕಾಲವನ್ನು ಸುಖಮಯವಾಗಿ

ಕಳೆದನು. ತಾರುಣ್ಯದ ಮೆಟ್ಟಿಲನ್ನು ಮುಟ್ಟುವುದರೊಳಗಾಗಿ ಶುದ್ಧೋದನನು ತನ್ನ ಸಮೀಪದ ಆಪ್ತನಾದ ಕೋಲಿಯ ವಂಶದ ರಾಜನ ಮಗಳಾದ ಯಶೋಧರೆಯನ್ನು ತಂದು ಆತನಿಗೆ ಮದುವೆ ಮಾಡಿದನು. ಸಿದ್ಧಾರ್ಥನು ಕೆಲವು ದಿನಗಳವರೆಗೆ ಸುಖದಿಂದ ಸಂಸಾರ ಮಾಡಿದನು. ಒಂದು ದಿನ ಊರೊಳಗೆ ತಿರುಗಾಡಿ ಜನರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕೆಂಬ ತನ್ನ ಅಪೇಕ್ಷೆಯನ್ನು ತಂದೆಗೆ ತಿಳಿಸಿದನು. ಶುದ್ಧೋದನನು ಮೇಲೆ ಹೇಳಿದ ನಾಲ್ಕು ಈತನ ದೃಷ್ಟಿಗೆ ಬೀಳದಂತೆ ವ್ಯವಸ್ಥೆಯಾಗಬೇಕೆಂದೂ, ಪಟ್ಟಣವನ್ನು ಶೃಂಗರಿಸಿ ಎಲ್ಲಿ ನೋಡಿದರೂ ಸುಖವೇ ಕಾಣುವಂತಾಗಬೇಕೆಂದೂ, ಈತನ ಮನಸ್ಸಿಗೆ ವ್ಯಥೆಯಾಗುವಂಥ ಯಾವ ದೃಶ್ಯವೂ ಈತನ ಕಣ್ಣಿಗೆ ಬೀಳಬಾರದೆಂದೂ ಕಟ್ಟಪ್ಪಣೆ ಮಾಡಿದನು. ಅನೇಕ ಜನರು ಸಿದ್ಧಾರ್ಥನನ್ನು ಸ್ವಾಗತಿಸಿದರು. ಎತ್ತ ನೋಡಿದರತ್ತ ಉತ್ಸವವೇ ಉತ್ಸವ. ಒಬ್ಬ ಹಲ್ಲಿಲ್ಲದ ನೆರೆದಲೆಯ ಮುಪ್ಪಿನಿಂದ ಜರ್ಜರಿತನಾದ ಮನುಷ್ಯನು ಸಿದ್ಧಾರ್ಥನ ದೃಷ್ಟಿಗೆ ಬಿದ್ದನು. ಇವನ್ಯಾರೆಂದು ಕೇಳಲು ಈತನು ಮುದುಕ; ಎಲ್ಲರನ್ನೂ ಮುಪ್ಪು ಆವರಿಸಲೇಬೇಕು ಎಂದು ಉತ್ತರ ದೊರೆಯಿತು. ಸಿದ್ಧಾರ್ಥನ ಮನಸ್ಸಿನಲ್ಲಿ ತಾನೂ ತನ್ನ ಪ್ರೀತಿಯ ಯಶೋಧರೆಯೂ ಕೆಲಕಾಲದ ನಂತರ ಮುಪ್ಪಿನವರಾಗಿ ಇಂತಹ ಅಸಹ್ಯ ರೂಪಗಳನ್ನು ಅನುಭವಿಸಬೇಕಾಗುವುದೆಂದು ಚಿಂತಿಸಿದನು. ಮತ್ತೊಮ್ಮೆ ವ್ಯಾಧಿಪೀಡಿತನಾದವನನ್ನು ಕಂಡು ಎಲ್ಲರೂ ಬೇನೆಯಿಂದ ಬಳಲಬೇಕಾಗುವುದೆಂಬುದನ್ನು ಅರಿತುಕೊಂಡನು. ಮತ್ತೊಮ್ಮೆ ಸಿದಿಗೆಯ ಮೇಲೆ ಒಯ್ಯುವ ಹೆಣವನ್ನು ಕಂಡು ಎಲ್ಲರೂ ಸಾಯಲೇಬೇಕೆಂಬುದನ್ನು ತಿಳಿದುಕೊಂಡನು. ಮನಸ್ಸಿಗೆ ಬಹಳ ವ್ಯಥೆಯಾಯಿತು. ಆಮೇಲೆ ಒಬ್ಬ ಸನ್ಯಾಸಿ ದೃಷ್ಟಿಗೆ ಬಿದ್ದನು. ಆತನ ಶಾಂತಮುದ್ರೆ ಸಿದ್ಧಾರ್ಥನ ಮನಸ್ಸನ್ನು ಆಕರ್ಷಿಸಿತು. ಈತನು ಸಂಸಾರದ ದುಃಖವನ್ನು ಗೆಲ್ಲಲು ಯತ್ನಿಸುವವನೆಂದು ಗೊತ್ತಾಯಿತು. ಯಾವ ವಸ್ತುಗಳು ಈತನ ದೃಷ್ಟಿಗೆ ಬೀಳಬಾರದೆಂದು ಈತನ ತಂದೆ ಯತ್ನಿಸುತ್ತಿದ್ದನೋ ಅವೇ ಪ್ರಾರಬ್ಧವಶದಿಂದ ಸಿದ್ಧಾರ್ಥನ ಮುಂದೆ ಬಂದವು. ಅಂದಿನಿಂದ ಆತನಿಗೆ ಸುಖವೂ ಶಾಂತಿಯೂ ಇಲ್ಲದೆ ಜರಾಮರಣವನ್ನು ನೀಗಲು ಉಪಾಯವನ್ನು ಚಿಂತಿಹತ್ತಿದನು. ಆ ಸನ್ಯಾಸಿಯ ಶಾಂತಮುದ್ರೆ ಈತನ ಮನಸ್ಸಿನ ಮೇಳೆ ಬಹಳ ಪರಿಣಾಮವನ್ನು ಉಂಟುಮಾಡಿತು. ಒಂದು ದಿನ ಉದ್ಯಾನದಲ್ಲಿ ಕುಳಿತಾಗ ಯಶೋಧರೆ ಗಂಡು ಮಗುವನ್ನು ಹೆತ್ತಳೆಂಬ ಆನಂದದ ಸುದ್ದಿಯನ್ನು ಕೇಳಿದನು. ಜನರೆಲ್ಲರಿಗೂ ಬಹಳ ಸಂತೋಷವಾಗಿ ರಾಜ್ಯದಲ್ಲೆಲ್ಲ ಉತ್ಸವಗಳು ನಡೆದವು. ಶುದ್ಧೋದನನ ಆನಂದಕ್ಕೆ ಮೇರೆಯಿದ್ದಿಲ್ಲ. ಆದರೆ ಸಿದ್ಧಾರ್ಥನ ಮನೋವ್ಯಥೆ ಇದರಿಂದ ಹೆಚ್ಚಾಯಿತು. ಇದು ಒಂದು ಹೊಸ ಬಂಧನವೆಂದು ಗ್ರಹಿಸಿ ಮಗುವಿಗೆ ರಾಹುಲ (ಬಂಧನ)ನೆಂದು ಹೆಸರಿಟ್ಟನು. ಜನರು ಆತನನ್ನು ಒಳ್ಳೆ ಸಂಭ್ರಮದಿಂದ ಸ್ವಾಗತಿಸಿದರು. ಅರಮನೆಯನ್ನು ಪ್ರವೇಶಿಸುವಾಗ ಕಿಸಾಗೋತಮಿಯೆಂಬ ರಾಜಪುತ್ರಿ

"ಮಗುವಿನ ತಂದೆಗೆ ಸುಖವಾಗಲಿ; ತಾಯಿಗೆ ಸುಖವಾಗಲಿ; ಇಂತಹ ಗಂಡನನ್ನೂ ಮಗುವನ್ನೂ ಪಡೆದವಳೇ ಅನ್ನಳು" ಎಂದು ಹಾಡಿದಳು. ಸಿದ್ಧಾರ್ಥನು ತನ್ನೊಳಗೇ "ಸುಖವೂ ಶಾಂತಿಯೂ ಎಲ್ಲಿಂದ ಬರಬೇಕು?" ಎಂದು ವಿಚಾರಿಸಿ ಕಿಸಾಗೋತಮಿ ಹಾಡಿದ 'ಸುಖ' ಶಬ್ದವನ್ನು ಜರವ್ಯಾಧಿ ಮರಣಗಳನ್ನು ದಾಟಿದಾಗ ದೊರೆಯುವ ಸುಖವೆಂದು ಅರ್ಥಮಾಡಿ ಆಕೆಯ ಈ ಉಪದೇಶಕ್ಕಾಗಿ ಕಾಣಿಕೆಯೆಂದು ಆಕೆಗೆ ಒಂದು ರತ್ನದ ಹಾರವನ್ನು ಕೊಟ್ಟನು. ಕಿಸಾಗೋತಮಿ ಹಿಗ್ಗಿ "ಸಿದ್ಧಾರ್ಥನು ನನ್ನನ್ನು ಪ್ರೀತಿಸುವನು. ತೀವ್ರ ನನ್ನನ್ನು ತನ್ನ ದ್ವಿತೀಯ ಪತ್ನಿಯನ್ನಾಗಿ ಮಾಡಿಕೊಳ್ಳುವನು" ಎಂದು ನುಡಿದಳು. ಶುದ್ಧೋದನನು ಮಗನನ್ನು ಸಂತೋಷಪಡಿಸಲೋಸುಗ ತನ್ನ ರಾಜ್ಯದಲ್ಲಿದ್ದ ಪ್ರಸಿದ್ಧ ನರ್ತಕಿಯರನ್ನು ಕೂಡಿಸಿ ಆ ರಾತ್ರಿ ನೃತ್ಯವೇರ್ಪಡಿಸಿದ್ದನು. ಸಿದ್ಧಾರ್ಥನಿಗೆ ಇದರಿಂದ ಸಂತೋಷವಾಗಲಿಲ್ಲ. ಆತನ ಮನೋವ್ಯಥೆ ಸ್ವಲ್ಪವೂ ಕೂಡ ಕಡಿಮೆಯಾಗಲಿಲ್ಲ. ಮಧ್ಯರಾತ್ರಿಯಲ್ಲಿ ಎಚ್ಚರವಾದಾಗ ಆ ಸ್ತ್ರೀಯರೆಲ್ಲ ಮೈಮರೆತು ಅಲ್ಲಲ್ಲಿ ಮಲಗಿರುವ ಅಸಹ್ಯವಾದ ದೃಶ್ಯವನ್ನು ಕಂಡು ಆತನ ಮನಸ್ಸು ಹೇಸಿತು. ತಾನು ಮನೆಯನ್ನು ಬಿಟ್ಟು ಹೋಗಲು ತಕ್ಕ ಸಮಯವು ಇದೇ ಎಂದು ನಿಶ್ಚಯಿಸಿದನು. ಮಗುವಿನ ಮುಖವನ್ನು ಒಮ್ಮೆ ನೋಡಿಬಿಡಬೇಕೆಂದು ಮನಸ್ಸಾಯಿತು. ಯಶೋಧರೆ ಮಲಗಿದ್ದ ಸ್ಥಳಕ್ಕೆ ಹೋದನು. ಕೂಸನ್ನು ಎತ್ತಿಕೊಳ್ಳಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಆದರೆ ಕೂಸಿನ ತಲೆಯ ಮೇಲೆ ಕೈಯಿಟ್ಟು ಮಲಗಿದ್ದ ಹೆಂಡತಿ ಏಳಬಹುದೆಂದು ಹಾಗೆಯೇ ಆ ಸ್ಥಳದಿಂದ ಹೊರಬಿದ್ದನು. ಅರಮನೆಯ ಹೊರಗೆ ಬಂದನು. ಆತನ ನಂಬುಗೆಯ ಸೇವಕನಾದ ಚೆನ್ನನು ಆತನ ಪ್ರೀತಿಯ ಕಂಠಕವೆಂಬ ಬಿಳಿಯ ಕುದುರೆಯನ್ನು ಹಿಡಿದುಕೊಂಡು ನಿಂತಿದ್ದನು. ಆ ರಾತ್ರಿ ಅವರಿಬ್ಬರೂ ಬಹುದೂರ ಹೋದರು. ಬೆಳಗಾದಾಗ ಕಪಿಲವಸ್ತು ಮತ್ತು ಕೋಲಿಯ ದೇಶದ ಗಡಿಯನ್ನು ದಾಟಿ ಹರಿಯುವ ಅನೋಮ ನದಿಯ ದಂಡೆಗೆ ತಲುಪಿದರು. ಸಿದ್ಧಾರ್ಥನು ತನ್ನ ಆಭರಣಗಳನ್ನು ಚೆನ್ನನ ಕೈಲ್ಲಿ ಕೊಟ್ಟು ಕಂಠಕವನ್ನು ತೆಗೆದುಕೊಂಡು ತಿರುಗಿ ಹೋಗಲು ಆಜ್ಞಾಪಿಸಿದನು. ತನ್ನ ಖಡ್ಗದಿಂದ ತನ್ನ ದೀರ್ಘವಾದ ಕೇಶಗಳನ್ನು ಕತ್ತರಿಸಿ ಒಬ್ಬ ಭಿಕ್ಷುಕನಿಗೆ ತಾನು ಧರಿಸಿದ್ದ ಅರಿವೆಗಳನ್ನು ಕೊಟ್ಟು ಸನ್ಯಾಸಿಯಾದನು. ಅತಿ ವಾತ್ಸಲ್ಯದಿಂದ ಸಲಹಿದ ತನ್ನ ಗತವಯಸ್ಸಿನ ತಂದೆ, ಪ್ರೀತಿಯ ಹೆಂಡತಿ, ಆದೇ ಹುಟ್ಟಿದ ಮಗು, ರಾಜನಿಷ್ಠರಾದ ಪ್ರಜೆಗಳು ಇವರ ಬಗ್ಗೆ ತನ್ನ ಕರ್ತವ್ಯ ಕರ್ಮವೇನೆಂಬ ವಿಚಾರವು ಸಿದ್ಧಾರ್ಥನಿಗೆ ಹುಟ್ಟಲಿಲ್ಲ. ಇದು ಸರಿಯೇ? ಇದಕ್ಕೆ ಒಬ್ಬ ಪಾಶ್ಚಾತ್ಯ ಪಂಡಿತನು ಹೇಳಿದ ಉತ್ತರದ ಸಾರಾಂಶವಿದು. "ಮನೆಗೆ ಬೆಂಕಿ ಹತ್ತಿದಾಗ ಅಲ್ಲಿದ್ದಾಗ ಅಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯ ಮೊದಲನೆಯ ವಿಚಾರವು ತಾನು ಪಾರಾಗಬೇಕೆಂದು. ಅದು ಸಾಧಿಸಿದ ಮೇಲೆ ಉಳಿದವರನ್ನು ಉಳಿಸಿಕೊಳ್ಳಬೇಕೆಂಬುದು ಎರಡನೆಯ ವಿಚಾರ. ಸಿದ್ಧಾರ್ಥನ ಮೊದಲನೆಯ ವಿಚಾರವು ತಾನು ದುಃಖಮಯವಾದ ಸಂಸಾರದಿಂದ ಪಾರಾಗುವ ಹಾದಿಯನ್ನು ಕಂಡುಹಿಡಿಯಬೇಕೆಂಬುದಿತ್ತು. ಆದುದರಿಂದ

ಆತನ ಲಕ್ಷ್ಯವು ತಂದೆ, ತಾಯಿ, ಬಂಧುಗಳು, ಪ್ರೀತಿಯವರು ಇವರ ಕಡೆಗೆ ಹೋಗಲಿಲ್ಲ. ತನಗೆ ಬೇಕಾದುದು ದೊರೆತ ಕೂಡಲೇ ಇತರರನ್ನು ಉಳಿಸಿಕೊಳ್ಳಲು ಯತ್ನಪಟ್ಟನು."[1]

ಸಿದ್ಧಾರ್ಥನು ಅಲ್ಲಿಂದ ಮಗಧದ ರಾಜಧಾನಿಯಾದ ರಾಜಗೃಹಕ್ಕೆ ಹೋದನು. ಆಗ ಅಲ್ಲಿ ಬಲಾಢ್ಯನಾದ ಬಿಂಬಸಾರನು ಆಳುತ್ತಿದ್ದನು. ಸಿದ್ಧಾರ್ಥನು ಉಳಿದ ಭಿಕ್ಷುಕರಂತೆ ಮನೆಮನೆಗೆ ತಿರುಗಿ ಅನ್ನವನ್ನು ಭಿಕ್ಷೆ ಬೇಡಿದನು. ಕೂಡಿದ ಅನ್ನವನ್ನು ತಿನ್ನಲು ಯತ್ನಿಸಿದನು. ಅಕ್ಕರತೆಯಿಂದ ಬೆಳೆಸಿದ ರಾಜಪುತ್ರನಾದ ಸಿದ್ಧಾರ್ಥನು ಮನೆಮನೆ ತಿರಿದು ಕೂಡಿದ ಇಂತಹ ಅನ್ನವನ್ನು ತಿನ್ನುವಾಗ ಬಲುವ್ಯಥೆಯಾಯಿತೆಂದು ಕಥೆಯಿದೆ. ಸಿದ್ಧಾರ್ಥನು ಸನ್ಯಾಸಿಯಾದ ಸುದ್ದಿ ಸುತ್ತಲೂ ವ್ಯಾಪಿಸಿತು. ಆತನು ಹೋದಹೋದಲ್ಲಿ ಜನರು ಆತನನ್ನು ಸಾಮಾನ್ಯ ಸನ್ಯಾಸಿಯಂತೆ, ತಿಳಿಯದೆ ಒಳ್ಳೆ ಗೌರವದಿಂದ ಕಾಣಹತ್ತಿದರು. ಬಿಂಬಸಾರನು ಸಿದ್ಧಾರ್ಥನಿಗೆ ಇರಲು ರಾಜಪುತ್ರನ ಯೋಗ್ಯತೆಗೆ ಸಲ್ಲುವಂಥ ಮನೆಯನ್ನೂ ಊಟದ ವ್ಯವಸ್ಥೆಯನ್ನೂ ಮಾಡಿಕೊಡುವುದಾಗಿ ಕೇಳಿಕೊಂಡನು. ತಾನು ಹುಡುಕಹತ್ತಿರುವ ವಸ್ತು ದೊರೆಯುವವರೆಗೆ ತನಗೆ ಶಾಂತಿಯಿಲ್ಲ ಮತ್ತು ಒಂದೇ ಸ್ಥಾನದಲ್ಲಿರುವುದಿಲ್ಲ. ಆದುದರಿಂದ ತನಗೆ ಯಾವುದೂ ಬೇಡೆಂದು ವಿನಯದಿಂದ ಹೇಳಿದನು.

ಆ ಕಾಲದಲ್ಲಿ ಅತಿಪ್ರಸಿದ್ಧ ತತ್ತ್ವಜ್ಞಾನಿಯಾದ ಆಲಾರಕಾಲಾಮನ ಶಿಷ್ಯನಾಗಿ ಅವನಿಂದ ಅನೇಕ ವಿಷಯಗಳನ್ನು ಕಲಿತುಕೊಂಡನು. ಆದರೆ ಪುನರ್ಜನ್ಮವನ್ನೂ ಇಹದ ದುಃಖವನ್ನೂ ಗೆಲ್ಲುವ ಮಾರ್ಗವು ತನಗೆ ಗೊತ್ತಿಲ್ಲವೆಂದು ಆತನು ಒಪ್ಪಿಕೊಂಡ ಮೇಲೆ ಅವನನ್ನು ಬಿಟ್ಟು ಮತ್ತೊಬ್ಬ ಪ್ರಸಿದ್ಧ ತತ್ವಜ್ಞಾನಿಯಾದ ರುದ್ರಕರಾಮನೆಂಬುವನ ಶಿಷ್ಯನಾಗಿ ಅವನಿಂದ ಅನೇಕ ವಿಷಯಗಳನ್ನು ಕಲಿತುಕೊಂಡನು. ಆದರೆ ರುದ್ರಕನು ಸಿದ್ಧಾರ್ಥನಿಗೆ ಬೇಕಾದ ವಿದ್ಯೆಯನ್ನು ಕಲಿಸಲು ಶಕ್ತನಾಗಲಿಲ್ಲ. ದುಃಖದಿಂದ ಸಿದ್ಧಾರ್ಥನು ಅಲ್ಲಿಂದ ಹೊರಟನು. ಎಲ್ಲಿ ಶೋಧಿಸಿದರೂ ಆತನಿಗೆ ಬೇಕಾದುದನ್ನು ತೋರಿಸಿಕೊಡಲು ಶಕ್ತರಾದವರು ಒಬ್ಬರೂ ದೊರೆಯಲಿಲ್ಲ. ಯೋಗಮಾರ್ಗವನ್ನವಲಂಬಿಸಿ ಯೋಗ ಬಲದಿಂದ ತನಗೆ ಬೇಕಾದುದನ್ನು ಕಂಡುಕೊಳ್ಳಬೇಕೆಂದು ನಿಶ್ಚಯಿಸಿ ಉರುವೇಲಾ ಎಂಬ ಊರಿನಲ್ಲಿ ಕಠೋರ ತಪಸ್ಸನ್ನು ಕೈಗೊಂಡನು. ಈ ಸ್ಥಳವು ಈಗಿನ ಬುದ್ಧ ಗಯಾ ಗುಡಿಯು ಸಮೀಪದಲ್ಲಿತ್ತಂತೆ. ಉಗ್ರವಾದ ತಪಸ್ಸನ್ನಾಚರಿಸುವುದರಲ್ಲಿ ಸಿದ್ಧಾರ್ಥನು ಎಲ್ಲರನ್ನೂ ಮೀರಿದನು. ಆದುದರಿಂದ ಅಲ್ಲಿದ್ದ ತಪಸ್ವಿಗಳು ಈತನು ತಮ್ಮ ಗುರುವೆಂದು ತಿಳಿಯಹತ್ತಿದರು. ಸತತ ಆರುವರ್ಷಗಳವರೆಗೆ ಇಂತಹ ಉಗ್ರತಪಸ್ಸನ್ನಾಚರಿಸಿದರೂ ಕೂಡ ತನ್ನ ಧ್ಯೇಯವು ಸಾಧಿಸದೆ ಇದ್ದುದರಿಂದ ನಿರಾಶನಾಗಿ ಕಡೆಯ ಪ್ರಯತ್ನವನ್ನು ಮಾಡಿ ಮೂರ್ಛೆಹೊಂದಿ ಬಿದ್ದುಬಿಟ್ಟನು. ಶಿಷ್ಯರಾದ ಅಲ್ಲಿದ್ದ ಮುನಿಗಳು ಈತನು ಸತ್ತನೆಂದು ತಿಳಿದು "ಶಾಕ್ಯಗೌತಮನು ತನ್ನ ಧ್ಯೇಯವನ್ನು ಸಾಧಿಸದೆ ತೀರಿಕೊಂಡನು" ಎಂದು ಅಂದರು. ಸಿದ್ಧಾರ್ಥನು ಮೂರ್ಛೆಯಿಂದೆದ್ದು

1. *Paul Dahike Buddhist Essays, pp. 130-131*

ಆಹಾರವನ್ನು ಸ್ವೀಕರಿಸಿದನು. ಈತನ ಶಿಷ್ಯರು ಈತನು ತನ್ನ ಧ್ಯೇಯದಿಂದ ಚ್ಯುತನಾದನೆಂದು ತಿಳಿದು ಈತನನ್ನು ತ್ಯಜಿಸಿ ವಾರಣಾಸಿಗೆ ಹೋದರು. ಸಿದ್ಧಾರ್ಥನಿಗೆ ಬಹಳ ಖೇದವೆನಿಸಿ ಆಗಿಹೋದ ಸಂಗತಿಗಳನ್ನೆಲ್ಲ ನೆನಪು ಮಾಡಿಕೊಂಡನು. "ಈ ಜ್ಞಾನಕ್ಕಾಗಿ ಮನುಷ್ಯನಿಗೆ ಪ್ರಿಯವಾದ ವಸ್ತುಗಳನ್ನೆಲ್ಲ ತ್ಯಜಿಸಿ, ಯಾರೂ ಪಡಲಾರದ ಕಷ್ಟಗಳನ್ನನುಭವಿಸಿ ನನ್ನ ಧ್ಯೇಯವನ್ನು ಪಡೆಯಲು ಸಾಧ್ಯವಾಗಲಿಲ್ಲ. ಈ ನಿಷ್ಫಲವಾದ ಯತ್ನವನ್ನು ತ್ಯಜಿಸಿ ನನ್ನ ದೇಶಕ್ಕೆ ಮರಳಿಹೋದರೆ ನನ್ನವರು ಪ್ರೀತಿಯಿಂದ ಬರಮಾಡಿಕೊಳ್ಳುವರು" ಎಂಬ ವಿಚಾರವು ಆತನಲ್ಲಿ ಬಂದಿತು. ಸ್ವಲ್ಪ ಹೊತ್ತಿನ ಮೇಳೆ ಈ ವಿಚಾರವನ್ನು ಬದಲಿಸಿ ಧ್ಯೇಯವನ್ನು ಸಾಧಿಸಲೇಬೇಕು, ಅದರಲ್ಲಿ ಮರಣ ಬಂದರೆ ಅಡ್ಡಿಯಿಲ್ಲ ಎಂದು ನಿಶ್ಚಯಿಸಿದನು. ಮಾರನು ತಾನು ಸೈನ್ಯಸಹಿತವಾಗಿ ಬಂದು ಸಿದ್ಧಾರ್ಥನನ್ನು ಈ ನಿಶ್ಚಯದಿಂದ ಬಿಡಿಸಬೇಕೆಂದು ಬಹಳ ಪ್ರಯತ್ನ ಮಾಡಿದನು. ಮೊದಲು ಬೆದರಿಸಿದನು. ಆಮೇಲೆ ಆಸೆ ಹಚ್ಚಿ ತೋರಿಸಿದನು. ಏನೂ ಉಪಯೋಗವಾಗಲಿಲ್ಲ. ಸಿದ್ಧಾರ್ಥನು ಪೂರ್ವಕ್ಕೆ ಮುಖಮಾಡಿಕೊಂಡು ಬೋಧಿವೃಕ್ಷದ ಕೆಳಗೆ ಕುಳಿತವನು ಚಲಿಸಲಿಲ್ಲ. ಸಂಪೂರ್ಣ ಜ್ಞಾನವಾಗುವವರೆಗೆ ಈ ಸ್ಥಾನದಿಂದ ಚಲಿಸುವುದಿಲ್ಲವೆಂದು ನಿಶ್ಚಯಿಸಿದನು. ಸೂರ್ಯಾಸ್ತಮಯಕ್ಕೆ ಮಾರನು ಸಂಪೂರ್ಣವಾಗಿ ಸೋತು ಓಡಿಹೋದನು. ಆ ದಿವಸ ರಾತ್ರಿ ಧ್ಯಾನಮಗ್ನನಾದಾಗ ಸಿದ್ಧಾರ್ಥನಿಗೆ ತಾನು ಹುಡುಕುತ್ತಿದ್ದ ಜ್ಞಾನವು ಹೊಳೆದು ಸಂಪೂರ್ಣತೆ ಪ್ರಾಪ್ತವಾಗಿ ಬುದ್ಧನಾದನು. ಆ ರಾತ್ರಿ ಮೊದಲನೆಯ ಪ್ರಹರದಲ್ಲಿ ಆತನಿಗೆ ಪೂರ್ವಜನ್ಮಗಳ ಸ್ಮರಣೆಯಾಯಿತು. ಎರಡನೆಯ ಪ್ರಹರದಲ್ಲಿ ವಿಶ್ವದ ಪರಿಸ್ಥಿತಿಯ ಅರಿವಾಯಿತು. ಮೂರನೆಯ ಪ್ರಹರದಲ್ಲಿ ಕಾರ್ಯಕಾರಣಗಳ ಸ್ವರೂಪ ಗೊತ್ತಾಯಿತು. ಅರುಣೋದಯದ ಸಮಯಕ್ಕೆ ಸಂಪೂರ್ಣ ಜ್ಞಾನವಾಯಿತು.[1] ಸರ್ವಜ್ಞತ್ವವನ್ನು ಪಡೆದನು; ಬುದ್ಧನಾದನು. ಇದೇ

---

1. ಬೋಧಿವೃಕ್ಷದ ಕೆಳಗೆ ಧ್ಯಾನಮಾಡಿದ ಕಾಲದಲ್ಲಿ, ಗೌತಮನಿಗೆ ಗೋಚರವಾದ ಜ್ಞಾನವಾದರೂ ಯಾವುದು? ಅದೇ ಕಾರಣ ಮತ್ತು ಕಾರ್ಯಗಳ ಪರಿಜ್ಞಾನ ! ಆಶ್ಚರ್ಯಯುಕ್ತವಾದ ಇರವಿನ ಹಿಂದುಗಡೆ ವ್ಯಕ್ತಿತ್ವವಿಲ್ಲದ ಯಾಂತ್ರಿಕ ನಿಯಮವೊಂದಲ್ಲಿದೆ. ಹುಟ್ಟು ಮತ್ತು ಅಳಿವುಗಳ ನಿಯಮವೊಂದಲ್ಲದೆ ವ್ಯಕ್ತಿತ್ವವುಳ್ಳ ಮೇಧಾವಿಯಾದ ಸೃಷ್ಟಿಕರ್ತನಾಗಲಿ, ಪ್ರಪಂಚವನ್ನು ಆಳುವ ಪ್ರಭುವಾಗಲಿ ಯಾರೂ ಇಲ್ಲವೆಂಬುದೇ ಆ ಜ್ಞಾನ. ಇತೀ ಮಾನವನ ಆಲೋಚನೆ ಮತ್ತು ಬದುಕುಗಳಲ್ಲಿ ಕ್ರಾಂತಿಯನ್ನುಂಟುಮಾಡಿದ ಈ ಮಹಾಸಂಶೋಧನೆಯನ್ನು ಒಂದು ಮಾತಿನಲ್ಲಿ ಹೇಳುವುದಾದರೆ ಹುಟ್ಟು ಅಳಿವುಗಳ ನಿಯಮವೊಂದನ್ನು ಬಿಟ್ಟು, ಅನಿವಾರ್ಯವಾದ ವ್ಯಥೆ ಮತ್ತು ವಿಪತ್ತುಗಳನ್ನು ಒಳಗೊಂಡ ಅಶಾಶ್ವತ ನಿಯಮವೊಂದನ್ನು ಬಿಟ್ಟು ಈ ಪ್ರಪಂಚದಲ್ಲಿ ಸತ್ವವಾಗಲಿ, ತೇಜಸ್ಸಾಗಲಿ, ವಸ್ತುವಿನಲ್ಲಿ ಸತ್ಯಾಂಶವಾಗಲಿ, ಭಗವಂತನಾಗಲಿ, ಮನಸ್ಸಿನ ಹಿಂದೆ ಆತ್ಮವಾಗಲಿ ಯಾವುದೂ ಇಲ್ಲವೆಂಬುದೇ ಅದು. (ಅನಿಚ್ಚ, ಅನತ್ತ)

ಸ್ಥಿತಿಯಲ್ಲಿ ಧ್ಯಾನಮಗ್ನನಾಗಿ ಬೋಧಿವೃಕ್ಷದ ಕೆಳಗೆ ಏಳು ವಾರಗಳವರೆಗೆ ಕುಳಿತಿದ್ದನು. ಸುಜಾತಾ ಎಂಬ ಉರುವೇಲಾದ ಹೆಣ್ಣುಮಗಳೊಬ್ಬಳು ಈತನಿಗೆ ಹಾಲು ಅನ್ನವನ್ನು ತಂದುಕೊಟ್ಟಳಂತೆ. ಏಳು ವಾರಗಳು ಹೇಗೆ ಗತಿಸಿದವೆಂಬ ಬಗ್ಗೆ ಬೌದ್ಧಗ್ರಂಥಗಳಲ್ಲಿ ಹೀಗೆ ಉಲ್ಲೇಖವಿದೆ.

ಮೊದಲನೆಯ ವಾರ ಬುದ್ಧನು ಬೋಧಿವೃಕ್ಷದ ಕೆಳಗೆ ಉಕ್ತಿಸಾಮ್ರಾಜ್ಯ ಸುಖವನ್ನನುಭವಿಸುತ್ತ ಧ್ಯಾನದಲ್ಲಿ ಕುಳಿತಿದ್ದನು. ಎರಡನೆಯ ವಾರ ಅಜಪಾಲ ವೃಕ್ಷದ ಕೆಳಗೆ ಕುಳಿತಾಗ ಬ್ರಾಹ್ಮಣನೊಬ್ಬನು ಬಂದು ಬ್ರಾಹ್ಮಣ್ಯದ ಲಕ್ಷಣವೇನೆಂದು ಕೇಳಿದನು. ಬುದ್ಧನು "ಗರ್ವರಹಿತ, ನಿರ್ಮಲ, ಆತ್ಮಸಂಯಮ, ಜ್ಞಾನವಂತ, ಪವಿತ್ರನಾದವನು ಬ್ರಾಹ್ಮಣ" ಎಂದು ಹೇಳಿದನು. ಮೂರನೆಯ ವಾರ ಮುಚಲಿಂದ ವೃಕ್ಷದ ಕೆಳಗೆ ಕುಳಿತಾಗ ನಾಗರಾಜನಾದ ಮುಚಲಿಂದನು ತನ್ನ ಹೆಡೆಯನ್ನು ಬುದ್ಧನ ಮೇಲೆ ಪಸರಿಸಿ ಆತನನ್ನು ಗಾಳಿ, ಮಳೆ, ಬಿಸಿಲಿನಿಂದ ರಕ್ಷಿಸಿದನು. ನಾಲ್ಕನೆಯ ವಾರ ರಾಜಾಯತನ ವೃಕ್ಷದ ಕೆಳಗೆ ಕಳೆದುಹೋಯಿತು. ಕಡೆಯ ವಾರ ಬುದ್ಧನು ಆಲದ ಗಿಡದ ಕೆಳಗೆ ಕುಳಿತಾಗ ಇಬ್ಬರು ವರ್ತಕರು ತಮ್ಮನ್ನು ಶಿಷ್ಯರನ್ನಾಗಿ ಮಾಡಿಕೊಳ್ಳಬೇಕೆಂದು ಕೇಳಿಕೊಂಡರು. ಬುದ್ಧನು ಒಪ್ಪಿದನು. ಕೆಲಕಾಲ ಅದೇ ಬೋಧಿವೃಕ್ಷದ ಕೆಳಗೆ ಕುಳಿತು "ಇದೇ ಕಡೆಯ ಜನ್ಮ, ಇನ್ನು ಜನನವಿಲ್ಲ" ಎಂಬ ಮನಸ್ಸಿನ ತೃಪ್ತಿಯಿಂದ ಸುಖಶಾಂತಿಯನ್ನನುಭವಿಸುತ್ತ ಕುಳಿತಾಗ ಸ್ವಾಭಾವಿಕವಾಗಿ ಬುದ್ಧನ ದೃಷ್ಟಿ ದೇವತೆಗಳ ಮತ್ತು ಮನುಷ್ಯರ ಕಡೆಗೆ ಹೊರಳಿತು. ಇಷ್ಟು ತಾನು ಕಷ್ಟಪಟ್ಟು ಕಂಡುಕೊಂಡ ತತ್ತ್ವಗಳನ್ನು ಉಪದೇಶಿಸುವುದು ವಿಹಿತವೆ? ಜನರಿಗೆ ಇವು ತಿಳಿಯದಿದ್ದ ಪಕ್ಷಕ್ಕೆ ತನ್ನ ಶ್ರಮ ವ್ಯರ್ಥವಾಗುವುದು. ಆದುದರಿಂದ ಉಪದೇಶದ ಗೊಡವೆಗೆ ಹೋಗದಿರುವುದೇ ಯೋಗ್ಯವೆಂಬ ನಿರ್ಣಯ ಬುದ್ಧನಲ್ಲಿ ಮೂಡಹತ್ತಿತು. ಆಗ ಬ್ರಹ್ಮಾಸಹಂಪತಿ ಗಾಬರಿಯಾಗಿ ಭೂಮಿಗಿಳಿದು ಭಗವಂತನಿಗೆ ಉಪದೇಶಮಾಡಿ ದೇವತೆಗಳನ್ನೂ ಮನುಷ್ಯರನ್ನೂ ರಕ್ಷಿಸಬೇಕೆಂದು ಬೇಡಿಕೊಂಡನು. ಭಗವಂತನು ಒಪ್ಪಿದನು. ತನ್ನ ತತ್ತ್ವಗಳನ್ನು ತಿಳಿದುಕೊಳ್ಳಲು ಯೋಗ್ಯರಾದವರು ಯಾರೆಂಬ ಬಗ್ಗೆ ಯೋಚಿಸಲು ತನಗೆ ಒಂದು ಕಾಲದಲ್ಲಿ ಗುರುಗಳಾಗಿದ್ದ ಆಳಾರ ಕಾಲಾಮ, ರುದ್ರಕರಾಮ ಇವರಿಗೆ ಉಪದೇಶ ಮಾಡಬೇಕೆಂದು ಮನಸ್ಸಾಯಿತು. ಆದರೆ ಅವರು ಈ ಅವಧಿಯಲ್ಲಿ ತೀರಿಕೊಂಡಿದ್ದರು. ಆಮೇಲೆ ತನ್ನ ಶಿಷ್ಯರಾಗಿದ್ದ ಐವರು ತಪಸ್ವಿಗಳಿಗೆ ಬೋಧಿಸಬೇಕೆಂದು ಅವರನ್ನು ಶೋಧಿಸಿ ವಾರಣಾಸಿಯ ಇಸಿಪತನ (ಹರಿಣವನ)ದಲ್ಲಿಗೆ ಹೋಗಿ ಅವರಿಗೆ ತಾನು ಬುದ್ಧನಾಗಿರುವುದನ್ನು ಮನಗಾಣಿಸಿ ಧರ್ಮಚಕ್ರಪ್ರವರ್ತನ ಸೂತ್ರವನ್ನು ಬೋಧಿಸಿದನು. ತಪಸ್ವಿಗಳು ಭಗವಂತನ ಉಪದೇಶವನ್ನು ಸ್ವೀಕರಿಸಿ ಬುದ್ಧನಿಂದ ಬೌದ್ಧದೀಕ್ಷೆಯನ್ನು ಹೊಂದಿ ಸಂಘದ ಆದ್ಯ ಸದಸ್ಯರಾದರು. ಆಮೇಲೆ ಭಗವಂತನ

ಶಿಷ್ಯರಾದವರಲ್ಲಿ 'ಯಶ' ಎಂಬುವನೊಬ್ಬನು. ಇವನ ಚರಿತೆ ಸಿದ್ಧಾರ್ಥನ ಚರಿತೆಯಂತೆ ಇದೆಯಾದುದರಿಂದ ಕೆಲವು ಪಂಡಿತರು ಯಶನ ಚರಿತೆಯಿಂದ ಸಿದ್ಧಾರ್ಥನ ಚರಿತ್ರೆಯನ್ನು ಬರೆದಿರಬಹುದೆಂದು ಸಂಶಯಪಡುವರು. ಯಶನು ಒಬ್ಬ ಶ್ರೀಮಂತನ ಮಗನು. ಅಕ್ಕರತೆಯಿಂದ ಬೆಳೆದವನು. ಈತನ ಸುಖಭೋಗಕ್ಕೆ ಯಾವರೀತಿಯಿಂದಲೂ ಕೊರತೆ ಇದ್ದಿಲ್ಲ. ಅನೇಕ ಸುಂದರಿಯರ ಸಂಗದಲ್ಲಿ ಸುಖಲೋಪನಾದ ಯಶನು ಒಂದು ದಿವಸ ಜಿಗುಪ್ಸೆಯನ್ನು ತಾಳಿ ಸಂಸಾರವನ್ನು ತ್ಯಜಿಸಿ ಭಗವಂತನಿಗೆ ಶರಣಾಗತನಾದನು. ಭಗವಂತನು ಈತನಿಗೆ ದೀಕ್ಷೆಯನ್ನು ಕೊಟ್ಟು ಈತನನ್ನು ಭಿಕ್ಷುವನ್ನಾಗಿ ಮಾಡಿದನು. ಶ್ರೀಮಂತರ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳು ಅನೇಕರು ಪ್ರಪಂಚವನ್ನು ತ್ಯಜಿಸಿ ಬುದ್ಧನನ್ನು ಮೊರೆಹೊಕ್ಕು ಆತನ ಶಿಷ್ಯರಾದರು. ಸ್ವಲ್ಪದಿವಸಗಳಲ್ಲಿಯೇ ಇಂತಹ ಸಂಖ್ಯೆ ೬೦ ಆಯಿತು. ದುಃಖವನ್ನು ನೀಗುವ ಮತ್ತು ಜನನ ಮರಣವನ್ನು ಸರ್ವತ್ರ ಸಾರಲು ಭಗವಂತನು ಇವರನ್ನು ಬೇರೆಬೇರೆ ದಿಕ್ಕಿಗೆ ಕಳಿಸಿದನು. ಉರುವೇಲಾ ಎಂಬಲ್ಲಿ ಬ್ರಾಹ್ಮಣ ಕಶ್ಯಪನೂ ಆತನ ಬಂಧುಗಳೂ ಒಂದು ಸಾವಿರ ಶಿಷ್ಯರಾದ ತಪಸ್ವಿಗಳಿಂದೊಡಗೂಡಿ ತಪಸ್ಸು ಮಾಡುತ್ತಿದ್ದರು. ಬುದ್ಧನು ಅಲ್ಲಿಗೆ ಹೋಗಿ ದೈವೀಕಶಕ್ತಿಯನ್ನು ಅವರಿಗೆ ತೋರಿಸಿ ತನ್ನ ತತ್ತ್ವಗಳ ಸತ್ಯತೆಯ ಬಗ್ಗೆ ಅವರಿಗೆ ಮನಗಾಣಿಸಿ ಅವರೆಲ್ಲರನ್ನೂ ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು. ಈಗ ಭಗವಂತನಿಗೆ ಶಿಷ್ಯರ ಸಮೂಹ ಸಾವಿರದ ಮೇಲಾಯಿತು. ಇವರೆಲ್ಲರಿಂದೊಡಗೂಡಿ ಬುದ್ಧನು ಮಗಧದ ರಾಜಧಾನಿಯಿಂದ ರಾಜಗೃಹದ ಕಡೆಗೆ ತಿರುಗಿದನು. ರಾಜನಾದ ಬಿಂಬಸಾರನು ತನ್ನ ಅನುಯಾಯಿಗಳಿಂದೊಡಗೂಡಿ ಬುದ್ಧನನ್ನು ಎದುರುಗೊಂಡು ಸತ್ಕರಿಸಿ ಅವನ ಉಪದೇಶಾಮೃತವನ್ನು ಕೇಳಿ ಹರ್ಷಗೊಂಡು ತನ್ನ ಪ್ರಜೆಗಳೊಡನೆ ತಾನೂ ಬೌದ್ಧನಾದನು. ಅಲ್ಲಿ ಆ ಕಾಲದ ಪ್ರಸಿದ್ಧ ಪಂಡಿತರಾದ ಸಾರಿಪುತ್ರ ಮತ್ತು ಮೊಗ್ಗಲ್ಲಾನ (ಮೌದ್ಗಲಾಯನ) ಎಂಬುವರಿಗೆ ಬೌದ್ಧದೀಕ್ಷೆಯನ್ನು ಕೊಟ್ಟು ಭಿಕ್ಷುಗಳನ್ನಾಗಿ ಮಾಡಿದನು. ಬುದ್ಧನ ಅನುಯಾಯಿಗಳಲ್ಲಿ ಇವರು ಅಗ್ರಗಣ್ಯರಾಗಿರುವರು.

ಇದೇ ಕಾಲಕ್ಕೆ ತನ್ನ ತಂದೆಯಾದ ಶುದ್ಧೋದನನಿಂದ ಕಪಿಲವಸ್ತುವಿಗೆ ಬರಬೇಕೆಂದು ಆಗ್ರಹದ ಆಮಂತ್ರಣ ಬಂದಿತು. ಬುದ್ಧನು ಅಲ್ಲಿಗೆ ಹೋಗಲು ಒಪ್ಪಿಕೊಂಡನು. ಶುದ್ಧೋದನನಿಗೆ ಬಹಳ ಹಿಗ್ಗಾಯಿತು. ಆತನೂ ಪ್ರಭುಗಳೂ ಬುದ್ಧನ ಸ್ವಾಗತಕ್ಕಾಗಿ ಬಹಳ ವ್ಯವಸ್ಥೆ ಮಾಡಿದರು. ಆದರೆ ಬುದ್ಧನು ಯಾರಿಗೂ ಗೊತ್ತಿಲ್ಲದೆ ಊರಲ್ಲಿ ಪ್ರವೇಶಿಸಿ ಸಾಮಾನ್ಯ ಭಿಕ್ಷುವಿನಂತೆ ಓಣಿಯಲ್ಲಿ ಭಿಕ್ಷೆ ಬೇಡಹತ್ತಿದನು. ಇದು ಅಭಿಮಾನಿಯಾದ ಆತನ ತಂದೆಗೂ ಬಳಗದವರಿಗೂ ರುಚಿಸಲಿಲ್ಲ. ಬುದ್ಧನು ಅವರನ್ನೂ ಹೆಂಡತಿಯಾದ ಯಶೋಧರೆಯನ್ನೂ ಸಮಾಧಾನಪಡಿಸಿದನು. ಶುದ್ಧೋದನನು ಬೌದ್ಧನಾದನು. ಮಗುವಾದ ರಾಹುಲನು ಭಿಕ್ಷುವಾಗಿ ತಂದೆಯನ್ನು

ಅನುಸರಿಸಲು ಯಶೋಧರೆ ಅನುಮತಿಸಿದಳು. ಮುಂದೆ ತಾನು ಬೌದ್ಧ ಭಿಕ್ಷುಣಿಯಾದಳು. ಶಾಕ್ಯವಂಶದ ಅರಸ ಮಕ್ಕಳಾದ ಆನಂದ, ಅನುರುದ್ಧ, ದೇವದತ್ತರೆಂಬುವರೂ ನಾವಲಿಗನಾದ ಉಪಲಿಯೂ ದೀಕ್ಷೆಯನ್ನು ಪಡೆದು ಭಿಕ್ಷುಗಳಾಗಿ ಬುದ್ಧನನ್ನು ಅನುಸರಿಸಿದರು. ಬುದ್ಧನು ರಾಜಗೃಹಕ್ಕೆ ಬಂದನು. ಅಲ್ಲಿಯ ಶ್ರೀಮಂತನಾದ ಅನಾಥಪಿಂಡಿಕನೆಂಬ ವರ್ತಕನು ಸಾವತ್ಥಿಯಲ್ಲಿರುವ ತನ್ನ ಜೇತವನವೆಂಬ ಉದ್ಯಾನವನ್ನು ಬುದ್ಧನಿಗೂ ಭಿಕ್ಷುಗಳಿಗೂ ವಾಸಮಾಡಲು ಕೊಟ್ಟನು. ರಾಜನಾದ ಬಿಂಬಸಾರನು ತನಗಾಗಿ ಮಾಡಿಸಿದ ವೇಳು(ಬಿದಿರು)ವನವೆಂಬ ಉದ್ಯಾನವನ್ನು ಬುದ್ಧನಿಗೆ ದಾನ ಮಾಡಿದನು. ವಿಶಾಖೆಯೆಂಬ ಒಬ್ಬ ಶ್ರೀಮಂತ ಹೆಣ್ಣುಮಗಳು ಬುದ್ಧನಿಗೆ ಉದ್ಯಾನ ವಿಹಾರಗಳನ್ನು ಮಾಡಿಸಿಕೊಟ್ಟಳು. ಜನರು ಬುದ್ಧನನ್ನೂ ಆತನ ಅನುಯಾಯಿಗಳನ್ನೂ ಅವರು ಹೋದಹೋದಲ್ಲಿ ಒಳ್ಳೆಯ ಆದರದಿಂದ ಸತ್ಕರಿಸಹತ್ತಿದರು. ಅವರಿಗೆ ದಾನಮಾಡಲು ನಾ ಮುಂದೆ ತಾ ಮುಂದೆ ಎಂದು ಬರುತ್ತಿದ್ದರು. ಬುದ್ಧನ ಜಗನ್ಮಾನ್ಯತೆ, ಆ ಕಾಲದ ಜನರಿಗೆ ಆತನ ಮೇಲಿನ ಆದರ ಮತ್ತು ಭಕ್ತಿಗೆ ನೆಲೆಯಿಲ್ಲ. ಬುದ್ಧನ ದಿನಚರ್ಯೆ ಬೌದ್ಧಗ್ರಂಥಗಳಿಂದ ನಮಗೆ ಬಹುಮಟ್ಟಿಗೆ ಗೊತ್ತಾಗುತ್ತದೆ. ಬುದ್ಧನು ತೀರ ಮುಂಜಾನೆ ಎದ್ದು ಮುಖ ಮಾರ್ಜನ ಮಾಡಿಕೊಂಡು ಧ್ಯಾನ ಮಾಡುತ್ತಾ ಕುಳಿತುಕೊಳ್ಳುವನು. ಭಿಕ್ಷದ ವೇಳೆಯಾದ ಮೇಲೆ ಭಿಕ್ಷಾಪಾತ್ರೆಯನ್ನು ಕೈಕೊಂಡು ಸಮೀಪದ ಊರಲ್ಲಿ ಭಿಕ್ಷೆಗೆ ಹೋಗುವನು. ಅಲ್ಲಿ ದೃಷ್ಟಿಯನ್ನು ನೆಲದ ಮೇಲೆ ಇಟ್ಟು ಮೌನದಿಂದ ಮನೆಯಿಂದ ಮನೆಗೆ ಅಲೆದು ಪಾತ್ರೆಯಲ್ಲಿ ನೀಡಿದುದನ್ನೆಲ್ಲ ಸ್ವೀಕರಿಸುತ್ತಿದ್ದನು. ಎಡೆ ಮಾಡಿದುದನ್ನು ಊಟಮಾಡುತ್ತಿದ್ದನು. ತಾನು ಇಳಿದ ಸ್ಥಳಕ್ಕೆ ಬಂದು ತನ್ನ ಶಿಷ್ಯರೆಲ್ಲ, ಊಟ ಮಾಡುವವರೆಗೆ ಒಂದು ಸ್ಥಳದಲ್ಲಿ ಕುಳಿತು ಆಮೇಲೆ ಕೈಕಾಲು ತೊಳೆದುಕೊಂಡು ಅವರೆಲ್ಲರಿಗೂ ತಾಸು ಎರಡು ತಾಸು ಧರ್ಮವನ್ನು ಬೋಧಿಸುತ್ತಿದ್ದನು. ಆಮೇಲೆ ತಾನು ಮಲಗುವ ಗವಿಗೆ ಹೋಗಿ ವಿಶ್ರಾಂತಿಯನ್ನು ಹೊಂದಿ ದರ್ಶನಕ್ಕಾಗಿ ಬಂದ ಜನರಿಗೆ ದರ್ಶನ ಕೊಟ್ಟು ಉಪದೇಶ ಮಾಡಿ ಅವರೆಲ್ಲರೂ ಹೋದ ಮೇಲೆ ಸ್ನಾನ ಮಾಡಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದನು. ಸಾಯಂಕಾಲದಲ್ಲಿ ದೂರದೇಶದಿಂದ ಬಂದ ಶಿಷ್ಯರನ್ನು ಕಂಡು ಮಾತನಾಡಿ ಉಪದೇಶಮಾಡಿ ಕಳಿಸುತ್ತಿದ್ದನು. ರಾತ್ರಿ ಬಹಳವಾದ ಮೇಲೆ ತಾನು ಮಲಗುವ ಗವಿಗೆ ಹೋಗಿ ಮಲಗಿಕೊಳ್ಳುತ್ತಿದ್ದನು. ಇದು ಭಗವಂತನ ದಿನಚರ್ಯೆ. ಮಳೆಗಾಲದಲ್ಲಿ ಮೂರು ತಿಂಗಳು ಒಂದೇ ಸ್ಥಳದಲ್ಲಿರುತ್ತಿದ್ದನು. ಉಳಿದ ಕಾಲದಲ್ಲಿ ಸುತ್ತಲೂ ಸಂಚರಿಸಿ ಧರ್ಮವನ್ನು ಬೋಧಿಸುತ್ತಿದ್ದನು. ಈ ಪ್ರಕಾರ ಭಗವಂತನು ೪೫ ವರ್ಷಗಳವರೆಗೆ ಪಾದಚಾರಿಯಾಗಿ ಊರಿಂದೂರಿಗೆ ಸಂಚರಿಸಿ ಧರ್ಮವನ್ನು ಬೋಧಿಸಿದನು. ಆಯುಷ್ಯದ ಕಡೆಯ ಕಾಲದಲ್ಲಿ ಆತನಿಗೆ

ವ್ಯಥೆಯನ್ನುಂಟು ಮಾಡುವಂಥ ಹಲವು ಸಂಗತಿಗಳು ಘಟಿಸಿದವು. ಬುದ್ಧನ ಸಮೀಪದ ಬಂಧುವಾದ ಬುದ್ಧನಿಂದ ದೀಕ್ಷೆಯನ್ನು ಪಡೆದ ದೇವದತ್ತನೆಂಬುವನು ವಿರೋಧಿಯಾಗಿ ತನ್ನದೊಂದು ಪಂಥವನ್ನು ಮಾಡಿಕೊಂಡು ಭಗವಂತನನ್ನು ವಿರೋಧಿಸಹತ್ತಿದನು. ಮಗಧದ ಪಿತೃಘಾತಕನಾದ ಅಜಾತಶತ್ರು ಕೋಸಲ ದೇಶದ ಮೇಲೆ ಧಾಳಿ ಮಾಡಿ ಕೋಸಲ ಮತ್ತು ಕಪಿಲವಸ್ತುಗಳ ರಾಜರನ್ನೂ ಸರದಾರರನ್ನೂ ಕೊಂದು ದೇಶವನ್ನು ಹಾಳುಮಾಡಿದನು. ಬುದ್ಧನ ಆಪ್ತರನೇಕರು ಇದರಲ್ಲಿ ಮರಣಹೊಂದಿದರು. ಬೌದ್ಧಭಿಕ್ಷುಗಳು ಬೆಳೆದುದರಿಂದ ಅವರೆಲ್ಲರನ್ನು ತಾನು ಹಾಕಿಕೊಟ್ಟ ನಿಯಮಗಳಂತೆ ನಡೆಯಲಿಕ್ಕೆ ಹಚ್ಚುವುದು ಕಠಿಣವಾಗಹತ್ತಿತು.

ಬುದ್ಧನಿಗೆ ತನ್ನ ಮರಣ ಸಮೀಪಿಸಿತೆಂದು ತಿಳಿದು ಸ್ವದೇಶದಲ್ಲಿ ದೇಹಬಿಡಬೇಕೆಂಬ ಅಪೇಕ್ಷೆಯಿಂದ ಉತ್ತರದ ಕಡೆಗೆ ಹೋಗಲು ನಿಶ್ಚಯಿಸಿದನು. ಮಗಧದ ರಾಜಧಾನಿಯಾದ ರಾಜಗೃಹದಲ್ಲಿ ಭಿಕ್ಷುಗಳ ಸಂಘಕ್ಕೆ ಆಚಾರದ ಬಗ್ಗೆ ಹೇಳಿ, ಗಂಗಾನದಿಯನ್ನು ಪಾಟಲಿ ಗ್ರಾಮದ ಹತ್ತಿರ ದಾಟಿ, ಕೋಟಗ್ರಾಮಕ್ಕೆ ಮುಟ್ಟಿದನು. ಅಲ್ಲಿ ನಾಲ್ಕು ಆರ್ಯ ಸತ್ಯಗಳನ್ನು ಭಿಕ್ಷುಗಳಿಗೆ ಬೋಧಿಸಿ ಅಲ್ಲಿಂದ ವೈಶಾಲಿಗೆ ಹೋದನು. ಆ ಕಾಲದಲ್ಲಿ ವೈಶಾಲಿ ಬಹುದೊಡ್ಡ ಪಟ್ಟಣವಾಗಿತ್ತು. ಇಲ್ಲಿಯ ಬಹುಜನರು ಬುದ್ಧನಿಂದ ದೀಕ್ಷೆಯನ್ನು ಪಡೆದರು. ಅಂಬಪಾಲಿಯೆಂಬ ಹೆಸರಾದ ವೇಶ್ಯೆ ದರ್ಶನಕ್ಕೆ ಬಂದು ಮರುದಿವಸ ಭಗವಂತನು ಭಿಕ್ಷೆಗಳಿಂದೊಡಗೂಡಿ ತನ್ನ ಮಾವಿನ ತೋಟದಲ್ಲಿ ಭೋಜನ ಮಾಡಬೇಕೆಂದು ಬಿನ್ನೈಸಿದಳು. ಭಗವಂತನು ಮೌನದಿಂದ ಒಪ್ಪಿಕೊಂಡನು. ಮರುದಿವಸ ಆಕೆ ಊಟವಾದ ನಂತರ ಆ ತೋಟವನ್ನು ಬುದ್ಧಸಂಘಕ್ಕೆ ದಾನ ಮಾಡಿದಳು. ಬುದ್ಧನು ಅಲ್ಲಿಂದ ಸಮೀಪದಲ್ಲಿರುವ ಬೆಳುವ ಎಂಬ ಗ್ರಾಮದಲ್ಲಿ, ಜನರಿಂದ ತೊಂದರೆಯಾಗದ ಶಾಂತಸ್ಥಳದಲ್ಲಿ ತಾನೂ ಆನಂದನೂ ಮಳೆಗಾಲ ತೀರುವವರೆಗೆ ಉಳಿದುಕೊಂಡರು. ಇಲ್ಲೆ ಬುದ್ಧನಿಗೆ ಬೇನೆ ಹೆಚ್ಚಾಯಿತು. ಭಗವಂತನು ಕೈಬಿಡುವನೆಂದು ಆನಂದನು ತಿಳಿದುಕೊಂಡನು. ಆದರೆ ಭಿಕ್ಷುಗಳನ್ನೆಲ್ಲ ಕರೆದು ಅವರಿಗೆ ಮುಂದಿನ ಮಾರ್ಗವನ್ನು ತೋರಿಸದೆ ಹೋಗುವುದು ವಿಹಿತವಲ್ಲೆಂದು ಭಗವಂತನಿಗೆ ಅನ್ನಿಸಿದುದರಿಂದ ಆತ್ಮಶಕ್ತಿಯಿಂದ ಬೇನೆಯನ್ನು ತಡೆದನು. ಆನಂದನಿಗೆ ಸಂತೋಷವಾಯಿತು. "ಸಂಘದ ಭವಿತವ್ಯದ ಬಗ್ಗೆ ದಾರಿ ತೋರಿಸದೆ ತಥಾಗತನು ನಿಮ್ಮಿಂದ ಅಗಲಲಾರನೆಂಬ ವಿಚಾರ ನನಗೆ ಸ್ವಲ್ಪ ಸಮಾಧಾನವನ್ನುಂಟು ಮಾಡಿದೆ" ಎಂದು ಅಂದನು. "ಆನಂದ, ಸಂಘ ನನ್ನ ಮೇಲೆಯೇ ಏಕೆ ಅವಲಂಬಿಸಿರುವುದು? ನಾನು ಮುಚ್ಚುಮರೆಯಿಲ್ಲದೆ ಇಲ್ಲಿಯವರೆಗೆ ಧರ್ಮವನ್ನು ಬೋಧಿಸಿರುವೆನು. ಹೆಚ್ಚಿಗೆ ಹೇಳತಕ್ಕದ್ದು ಉಳಿದಿಲ್ಲ. ಆನಂದ, ಯಾವನಿಗೆ 'ನಾನೇ ಸಂಘದ ಮಾರ್ಗದರ್ಶಕನು, ನನ್ನಿಂದಲೇ ಇದೆಲ್ಲ ನಡೆದಿದೆ' ಎಂಬ ಭಾವನೆ ಉಂಟೋ ಅವನು ಸಂಘದ

ಭವಿತವ್ಯದ ಬಗ್ಗೆ ಚಿಂತಿಸಬಹುದು. ತಥಾಗತನಿಗೆ ಅಂತಹ ಭಾವನೆಯಿಲ್ಲ. ಆದುದರಿಂದ ಆನಂದ, ನಿಮ್ಮ ಕತ್ತಲೆಯನ್ನು ದೂರಮಾಡಲು ನೀವೇ ದೀಪಗಳಾಗಬೇಕು. ನಿಮ್ಮನ್ನು ನೀವೇ ಆಶ್ರಯಿಸಬೇಕು. ಧರ್ಮವನ್ನು ಬಿಡಬಾರದು. ಈಗಾಗಲಿ ಅಥವಾ ನಾನು ತೀರಿಕೊಂಡ ಅನಂತರವಾಗಲಿ ಭಿಕ್ಷುಗಳಲ್ಲಿ ಯಾರು ಧರ್ಮವನ್ನೇ ಗುರಿಯಾಗಿಟ್ಟು ಕೊಂಡು ಸ್ವಾವಲಂಬನದಿಂದ ಸತ್ಪಥದಲ್ಲಿ ನಡೆಯುವವರೋ, ಅವರು, ಅನಂತ ಉನ್ನತಿಯನ್ನು ಹೊಂದುವರು" ಎಂದು ಭಗವಂತನು ಹೇಳಿದನು.[1] ಅಲ್ಲಿಂದ ಮುಂದೆ ಭಗವಂತನು ಪಾವಾಪುರಿಗೆ ತಲುಪಿದನು. ಅಲ್ಲಿ ಕಮ್ಮಾರಚಂದನ ವಿಜ್ಞಾಪನೆಯ ಮೇರೆಗೆ ಅವನಲ್ಲಿ ಊಟ ಮಾಡಿದನು. ಇದರಿಂದ ಬುದ್ಧನಿಗೆ ಅಜೀರ್ಣವ್ಯಾಧಿ ಹೆಚ್ಚಾಗುವ ಲಕ್ಷಣ ತೋರಿದುದರಿಂದ ಅಲ್ಲಿಂದ ಕುಶೀನಾರಕ್ಕೆ ಹೋದನು. ಆ ಪಟ್ಟಣದ ಸಮೀಪದಲ್ಲಿ ಹಿರಣ್ಯವತೀ ನದಿಯ ದಡದ ಸಾಲವೃಕ್ಷಗಳ ಬನಕ್ಕೆ ಮುಟ್ಟಿದ ಕೂಡಲೇ ಭಗವಂತನು 'ಆನಂದ, ಆ ಎರಡು ಸಾಲವೃಕ್ಷಗಳ ಕೆಳಗೆ ಉತ್ತರಕ್ಕೆ ತಲೆಮಾಡಿ ಹಾಸಿಗೆಯನ್ನು ಹಾಕು. ನನಗೆ ದಣಿವಾಗಿದೆ ಮಲಗಿಕೊಳ್ಳುವೆನು' ಎಂದು ಅಂದನು. ಆನಂದನು ಹಾಗೆ ಮಾಡಿದನು. ಭಗವಂತನು ಬಲಮಗ್ಗುಲು ಕಾಲಮೇಲೆ ಕಾಲನ್ನು ಹಾಕಿಕೊಂಡು ಮಲಗಿದನು. ಆ ಕಾಲದಲ್ಲಿ ಸಾಲವೃಕ್ಷದ ಹೂಮೊಗ್ಗೆಗಳು ಬೀಳಹತ್ತಿದುವು. ಭಗವಂತನು ತನ್ನನ್ನು ಬಿಟ್ಟುಹೋಗುವನೆಂದು ಆನಂದನಿಗೆ ಅನ್ನಿಸಿ, 'ನಾನು ಕಲಿತುಕೊಳ್ಳುವುದು ಪೂರ್ಣವಾಗಿಲ್ಲ, ಗುರು ನನ್ನನ್ನು ಬಿಟ್ಟು ಹೋಗುವನು. ಇಂತಹ ದಯಾಘನನನ್ನು ಅಗಲಿರುವುದು ಹೇಗೆ? ಎಂದು ಅಳಹತ್ತಿದನು. ಅವನನ್ನು ಕರೆದು ಎಲ್ಲರ ಸಮಕ್ಷ ಆತನು ಮಾಡಿದ ಸೇವೆಯನ್ನು ಶ್ಲಾಘಿಸಿ, 'ಆನಂದ ಬಹಳವಾಗಿ ದುಡಿದುಕೊಂಡಿರುವೆ. ಇನ್ನಿಷ್ಟು ಯತ್ನ ಮಾಡು. ನೀನೂ ಅರ್ಹಂತನಾಗುವೆ' ಎಂದು ಆಡಿದನು. ಆಮೇಲೆ ಸುಭದ್ರನಿಗೆ ದೀಕ್ಷೆಕೊಟ್ಟು ಆತನನ್ನು ಸಂಘದಲ್ಲಿ ಸೇರಿಸಿಕೊಂಡನು. ಈತನು ಬುದ್ಧನಿಗೆ ದೀಕ್ಷೆಯನ್ನು ಪಡೆದ ಭಿಕ್ಷುಗಳನ್ನು ಕಡೆಯವನು. ಬುದ್ಧನು ನೆರೆದ ೫೦೦ ಭಿಕ್ಷುಗಳನ್ನು ಕರೆದು ಯಾರಿಗಾರೂ ಬುದ್ಧಧರ್ಮ, ಧರ್ಮಮಾರ್ಗ, ಆಚಾರಗಳ ಬಗ್ಗೆ ಸಂಶಯವಿದ್ದರೆ ಕೇಳಬೇಕೆಂದು ಹೇಳಿದನು. ಅವರಲ್ಲಿ ಯಾರಿಗೂ ಸಂಶಯವಿದ್ದಿಲ್ಲ ಆದುದರಿಂದ ಯಾರೂ ಕೇಳಲಿಲ್ಲ. ಅವರೆಲ್ಲರೂ ಅರ್ಹಂತರಾಗುವರೆಂದು ಬುದ್ಧನು ನುಡಿದನು : "ಭಿಕ್ಷುಗಳೇ ಕೇಳಿ, ವಸ್ತುವಿನ ಪ್ರತಿಯೊಂದು ಅವಯವದಲ್ಲಿ ಸವೆಯುವ ಗುಣ ಸ್ವಾಭಾವಿಕವಾಗಿರುವುದು. ನಿಮ್ಮನಿಮ್ಮ ಬಿಡುಗಡೆಗಾಗಿ ದಕ್ಷತೆಯಿಂದ ಯತ್ನಿಸಿ." ಇವೇ ಭಗವಂತನ ಕಡೆಯ ನುಡಿಗಳು. ಆಮೇಲೆ ಭಗವಂತನು ಪರಿನಿರ್ವಾಣಕ್ಕೆ ಸಂದನು.

---

1. *Sacred Book of the Buddhists, Vol IIIpp. 107-109*

ಕುಶಿನಾರದ ಘನವಂತರೆಲ್ಲ ಕೂಡಿ ಬುದ್ಧನ ಔರ್ಧ್ವದೈಹಿಕ ಕ್ರಿಯೆಯನ್ನು ಒಬ್ಬ ಚಕ್ರವರ್ತಿಗೆ ಸಲ್ಲುವ ಮರ್ಯಾದೆಯಿಂದ ಮಾಡಿದರು. ಪಟ್ಟಣದ ಹೊರಗಿರುವ ಪುಣ್ಯಭೂಮಿಗೆ ಬುದ್ಧನ ಶರೀರವನ್ನು ಒಳ್ಳೆಯ ವೈಭವದಿಂದ ರಾಜಮನೆತಸದಲ್ಲಿ ಮುಖ್ಯರಾದ ಏಳು ಜನರು ಹೊತ್ತುಕೊಂಡು ಹೋಗಿ ಅಲ್ಲಿ ಚಂದನ ಕಟ್ಟಿಗೆಯಿಂದ ಮಾಡಿದ ಚಿತೆಯಲ್ಲಿ ಅದನ್ನು ದಹನ ಮಾಡಲು ಯತ್ನಿಸಿದರು. ಚಿತೆಗೆ ಬೆಂಕಿ ಹತ್ತಲಿಲ್ಲ. ಜನರು ಆಶ್ಚರ್ಯಚಕಿತರಾದರು. ಸ್ವಲ್ಪಹೊತ್ತಿನಲ್ಲಿ ಕಶ್ಯಪನು ೫೦೦ ಭಿಕ್ಷುಗಳಿಂದೊಡಗೂಡಿ ಅಲ್ಲಿಗೆ ಬಂದು ಚಿತೆಗೆ ನಮಸ್ಕರಿಸಿ ಅದರ ಸುತ್ತ ಮೂರು ಸಲ ಪ್ರದಕ್ಷಿಣೆ ಹಾಕಿದನು. ಬೆಂಕಿ ತಾನೇ ಹತ್ತಿ ಚಿತೆ ಉರಿಯಹತ್ತಿತು. ಬುದ್ಧನು ತಮ್ಮ ಭೂಮಿಯಲ್ಲಿ ನಿರ್ವಾಣವನ್ನು ಪಡೆದಿರುವುದರಿಂದ ಆತನ ಅಸ್ಥಿಗಳಿಗೆ ತಾವೇ ಬಾಧ್ಯರೆಂದು ಕುಶಿನಗರದ ಎಲ್ಲರೂ ವಾದಿಸಿದರು. ಬುದ್ಧನು ಎಲ್ಲರಿಗೂ ಗುರುವಾಗಿರುವುದರಿಂದ ಎಲ್ಲರಿಗೂ ಅವು ಸಲ್ಲಬೇಕೆಂದು ಉಳಿದವರು ವಾದಿಸಿದರು. ಈ ಜಗಳ ಭೀಕರ ಸ್ವರೂಪವನ್ನು ತಾಳುವ ಲಕ್ಷಣ ತೋರಿದುದರಿಂದ ದ್ರೋಣನೆಂಬ ಬ್ರಾಹ್ಮಣನು ಮಧ್ಯಸ್ಥಿಕೆ ಮಾಡಿ ಜಗಳವನ್ನು ಶಾಂತ ಮಾಡಿದನು. ಅಸ್ಥಿಗಳನ್ನು ೮ ಭಾಗ ಮಾಡಿ ೧) ಮಗಧದ ರಾಜನಾದ ಅಜಾತಶತ್ರುವಿಗೆ ೨) ವೈಶಾಲಿಯ ಲಿಚ್ಛಯಿ ಜನರಿಗೆ ೩) ಕಪಿಲವಸ್ತುವಿನ ಶಾಕ್ಯರಿಗೆ ೪) ಅಲ್ಲಕಪ್ಪದ ಬುಲಿ ಜನರಿಗೆ ೫) ರಾಮಗ್ರಾಮದ ಕೋಲಿಯರಿಗೆ ೬) ವೇಠದೀಪದ ಬ್ರಾಹ್ಮಣನಿಗೆ ೭) ಪಾವಾದ ಮಲ್ಲರಿಗೆ ೮) ಕುಶನಗರದ ಮಲ್ಲರಿಗೆ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ಭಾಗ ಮಾಡಿಕೊಟ್ಟರು. ಅಸ್ಥಿಗಳನ್ನು ತುಂಬಿದ ಮಣ್ಣಿನ ಕೊಡವನ್ನು ದ್ರೋಣನಿಗೆ ಕೊಟ್ಟರು. ಪಾಲುಮಾಡುವುದು ಮುಗಿದ ನಂತರ ಪಿಪ್ಪಲೀವನದ ಮೌರ್ಯರು ತಮಗೂ ಭಾಗ ದೊರೆಯಬೇಕೆಂದು ಕೇಳಿದರು. ಅವರಿಗೆ ಇದ್ದಲಿಗಳನ್ನು ಕೊಟ್ಟರು. ಈ ಪ್ರಕಾರ ೧೦ ಪಾಲುಗಳಾದವು. ಜನರು ಇವುಗಳನ್ನು ಒಯ್ದು ತಮ್ಮ ಸ್ಥಳಗಳಲ್ಲಿ ಇವುಗಳ ಸ್ತೂಪಗಳನ್ನು ಕಟ್ಟಿಸಿ ಬೌದ್ಧರಿಗೆ ಯಾತ್ರಾಸ್ಥಳಗಳನ್ನು ಮಾಡಿದರು. ಅಶೋಕ ಮಹಾರಾಜನು ತಾನು ಕಟ್ಟಿಸಿದ ೮೪,೦೦೦ ಸ್ತೂಪಗಳಲ್ಲಿ ಬುದ್ಧನ ಅವಶೇಷಗಳನ್ನು ಹಂಚಬೇಕೆಂದು ಯತ್ನ ಮಾಡಿದನು. ರಾಮಗ್ರಾಮದ ಸ್ತೂಪವನ್ನು ಮಾತ್ರ ತೆರೆಯುವುದಾಗಲಿಲ್ಲ. ಏಕೆಂದರೆ ನಾಗಗಳು ಅದನ್ನು ರಕ್ಷಿಸುತ್ತಿದ್ದುವಂತೆ. ಪರಿನಿರ್ವಾಣದ ಕಾಲಕ್ಕೆ ಬುದ್ಧನಿಗೆ ೮೦ ವರ್ಷಗಳಾಗಿದ್ದವು.

ಬುದ್ಧಘೋಷನ ಸಮಂತಪಾಸಾದಿಕ, ಮಹಾವಂಸೆ, ದೀಪವಂಸ ಮೊದಲಾದ ಗ್ರಂಥಗಳಲ್ಲಿ ಬುದ್ಧನು ಪರಿನಿರ್ವಾಣವನ್ನು ಹೊಂದಿ ೨೧೮ ವರ್ಷಗಳಾದ ಮೇಲೆ ಅಶೋಕ ಚಕ್ರವರ್ತಿಯು ರಾಜ್ಯಾರೋಹಣವಾಯಿತೆಂದು ಹೇಳಿರುವುದು. ಇದು

ಬುದ್ಧನ ಕಾಲವನ್ನು ನಿರ್ಣಯಿಸಲು ಉಪಯುಕ್ತವಾಗಿರುವುದು. ಇದರ ಆಧಾರದಿಂದ ಪರಿನಿರ್ವಾಣವು ಕ್ರಿ.ಶ. ಪೂರ್ವ ೪೮೦ರಲ್ಲಿ ಆಯಿತೆಂದು ಸಾಮಾನ್ಯವಾಗಿ ಎಲ್ಲ ಪಂಡಿತರು ಒಪ್ಪುವರು. ಬುದ್ಧನು ೮೦ ವರ್ಷ ಈ ಭೂಮಿಯಲ್ಲಿದ್ದವನಾದುದರಿಂದ ಆತನ ಜನನ ಕ್ರಿ.ಶ.ಪೂರ್ವ ೫೬೦ರಲ್ಲಿ ಇರಬೇಕು. ಸಂಸಾರ ತ್ಯಾಗ ಮಾಡಿದುದು ಅ-ಣ-ಅಭಿನಿಷ್ಕ್ರಮಣ-ಆತನ ೨೮ನೆಯ ವರ್ಷದಲ್ಲಿ ಅಂದರೆ ಕ್ರಿ.ಶ.ಪೂರ್ವ ೫೩೨ರಲ್ಲಿ, ೭ ವರ್ಷದ ಮೇಲೆ ಅಂದರೆ ಆತನ ೩೫ನೆಯ ವರ್ಷಕ್ಕೆ ಕ್ರಿ.ಶ. ಪೂರ್ವ ೫೨೫ರಲ್ಲಿ ಬುದ್ಧನಾದನು.

ಸುಮಾರು ೪೫ ವರ್ಷಗಳು ಎಡೆಬಿಡದೆ ಬೋಧಿಸಿ ಸಂಸಾರತಾಪದಿಂದ ಬೆಂದು ದುಃಖಪಡುವ ಮಾನವರ ದುಃಖವನ್ನೂ ಪುನರ್ಜನ್ಮವನ್ನು ನೀಗುವ ಮಾರ್ಗವನ್ನೂ ತೋರಿಸಿಕೊಟ್ಟು ಬೆಳಗಿದ ಜ್ಯೋತಿ ಅಡಗಿತು. ಈ ಭೂಮಿಯ ಮೇಲೆ ಅನೇಕ ಧರ್ಮಸ್ಥಾಪಕರೂ ತತ್ವಜ್ಞಾನಿಗಳೂ ಆಗಿಹೋಗಿರುವರು. ಅಂತಹ ಬುದ್ಧನ ಸ್ಥಾನವಾವುದೆಂಬುದನ್ನು ಟಿ.ಡಬ್ಲ್ಯು. ರ್ಹೈಸ್ ಡೇವಿಡ್ಸ್ ಎಂಬುವರು "ಭಗವಾನ್ ಎಂಬುವರಲ್ಲೆಲ್ಲಾ ಅವನು ದೊಡ್ಡವನೆಂಬುದರಲ್ಲಿ ಸಂಶಯವಿಲ್ಲ ; ಅಲ್ಲದೆ ಮುಕ್ಕಾಲು ಮೂರುವೀಸುಪಾಲು ಲೋಕ, ಅನೇಕ ವಿಧಾನಗಳಲ್ಲಿ ಮಾನವ ಜನಾಂಗದ ಧರ್ಮಬೋಧಕರಲ್ಲಿ ಅತ್ಯಂತ ಜ್ಞಾನಿಯೆಂದು, ಒಪ್ಪಿತು" ಎಂಬ ಮಾತುಗಳಲ್ಲಿ ಕಂಡುಕೊಳ್ಳಬಹುದು.[1]

ಬುದ್ಧನ ತತ್ತ್ವಗಳು

ಭಗವಾನ್ ಬುದ್ಧನು ಮಾನವನಿಗೆ ಪ್ರಿಯವಾದ ವಸ್ತುಗಳನ್ನೆಲ್ಲ ತ್ಯಜಿಸಿ ಅರಣ್ಯವನ್ನು ಸೇರಿ ಬಣ್ಣಿಸಲಸಾಧ್ಯವಾದ ಕಷ್ಟಗಳನ್ನು ಸಹಿಸಿ ಬೋಧಿವೃಕ್ಷದ ಕೆಳಗೆ ಧ್ಯಾನದಲ್ಲಿ ಕುಳಿತಾಗ ನಿಜವನ್ನು ಕಂಡನು. ಈ ನಿಜದ ಗುಟ್ಟು ಬೌದ್ಧಧರ್ಮದ ಮೂಲತತ್ತ್ವ ಅದು ಜಗತ್ತು ದುಃಖಮಯವಾಗಿದೆ. ಪ್ರಪಂಚದಲ್ಲಿ ಎಲ್ಲಿ ನೋಡಿದರೂ ದುಃಖವೇ ದುಃಖ. ಈ ದುಃಖವನ್ನು ನೀಗುವುದೇ ಮಾನವನ ಧ್ಯೇಯ. ಉಗ್ರವಾದ ತಪಸ್ಸನ್ನು ಮಾಡಿ ಶರೀರವನ್ನು ಸವೆಸಿದರೆ ಇದು ಕಡಿಮೆಯಾಗುವುದಿಲ್ಲ. ಪ್ರಪಂಚ ಆದುದರಿಂದ ಇವೆರಡರಲ್ಲಿ ಮಧ್ಯಮಾರ್ಗವನ್ನವಲಂಬಿಸಿ ಜ್ಞಾನವನ್ನು ಪಡೆದಾಗ ಈ ದುಃಖದ ನಿವಾರಣೆಯಾಗುವುದು. ಈ ಜ್ಞಾನ ಆರ್ಯಸತ್ಯಗಳಾದ ನಾಲ್ಕನ್ನು ತಿಳಿದು ಕೊಳ್ಳುವುದರಿಂದುಂಟಾಗುವುದು. ಅವು—

---

1. *T.W. Rhys Davids : Buddhism Its History & Literature pp. 117*

೧) ದುಕ್ಖಂ- ಜನನ ದುಃಖಮಯ, ಮುಪ್ಪು ದುಃಖಮಯ. ವ್ಯಾಧಿ ದುಃಖಮಯ, ಮರಣ ದುಃಖಮಯ, ರೂಪ, ವಿಜ್ಞಾನ. ವೇದನಾ. ಸಂಜ್ಞಾ, ಸಂಸ್ಕಾರಗಳೆಂಬ ಪಂಚಸ್ಕಂದಗಳು ದುಃಖಮಯ.

೨) ದುಕ್ಖಸಮುದಾಯೊ-ಇದರ ಮೂಲಕ ತೃಷ್ಣೆ (ತಣ್ಹಾ). ಇದರಿಂದ ಪುನರ್ಜನ್ಮವಾಗುವುದು. ಇದು ವಿಷಯ ಸುಖವನ್ನು ಭೋಗಿಸಬೇಕೆಂಬ ಅಪೇಕ್ಷೆ (ವಿಷಯತೃಷ್ಣೆ)ಯನ್ನು ಉಂಟುಮಾಡುವುದು.

೩) ದುಕ್ಖನಿರೋಧೋ-ತೃಷ್ಣೆಯನ್ನು ತಡೆಯುವುದು. ಅದು ಸಂಪೂರ್ಣವಾಗಿ ಹೋಗುವಂತೆ ಮಾಡುವುದು. ಹೀಗಾದರೆ ಮುಕ್ತಿಯಾಗುವುದು.

೪) ಪಟಿಪದಾ- ಮೇಲಿನ ಮೂರು ಸತ್ಯಗಳನ್ನರಿತವನು ಅರ್ಹಂತನಾಗುವನು. ನಾಲ್ಕನೆಯದಾದ ದುಃಖನಿರೋಧಗಾಮಿನೀ ಪಟಿಪದಾ ಎಂಬುದನ್ನು ತಿಳಿದವನು ಬುದ್ಧನಾಗುವನು. ಇದರಲ್ಲಿ ೮ ಮಾರ್ಗಗಳುಂಟು.

(ಅರಿಯೋ ಅಟ್ಠಾಂಗಿಕೋ ಮಗ್ಗೋ) ಅವು - ೧) ಸಂಯಕ್ ದೃಷ್ಟಿ ೨) ಸಮ್ಯಕ್ ಸಂಕಲ್ಪ ೩) ಸಮ್ಯಕ್‌ವಾಕ್ ೪) ಸಮ್ಯಕ್‌ಕರ್ಮಾಂತ ೫) ಸಮ್ಯಕ್ ಆಜೀವ ೬) ಸಮ್ಯಕ್‌ವ್ಯಾಯಾಮ ೭) ಸಮ್ಯಕ್‌ಸ್ಮೃತಿ ೮) ಸಮ್ಯಕ್‌ಸಮಾಧಿ.

ಇವು ಬೌದ್ಧಧರ್ಮದ ಮೂಲತತ್ವಗಳು. ಬೌದ್ಧಧರ್ಮದ ತತ್ತ್ವಜ್ಞಾನವೆಲ್ಲ ಇವುಗಳ ತಳಹದಿಯ ಮೇಲೆ ಕಟ್ಟಲಾಗಿದೆ. ಭಗವಾನ್ ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಧ್ಯಾನದಲ್ಲಿ ಕುಳಿತಾಗ ಹೊಳೆದ ನಿಜಜ್ಞಾನ ಈ ಮೇಲಿನ ನಾಲ್ಕು ಆರ್ಯಸತ್ಯಗಳಲ್ಲಿ ಅಡಕವಾಗಿದೆ. ಬುದ್ಧನು ಇದನ್ನು ಮೊದಲು ತನ್ನ ಶಿಷ್ಯರಾದ ಐವರು ಋಷಿಗಳಿಗೆ ಇಸಿಪತನ (ಹರಿಣವನ)ದಲ್ಲಿ ಬೋಧಿಸಿದನು. ಈ ಆರ್ಯಸತ್ಯಗಳು ಧರ್ಮ ಚಕ್ರಪ್ರವರ್ತನ ಸೂತ್ರದಲ್ಲಿ ಇದೆ.

ದುಃಖದ ಕಾರಣಕ್ಕೆ ಪ್ರತೀತ್ಯ ಸಮುತ್ಪಾದ ಅಥವಾ ನಿದಾನವೆಂದು ಹೆಸರು ಅದು ೧೨ ಪ್ರಕಾರವಾಗಿವೆ. ಅವು ೧) ಅವಿದ್ಯಾ ೨) ಸಂಸ್ಕಾರ ೩) ವಿಜ್ಞಾನ ೪) ನಾಮರೂಪ ೫) ಷಡಾಯತನ ೬) ಸ್ಪರ್ಶ ೭) ವೇದನಾ ೮) ತೃಷ್ಣಾ ೯) ಉಪಾದಾನ ೧೦) ಭವ ೧೧) ಜಾತಿ ೧೨) ಜರಾಮರಣ. ಇದಕ್ಕೆ ಭವಚಕ್ರವೆಂದು ಹೆಸರು. ಮೇಲಿನ ಹನ್ನೆರಡು ಈ ಚಕ್ರದ ಹಲ್ಲುಗಳು. ಪ್ರಪಂಚವನ್ನು ಬುದ್ಧನು ಚಕ್ರಕ್ಕೆ ಹೋಲಿಸಿರುವನು. ಮೇಲಿನ ೧೨ ವಿಧಾನಗಳಲ್ಲಿ ಒಂದು ಮತ್ತೊಂದನ್ನು ಅವಲಂಬಿಸಿ ಪ್ರಪಂಚವನ್ನು ಉಂಟುಮಾಡುವುವು. ಜರಾಮರಣಗಳು (ಜಾತಿ) ಜನನವನ್ನವಲಂಬಿಸಿರುವುವು. ಅಂದರೆ ಜನನವಿಲ್ಲದಿದ್ದರೆ ಜರಾಮರಣಗಳು ಪ್ರಾಣಿಗಳಿಗೆ ಬರುವುದೇ ಇಲ್ಲ. (ಜಾತಿ) ಜನನ (ಭವ) ಪೂರ್ವಜನ್ಮವನ್ನು ಅವಲಂಬಿಸಿರುವುದು. ಪೂರ್ವಜನ್ಮ (ಭವ) ವಾಂಛಿತ ವಸ್ತುಗಳನ್ನು ಇಟ್ಟುಕೊಳ್ಳಬೇಕೆಂಬ (ಉಪಾದಾನ) ಅಪೇಕ್ಷೆಯನ್ನವಲಂಬಿಸಿದೆ. ಉಪಾದಾನ ತೃಷ್ಣೆಯನ್ನವಲಂಬಿಸಿದೆ. ತೃಷ್ಣೆ ವಸ್ತುಗಳ

(ವೇದನಾ) ಸ್ವರೂಪ ಗ್ರಹಣವನ್ನು ಅವಲಂಬಿಸಿದೆ. ವೇದನೆ (ಸ್ಪರ್ಶ) ಇಂದ್ರಿಯ ಸಂಪರ್ಕವನ್ನವಲಂಬಿಸಿದೆ. ಇಂದ್ರಿಯ ಸಂಪರ್ಕ ಷಡಾಯತನವನ್ನವಲಂಬಿಸಿದೆ. ಆಯತನ ನಾಮಸ್ವರೂಪವನ್ನವಲಂಬಿಸಿದೆ. ನಾಮರೂಪ ವಿಜ್ಞಾನವನ್ನವಲಂಬಿಸಿದೆ. ವಿಜ್ಞಾನ ಸಂಸ್ಕಾರವನ್ನವಲಂಬಿಸಿದೆ. ಸಂಸ್ಕಾರ ಅವಿದ್ಯೆಯನ್ನವಲಂಬಿಸಿದೆ. ಈ ಅವಿದ್ಯೆಯನ್ನು ನಾಶವಾಡಿದರೆ ಮೇಲಿನ ಎಲ್ಲ ಪ್ರತೀತ್ಯ ಸಮುತ್ಪಾದಗಳು ಇಲ್ಲದಂತಾಗುವುವು. ಭವಚಕ್ರ ನಾಶವಾಗುವುದು.

ಭಗವಾನ್ ಬುದ್ಧನಿಗೆ ಜೀವಾತ್ಮ, ಪರಮಾತ್ಮ, ಜಗತ್ತು ಇವು ಮಹತ್ವದವೆನ್ನಿಸಲಿಲ್ಲ. ಇವುಗಳಲ್ಲಿ ಆತನ ನಂಬುಗೆ ಇದ್ದಿಲ್ಲ. ದುಃಖಮಯವಾದ ಈ ಪ್ರಪಂಚದಿಂದ ಹೇಗೆ ಪಾರಾಗಬೇಕೆಂಬ ಒಂದೇ ಒಂದು ಪ್ರಶ್ನೆ ಆತನನ್ನು ಬಾಧಿಸುತ್ತಿತ್ತು. ಈ ದುಃಖ ಜಗತ್ತಿನಲ್ಲಿ ತನ್ನ ಪ್ರಭುತ್ವವನ್ನು ಏಕೆ ನಡೆಸುವುದೆಂಬ ಪ್ರಶ್ನೆಗೆ ಬುದ್ಧನು ಉತ್ತರ ಕೊಡುವನು. ಶಾಶ್ವತವಾದುದು ಜಗತ್ತಿನಲ್ಲಿ ಒಂದಾದರೂ ವಸ್ತುವಿಲ್ಲ. ಎಲ್ಲವೂ ಬದಲಾಗತಕ್ಕದ್ದೇ. ಎಲ್ಲವೂ ಆಗುತ್ತಲಿರುವುವು. ಆಗದಂಥ ವಸ್ತುವಿಲ್ಲ. ಚೇತನಾಚೇತನ ವಸ್ತುಗಳಲ್ಲಿ ದ್ರವ್ಯ ಇರುವುದಿಲ್ಲ. ಎಲ್ಲವೂ ನಶ್ವರ ; ಎಲ್ಲವೂ ಕ್ಷಣಿಕ. ವಿಶ್ರಾಂತಿಯಿಲ್ಲ; ಶಾಂತಿಯಿಲ್ಲ; ತೃಪ್ತಿಯಿಲ್ಲ. ಆದುದರಿಂದ ದುಃಖದ ಪ್ರಭುತ್ವ ನಡೆಯುವುದು. ಬುದ್ಧನಿಗೆ ವಿಶ್ವದಲ್ಲಿ ಪ್ರಾಮುಖ್ಯವಾಗಿ ತೋರಿಬಂದ ಮೂರು ಅನತಾ (ಅನಾತ್ಮತ್ವ), ದುಃಖ, ಅನಿಚ್ಚ (ಅನಿತ್ಯ) ಎಂಬುವು. ಇವುಗಳ ವ್ಯತಿರಿಕ್ತ ಉಳಿದವೆಲ್ಲ ನಾಮರೂಪ. ಜೀವಾತ್ಮನೆಂಬ ವಸ್ತು ಇಲ್ಲವೇ ಇಲ್ಲ. ಚೇತನಾಯುಕ್ತ ಪ್ರಾಣಿಯು ಶರೀರ ಪಂಚಸ್ಕಂದಗಳಿಂದ ನಿರ್ಮಿತವಾಗಿರುವುದು. ಅವು ೧) ರೂಪ ೨) ವೇದನಾ ೩) ಸಂಜ್ಞಾ ೪) ಸಂಸ್ಕಾರ ೫) ವಿಜ್ಞಾನ. ಇವಕ್ಕೆ ನಾಮರೂಪ (Mind and matter) ಎಂದು ಹೆಸರು. ರೂಪಶಬ್ದದ ಅರ್ಥವನ್ನು ತೆಗೆದುಕೊಳ್ಳುವುದು ಸ್ವಲ್ಪ ಜಟಿಲ. ನಾಲ್ಕು ಮಹಾಭೂತಗಳು ಮತ್ತು ಅವುಗಳನ್ನವಲಂಬಿಸಿದ ಉಪಾದಾಯ (ನಿಸ್ಸಾರ) ರೂಪವೆಂದು ಅಶ್ವಘೋಷನು ಹೇಳುವನು[1]. ಷಡಿಂದ್ರಿಯಗಳೂ ಮತ್ತು ಇಂದ್ರಿಯ ಗ್ರಾಹ್ಯವಸ್ತುಗಳೂ ರೂಪದಲ್ಲಿ ಬರುವುವು. ಶರೀರ ಮತ್ತು ಇಂದ್ರಿಯಗಳಿಗೆ ಸಾಮಾನ್ಯವಾಗಿ ರೂಪವೆನ್ನುವರು. ಇದು ಕಲ್ಪಿತ ಮತ್ತು ಗೃಹೀತ ದ್ರವ್ಯ. ನಿಜವಾದುದಲ್ಲ. ಬಾಹ್ಯರೂಪವು ಕಠಿನತೆ, ದ್ರವ್ಯ, ತೇಜ, ಚಲನ ಮೊದಲಾದ ಗುಣಗಳಿಂದೊಡಗೂಡಿ ಪೃಥ್ವಿ, ಅಪ್ಪು, ತೇಜಸ್ಸು ವಾಯುಗಳಾಗಿರುವುದು. ಉಳಿದ ನಾಲ್ಕು ಸ್ಕಂಧಗಳಿಗೆ ನಾಮಗಳೆಂದು ಹೆಸರು. ಆಂತರಿಕ, ಅಥವಾ ಸೂಕ್ಷ್ಮರೂಪಕ್ಕೆ ನಾಮವೆನ್ನುವರು. ಇವ್ವೈದು ಸ್ಕಂಧಗಳು ಕೂಡಿದಾಗ ಪ್ರಾಣಿಗಳ ಶರೀರವಾಗುವುದು. ಜೀವನವುಂಟಾಗುವುದು. ಇವುಗಳಲ್ಲಿ ಶಾಶ್ವತವಾಗಿ ಯಾವುದೂ ಉಳಿಯುವುದಿಲ್ಲ. ಪ್ರಾಣಿ ಜೀವಿಸಿದಾಗ ಮಾಡಿದ ಕರ್ಮ

1. ಚತ್ತಾರೀಚ ಮಹಾಭೂತ ಚತುನ್ನಾಂಚಮಹಾಭೂತಾನಾಂ ಉಪಾದಾಯ ರೂಪಮ್.

– ಧಮ್ಮ ಸಂಗನಿ. ಪುಟ ೧೨೪–೧೭೯

ಪುನರ್ಜನ್ಮವನ್ನುಂಟು ಮಾಡುವುದು.[1] ಮೇಲಿನ ನಾಲ್ಕು ಆರ್ಯಸತ್ಯಗಳನ್ನು ಅರಿತ ಜ್ಞಾನಿಯ ಕರ್ಮನಾಶವಾಗಿರುವುದರಿಂದ ಆತನು ಪುನರ್ಜನ್ಮವಿಲ್ಲದೆ ನಿರ್ವಾಣವನ್ನು ಪಡೆಯುವನು. ತೃಷ್ಣೆಯಿಲ್ಲದೆ ಮಾಡಿದ ಕರ್ಮಫಲವನ್ನು ಕೊಡುವುದಿಲ್ಲ. ತೃಷ್ಣೆಯನ್ನು ಗೆದ್ದವನೇ ಅರುಹಂತನು. ಅರುಹಂತನು ಮಾಡುವ ಕರ್ಮಕ್ಕೆ ಫಲವಿಲ್ಲ.

ಜೀವಿಗಳಿಗೆ ಜನ್ಮ ಕರ್ಮಫಲದಿಂದಾಗುವುದೆಂದು ಮೇಲೆ ಹೇಳಿದೆ. ಕರ್ಮಫಲ ವಿಜ್ಞಾನದ ಸಹಾಯದಿಂದ ಜನನವನ್ನು ಉಂಟುಮಾಡುವುದು. ಪೂರ್ವಜನ್ಮದ ವಿಜ್ಞಾನ ಜನನಿಯ ಗರ್ಭವನ್ನು ಪ್ರವೇಶಿಸಿ ಉಳಿದ ಸ್ಕಂಧಗಳನ್ನು ಅಲ್ಲಿ ಉಂಟುಮಾಡಿ ಅವುಗಳಿಂದಾದ ಶರೀರವನ್ನು ಬೆಳೆಸುವುದು. ಪ್ರಪಂಚವುಂಟಾಗುವುದು. ಬುದ್ಧನ ಅಭಿಪ್ರಾಯದಂತೆ ಶರೀರದಲ್ಲಿ ಆತ್ಮನಿಲ್ಲ. ಮನಸ್ಸು ಚಂಚಲ ಮತ್ತು ಕ್ಷಣ ಕ್ಷಣಕ್ಕೆ ಬದಲಾಗುವುದು. ಆದುದರಿಂದ ಅದು ಶರೀರದಲ್ಲಿ ವಿಜ್ಞಾನದಷ್ಟು ಮಹತ್ವವಾದುದಲ್ಲ. ವಿಜ್ಞಾನವಾದರೂ ಶಾಶ್ವತವಾದುದಲ್ಲ. ಅದು ಬದಲಾಗುವುದು. ಆದರೂ ಹಿಂದಣ ಜನ್ಮದ ವಿಜ್ಞಾನಕ್ಕೂ ಈ ಜನ್ಮದ ವಿಜ್ಞಾನಕ್ಕೂ ಪೂರ್ವಕಾಲದ ವಿಜ್ಞಾನವನ್ನು ಪಶ್ಚಿಮ ಕಾಲದ ವಿಜ್ಞಾನಕ್ಕೂ ಕೂಡಿಸಿ ಮುಂದುವರಿಸುವ ಕಾರ್ಯವನ್ನು ಮಾಡುವುದು ಸಂತಾನ. ಹರಿಯುವ ಹೊಳೆಯಲ್ಲಿ ಒಂದು ಸ್ಥಳದಲ್ಲಿ ಒಂದು ಕ್ಷಣವಿದ್ದ ನೀರು ಮತ್ತೊಂದು ಕ್ಷಣದಲ್ಲಿ ಅದೇ ಸ್ಥಳದಲ್ಲಿರುವುದಿಲ್ಲ. ಆದರೂ ಪ್ರವಾಹ ಇದ್ದೇ ಇರುವುದು. ಅದರಂತೆ ಪ್ರಪಂಚ ಬದಲಾಗುತ್ತಿದ್ದರೂ ಇದ್ದಂತೆ ನಮಗೆ ತೋರುವುದು.

ನಿರ್ವಾಣದ ಅರ್ಥವನ್ನು ತಿಳಿದುಕೊಳ್ಳುವುದು ಸ್ವಲ್ಪ ಬಿಗಿ. ನಿರ್ವಾಣವೆಂದರೆ ಪೂರ್ಣವಾಗಿ ಇಲ್ಲದಂತಾಗುವುದು. ಒಂದು ಕತ್ತಲ ಕೋಣೆಯಲ್ಲಿ ಒಂದು ಪಣತಿಯ ದೀಪವಿದೆ. ಆ ದೀಪ ಪಣತಿಯಲ್ಲಿ ಎಣ್ಣೆ ಇರುವವರೆಗೆ ಉರಿಯುವುದು. ಎಣ್ಣೆ ತೀರಿದ ಮೇಲೆ ನಂದಿಹೋಗುವುದು. ಪುನಃ ಹಚ್ಚಿದರೂ ಉರಿಯುವುದಿಲ್ಲ. ಕರ್ಮವನ್ನೂ ಅದರಿಂದುಂಟಾಗುವ ದುಃಖವನ್ನೂ ನೀಗಿದ ಅರುಹಂತನು ನಂದಿಹೋದ ದೀಪದಂತೆ ಇರುವನು. ಇದೇ ನಿರ್ವಾಣ ಬುದ್ಧನಂತೆ ಜೀವಿಸಿರುವಾಗ ನಿರ್ವಾಣವನ್ನು ಪಡೆಯುವುದು ಮಾನವನಿಗೆ ಸಾಧ್ಯವಿದೆ.

ಈ ಸುಲಭವಾದ ತತ್ತ್ವಗಳನ್ನು ಮುಂದಿನ ಬೌದ್ಧಪಂಡಿತರು ಬೆಳೆಸಿ ಬಹು ಸೂಕ್ಷ್ಮವಾಗಿ ಶೋಧಿಸಿ ದೊಡ್ಡ ಮತ್ತು ಅತಿ ಭದ್ರವಾದ ತತ್ತ್ವಜ್ಞಾನ ಮಂದಿರವನ್ನು ಕಟ್ಟಿರುವರು. ಮುಂದೆ ಬರುಬರುತ್ತ ಬೌದ್ಧರಲ್ಲಿ ಅನೇಕ ಪಂಥಗಳುಂಟಾದುವು. ಅವುಗಳಲ್ಲಿ ಹೀನಯಾನ- ಹಳೆಯ ಮಾರ್ಗ, ಮಹಾಯಾನ- ದೊಡ್ಡ ಮಾರ್ಗ ಎಂಬುವು ಎರಡು. ಶಂಕರಾಚಾರ್ಯರು ತಮ್ಮ ಶಾರೀರಿಕ ಭಾಷ್ಯದಲ್ಲಿ ಖಂಡಿಸಿದ "ಸರ್ವಾಸ್ತಿತ್ವವಾದಿ"ಗಳು ಹೀನಯಾನ ಹಳೆಯ ಪಂಥದ ಬೌದ್ಧರು. ಇವರಲ್ಲಿ,

---

1. ಪುನರ್ಭವ ಜನಕಂ ಕರ್ಮ। ಚಂದ್ರಕೀರ್ತಿ.

ಸೌಂತ್ರಾಂತಿಕ, ವೈಭಾಷಿಕಗಳೆಂದು ಎರಡು ವಿಧ. ಹೀನಯಾನಕ್ಕೆ ಮಹಾಸಂಘಿಕ ಅಥವಾ ಸ್ಥವಿರವಾದವೆಂದೂ ಹೆಸರು. ಇದು ಅತಿಪ್ರಚೀನವಾದ ಪಂಥ. ಬುದ್ಧ ದೇವನು ಸಾಮಾನ್ಯರಂತೆ ಮನುಷ್ಯನಾಗಿದ್ದನೆಂದೂ, ಆದರೂ ಅಸಾಮಾನ್ಯ ಶಕ್ತಿಯುತನೆಂದೂ, ತಾನು ಸ್ವತಃಸತ್ ಪಥದಲ್ಲಿ ನಡೆದು ಜನರಿಗೆ ನಿಜವಾದ ಮೋಕ್ಷ ಮಾರ್ಗವನ್ನು ತೋರಿಸಿಕೊಟ್ಟನೆಂದು ಅನುಭವ ಧ್ಯಾನ ಮತ್ತು ಆತ್ಮಸಂಯಮನಗಳಿಂದ ಸರ್ವರೂ ಈ ಸಂಸಾರದಿಂದ ಬಿಡುಗಡೆ ಹೊಂದಲು ಶಕ್ತರಾಗಬಲ್ಲರೆಂದೂ ಹೀನಯಾನ ಪಂಥದವರು ನಂಬುವರು. ಈ ಪಂಥ ಸುಮಾರು ಕ್ರಿ.ಶ. ಪೂರ್ವ ೨೦೦ರಿಂದ ಕ್ರಿ.ಶ. ೫೦೦ರವರೆಗೆ ಪ್ರಚಾರದಲ್ಲಿತ್ತು. ಈಗಲೂ ಸಿಂಹಲದ್ವೀಪ, ಬ್ರಹ್ಮದೇಶ, ಸಯಾಮಗಳಲ್ಲಿ ಉಂಟು.

ಶಂಕರಾಚಾರ್ಯರು ಖಂಡಿಸಿರುವ ವಿಜ್ಞಾನದ ಶೂನ್ಯವಾದಗಳು ಮಹಾಯಾನಕ್ಕೆ ಸಂಬಂಧಿಸಿದ ಪಂಥಗಳು. ಮಹಾಯಾನ ಪಂಥದಲ್ಲಿ ಬುದ್ಧನೂ ಬೋಧಿಸತ್ವರೂ ಹಿಂದೂ ಪೌರಾಣಿಕ ದೇವತೆಗಳಂತೆ ವೈಭವಯುತ ದೇವತೆಗಳಾಗಿರುವರು. ಇವರ ಪೂಜೆಯನ್ನು ಮಂತ್ರ, ತಂತ್ರ ಮೊದಲಾದವುಗಳಿಂದ ಹಿಂದೂದೇವತೆಗಳ ಪೂಜೆಯಂತೆ ಮಾಡಬೇಕಾಗುವುದು. ಭಕ್ತರು ಭಯ ಭಕ್ತಿಗಳನ್ನು ತೋರಿಸಬೇಕಾಗುವುದು. ಈ ಪಂಥದ ಸಾಹಿತ್ಯ ಸಂಸ್ಕೃತದಲ್ಲಿದೆ. ಇದು ಕ್ರಿ.ಶ. ೧೦೦ರಿಂದ ೫೦೦ರವರೆಗೆ ಉತ್ತರ ಹಿಂದೂಸ್ಥಾನದಲ್ಲಿ ಪ್ರಚಾರದಲ್ಲಿತ್ತು. ಟಿಬೇಟ, ಚೀನಾ, ಜಪಾನ ದೇಶಗಳಲ್ಲಿ ಇದು ಇನ್ನೂ ಪ್ರಬಲವಾದ ಧರ್ಮವಾಗಿದೆ. ನಾಗಾರ್ಜುನ, ಆರ್ಯದೇವ, ಅಸಂಗ, ವಸುಬಂಧು ಮೊದಲಾದ ಆಚಾರ್ಯರು ಅನೇಕ ಮಹತ್ವದ ಗ್ರಂಥಗಳನ್ನು ಬರೆದಿರುವರು. ಮಹಾಯಾನ ಹಿಂದೂಧರ್ಮದ ಪ್ರತಿಬಿಂಬ. ಹಿಂದೂದೇವತೆಗಳ ಬದಲು ಬೌದ್ಧದೇವತೆಗಳ ಉಪಾಸನೆಯನ್ನು ಇದರಲ್ಲಿ ಸೇರಿಸಲಾಗಿದೆ. ಮುಂದೆ ಹಿಂದೂಧರ್ಮದ ಪುನರುದ್ಧಾರವಾದಾಗ ಭಗವಾನ್ ಬುದ್ಧನನ್ನು ವಿಷ್ಣುವಿನ ಒಂದು ಅವತಾರವನ್ನಾಗಿ ಮಾಡಿಕೊಂಡು ಬುದ್ಧರನ್ನು ಹಿಂದುಗಳನ್ನಾಗಿ ಮಾಡಿಕೊಳ್ಳಲು ಮಹಾಯಾನ ಅನುಕೂಲವಾಗಿರಬಹುದೆಂದು ತೋರುವುದು. ಆದುದರಿಂದ ಈಗ ಹಿಂದೂಸ್ಥಾನದಲ್ಲಿದ್ದ ಬೌದ್ಧರ ಅಸ್ತಿತ್ವವಿಲ್ಲ.

ಕ್ರೈಸ್ತಧರ್ಮ

ಜಗತ್ತಿನೊಳಗಿನ ದೊಡ್ಡ ಧರ್ಮಗಳಲ್ಲಿ ಒಂದಾದ ಕ್ರೈಸ್ತಧರ್ಮದ ಅನುಯಾಯಿಗಳು ಸುಮಾರು ೬೦ ಕೋಟಿ ಜನರಿರುವರು. ಇವರು ವಾಸಿಸದ ದೇಶ ಈ ಪೃಥ್ವಿಯಲ್ಲಿ ಒಂದೂ ಇಲ್ಲ. ಇದು ಜಗತ್ತಿನೊಳಗೆ ಅತಿ ಪ್ರಬಲವಾದ ಧರ್ಮವಾಗಿರುವುದಲ್ಲದೆ ಈ ಧರ್ಮದ ಅನುಯಾಯಿಗಳ ಕೈಯಲ್ಲಿ ಪೃಥ್ವಿಯ ಬಹುಭಾಗದ ಮೇಲೆ ರಾಜ್ಯಸತ್ತೆಯಿದೆ.

ಈ ಧರ್ಮ ಹಿಂದೂಸ್ತಾನದಲ್ಲಿ ಸುಮಾರು ೧೮೦೦ ವರ್ಷಗಳ ಹಿಂದೆ ಕಾಲಿಟ್ಟಿತೆಂದೂ ಸುಮಾರು ಕ್ರಿ.ಶ. ೨೦೦ರಲ್ಲಿ ಅಲೆಕ್ಸಾಂಡ್ರಾ ಪಟ್ಟದ ಪಾಂಟೆನೋಸ (Pantaenus) ಎಂಬುವನು ಕೊಚಿನದ ದಂಡೆಗುಂಟ ವಾಸಿಸುತ್ತಿದ್ದ ಕ್ರೈಸ್ತರ ಬಳಿಯಲ್ಲಿ ಸೆಯ್ನ್‌ನೆಟ್ (ಸಿದ್ಧ) ಮ್ಯಾಥ್ಯೂ ಹಿಬ್ರೂ ಭಾಷೆಯಲ್ಲಿ ಬರೆದ ಸುವಾರ್ತೆಯನ್ನು ಕಂಡಿದ್ದನೆಂದೂ, ಅಲ್ಲಿಯ ಜನರಿಗೆ ಸಿದ್ದ ಬಾರ್ಥೋಲೊಮ್ಯು ಎಂಬುವವನು ಕ್ರೈಸ್ತಮತವನ್ನು ಬೋಧಿಸಿದದನೆಂದೂ ಹೇಳಿಕೆಯಿದೆ. ಈ ದೇಶದಲ್ಲಿ ಆರನೆಯ ಶತಮಾನದಲ್ಲಿ ಕ್ರೈಸ್ತಧರ್ಮದವರಿದ್ದ ನಿಶ್ಚಿತವಾದ ಐತಿಹಾಸಿಕ ಆಧಾರ ದೊರೆಯುತ್ತದೆ. ಅಲೆಕ್‌ಝಾಂಡ್ರಿಯಾ ಪಟ್ಟಣದ ವರ್ತಕನಾದ ಕಾಸ್ಮಲ್ ಇಂಡಿಕೊ ಪ್ಲಾಸ್ಟಸ್ (Cosmous Indicoplustes) ಎಂಬುವನು ಹಿಂದೂಸ್ತಾನ, ಸಿಂಹಲ ದ್ವೀಪಗಳಲ್ಲಿ ಸಂಚರಿಸಿ ಇಲ್ಲಿ ಇದ್ದ ಅನೇಕ ಕ್ರೈಸ್ತರ ದೇವಾಲಯಗಳನ್ನು ಕಂಡಿದ್ದನೆಂದೂ, ಇಲ್ಲಿಯ ಕ್ರೈಸ್ತರ ಮೇಲಿನ ಅಧಿಕಾರಿ ಪರ್ಷಿಯಾ ದೇಶದಲ್ಲಿದ್ದ ಸೆಲ್ಯೂಸಿಯಾ (Celucia) ಎಂಬ ಧರ್ಮಾಧಿಕಾರಿ (Archbishop) ಕೈಯಲ್ಲಿತ್ತೆಂದೂ ಅವನು ಕ್ರಿ.ಶ. ೫೪೭ ಮತ್ತು ೫೬೦ ರಲ್ಲಿ ಬರೆದ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾನೆ. ಕ್ರಿ.ಶ. ೮-೯ನೇ ಶತಮಾನಗಳಲ್ಲಿ ಬಗದಾದ ಪಟ್ಟಣದಿಂದ ಕೆಲ ಕ್ರೈಸ್ತರು ಇಲ್ಲಿಗೆ ಬಂದು ಇಲ್ಲಿಯ ಕ್ರೈಸ್ತರೊಡನೆ ಕೂಡಿಕೊಂಡರು. ಮಲಬಾರದ ಕ್ರೈಸ್ತರ ಕೀರ್ತಿ ಬಹುದೂರದವರೆಗೆ ಹಬ್ಬಿತೆಂದೂ ಇಂಗ್ಲೆಂಡದ ರಾಜನಾದ ಆಲ್ಪ್ರೆಡನು ಈ ದೇಶಕ್ಕೆ ದೂತರನ್ನು ಕಳಿಸಿದ್ದನೆಂದೂ ಅಂಗಮಲ ಎಂಬ ಊರಲ್ಲಿ ಕ್ರೈಸ್ತರ ದೇವಾಲಯಗಳು ೨೦೦೦೦೦ ಕ್ರೈಸ್ತರೂ ಇದ್ದರೆಂದೂ ತಿಳಿಯುವುದು. ಅವರನ್ನು ಕೊಚಿನದ ರಾಜನು ರಕ್ಷಿಸುತ್ತಿದ್ದನು. ಮುಂದೆ ೧೬ನೆಯ ಶತಮಾನದಲ್ಲಿ ಪೋರ್ಚುಗೀಸರು ಈ ದೇಶವನ್ನು ಗೆದ್ದು ಇಲ್ಲಿಯ ೨ ಲಕ್ಷ ಕ್ರೈಸ್ತರನ್ನು ರೋಮದ ಸಂಪ್ರದಾಯಕ್ಕೆ ಕೂಡಿಸಿಕೊಂಡು ಮೊದಲಿನ ಕ್ರೈಸ್ತಮತದ ಅವಶೇಷಗಳನ್ನು ಕೂಡ ಅಳಿಸಿದರು. ಜನರು ತಮ್ಮ ಗುರುವಾದ ಮರ ಅಬ್ರಾಹಮನ ನೇತೃತ್ವದಲ್ಲಿ ಪೋರ್ಚುಗೀಸರ ಈ ನಡತೆಯನ್ನು ವಿರೋಧಿಸಿದರು. ಉಪಯೋಗ ವಾಗಲಿಲ್ಲ. ಪ್ರತಿಯಾಗಿ ಅಂಗಮಲದಿಂದ ಧರ್ಮಪೀಠವನ್ನು ಸಮುದ್ರದ ದಂಡೆಯ ಮೇಲಿರುವ ಕ್ರ್ಯಾಂಗನೂರಿಗೆ ಬದಲು ಮಾಡಿದರು. ಅದರ ಉದ್ದೇಶ ತಮ್ಮ ಅಧಿಕಾರಿಗೂ ಜನರ ಮೇಲೆ ನಡೆಯಲು ಅನುಕೂಲವಾಗಬೇಕೆಂಬುದು. ಈ ಜನರಿಗೂ ಪೋರ್ಚುಗೀಸರಿಗೂ ಕೂಡಿ ನಡೆಯಲಿಲ್ಲ. ಮುಂದೆ ಡಚ್ಚರು ಈ ದೇಶವನ್ನು ಸ್ವಾಧೀನಪಡಿಸಿಕೊಂಡ ನಂತರ ಜನರು ಸ್ವಲ್ಪ ಶಾಂತರಾದರು. ೧೯ನೆಯ ಶತಮಾನದವರೆಗೆ ಕ್ರೈಸ್ತಧರ್ಮಪ್ರಸಾರ ಹಿಂದೂಸ್ಥಾನದಲ್ಲಿ ಬಹಳವಾಗಿ ಆಗಲಿಲ್ಲ. ಬ್ರಿಟೀಷರು ಈ ದೇಶವನ್ನೆಲ್ಲ ಕೈವಶಮಾಡಿಕೊಂಡು ಇಲ್ಲಿ ಶಾಂತಿವ್ಯವಸ್ಥೆಗಳನ್ನು ನೆಲೆಗೊಳಿಸದ ಮೇಲೆ ಇಂಗ್ಲಂಡ್, ಸ್ವಿಡ್ಜರ್‌ಲೆಂಡ್, ಜರ್ಮನಿ, ಅಮೆರಿಕಾ ಮೊದಲಾದ ದೇಶಗಳಿಂದ ಕ್ರೈಸ್ತ ಸಂಘಗಳು (Missions) ಬಂದು ಮತ ಪ್ರಸಾರದ ಕೆಲಸಕ್ಕಾಗಿ

ಬಹಳವಾಗಿ ಯತ್ನಿಸುತ್ತಲಿರುವರು. ನಮ್ಮ ಕರ್ನಾಟಕದಲ್ಲಿ ಸುಮಾರು ೧೦೦ ವರ್ಷದ ಹಿಂದೆ ಕ್ರೈಸ್ತಮತ ಕಾಲಿಟ್ಟಿತು. ಅಂದಿನಿಂದ ಬಹುಜನರು ಕ್ರೈಸ್ತಮತವನ್ನು ಸ್ವೀಕರಿಸುವವರು ಮತ್ತು ಸ್ವೀಕರಿಸುತ್ತಲಿರುವರು. ಮತಪ್ರಸಾರಕ್ಕಾಗಿ ಸಂಘದವರು ಮಿತಿಮೀರಿ ಯತ್ನ ಮಾಡುತ್ತಲಿರುವರು. ಅಲ್ಲಲ್ಲಿ ಶಾಲೆಗಳನ್ನೂ ರುಗ್ಣಾಲಯಗಳನ್ನೂ ಮುದ್ರಣಾಲಯಗಳನ್ನೂ ಸ್ಥಾಪಿಸಿ ಲೋಕೋಪಕಾರ ಮಾಡುತ್ತಲಿರುವರು. ತಮ್ಮ ಮುಖ್ಯ ಗ್ರಂಥವಾದ ಬೈಬಲ್ಲನ್ನು ಕನ್ನಡ ಭಾಷೆಯಲ್ಲಿ ಬರೆಯಿಸಿ ಮುದ್ರಿಸಿರುವರು. ಈ ಮತದ ಕೆಲ ಪಾಶ್ಚಾತ್ಯ ಪಂಡಿತರು ಕನ್ನಡ ಭಾಷೆಯನ್ನು ಕಲಿತು ಕನ್ನಡಕ್ಕೆ ಸಂಬಂಧಿಸಿದ ಅಪೂರ್ವವಾದ ಗ್ರಂಥಗಳನ್ನು ಬರೆದು ಕನ್ನಡಿಗರಿಗೆ ಬಹಳ ಉಪಕಾರ ಮಾಡಿರುವರು. ಅಂತಹವರಲ್ಲಿ ಕಾಲ್ಡ್ವೆಲ್. ಕಿಟೆಲ್. ರೈಸ್ ಎಂಬುವರಿಗೆ ಅಗ್ರಸ್ಥಾನ ಕೊಡಬಹುದು. ಇತ್ತೀಚೆಗಾಗಿ ಕ್ರೈಸ್ತರಲ್ಲಿ ಹಲವರು ಕನ್ನಡ ನುಡಿಗೆ ತಮ್ಮ ಕೈಲಾದ ಮಟ್ಟಿಗೆ ಸೇವೆಯನ್ನು ಸಲ್ಲಿಸಬೇಕೆಂದು ಹಾತೊರೆಯುತ್ತಿರುವರು. ಆದುದರಿಂದ ಕನ್ನಡಿಗರು ಕ್ರೈಸ್ತಮತ ಸ್ಥಾಪಕನಾದ ಯೇಸುಪ್ರಭುವಿನ ಚರಿತೆ, ಉಪದೇಶ ಇವುಗಳ ಪರಿಚಯ ಮಾಡಿಕೊಳ್ಳುವುದು ವಿಹಿತ.

ಯೇಸುಕ್ರಿಸ್ತನ ಚರಿತೆಯನ್ನು ಆತನ ಅನುಯಾಯಿಗಳಲ್ಲಿ ಸಿದ್ಧಮಾಥ್ಯೂ, ಸಿದ್ಧಮಾರ್ಕ, ಸಿದ್ಧಲ್ಯೂಕ, ಸಿದ್ಧಜಾನ್ ಎಂಬುವರು ತಮ್ಮ ಸುವಾರ್ತೆಗಳಲ್ಲಿ ಉಲ್ಲೇಖಿಸಿರುವರು. ಇವುಗಳನ್ನು ಪಂಡಿತರ ಅಭಿಪ್ರಾಯದ ಪ್ರಕಾರ ಯೇಸುವಿನ ಮರಣದ ನಂತರ ೧೦೦ ವರ್ಷದೊಳಗಾಗಿ ಬರೆಯಲಾಗಿದೆ. ಮೇಲಾಗಿ ಇವರಲ್ಲಿ ಕೆಲವರು ಯೇಸುಪ್ರಭುವಿನ ಸಮಕಾಲದವರಿರುವರು.

ಈಗಿನ ಪ್ಯಾಲೆಸ್ಟಾಯಿನ್, ಸಿರಿಯಾ ಮೊದಲಾದ ದೇಶಗಳಲ್ಲಿ ಸುಮಾರು ೩೦೦೦ ವರ್ಷಗಳ ಹಿಂದೆ ಯೆಹೂದೀ ಜನರು ವಾಸಿಸುತ್ತಿದ್ದರು. ಅವರಲ್ಲಿ ಒಂದು ಪುಣ್ಯವಂತ ಮನೆತನವಿತ್ತು. ಅದರ ಮೂಲಪುರುಷ ಅಬ್ರಾಹಿಮನೆಂಬುವನು ಆಗಿ ಹೋಗಿದ್ದನು. ಆತನ ವಂಶದಲ್ಲಿ ಆತನಿಂದ ೧೪ನೆಯ ತಲೆಯವನು ಡೇವಿಡ್ ಎಂಬುವನು. ಡೇವಿಡ್‌ನಿಂದ ೨೭ನೆಯ ತಲೆಯವನು ಜಕಬ್ಬನ ಮಗ ಜೋಸೆಫ್ ಎಂಬುವನು. ಇವನಿಗೆ ಮೇರಿ ಎಂಬ ಕನ್ಯೆಯನ್ನು ನಿಶ್ಚಯ ಮಾಡಿತ್ತು. ಒಂದು ದಿವಸ ಆತನ ಸ್ವಪ್ನದಲ್ಲಿ ದೇವದೂತನು ಬಂದು "ಮೇರಿಯ ಗರ್ಭದಲ್ಲಿ ದೇವಪುತ್ರನು ಉದಯಿಸುವನು. ಆತನಿಗೆ ಯೇಸು ಎಂದು ಹೆಸರಿಡು. ಆತನು ಜನರನ್ನು ಪಾಪದಿಂದ ದೂರ ಮಾಡುವನು" ಎಂದು ಹೇಳಿದನು. ಜೋಸೆಫನು ಸಂತುಷ್ಟನಾದನು. ದೇವದೂತನ ವಚನದಂತೆ ಮೇರಿ ಜೆರೂಸಲೇಮದ ಸಮೀಪದ ಊರಾದ ಬೆತಲ್‌ಹೆಮ್‌ದಲ್ಲಿ ಒಂದು ಮನೆಯ ಹಕ್ಕೆಯಲ್ಲಿ ಗಂಡುಮಗುವನ್ನು ಹೆತ್ತಳು. ಆಗ ಆ ದೇಶದ ದೊರೆ ಹೆರೋಡನೆಂಬುವನಿದ್ದನು. ಒಂದು ದಿವಸ ಪೂರ್ವದೇಶದಿಂದ ಮೂವರು ವೃದ್ಧಜ್ಞಾನಿಗಳು ರಾಜನಲ್ಲಿಗೆ ಬಂದು "ಇಲ್ಲಿ ಯಹೂದಿ ಜನರ ರಾಜನು

ಹುಟ್ಟಿರುವನೆಂದು ನಮಗೆ ಗಹಗಳಿಂದ ತಿಳಿದು ಬಂದಿದೆ. ಆತನು ಲೋಕದ ಕಲ್ಯಾಣ ಮಾಡುವನು. ಆತನ ದರ್ಶನಕ್ಕಾಗಿ ನಾವು ಬಂದಿರುವೆವು. ಆತನು ಎಲ್ಲಿ?" ಎಂದು ವಿಚಾರಿಸಿದರು. ಹೆರೋಡ ರಾಜನು ತನ್ನ ಪುರೋಹಿತರನ್ನೂ, ಕರಣಿಕರನ್ನೂ ಕರೆಸಿ ವಿಚಾರ ಮಾಡಿ "ನನಗೆ ತಿಳಿಯದು ನೀವೇ ಆತನನ್ನು ಹುಡುಕಿ ನನಗೆ ತಿಳಿಸಿ. ನಾನೂ ಆತನ ದರ್ಶನ ಮಾಡಿಕೊಳ್ಳುವೆನು" ಎಂದು ಹೇಳಿದನು. ನಕ್ಷತ್ರದ ಸಹಾಯದಿಂದ ಅವರು ಬೆತಲ್‌ಹೆಮ್ಮದ ಮನೆಯನ್ನು ಪ್ರವೇಶಿಸಿ ಮೇರಿಯ ಬಳಿಯಲ್ಲಿರುವ ಮಗುವನ್ನು ನೋಡಿ ನಮಸ್ಕರಿಸಿ ಬಂಗಾರ, ಧೂಪ, ರಕ್ತ ಬೋಳ ಮೊದಲಾದ ವಸ್ತುಗಳನ್ನು ಮುಡಿಪುಕೊಟ್ಟು ಹೆರೋಡನನ್ನು ಕಾಣಬಾರದೆಂದು ದೇವರ ಆಜ್ಞೆಯಾದ ಮೇರೆಗೆ ಬೇರೆ ಮಾರ್ಗದಿಂದ ಹೊರಟುಹೋದರು. ಅದೇ ದಿವಸ ಜೋಸೆಫನ ಸ್ವಪ್ನದಲ್ಲಿ ದೇವದೂತನು ಬಂದು "ಕೂಸನ್ನೂ ತಾಯಿಯನ್ನೂ ಕೂಡಲೇ ಈಜಿಪ್ತ ದೇಶಕ್ಕೆ ಒಯ್ಯಬೇಕು. ಈ ಕೂಸನ್ನೂ ಕೊಲ್ಲಬೇಕೆಂದು ಹವಣಿಸಿರುವರು. ನಾನು ಬಂದು ಹೇಳುವವರೆಗೆ ಇಲ್ಲಿಯೇ ಇರಬೇಕು" ಎಂದು ತಿಳಿಸಿದನು. ಆ ಪ್ರಕಾರ ಕುಟುಂಬ ಈಜಿಪ್ತನ ಮಾರ್ಗವನ್ನು ಹಿಡಿಯಿತು. ಮತ್ತು ತೀವ್ರ ಹೆರೋಡನಾಳುತ್ತಿದ್ದ ಸೀಮೆಯ ಗಡಿಯನ್ನು ದಾಟಿಹೋಯಿತು. ಇತ್ತ ಹೆರೋಡನು ವೃದ್ಧರು ತನ್ನ ಕಡೆ ಬಾರದೆ ಇದ್ದದನ್ನು ತಿಳಿದು ತನ್ನ ನಾಡಿನಲ್ಲಿ ಹುಟ್ಟಿದ ೨ ವರ್ಷದೊಳಗಿನ ಮಕ್ಕಳನ್ನೆಲ್ಲ ಕೊಲ್ಲಬೇಕೆಂದು ತನ್ನ ಆಳುಗಳಿಗೆ ಕಟ್ಟಪ್ಪಣೆ ಮಾಡಿದನು. ಜೂಡಾಯ ದೇಶದಲ್ಲಿ ಹಾಹಾಕಾರವೆದ್ದಿತು. ಮುಂದೆ ಕೆಲವು ದಿವಸಗಳ ನಂತರ ಹೆರೋಡನು ತೀರಿಕೊಂಡನು. ದೇವದೂತನು ಜೋಸೆಫನ ಕನಸಿನಲ್ಲಿ ಹೋಗಿ "ಕೂಸಿನ ಪ್ರಾಣವನ್ನು ತೆಗೆದುಕೊಳ್ಳಬೇಕೆಂಬವರು ಸತ್ತರು. ನೀನು ಇನ್ನು ಮೇಲೆ ಯೆಹೂದಿಯರ ದೇಶಕ್ಕೆ ಕೂಸನ್ನೂ ತಾಯನ್ನೂ ಕರೆದುಕೊಂಡು ಹೋಗು" ಎಂದು ಹೇಳಿದನು. ಆದರೂ ಹೆರೋಡನ ಮಗನಾದ ಆರ್ಕೆಲಾಯನು (Archelaus) ಜುಡಾಯ್ ದೇಶಕ್ಕೆ ಅರಸನಾಗಿರುವುದನ್ನು ತಿಳಿದು ಅಲ್ಲಿಗೆ ಹೋಗದೆ ಗ್ಯಾಲಿಲೀ ದೇಶಕ್ಕೆ ಹೋಗಿ ನಜರತ್ ಎಂಬ ಪಟ್ಟಣದಲ್ಲಿ ನೆಲೆಸಿದನು. ಅದೇ ಕಾಲಕ್ಕೆ ಜುಡಾಯ ದೇಶದಲ್ಲಿ ಜಾನನೆಂಬ ಸಾಧು ಜನರಿಗೆ ಸತ್ಪಥವನ್ನು ಬೋಧಿಸಿ, "ನೀವು ಮಾಡಿದ ಪಾಪಗಳನ್ನು ಸ್ಮರಿಸಿ ಪಶ್ಚಾತ್ತಾಪವನ್ನು ಹೊಂದಿ; ದೇವರ ರಾಜ್ಯ ಪ್ರಾಪ್ತವಾಗುವ ಸಮಯ ಬಂದಿದೆ ; ದೇವಪುತ್ರನು ಬರಲಿರುವನು" ಎಂದು ಸಾರಿ ಎಲ್ಲ ಜನರಿಗೂ ಜಾರ್ಡನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸುತ್ತಿದ್ದನು. ಯೇಸು ಆತನಲ್ಲಿಗೆ ಹೋದಾಗ ಜಾನನು ಆತನನ್ನು ಗುರುತಿಸಿ "ನೀನು ನನ್ನಿಂದ ಸ್ನಾನವನ್ನು ಪಡೆಯಬೇಕೆ?" ಎಂದನು. ಯೇಸು ಆತನ ಮನವೊಲಿಸಿ ಆತನಿಂದ ದೀಕ್ಷಾಸ್ನಾನವನ್ನು ಪಡೆದನು. ಇದರಿಂದ ಯೇಸುವಿಗೆ ಆಕಾಶದ ದ್ವಾರ ತೆರೆದಂತಾಯಿತು. ಯೇಸು ೪೦ ದಿವಸ ಉಪವಾಸ ಮಾಡಿದನು. ಸೈತಾನನು ಆತನನ್ನು ಮೊದಲು ಬೆದರಿಸಿ ಆಮೇಲೆ ಆಸೆ

ತೋರಿಸಿ ಧರ್ಮಪಂಥದಿಂದ ದೂರಮಾಡಬೇಕೆಂದು ಯತ್ನಿಸಿದನು. ಸಾಧ್ಯವಾಗಲಿಲ್ಲ. ಜಾನನನ್ನು ಕಾರಾಗೃಹದಲ್ಲಿ ಹಾಕಿದ ಸುದ್ದಿಯನ್ನು ಕೇಳಿ ನಜರತರಿಂದ ಕ್ಯಾಪರ್ನಮ್ ಎಂಬ ಊರಿಗೆ ಯೇಸು ಹೋಗಿ ಅಲ್ಲಿಯ ಜನರಿಗೆ ಧರ್ಮವನ್ನು ಬೋಧಿಸಹತ್ತಿದನು. ಯೇಸು ಬೆಟ್ಟದ ಮೇಲೆ ಕುಳಿತು ಮಾಡಿದ ಉಪದೇಶ ಬಹು ಮನನೀಯವಾಗಿದೆ. ಒಂದು ದಿವಸ ಯೇಸುಪ್ರಭು ಊಟಕ್ಕೆ ಕೂತಿರುವಾಗ ಬಹುಮಂದಿ ಸುಂಕದವರೂ ಪಾಪಿಗಳೂ ಬಂದು ಅವನ ಪಂಕ್ತಿಯಲ್ಲಿಯೇ ಕುಳಿತುಕೊಂಡರು. ಫರಿಸಾಯರು ಅದನ್ನು ನೋಡಿ ಆತನ ಶಿಷ್ಯರಿಗೆ ನಿಮ್ಮ ಗುರು ಸುಂಕದವರ ಮತ್ತು ಪಾಪಿಗಳ ಸಂಗಡ ಊಟ ಮಾಡುತ್ತಾರೆಂದು ಅಂದರು. ಅದನ್ನು ಕೇಳಿ, "ಆರೋಗ್ಯದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ. ರೋಗಿಗಳಿಗೆ ಬೇಕು. ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು" ಎಂದು ಹೇಳಿದನು. ಯಹೂದಿಯರ ಮಠಗಳಲ್ಲಿ ಉಪದೇಶಮಾಡುತ್ತ ಬೇನೆಗಳಿಂದ ಬಳಲುವ ಜನರನ್ನು ನೆಟ್ಟಗೆ ಮಾಡುತ್ತ ಜನರ ಎಲ್ಲ ಸಂಕಟಗಳನ್ನು ನಿವಾರಿಸುತ್ತ ಹಳ್ಳಿಪಳ್ಳಿಗಳಲ್ಲಿ ಸಂಚರಿಸುತ್ತಿದ್ದನು. ಯೇಸುವಿನ ಕೀರ್ತಿ ಸುತ್ತಲೂ ವ್ಯಾಪಿಸಿ ಈತನ ಉಪದೇಶಗಳನ್ನು ಕೇಳಲು ದೂರದೂರದ ದೇಶಗಳಿಂದ ಜನರು ಬರಹತ್ತಿದರು. ಈಗ ಈತನಿಗೆ ೧೨ ಜನ ಶಿಷ್ಯರಾದರು. ಅವರಿಗೆ ಜನರ ಕಷ್ಟಗಳನ್ನು ದೂರಮಾಡಿ ಅವರ ಬೇನೆಗಳನ್ನು ಬಿಡಿಸಿ ತನ್ನ ಉಪದೇಶಗಳನ್ನು ಜನರಲ್ಲಿ ಹಬ್ಬಿಸಬೇಕೆಂದು ಈ ಹನ್ನೆರಡು ಜನ ಶಿಷ್ಯರನ್ನು ಕಳಿಸಿಕೊಟ್ಟನು. ಅವರು ಯಾರೆಂದರೆ, ಮೊದಲನೆಯವನು ಪೀಟರನೆಂದು ಹೆಸರುಳ್ಳ ಸಾಯಮನ್, ಆವನ ತಮ್ಮನಾದ ಆಂಡ್ರ್ಯೂ, ಜಬೆದಾಯನ ಮಗ ಜಾಕೂಬ್, ಅವನ ತಮ್ಮನಾದ ಜಾನ್, ಫಿಲಿಪ್, ಬಾರ್ಥೋಲೊಮ್ಯೂ, ಥಾಮಸ್, ಸುಂಕದಮ್ಯಾಥ್ಯೂ, ಅಲ್ಫಾಯನ ಮಗ ಜೇಮ್ಸ್, ಲೆಬೌಸತದಾಯ, ಮತಾಭಿಮಾನಿ ಯೆಂದು ಹೆಸರುಗೊಂಡ ಸಾಯಮನ್, ಯೇಸುವನ್ನು ಹಿಡಿದುಕೊಟ್ಟ ಜೂಡ ಇಸ್ಕರಿಯಾತ್ ಎಂಬವರು. ತಾನು ಅನೇಕ ಪವಾಡಗಳನ್ನು ಮಾಡಿ ಜನರನ್ನು ಕಷ್ಟಗಳಿಂದ ಪಾರುಮಾಡುತ್ತಿದ್ದನು. ಆತನು ಮಾಡಿದ ಪವಾಡಗಳಲ್ಲಿ ಸತ್ತವರನ್ನು ಬದುಕಿಸಬಹುದು, ಮಹಾರೋಗ ಮೊದಲು ಮಾಡಿಕೊಂಡು ಜ್ವರಪೀಡಿತ ರಾದವರವರೆಗೆ ಎಲ್ಲರಿಗೂ ಗುಣಪಡಿಸುವುದು, ಪಾಪಿಗಳ ಪಾಪವನ್ನು ದೂರಮಾಡಿ ಅವರ ಮನಸ್ಸಿಗೆ ಶಾಂತಿಯನ್ನುಂಟು ಮಾಡುವುದು. ಮೂಕರಿಗೆ ಮಾತನಾಡಲು ಬರುವಂತೆ ಮಾಡುವುದು, ಕುಂಟರಿಗೆ ನಡೆಯಲಿಕ್ಕೆ ಹಚ್ಚುವುದು, ಕುರುಡರಿಗೆ ಕಣ್ಣು ತರುವುದು, ಭೂತಬಾಧೆಯಿಂದ ಬಳಲುವವರನ್ನು ಉಳಿಸುವುದು, ಸ್ವಲ್ಪ ಅನ್ನವನ್ನು ಬಹುಜನರಿಗೆ ತೃಪ್ತಿಯಾಗುವಂತೆ ಬಡಿಸುವುದು, ಮೊದಲಾದವು ಮುಖ್ಯವಾದವು. ಜನರು ಇದನ್ನು ಕಂಡು ದೇವರ ಮಹಿಮೆಯನ್ನು ಕೊಂಡಾಡಹತ್ತಿದರು. ಒಂದು ದಿವಸ ಕೈ ಇಲ್ಲದವನೊಬ್ಬನು ಬಂದು ತನಗೆ ಕೈಕೊಡಬೇಕೆಂದು ಬೇಡಿಕೊಂಡನು. ಆ ದಿವಸ ಸಬಾತ ದಿವಸವಿದ್ದಿತು. ಫರಿಸಾಯರು ಆತನನ್ನು ತಪ್ಪಿನೊಳಗೆ

ಹಿಡಿಯಬೇಕೆಂದು "ಸಬಾತ ದಿನ ಈ ಮನುಷ್ಯನನ್ನು ಗುಣಪಡಿಸುವುದು ಸರಿಯೇ?" ಎಂದರು. ಆಗ ಆತನು "ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿಯಿದ್ದು ಸಬಾತ ದಿನದಲ್ಲಿ ಕುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೆ? ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚು" ಎಂದು ಹೇಳಿ ರೋಗಿಯನ್ನು ಗುಣಪಡಿಸಿ ಕಳಿಸಿಕೊಟ್ಟನು. ಮತ್ತೊಮ್ಮೆ ಫರಿಸಾಯರೊಳಗಿನ ಧರ್ಮೋಪದೇಶಕನು ಯೇಸು ಪ್ರಭುವಿಗೆ "ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು?" ಎಂದು ಕೇಳಿದನು. ಯೇಸು "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದು ಎರಡನೆ ಆಜ್ಞೆ. ಈ ಎರಡು ಆಜ್ಞೆಗಳು ಎಲ್ಲಾ ಆ ಧರ್ಮಶಾಸ್ತ್ರಕ್ಕೂ ಪ್ರವಾದ ಗ್ರಂಥಕ್ಕೂ ಆಧಾರವಾಗಿವೆ" ಎಂದು ಹೇಳಿದನು.

ಒಮ್ಮೆ ಒಬ್ಬನು "ನಾನು ಸದ್ಗತಿಯನ್ನು ಪಡೆಯಬೇಕಾದರೆ ಹೇಗೆ ನಡೆಯಬೇಕು?" ಎಂದು ಕೇಳಲು ಯೇಸು "ನರಹತ್ಯ ಮಾಡಬಾರದು; ವ್ಯಭಿಚಾರ ಮಾಡಬಾರದು; ಸುಳ್ಳು ಸಾಕ್ಷಿ ಹೇಳಬಾರದು; ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ತನ್ನಲ್ಲಿ ಇದ್ದುದನ್ನು ಬಡವರಿಗೆ ಕೊಡಬೇಕು" ಎಂದು ಹೇಳಿದನು. ತನ್ನ ಶಿಷ್ಯರನ್ನೊಡಗೊಂಡು ಜೇರುಸಲೇಮಕ್ಕೆ ಹೊರಟನು. ಮಾರ್ಗದಲ್ಲಿ ತನ್ನ ಶಿಷ್ಯರಿಗೆ ಮುಂದೆ ತನಗಾಗುವ ಕಷ್ಟವನ್ನು ತಿಳಿಸಿದನು. ಪಟ್ಟಣದಲ್ಲಿ ಈತನ ಸ್ವಾಗತ ಬಹಳವಾಗಿ ಆಯಿತು. ಜನರು ಈತನು ಪ್ರವಾದಿ, ಗ್ಯಾಲಿಲೀಯ ನಾಜರೇತಿನ ಯೇಸು ಎಂದು ಮನ್ನಣೆ ಮಾಡಿದರು. ಅಲ್ಲಿ ದೇವಾಲಯದಲ್ಲಿ ನಡೆಯುವ ಕ್ರಮವನ್ನು ಕಂಡು ಸಿಟ್ಟಾದನು. ದೇವಾಲಯ ದೇವರ ಪ್ರಾರ್ಥನಾಮಂದಿರ. ಅದನ್ನು ಅಲ್ಲಿಯ ಪೂಜಾರಿಗಳೂ ವರ್ತಕರೂ ದೊಡ್ಡ ಅಂಗಡಿಯನ್ನಾಗಿ ಮಾಡಿದ್ದರು. ಯೇಸು ಅವರನ್ನೆಲ್ಲ ಬಯ್ದು ಅಲ್ಲಿಂದ ಹೊರಡಿಸಿದನು. ಅಲ್ಲಿಯ ಪೂಜಾರಿಗಳು ಯೇಸುವಿನ ಮೇಲೆ ಸಿಟ್ಟಾಗಿ ಈತನನ್ನು ಹೇಗಾದರೂ ಮಾಡಿ ತೊಂದರೆಗೆ ಈಡುಮಾಡಬೇಕೆಂದು ಹಂಚಿಕೆ ಹಾಕುತ್ತಿದ್ದರು.

ಯಹೂದೀ ಧರ್ಮದ ಗುರುಗಳೂ ಶಾಸ್ತ್ರಿಗಳೂ ಪುರೋಹಿತರೂ ಫರಿಸಾಯರೂ ಅಧಿಕಾರದಲ್ಲಿರುವುದೇನೋ ನಿಜ. ಆದರೆ ಅವರು ಧರ್ಮದಂತೆ ನಡೆದುಕೊಳ್ಳುವುದಿಲ್ಲ. ಅವರು ಕಪಟಿಗಳು. ಪರಲೋಕದ ಬಾಗಿಲನ್ನು ತೆಗೆಯುವುದಕ್ಕೆ ಬದಲಾಗಿ ಮುಚ್ಚಿ ಬಿಡುವರು. ತಾವೂ ಒಳಗೆ ಹೋಗುವುದಿಲ್ಲ. ಹೋಗುವವರನ್ನು ಹೋಗಗೊಡುವುದಿಲ್ಲ. ಒಬ್ಬನನ್ನು ತಮ್ಮ ಮತದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಭೂಮಿಯನ್ನೂ ಸಮುದ್ರವನ್ನೂ ಸುತ್ತಿಕೊಂಡು ಬರುತ್ತಾರೆ. ಅವನು ಸೇರಿದ ಮೇಲೆ ಅವನನ್ನು ನರಕಪಾತ್ರನಾಗಿ ಮಾಡುತ್ತಾರೆ ಎಂದು ಯೇಸು ಜನರಿಗೆ ಮುಚ್ಚುಮರೆಯಿಲ್ಲದೆ ಹೇಳಿದನು. ಮುಂದೆ ಪಸ್ಕಹಬ್ಬ ಬಂದಿತು. ಇದು ಯೆಹೂದೀ ಜನರಿಗೆ ಮಹತ್ವದ ಹಬ್ಬ. ಸುಮಾರು

ಮೂರು ಸಾವಿರ ವರ್ಷಗಳ ಹಿಂದೆ ಯೆಹೂದೀ ಜನರನ್ನು ದೇವರು ಇಜಿಪ್ತದಿಂದ ಬಿಡುಗಡೆ ಮಾಡಿದ ಸ್ಮರಣೆಗಾಗಿ ಈ ಹಬ್ಬವನ್ನು ಆಚರಿಸುವರು. ಆ ಕಾಲದಲ್ಲಿ ಮಹಾಯಾಜಕರು ಕಾಯಫನೆಂಬ ಮಹಾಯಾಜಕನ ಮಠಕ್ಕೆ ಬಂದು ಯೇಸುವನ್ನು ಉಪಾಯದಿಂದ ಹಿಡಿದು ಕೊಲ್ಲಬೇಕೆಂದು ಆಲೋಚನೆ ಮಾಡಿದರು. ಆದರೂ ಹಬ್ಬದಲ್ಲಿ ಹಿಡಿಯಬಾರದು, ಜನರಲ್ಲಿ ಗದ್ದಲವೇಳಬಹುದೆಂದು ಎಣಿಸುತ್ತಿದ್ದಾಗ, ಯೇಸುವಿನ ಹನ್ನೆರಡು ಜನ ಶಿಷ್ಯರಲ್ಲಿ ಒಬ್ಬನಾದ ಜೂಡಯ ಇಸ್ಕರಿಯಾತನೆಂಬವನು ಮಹಾಯಾಜಕರ ಬಳಿಗೆ ಹೋಗಿ 'ನಾನು ಅವನನ್ನು ಹಿಡಿದುಕೊಟ್ಟರೆ ನನಗೆ ಏನು ಕೊಡುತ್ತೀರಿ?' ಅಂದನು. ಅವರು ಅವನಿಗೆ ಮೂವತ್ತು ಬೆಳ್ಳಿನಾಣ್ಯಗಳನ್ನು ಕೊಟ್ಟರು. ಅಂದಿನಿಂದ ಅವನು ಯೇಸುವನ್ನು ಹಿಡಿದುಕೊಡುವುದಕ್ಕೆ ಅನುಕೂಲವಾದ ಸಮಯ ವನ್ನು ನೋಡುತ್ತಿದ್ದನು. ಯೇಸುವಿಗೆ ಇದರ ಅರಿಕೆಯಾಗಿತ್ತು. ಕಡೆಯ ಊಟವಾದ ಮೇಲೆ ಪೀಟರ ಮತ್ತು ಜಬೆದಾಯನ ಇಬ್ಬರು ಮಕ್ಕಳನ್ನು ಕರೆದುಕೊಂಡು ಒಂದು ಏಕಾಂತ ಸ್ಥಳಕ್ಕೆ ಬಂದು ದೇವರಿಗೆ ಪ್ರಾರ್ಥನೆ ಮಾಡಿ ಮುಂದೆ ಬರುವುದನ್ನು ಭೋಗಿಸಲು ಸಿದ್ಧನಾಗಿ ಕುಳಿತನು. ಮಧ್ಯರಾತ್ರಿಯಾದ ಮೇಲೆ ಮಹಾಯಾಜಕರೂ ಜನರ ಹಿರಿಯರೂ ಬಹುಜನರ ಗುಂಪೂ ಕತ್ತಿದೊಣ್ಣೆಗಳನ್ನು ಹಿಡಿದುಕೊಂಡು ಬಂದು ಜೂಡಯ ಇಸ್ಕರಿಯಾತನು ತೋರಿಸಿಕೊಟ್ಟ ಗುರುತಿನ ಮೇಲಿಂದ ಯೇಸುವನ್ನು ಬಂಧಿಸಿ ಧರ್ಮಗುರುವಿನ ಬಳಿಗೆ ಒಯ್ದು ವಿಚಾರಣೆಗೆ ಗುರಿಮಾಡಿ ರಾಜದ್ರೋಹದ ಆರೋಪವನ್ನು ಹೊರಿಸಿದರು. ಮರುದಿವಸ ಯೇಸುಪ್ರಭುವನ್ನು ಅಲ್ಲಿಯ ಅಧಿಕಾರಿಯಾದ ಪೊಂಟಿಯಸ್ ಪಾಯಲೇಟನ (Pontius Pilate) ಎಡೆಗೆ ಒಯ್ದರು. ಜೂಡಯ ಇಸ್ಕರಿಯಾತನಿಗೆ ಪಶ್ಚಾತ್ತಾಪವಾಗಿ ತಾನು ತೆಗೆದುಕೊಂಡ ಮೂವತ್ತು ನಾಣ್ಯಗಳನ್ನು ತಿರುಗಿ ಕೊಟ್ಟು ಆತ್ಮಹತ್ಯೆ ಮಾಡಿಕೊಂಡನು. ಅಧಿಕಾರಿಗೆ ಯೇಸು ನಿರ್ದೋಷಿ ಎನ್ನಿಸಿದರೂ ಜನರ ಒತ್ತಾಯಕ್ಕಾಗಿ ಮರಣ ದಂಡನೆಯನ್ನು ವಿಧಿಸಿದನು. ಆಮೇಲೆ ಯೇಸುಪ್ರಭುವನ್ನು ಅಪಮಾನ ಮಾಡಿ, ಹೊಡೆದು, ಬಡಿದು, ಬಯ್ದು, ಕ್ರೂರತನದ ಪರಮಾವಧಿಯನ್ನು ಮುಟ್ಟುವಂತಹ ವರ್ತನೆಯಿಂದ ಆತನನ್ನು ಶಿಲುಬೆ ಗೇರಿಸಿ ಪ್ರಾಣವನ್ನು ತೆಗೆದುಕೊಂಡರು. ಆತನ ಮೃತದೇಹದ ಮೇಲೆ "ಈತನು ಯೇಸು. ಯಹೂದೀ ಜನರ ರಾಜ" ಎಂದು ಬರೆದರು. ಶಿಲುಬೆಗೆ ಬಿಗಿದಾಗ ಕೆಲಹೊತ್ತಿನ ನಂತರ ಯೇಸು "ದೇವಾ! ದೇವಾ! ನನ್ನನ್ನು ತ್ಯಜಿಸಿದೆಯಾ? (Eli Eli! Lama Sabachthani)" ಎಂದು ಕೂಗಿದನು. ಜನರಿಗೆ ಅರ್ಥವಾಗಲಿಲ್ಲ. ತಲೆಗೊಂದು ಮಾತನಾಡಿ ಆತನನ್ನು ಹಿಯಾಳಿಸುತ್ತಿದ್ದರು. ಯೇಸುವಿನ ಪ್ರಾಣ ಹೋದಮೇಲೆ ಉತ್ಪಾತಗಳಾದುವು. ಗುಡಿಯೊಳಗಿನ ತೆರೆ ಹರಿಯಿತು. ಪೃಥ್ವಿ ನಡುಗಿತು. ಭೂಕಂಪವಾಯಿತು. ಗೋರಿಗಳನ್ನು ಒಡೆದು ಹೆಣಗಳು ಎದ್ದವು. ಊರೊಳಗೆ ತಿರುಗಾಡಹತ್ತಿದ್ದವು. ಸಾಯಂಕಾಲಕ್ಕೆ ಏಸುವಿನ ಭಕ್ತರಲ್ಲೊಬ್ಬನಾದ ಅರಿಮಥಿಯದ

ಜೋಸೆಫನು ಪಾಯಲೇಟಿನ ಕಡೆಗೆ ಹೋಗಿ ಯೇಸುವಿನ ಶವವನ್ನು ತನಗೆ ಕೊಡಬೇಕೆಂದು ಕೇಳಿ, ಒಯ್ದು ಗುಡ್ಡದಲ್ಲಿ ಬಂಡೆಗಲ್ಲಿನಲ್ಲಿ ಸಮಾಧಿ ಮಾಡಿ, ಬಾಗಿಲಿಗೆ ಮತ್ತೊಂದು ಬಂಡೆಗಲ್ಲನ್ನಿಟ್ಟು ತನ್ನ ಊರಿಗೆ ಹೋದನು. ಮುಂದೆ ಮೂರುದಿವಸಗಳಾದ ನಂತರ ಯೇಸು ಎದ್ದು ಗ್ಯಾಲಿಲೀಯಲ್ಲಿ ತನ್ನ ಹನ್ನೊಂದು ಶಿಷ್ಯರಿಗೆ ದರ್ಶನಕೊಟ್ಟು ಧರ್ಮೋಪದೇಶ ಮಾಡಬೇಕೆಂದು ಹೇಳಿದನು. ಅವರು ಸುತ್ತಲೂ ಸಂಚರಿಸಿ ಯೇಸುಕ್ರಿಸ್ತನ ತತ್ತ್ವಗಳನ್ನು ಹರಡಿದರು. ಮುಂದೆ ಅವರು ಅನೇಕ ಕಷ್ಟಗಳನ್ನೂ ಹಿಂಸೆಗಳನ್ನೂ ಸಹಿಸಬೇಕಾಯಿತು. ರೋಮನ್ನರ ರಾಜ್ಯದಲ್ಲಿ ಕ್ರಿಸ್ತಮತದವರನ್ನು ಬಲುಹಿಂಸೆಗೆ ಗುರಿ ಮಾಡುತ್ತಿದ್ದರು. ಅವರು ಗುಪ್ತರೀತಿಯಿಂದ ಕೂಡಿ ತಮ್ಮ ಪ್ರಾರ್ಥನೆಗಳನ್ನೂ ಮಾಡಿ ಮತವನ್ನು ಉಳಿಸಿಕೊಂಡರು. ಕಾಡುಪಶುಗಳಂತೆ ವರ್ತನವಿದ್ದ ಅನೇಕ ಜನರನ್ನು ಸನ್ಮಾರ್ಗಕ್ಕೆ ಹಚ್ಚಿ ಜ್ಞಾನನೀತಿಗಳನ್ನೂ, ಉಪದೇಶಗಳನ್ನೂ ಆತನ ಶಿಷ್ಯರು ಸಂಗ್ರಹಿಸುವರು. ಅವೆಲ್ಲವೂ ಬೈಬಲ್ಲವೆಂಬ ಅವರ ಧರ್ಮಗ್ರಂಥದಲ್ಲಿ ಅಡಕವಾಗಿವೆ. ಸುವಾರ್ತೆಗಳಲ್ಲಿ ಯೇಸುವಿನ ಚರಿತ್ರೆ ಇದೆಯೆಂದೂ ಸಿದ್ಧಮ್ಯಾಥ್ಯೂ, ಸಿದ್ಧಲ್ಯೂಕ, ಸಿದ್ಧ ಮಾರ್ಕ, ಸಿದ್ಜಾನ್ ಎಂಬವರು ಅದನ್ನು ಬರೆದಿರುವರೆಂದೂ ಮೇಲೆ ಹೇಳಿದೆ. ಮಾರ್ಕನು ಯೇಸುವನ್ನು ಒಬ್ಬ ಸಾಮಾನ್ಯ ಮನುಷ್ಯನಿಗೆ ಕಾಣುವಂತೆ ಚಿತ್ರಿಸಿರುವನು. ಲೂಕನು ಚಿತ್ರಿಸಿದ ಯೇಸು ದಯಾಮೂರ್ತಿ. ಮ್ಯಾಥ್ಯೂ ಅವನನ್ನು ಗುರುವಿನಂತೆ ಕಂಡಿದಾನೆ. ಜ್ಞಾನಿ ಜ್ಞಾನಿಯಂತೆ ಆತನು ತೋರಿದ್ದಾನೆ. ಇವರ ಸುವಾರ್ತೆಗಳನ್ನು ಓದಿದವರಿಗೆ ಯೇಸು ಮನುಷ್ಯ, ದಯಾವಂತ, ಗುರು, ಜ್ಞಾನಿಯಂತೆ ಕಾಣುವನು.

ಮುಖ್ಯ ತತ್ವಗಳು

ಸುವಾರ್ತೆಗಳಲ್ಲಿರುವ ಯೇಸುಕ್ರೈಸ್ತನ ಜೀವನ ಚರಿತೆಯನ್ನೂ ಆತನ ವಚನಗಳನ್ನೂ ಮನನಮಾಡಿದವನಿಗೆ ಆತನು ಒಬ್ಬ ದಿವ್ಯಜ್ಞಾನಿಯೂ ಲೋಕೋಪಕಾರಕ್ಕಾಗಿ ಬಂದ ಮಹಾಪುರುಷನೂ ಎಂಬುದು ಸ್ಪಷ್ಟವಾಗುವುದು. ಆತನ ಉಪದೇಶಗಳಿಗೂ ನಮ್ಮ ತತ್ವಗಳಿಗೂ ನಮ್ಮ ದೇಶದಲ್ಲಿ ಆಗಿಹೋದ ಮಹಾನುಭಾವಿಗಳ ತತ್ತ್ವಗಳಿಗೂ ಭೇದವಿಲ್ಲ. ಯೇಸು ಹೊಸಧರ್ಮವನ್ನಾಗಲಿ, ತತ್ತ್ವಗಳನ್ನಾಗಲಿ ಹೇಳುವೆನೆಂದು ಹೇಳಿಲ್ಲ. ಆ ಕಾಲದ ಜನರಲ್ಲಿದ್ದ ದೇವರು ಜಗತ್ತು ಮೊದಲಾದವುಗಳ ಕಲ್ಪನೆಗೆ ಪುಷ್ಟಿ ಕೊಟ್ಟಿರುವನು. ದೇವರು ಚೈತನ್ಯ ಸ್ವರೂಪನು, ಶಾಶ್ವತನು, ನಿತ್ಯನು, ದೇಹರಹಿತನು, ಪರಿಪೂರ್ಣನು, ಅಚಿಂತ್ಯನೆಂದು ಹೇಳುವನು. ದೇವರ ಸ್ವರೂಪವನ್ನು ಬಣ್ಣಿಸುವುದು ಶಬ್ದಗಳಿಂದ ಸಾಧ್ಯವಿಲ್ಲ. ದೇವರು ಸ್ವಯಂಭೂ, ಸರ್ವವ್ಯಾಪಿ, ಸರ್ವಶಕ್ತ, ವಿಕಾರರಹಿತ, ಜ್ಞಾನಮಯ, ಸತ್ತ್ವರೂಪ, ಚಿದಾನಂದ, ಕರುಣಾಮಯ. ಯೇಸು ದೇವರ ಮಗ. ಕ್ರೈಸ್ತರು ದೇವರು, ದೇವರ ಮಗ, ಪವಿತ್ರಾತ್ಮ (Holy ghost) ಎಂದು ಮೂವರನ್ನು ನಂಬುವರು. ಜಗತ್ತು ದೇವರ ಕೃತಿ; ದೃಶ್ಯಾದೃಶ್ಯ ವಸ್ತುಗಳು ದೇವರಿಂದ ನಿರ್ಮಿತವಾಗಿವೆ.

ಸೃಷ್ಟಿಗೆ ದೇವರ ಪ್ರೇಮವೇ ಕಾರಣ. ತನ್ನಲ್ಲಿರುವ ಪರಿಪೂರ್ಣತೆಯನ್ನು ತಾನು ಮಾಡಿದ ಸೃಷ್ಟಿಯಲ್ಲಿ ಉಂಟುಮಾಡುವುದು ಆತನ ಉದ್ದೇಶ. ಸೃಷ್ಟಿಯನ್ನು ಮಾಡಿ ತನ್ನ ಪ್ರತಿಬಿಂಬವಾದ ಮನುಷ್ಯನನ್ನು ನಿರ್ಮಿಸಿ, ಆತನಿಗೆ ಪ್ರಾಣಕಳೆಯನ್ನು ತುಂಬಿದನು. ಆತನು ತನ್ನಂತೆ ಪೂರ್ಣನಾಗಬೇಕೆಂದು ಎಲ್ಲ ಅನುಕೂಲತೆಗಳನ್ನು ಒದಗಿಸಿ ಕೊಟ್ಟನು. ಆದರೆ ಮನುಷ್ಯನು ತಪ್ಪುಮಾಡಿ ಆತನು ಹಾಕಿಕೊಟ್ಟ ಮಾರ್ಗದಿಂದ ಚ್ಯುತನಾದನು. ಅದಕ್ಕಾಗಿ ಯೇಸುಕ್ರಿಸ್ತನು ಜನರನ್ನು ಉದ್ಧಾರ ಮಾಡಲು ಅವತಾರ ಮಾಡಬೇಕಾಯಿತು. ಜನರ ಪಾಪಕ್ಕಾಗಿ ತಾನು ಕಷ್ಟ ಸೋಸಬೇಕಾಯಿತು. ಕ್ರೈಸ್ತಧರ್ಮದಲ್ಲಿ ಭಕ್ತಿ ಮತ್ತು ನೈತಿಕ ಆಚರಣೆಗಳು ಬಹಳ ಮಹತ್ವವಾದವು. ಆತ್ಮ ಅಮರ. ಅದರಲ್ಲಿ ಅವರ್ಣನೀಯ ವಾದ ಶಕ್ತಿಯಿದೆ. ಕಣ್ಣಿಗೆ ಕಾಣದಂಥ ಪರಲೋಕದ ಸಂಗತಿಗಳನ್ನು ಅದು ತಿಳಿಯಬಲ್ಲದು. ಆತ್ಮನ ನಾಶ ತಾಳಲಾರದಷ್ಟು ಕೆಡುಕಾದುದು. ಜಗತ್ತಿನ ಪ್ರಭುತ್ವ ಕೊಟ್ಟರೂ ಆತ್ಮನಾಶವನ್ನು ಮಾಡಿಕೊಳ್ಳಬಾರದು. ಪಾಪ ಬಲು ದೊಡ್ಡ ವಿಪತ್ತು. ಮಾನವನ ಸುಖವನ್ನು ಹಾಳುಮಾಡುವುದು. ಈ ಪಾಪ ಮನುಷ್ಯನು ಮಾಡುವ ಕೃತಿಗಳನ್ನವಲಂಬಿಸಿದೆ. ಕೃತಿಗಳು ಬಾಹ್ಯಾಂತರಗಳಲ್ಲಿ ಶುದ್ಧವಾಗಿದ್ದರೆ ಪಾಪ ತಟ್ಟುವುದಿಲ್ಲ. ಈರ್ಷೆ, ಅಸೂಯೆ, ನಿಂದೆ, ಅಹಂಮನ್ಯತೆ ಮೊದಲಾದವು ಪಾಪಕೃತಿಗಳು. ಪಾಪದಿಂದ ದೂರ ಇದ್ದವನು ದೇವರಿಗೆ ಪ್ರಿಯವಾಗಿರುವವರನ್ನು ದೇವರು ಮನುಷ್ಯನು ಎಂಥ ಪಾಪ ಮಾಡಿದರೂ ಕ್ಷಮಿಸಿ ಕರುಣಿಸಬಲ್ಲನು. ಆತನ ಕರುಣೆಗೆ ಪಾತ್ರರಾಗಬೇಕು. ಇವು ಕ್ರೈಸ್ತನ ಮುಖ್ಯ ತತ್ವಗಳು.

ಇಸ್ಲಾಂ ಧರ್ಮ

ಈ ಧರ್ಮಕ್ಕೆ ಮಹಮ್ಮದೀಯ ಅಥವಾ ಅಹಮ್ಮದೀಯ ಧರ್ಮವೆಂದೂ ಅದರ ಅನುಯಾಯಿಗಳಿಗೆ ಮಹಮ್ಮದೀಯ ಅಥವಾ ಮುಸಲ್ಮಾನರೆಂದೂ ಕರೆಯುವ ರೂಢಿಯುಂಟು. ಇದಕ್ಕೆ ಇಸ್ಲಾಂ ಎಂದು ಮತ್ತೊಂದು ಹೆಸರು. ಈ ಧರ್ಮದ ಅನುಯಾಯಿಗಳು ಜಗತ್ತಿನಲ್ಲಿ ಸುಮಾರು ಇಪ್ಪತ್ತುಕೋಟಿ ಐವತ್ತು ಸಾವಿರ ಜನರಿರುವರು. ಇದು ಈಗ ಅರಬಸ್ತಾನ, ಪಾಲಿಸ್ತಾನ, ಸಿರಿಯಾ, ಈಜಿಪ್ತ, ಇರಾಣ, ಹಿಂದೂಸ್ಥಾನ, ತಾರ್ತರಿ, ಚೀನ ಮೊದಲಾದ ದೇಶಗಳಲ್ಲಿ ಪ್ರಚಾರದಲ್ಲಿದೆ. ಹಿಂದೂಮಹಾಸಾಗರದೊಳಗಿನ ನಡುಗುಡ್ಡೆಗಳಲ್ಲಿ ಈ ಧರ್ಮ ನೆಲೆಸಿ ಅಲ್ಲಿಯ ವ್ಯಾಪಾರವನ್ನು ತಮ್ಮ ಕೈಯೊಳಗಿಟ್ಟುಕೊಂಡಿರುವರು. ಈ ಧರ್ಮ ಹಿಂದೂಸ್ಥಾನದಲ್ಲಿ ಮೊದಲು ಕಾಲಿಟ್ಟುದು ಕ್ರಿ.ಶ. ೭೧೨ರಲ್ಲಿ. ಮಹಮ್ಮದ ಇಬ್ನ ಕಾಸೀಮನೆಂಬುವನ ನೇತೃತ್ವದಲ್ಲಿ ಅರಬರು ಸಿಂಧುಪ್ರಾಂತ್ಯದೊಳಗೆ ನುಗ್ಗಿ ಅಲ್ಲಿಯ ರಾಜನಾದ ಮೌರ್ಯ ವಂಶದ ದಾಹರನೆಂಬುವನನ್ನು ಸೋಲಿಸಿ ಅಲ್ಲಿ ಮುಸಲ್ಮಾನರ ರಾಜ್ಯವನ್ನು ಸ್ಥಾಪಿಸಿದರು. ಸುಮಾರು ಮೂರುನೂರು ವರ್ಷಗಳನಂತರ ಕ್ರಿ.ಶ. ೯೮೬-೮೭ರಲ್ಲಿ ಸಬುಕ್ತಗೀನ ನೆಂಬುವನು ಪಂಜಾಬದೊಳಗೆ ನುಗ್ಗಿ ಕಾಶ್ಮೀರ ಮತ್ತು ಪಂಜಾಬುಗಳನ್ನಾಳುತ್ತಿದ್ದ

ಜಯಪಾಲನನ್ನು ಸೋಲಿಸಿ ಸಿಂಧೂಪ್ರಾಂತದವರೆಗೆ ತನ್ನ ರಾಜ್ಯವನ್ನು ಬೆಳೆಸಿದನು. ಇವನ ಮಗ ಗಝನಿ ಮಹಮ್ಮದನು ಹಿಂದೂಸ್ತಾನದ ಮೇಲೆ ಹದಿನೇಳು ಸಾರಿ ಧಾಳಿ ಮಾಡಿ ದೇವಾಲಯಗಳನ್ನೂ, ಪಟ್ಟಣಗಳನ್ನೂ ಸುಲಿದು ಹೇರಳ ಸಂಪತ್ತನ್ನು ಗಝನಿಗೆ ಒಯ್ದನು. ಕ್ರಿ.ಶ. ೧೦೩೦ರಲ್ಲಿ ಮಹಮ್ಮದನು ತೀರಿಕೊಂಡನು. ಆಗ ಲಾಹೋರ ಸೀಮೆಯಷ್ಟೇ ಮುಸಲ್ಮಾನರ ಅಧಿಪತ್ಯಕ್ಕೊಳಪಟ್ಟಿತ್ತು. ಹನ್ನೆರಡನೆಯ ಶತಮಾನದ ಕೊನೆಗೆ ಘೋರಿಮಹಮ್ಮದನು ಹಿಂದೂಸ್ತಾನದ ಮೇಲೆ ದಂಡೆತ್ತಿ ಬಂದು ರಜಪೂತರನ್ನು ಸೋಲಿಸಿ ಕ್ರಿ.ಶ. ೧೧೯೪ರ ಸುಮಾರಿಗೆ ದಿಲ್ಲಿಯಲ್ಲಿ ತನ್ನ ಸತ್ತೆಯನ್ನು ಸ್ಥಾಪಿಸಿದನು. ಅಂದಿನಿಂದ ಕ್ರಿ.ಶ. ೧೮೫೮ರ ವರೆಗೆ ದಿಲ್ಲಿ ಮುಸಲ್ಮಾನರ ರಾಜಧಾನಿಯಾಗಿ ಪರಿಣಮಿಸಿತು.

ಈ ಧರ್ಮ ದಕ್ಷಿಣ ಹಿಂದೂಸ್ತಾನದಲ್ಲಿ ಮೊದಲು ಕಾಲಿಟ್ಟುದು ಅಲ್ಲಾವುದ್ದೀನ ಖಿಲ್ಜಿಯ (ಕ್ರಿ.ಶ. ೧೨೯೬–೧೩೧೬) ಕಾಲದಲ್ಲಿ ಆತನು ದೇವಗಿರಿಯ ಯಾದವರನ್ನು ಕ್ರಿ.ಶ. ೧೨೯೪ರಲ್ಲಿ ಸೋಲಿಸಿ ದಕ್ಷಿಣ ದೇಶದ ದ್ವಾರವನ್ನು ಮುಸಲ್ಮಾನರಿಗೆ ತೆರೆದುಕೊಟ್ಟನು. ಅವನ ದಳವಾಯಿಯಾದ ಮಲಿಕಕಾಫರನು ಒರಂಗಲ್ಲ ಕಾಕತೀಯರನ್ನೂ, ದ್ವಾರಸಮುದ್ರದ ಬಲ್ಲಾಳರನ್ನೂ, ಮಧುರೆಯ ಪಾಂಡ್ಯರನ್ನೂ ಸೋಲಿಸಿ ರಾಮೇಶ್ವರದವರೆಗೆ ದಂಡೆತ್ತಿ ಹೋಗಿ ವಿಪುಲ ಸಂಪತ್ತನ್ನು ಹೇರಿಕೊಂಡು ದಿಲ್ಲಿಗೆ ತಿರುಗಿ ಹೋದನು. ಮುಂದೆ ಕ್ರಿ.ಶ. ೧೩೪೭ರಲ್ಲಿ ಅಲ್ಲಾಉದ್ದೀನ ಹಸನನೆಂಬುವನು ಹಸನಗಂಗೂ ಬಾಮನಿ ಎಂಬ ಹೆಸರಿನಿಂದ ಕಲುಬುರ್ಗಿಯಲ್ಲಿ ಪಟ್ಟವೇರಿ ಬಹುಮನೀ ರಾಜ್ಯವನ್ನು ಸ್ಥಾಪಿಸಿದನು. ವಿಜಯನಗರದ ರಾಜ್ಯ ಕ್ರಿ.ಶ. ೧೪ರಿಂದ ೧೬ನೆಯ ಶತಮಾನದವರೆಗೆ ಮುಸಲ್ಮಾನರ ಓಘವನ್ನು ದಕ್ಷಿಣದಲ್ಲಿ ತಡೆಯಿತು. ವಿಜಯನಗರದ ಪತನದ ನಂತರ ಮುಸಲ್ಮಾನರ ರಾಜ್ಯ ದಕ್ಷಿಣದಲ್ಲಿ ಸುಲಭವಾಗಿ ಪಸರಿಸಿತು. ಮುಂದೆ ಬಹುಮನೀ ರಾಜ್ಯ ಒಡೆದು ಅದರಲ್ಲಿ ಇಮಾದಶಾಯಿ, ಬರೀದಶಾಹಿ (ಕ್ರಿ.ಶ. ೧೪೯೨–೧೬೫೬), ಆದಿಲಶಾಹಿ (ಕ್ರಿ.ಶ. ೧೪೯೦–೧೭೦೧), ನಿಜಾಮಶಾಹಿ (ಕ್ರಿ.ಶ. ೧೪೯೦–೧೬೩೭), ಕುತುಬಶಾಹಿ (ಕ್ರಿ.ಶ. ೧೫೧೨–೧೬೮೭) ಎಂದು ಐದು ಸ್ವತಂತ್ರ ರಾಜ್ಯಗಳಾದವು. ಇವರು ಮುಸಲ್ಮಾನರಿದ್ದರೂ ಉತ್ತರದ ಮುಸಲ್ಮಾನ ರಾಜರಂತೆ ತಮ್ಮ ಹಿಂದೂಪ್ರಜೆಗಳನ್ನು ಕಾಡುತ್ತಿದ್ದಿಲ್ಲ. ಅವರೊಡನೆ ಕೂಡಿಕೊಂಡು ನಡೆದು ಪ್ರಜಾಹಿತ ಮಾಡಿದರು. ದಿಲ್ಲಿಯ ಬಾದಷಹರಾದ ಷಹಜಹಾನ, ಔರಂಗಜೇಬರು ಈ ರಾಜ್ಯಗಳನ್ನು ಮುರಿದು ಮೊಗಲ ಸಾಮ್ರಾಜ್ಯಕ್ಕೆ ದಕ್ಷಿಣ ಹಿಂದೂಸ್ತಾನವನ್ನು ಸೇರಿಸಿಕೊಂಡರು.

ಹಿಂದೂಸ್ತಾನದ ಒಂದಿಲ್ಲೊಂದು ಭಾಗದಲ್ಲಿನ ಮುಸಲ್ಮಾನ ರಾಜಮನೆತನಗಳ ಮೂಲಪುರುಷರು ಹೊರಗಿನಿಂದ ಬಂದವರು. ಅವರು ತಾವು ಬರುವಾಗ ದೊಡ್ಡ ದಂಡು ತೆಗೆದುಕೊಂಡು ಬಂದು ಇಲ್ಲಿ ಭೂಮಿಯನ್ನು ಗೆದ್ದು ತಮ್ಮ ಅನುಯಾಯಿ

ಗಳೊಡನೆ ನೆಲಸಿದರು. ಆಗಾಗ್ಗೆ ತಮ್ಮ ಆಸ್ಥಾನಗಳಿಗೆ ಮುಸಲ್ಮಾನ್ ದೇಶಗಳಿಂದ ಕವಿಗಳನ್ನೂ, ವಿದ್ವಾಂಸರನ್ನೂ ಬರಮಾಡಿಕೊಂಡು ಅವರಿಗೆ ಆಶ್ರಯವನ್ನೂ, ಪ್ರೋತ್ಸಾಹವನ್ನೂ ಕೊಡುತ್ತಿದ್ದರು. ರಾಜಭಾಷೆ ಪಾರ್ಸೀ; ಸೈನ್ಯದಲ್ಲಿ ಸಾಮಾನ್ಯರಾಡುವ ಭಾಷೆ ಉರ್ದು. ರಾಜಪ್ರಜೆಗಳ ಸಂಬಂಧ ಈ ಭಾಷೆಗಳ ಮುಖಾಂತರ ಪರದೇಶದಿಂದ ಬಂದ ಮುಸಲ್ಮಾನ ಸಾಹಸಿಗಳಿಗೆ ತಮ್ಮ ಸೈನ್ಯದಲ್ಲಿ ಮತ್ತು ರಾಜ್ಯಾಡಳಿತದಲ್ಲಿ ದೊಡ್ಡ ದೊಡ್ಡ ಅಧಿಕಾರದ ಸ್ಥಾನಗಳನ್ನು ಕೊಡುತ್ತಿದ್ದರಾದುದರಿಂದ ಅರಬರು, ತುರುಕರು, ಇರಾಣಿಗಳು, ಮೊಗಲರು, ಪಠಾಣರು ಗುಂಪುಗುಂಪುಗಳಾಗಿ ಬಂದು ನೆಲಸಿ, ಮುಸಲ್ಮಾನಧರ್ಮ, ಸಂಸ್ಕೃತಿ, ಅರಬೀ ಪಾರ್ಸೀ ಭಾಷೆಗಳ ಪ್ರಸಾರ ಇವುಗಳನ್ನು ಕಾಯ್ದುಕೊಂಡು, ಉತ್ತರದ ಮುಸಲ್ಮಾನ ದೇಶಗಳ ಸಂಗಡ ಸಂಪರ್ಕವನ್ನಿಟ್ಟುಕೊಳ್ಳಲು ಕಾರಣರಾದರು. ಆದರೂ ದಕ್ಷಿಣದಲ್ಲಿದ್ದ ಮುಸಲ್ಮಾನ ರಾಜರು ಹಿಂದೂಜನರ ಸಹಾಯವಿಲ್ಲದೆ ರಾಜ್ಯವನ್ನು ನಡೆಸುವುದು ಸಾಧ್ಯವಿಲ್ಲೆಂದು ತಿಳಿದು ಹಿಂದುಗಳ ಸಂಗಡ ಸೌಮ್ಯತನದಿಂದ ನಡೆದುಕೊಳ್ಳಹತ್ತಿದರು. ಮಹತ್ವದ ಅಧಿಕಾರಿಗಳನ್ನು ಬಲಿಷ್ಠರಾದ ಹಿಂದುಗಳಿಗೆ ಕೊಟ್ಟು ಅವರ ಸಹಾಯದಿಂದ ಉಳಿದವರ ಮೇಲೆ ತಮ್ಮ ಸತ್ತೆಯನ್ನು ಸ್ಥಾಪಿಸಿದರು. ಹನ್ನೊಂದನೆಯ ಶತಮಾನದಿಂದ ಹತ್ತೊಂಭತ್ತನೆಯ ಶತಮಾನದವರೆಗೆ ಸುಮಾರು ಎಂಟುನೂರು ವರ್ಷ ಹಿಂದುಸ್ತಾನದ ಬಹುಭಾಗವನ್ನು ಆಳಿದರು. ಈಗ ಹಿಂದೂಸ್ತಾನದಲ್ಲಿ ಮುಸಲ್ಮಾನರು ಸುಮಾರು ಏಳುಕೋಟಿ ಜನರಾಗಿರುವರು.

ಮಹಮ್ಮದೀಯ ಧರ್ಮ ಉಗಮವಾದುದು ಅರಬಸ್ತಾನದಲ್ಲಿ. ಏಳನೆಯ ಶತಮಾನದಲ್ಲಿ ಅದು ಕಾಡುಜನರ ಬೀಡಾಗಿತ್ತು. ಜನರು ತಮ್ಮ ತಮ್ಮೊಳಗೆ ಹೊಡೆದಾಡುತ್ತಿದ್ದರು. ಅನೇಕ ಮೂರ್ತಿಗಳನ್ನು ಪೂಜಿಸುತ್ತಿದ್ದರು. ಹಲಕೆಲವು ನಿಂದ್ಯವಾದ ಪದ್ಧತಿಗಳು ರೂಢಿಯಲ್ಲಿದ್ದವು. ಇಂತಹ ಜನರನ್ನು ತಿದ್ದಿ, ಅವರಿಗೆ ಒಬ್ಬನೇ ದೇವರ ಉಪಾಸನೆಯನ್ನು ಕಲಿಸಿ, ಅವರಲ್ಲಿ ಚೈತನ್ಯವನ್ನು ತುಂಬಿ, ಅವರಾಡುತ್ತಿದ್ದ ಭಾಷೆಯನ್ನು ದೇವಭಾಷೆಯನ್ನಾಗಿ ಮಾಡಿ, ಅವರಿಗೆ ಬಹುದೇಶಗಳನ್ನು ಗೆದ್ದು, ಅವನ್ನಾಳುವ ಶಕ್ತಿಯನ್ನೊದಗಿಸಿ ಕೊಟ್ಟವರು ಮಹಮ್ಮದ ಪೈಗಂಬರರು. ಇವರೆ ಮಹಮ್ಮದೀಯ ಧರ್ಮಸ್ಥಾಪಕರು. ಆದುದರಿಂದ ಈ ಮತಕ್ಕೆ ಇವರ ಹೆಸರಿಡಲಾಗಿದೆ. ಇವರ ಚರಿತ್ರೆ ಮನನೀಯವಾಗಿದೆ. ಅದನ್ನು ಸಂಗ್ರಹಿಸಲಾಗಿದೆ.

ಅರಬಸ್ಥಾನದ ಹೆಡ್ಜಝ್ ಪ್ರಾಂತದಲ್ಲೆಲ್ಲ ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಹೇಳಿದ ಅಬ್ರಾಹಾಮನ ಸಂತತಿಯವರು ವಾಸಿಸುವರು. ಈ ವಂಶದಲ್ಲಿ ಅಬ್ರಾಹಾಮನ ಮಗನಾದ ಇಸ್ಮಾಯಲನಿಂದ ಸುಮಾರು ೪೦ ತಲೆಯವನು ಬಲು ಪ್ರಸಿದ್ಧನಾದ ಅದ್ನನ ಎಂಬುವನು. ಇವನೇ ಖುರೇಷ ವಂಶದ ಮೂಲಪುರುಷನು. ಈ ವಂಶದಲ್ಲುದ್ಭವಿಸಿದ ಖುಸಯ್ಯ ಎಂಬುವನು ಮಕ್ಕೆಯಲ್ಲಿರುವ ಅತಿ ಪ್ರಾಚೀನ

ಕಾಅಬಾ ದೇವಾಲಯದ ಸಂರಕ್ಷಕನಾಗಿದ್ದನು. ಇದು ಬಹಳ ಗೌರವದ ಮತ್ತು ಮರ್ಯಾದೆಯ ಅಧಿಕಾರವೆಂದು ಅರಬರಲ್ಲಿ ಗಣನೆಯಿತ್ತು. ಕಾಅಬಾದ ವ್ಯವಸ್ಥೆಯನ್ನು ಖುರೇಷ ವಂಶದವರೇ ಮಾಡುತ್ತ ಬಂದಿರುವರು. ಆದುದರಿಂದ ಅರಬಸ್ಥಾನದಲ್ಲಿ ಈ ವಂಶದವರ ಹೆಚ್ಚಳ ಬಹಳವಾಗಿತ್ತು. ಖುಸಯ್ಯನ ಮೊಮ್ಮಗ ಅಬ್ದುಲ್ಲ ಮುತ್ತಾಲಿಬ ಎಂಬುವನು. ಇವನಿಗೆ ಹತ್ತು ಜನ ಗಂಡುಮಕ್ಕಳಿದ್ದರು. ಅವರಲ್ಲಿ ಅಬುಲಹಾಬ, ಅಬುತಾಲೀಬ, ಹಂಝಾ, ಅಬ್ಬಾಸ, ಅಬ್ದುಲ್ಲಾಹ ಎಂಬುವರು ಮುಖ್ಯರು. ಅಬ್ದುಲ್ಲಾಹನು ಝುಂಹ್ರಾವಂಶದ ವಹಬ್-ಬಿನ್-ಅಬ್ದ-ಇ-ಮನಫ್ ಎಂಬುವನ ಮಗಳಾದ ಬೀಬಿಅಮಿನಾ ಎಂಬುವಳನ್ನು ಮದುವೆಯಾದನು. ಆಕೆಯ ಸಂಗಡ ಕೆಲವು ದಿವಸ ಸುಖದಿಂದ ಸಂಸಾರ ಮಾಡಿದನು. ಆಕೆ ಗರ್ಭಿಣಿಯಾಗಿದ್ದಾಗ ವ್ಯಾಪಾರಕ್ಕೆಂದು ಸಿರಿಯಾ ದೇಶಕ್ಕೆ ಹೋದನು. ತಿರುಗಿ ಬರುವಾಗ ಮದಿನಾಪಟ್ಟಣದಲ್ಲಿ ಬೇನೆಯಿಂದ ತೀರಿಕೊಂಡನು. ಪತಿಯ ಮರಣದಿಂದ ದುಃಖಿತಳಾದ ಬೀಬಿ ಅಮೀನಳು ರಬಿಉಲ್ ಅವ್ವಲ ತಿಂಗಳ ೯ನೆಯ (ಕೆಲವರ ಪ್ರಕಾರ ೧೨ನೆಯ) ದಿವಸ, ಕ್ರಿ.ಶ. ೫೭೧ ಏಪ್ರಿಲ್ ತಿಂಗಳ ೨೦ನೆಯ ತಾರೀಖು, ಗಂಡುಮಗುವನ್ನು ಮಕ್ಕೆಯಲ್ಲಿ ಹೆತ್ತಳು. ಕೂಸಿಗೆ ಅಜ್ಜ ಅಬ್ದುಲ್ಲ ಮುತ್ತಾಲಿಬನು 'ಮಹಮ್ಮದ' ಎಂದೂ ತಾಯಿ 'ಅಹಮ್ಮದ' ಎಂದೂ ಹೆಸರಿಟ್ಟರು. ಈ ಮಗುವೆ ಬೆಳೆದು ದೊಡ್ಡವನಾಗಿ ಜಗತ್ತಿನ ಪ್ರಬಲ ಮತಗಳಲ್ಲೊಂದಾದ ಮಹಮ್ಮದೀಯ ಮತದ ಸ್ಥಾಪಕನಾದನು. ಮಗು ಸುಮಾರು ಆರುವರ್ಷದವನಿರುವಾಗ ಬೀಬಿ ಅಮೀನಳು ಪತಿಯ ಸಮಾಧಿಯ ದರ್ಶನಕ್ಕಾಗಿ ಮದಿನಾಪಟ್ಟಣಕ್ಕೆ ಹೋದಾಗ ದಾರಿಯಲ್ಲಿ ತೀರಿಕೊಂಡಳು. ಆದುದರಿಂದ ಮಗು ಚಿಕ್ಕವನಿರುವಾಗ ತಂದೆತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾಗಿ, ಅಜ್ಜನಾದ ಅಬ್ದುಲ್ಲ ಮುತ್ತಾಲಿಬನ ಪಕ್ಕದಲ್ಲಿ ಎರಡು ವರ್ಷ ಬೆಳೆದನು. ಮುದುಕನಿಗೆ ಹುಡುಗನೆಂದರೆ ಪಂಚಪ್ರಾಣ. ಇದು ವಿಧಿಯ ಮನಸ್ಸಿಗೆ ಬಾರದೆ ಮುದುಕನನ್ನು ಕಸಿದುಕೊಂಡು ಹೋಯಿತು. ಆಮೇಲೆ ಕಕ್ಕನಾದ ಅಬುತಾಲೀಬನು ಮಗುವನ್ನು ಬಲುಪ್ರೀತಿಯಿಂದ ನೋಡಿಕೊಳ್ಳಹತ್ತಿದನು. ಹುಡುಗನ ಸದ್ಗುಣಕ್ಕಾಗಿ ಅಬುತಾಲೀಬನು ಹಿರಿಹಿರಿ ಹಿಗ್ಗಿದನು. ಅವನು ಹನ್ನೆರಡು ವರ್ಷದವನಿರುವಾಗ ಅವನ ಕಕ್ಕನು ಅವನನ್ನು ಕರೆದುಕೊಂಡು ವ್ಯಾಪಾರಕ್ಕಾಗಿ ಸಿರಿಯಾ ದೇಶಕ್ಕೆ ಹೋಗಿದ್ದನು. ಅಲ್ಲಿ ದಿವ್ಯಜ್ಞಾನಿಯೆಂದು ಗಣಿಸಲ್ಪಡುವ ಬಹಿರನೆಂಬ ಕ್ರೈಸ್ತ ಸಾಧು ಹುಡುಗನನ್ನು ನೋಡಿ "ಈ ಹುಡುಗನು ದೇವರ ಕೃಪೆಗೆ ಪಾತ್ರನಾದವನಿರುವನು. ಇವನಿಂದ ಬಲು ದೊಡ್ಡ ಕಾರ್ಯವಾಗುವುದು. ಇವನನ್ನು ಒಳ್ಳೆಯ ಜಾಗ್ರತೆಯಿಂದ ನೋಡಿಕೊಳ್ಳಬೇಕು." ಎಂದು ಅಬೂತಾಲೀಬನಿಗೆ ಹೇಳಿದನಂತೆ.

ಹಜರತ ಮಹಮ್ಮದರು ಇಪ್ಪತ್ತು ವರುಷದವರಿರುವಾಗ ಖುರೇಷ ಜನರಿಗೂ ಖೈಸ ಜನರಿಗೂ ಯುದ್ಧ ನಡೆಯಿತು. ಅದರಲ್ಲಿ ಅವರು ಭಾಗವಹಿಸಿದರು. ಮುಂದೆ

ಸ್ವಲ್ಪ ಕಾಲದಲ್ಲಿ ಹಿಲ್ಫ-ಉಲ್-ಫಜೂಲ ಎಂಬ ಸಂಘವನ್ನು ಸ್ಥಾಪಿಸಿ, ಅದರ ಎಲ್ಲ ಭಾರವನ್ನು ತಾವೇ ವಹಿಸಿದರು. ಈ ಸಂಘದ ಧ್ಯೇಯ ಬಡವರನ್ನೂ, ಅಶಕ್ತರನ್ನೂ ಎಲ್ಲ ರೀತಿಯಿಂದ ರಕ್ಷಿಸುವುದು; ಅವರಿಗಾಗುವ ತೊಂದರೆಗಳನ್ನು ದೂರ ಮಾಡುವುದು; ಎಲ್ಲ ಪ್ರಕಾರದ ಸಹಾಯ ಮಾಡುವುದು ಆಗಿತ್ತು.

ಚಿಕ್ಕಂದಿನಿಂದಲೂ ಹಜರತ ಮಹಮ್ಮದರು ಎಲ್ಲರಿಗೂ ಪ್ರಿಯವಾಗಿ ನಡೆದು ಕೊಳ್ಳುತ್ತಿದ್ದರು. ಇವರ ಸದ್ಗುಣಗಳಿಗೆ ಮೆಚ್ಚಿ ಜನರು ಇವರನ್ನು "ಅಲ್-ಅಮೀನ" ಎಂದು ಕರೆಯುತ್ತಿದ್ದರು. ತಹಿರಾ (ಸದ್ಗುಣಿ) ಎಂದು ಹೆಸರಾದ ಬೀಬಿ ಖದೀಜಾ ಎಂಬ ವಿಧವೆ ತನ್ನ ಆಸ್ತಿಯ ವ್ಯವಸ್ಥೆಯನ್ನು ಇವರಿಗೆ ಒಪ್ಪಿಸಿದಳು. ಇವರು ಒಳ್ಳೆಯ ದಕ್ಷತೆಯಿಂದಲೂ ಸುವ್ಯವಸ್ಥೆಯಿಂದಲೂ ಆಕೆಯ ಮನೆತನವನ್ನು ನಡೆಸಹತ್ತಿದರು. ಇವರ ಗುಣಗಳಿಗೆ ಲುಬ್ಧಳಾದ ಆಕೆ ಇವರನ್ನು ಮದುವೆಯಾದಳು. ಆಗ ಇವರಿಗೆ ಇಪ್ಪತ್ತೈದು ವರ್ಷ, ಆಕೆಗೆ ನಲವತ್ತು ವರ್ಷ. ಬೀಬಿ ಖದಿಜೆಯ ಸಂಗಡ ಹಜರತ ಮಹಮ್ಮದರ ಸಂಸಾರ ಒಳ್ಳೆ ಸುಖಮಯವಾಗಿ ಸಾಗಿತು. ಶರೀರದಿಂದ ಇಬ್ಬರಿದ್ದರೂ ಮನಸಿನಿಂದ ಒಂದೇ ಆಗಿದ್ದರು. ಬೀಬಿ ಖದಿಜೆ ಹಜರತ ಮಹಮ್ಮದರ ಬಲಗೈಯಂತಿದ್ದು ಅವರಿಗೆ ಎಲ್ಲ ರೀತಿಯಿಂದಲೂ ಸಹಾಯಮಾಡುತ್ತಿದ್ದಳು. ಈಕೆ ಜೈನಾಬ, ಸಖಿಯ್ಯ, ಉಮ್ಮಕುಲ್ಸುದು. ಫಾತೀಮಾ ಎಂಬ ನಾಲ್ವರು ಹೆಣ್ಣು ಮಕ್ಕಳನ್ನೂ, ಇಬ್ಬರು ಗಂಡುಮಕ್ಕಳನ್ನೂ ಹಡೆದಳು. ಹಿರಿಯ ಮಗ ಖಾಸೀಮನು ಎರಡು ವರ್ಷದವನಿರುವಾಗ ತೀರಿಕೊಂಡನು. ಮತ್ತೊಬ್ಬ ಮಗನು ಚಿಕ್ಕವನಿರುವಾಗ ತೀರಿಕೊಂಡನು. ಹಜರತ ಮಹಮ್ಮದರ ಜೀವಿತಾವಧಿಯಲ್ಲಿ ಬೀಬಿ ಫಾತಿಮಾ ಎಂಬವಳ ಹೊರತು ಎಲ್ಲ ಹೆಣ್ಣುಮಕ್ಕಳು ತೀರಿಕೊಂಡರು. ಬೀಬಿ ಖದಿಜೆ ಹಜರತ ಮಹಮ್ಮದರ ಸಂಗಡ ಇಪ್ಪತ್ತೈದು ವರ್ಷ ಸಂಸಾರ ಮಾಡಿ ಅವರ ಐವತ್ತನೆಯ ವರ್ಷದಲ್ಲಿ ಇಹಲೋಕದ ಯಾತ್ರೆಯನ್ನು ಮುಗಿಸಿದಳು. ಅವರು ಆಕೆಯನ್ನು ಬಹಳವಾಗಿ ಮನ್ನಿಸುತ್ತಿದ್ದರು. "ಎಲ್ಲರೂ ನನ್ನ ಕೈಬಿಟ್ಟಾಗ ಆಕೆ ನನ್ನ ಕೈಹಿಡಿದಿದ್ದಾಳೆ. ಆಕೆ ನನಗೆ ಎಲ್ಲರಿಗಿಂತ ಮೆಚ್ಚಿನವಳು" ಎಂದು ಹಜರತ ಮಹಮ್ಮದರು ಒಮ್ಮೆ ತಮ್ಮ ಚಿಕ್ಕಹೆಂಡತಿಯಾದ ಬೀಬಿ ಆಯೇಷಾಗೆ ಹೇಳಿದರಂತೆ.

ಹಜರತ ಮಹಮ್ಮದರ ಮೇಲೆ ಮಕ್ಕಾದ ಅರಬರ ವಿಶ್ವಾಸ ಮೊದಲು ಬಹಳವಾಗಿತ್ತು. ಅವರು ಹೇಳಿದುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಒಮ್ಮೆ ಕಾಅಬಾ ದೇವಾಲಯದ ಜೀರ್ಣೋದ್ಧಾರವನ್ನು ಮಾಡಲು ಎಲ್ಲರೂ ಒಪ್ಪಿ ಬೇಕಾಗುವ ಸಾಹಿತ್ಯವನ್ನು ಕೂಡಿಸಿದರು. ಅಲ್ಲಿರುವ ದೇವತೆಯ ದ್ಯೋತಕವಾದ ಕರಿಯಕಲ್ಲನ್ನು ಎತ್ತಿ ಯೋಗ್ಯ ಸ್ಥಾನದಲ್ಲಿಡುವ ಮರ್ಯಾದೆ ತಮಗೆ ಬೇಕೆಂದು ಎಲ್ಲ ಮನೆತನದವರು ಹಟ ಹಿಡಿದರು. ಇದರಿಂದ ಅರಬರಲ್ಲಿ ಜಗಳವೆದ್ದು ರಕ್ತದ ಕಾಲುವೆ ಹರಿಯುವ ಪ್ರಸಂಗವಿತ್ತು. ಆಗ ಎಲ್ಲರೂ ಕೂಡಿ ಮಹಮ್ಮದರಿಗೆ ಆ ಕೆಲಸವನ್ನು ಒಪ್ಪಿಸಿದರು. ಅವರು ಒಂದು

ಅರಿವೆಯನ್ನು ಹಾಸಿ ಅದರ ಮೇಲೆ ತಾವೇ ಆ ಕರಿಯ ಕಲ್ಲನ್ನು ಇಟ್ಟು ಅರಬರ ಮುಖ್ಯ ಮನೆತನಗಳ ಪ್ರತಿನಿಧಿಗಳನ್ನು ಕರೆದು ಅವರಿಗೆ ಆ ಅರಿವೆಯ ದಂಡೆಯನ್ನು ಹಿಡಿಯಲು ಹೇಳಿದರು. ಎಲ್ಲರೂ ಕೂಡಿ ಆ ಕಲ್ಲನ್ನು ಅದರ ಸ್ಥಾನದಲ್ಲಿರಿಸಿದರು. ಇದರಿಂದ ಮಕ್ಕೆಯ ಅರಬರೆಲ್ಲರಿಗೆ ಬಹಳ ಸಂತೋಷವಾಯಿತು.

ಹಜರತ ಮಹಮ್ಮದರ ಹೃದಯ ಕನಿಷ್ಠ ಸ್ಥಿತಿಯನ್ನು ನೋಡಿ ತಳಮಳಗೊಳ್ಳುತ್ತಿತ್ತು. ಹೀನಾವಸ್ಥೆಯಲ್ಲಿರುವ ಜನರನ್ನು ಎತ್ತಿಹಿಡಿದು ಸಜ್ಜನರನ್ನಾಗಿ ಮಾಡಿ ಅರಬ ಸಮಾಜಕ್ಕೆ ಗೌರವನನ್ನು ಉಂಟುಮಾಡುವ ಅಪೇಕ್ಷೆ ಅವರಲ್ಲಿ ಮನೆಮಾಡಿಕೊಂಡಿತ್ತು. ಆಗಾಗ ಸಮೀಪದ ಹೀರಾಗುಡ್ಡದ ಗವಿಗೆ ಹೋಗಿ ಮಾನವ ಜನಾಂಗದ ಉದ್ಧಾರಮಾಡೆಂದು ದೇವರನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತಿದ್ದರು. ಮತ್ತು ಅಲ್ಲಿ ಅನೇಕ ದಿವಸಗಳವರೆಗೆ ಅಲ್ಪಾಹಾರದ ಮೇಲೆ ಅಥವಾ ನಿರಾಹಾರದಿಂದ ಧ್ಯಾನ ಮತ್ತು ಪ್ರಾರ್ಥನೆಯಲ್ಲಿ ಕಾಲ ಕಳೆಯುತ್ತಿದ್ದರು. ಅರಬರ ಆಗಿನ ಅನೇಕ ಆಚಾರ ವಿಚಾರಗಳು ಅನೇಕ ಮೂರ್ತಿಗಳ ಉಪಾಸನೆಯೂ ಅವರಿಗೆ ಸರಿಬರಲಿಲ್ಲ. "ದೇವರು ಒಬ್ಬನೇ. ಮೂರ್ತಿಗಳು ಆತನ ಸ್ವರೂಪವನ್ನು ಹೊಂದಲಾರವು" ಎಂದು ಅವರು ಹೇಳುವುದನ್ನು ಪ್ರಾಚೀನ ಕಾಲದಿಂದಲೂ ಮೂರ್ತಿಪೂಜೆಯಲ್ಲಿ ವಿಶ್ವಾಸವುಳ್ಳ ಅರಬರು ಲಕ್ಷಿಸಲಿಲ್ಲ. ಹಜರತ ಮಹಮ್ಮದರ ೪೦ನೆಯ ವಯಸ್ಸಿನಲ್ಲಿ ಕ್ರಿ.ಶ. ೬೧೦ರಲ್ಲಿ ರಮಜಾನ ತಿಂಗಳಲ್ಲಿ ಒಂದು ದಿವಸ ಅವರು ಹೀರಾಗವಿಯಲ್ಲಿ ಧ್ಯಾನದಲ್ಲಿ ಮಗ್ನವಾದಾಗ ಗೆಬ್ರಾಯಿಲ್ಲನೆಂಬ ದೇವದೂತನು ಬಂದು "ಕರ್ತಾರನಾದ ನಿನ್ನ ಪ್ರಭುವಿನ ಹೆಸರಿನಲ್ಲಿ ಓದು. ಅವನು ಮಣ್ಣಿನಿಂದ ಮನುಷ್ಯನನ್ನು ಮಾಡಿದನು. ಓದು. ನಿನ್ನ ಪ್ರಭು ಬಲು ಘನವಂತನು. ಅವನು ಲೆಕ್ಕಣಿಕೆಯಿಂದ ಕಲಿಸಿದನು. ಮನುಷ್ಯನಿಗೆ ಗೊತ್ತಿಲ್ಲದುದನ್ನು ಕಲಿಸಿದನು"[1] ಎಂದು ಹೇಳಿದನು. ಅವರಿಗೆ ದೇವದೂತನ ದರ್ಶನದಿಂದ ಮತ್ತು ಆತನು ಆಡಿದ ಮಾತುಗಳಿಂದ ಜ್ಞಾನೋದಯವಾಗಿ ಭಗವಂತನು ಅತಿ ಮಹತ್ವದ ಕೆಲಸದ ಭಾರವನ್ನು ಹೊರಿಸಿರುವನೆಂದು ಅರಿತರು. ಅಂದಿನಿಂದ ಅವರ ಸ್ಥಿತಿ ಬೇರೆಯಾಯಿತು. ಅದನ್ನು ಮೊದಲು ಗುರುತಿಸಿದವಳು ಬೀಬಿ ಖದಿಜ. ದೇವದೂತನ ದರ್ಶನದಿಂದ ಹಜರತ ಮಹಮ್ಮದರ ಶರೀರವೆಲ್ಲ ಬೆವತು. ಮೈಯೆಲ್ಲ ನಡುಗಹತ್ತಿ, ಕೈಕಾಲು ತಣ್ಣಗಾದವು. ಅದೇ ಸ್ಥಿತಿಯಲ್ಲಿ ಮನೆಗೆ ಬಂದು ಹೆಂಡತಿಗೆ ದಪ್ಪವಾದ ಹಚ್ಚಡವನ್ನು ಹೊದಿಸಲಿಕ್ಕೆ ಹೇಳಿದರು. ಸ್ವಲ್ಪ ವೇಳೆಯಾದ ಮೇಲೆ ಮೊದಲಿನ ಸ್ಥಿತಿಗೆ ಬಂದು ತಮಗಾದ ಅನುಭವವನ್ನು ಅವಳಿಗೆ ತಿಳಿಸಿದರು. ಬೀಬಿ ಖದಿಜೆ ಹಜರತ ಮಹಮ್ಮದರು ದಿವ್ಯಜ್ಞಾನಿಗಳಾದರೆಂದು ಅರಿತಳು. ಅವರಿಗೆ ಸಮಾಧಾನ ಹೇಳಿ ತನ್ನ ಆಪ್ತನಾದ ಕ್ರೈಸ್ತಧರ್ಮವನ್ನು ಸ್ವೀಕರಿಸಿದ ವರಾಖ ಬಿನ್ ನೌಫಾಲನೆಂಬವನೆಡೆಗೆ ಅವರನ್ನು ಕರೆದುಕೊಂಡು ಹೋದಳು. ಅವನು ಹಜರತ ಮಹಮ್ಮದರಿಗಾದ ದೇವದೂತನ

---

1 ಕುರಾನ್ ೯೬: ೧-೫

ದರ್ಶನವನ್ನು ಕೇಳಿ "ಈ ದೇವದೂತನೇ ಮೋಸೆಯನಿಗೆ ದರ್ಶನ ಕೊಟ್ಟವನು. ನಿನ್ನ ಜನರು ನಿನ್ನನ್ನು ಗಡಿಪಾರು ಮಾಡುವವರೆಗೆ ನಾನು ಜೀವಿಸಿರುವೆನೋ ಇಲ್ಲವೋ ಹೇಳಲಾರೆ" ಎಂದನು. ಹಜರತ ಮಹಮ್ಮದರು "ನನ್ನ ಆಪ್ತೇಷ್ಟರು ನನ್ನನ್ನು ಹೀಗೆ ನಡೆಸಿಕೊಳ್ಳುವರೇ ?" ಎಂದು ಆಶ್ಚರ್ಯದಿಂದ ಕೇಳಿದರು. ವರಾಖನು "ಹೌದು. ಪ್ರತಿಯೊಬ್ಬ ದಿವ್ಯಜ್ಞಾನಿಯ ಗತಿ ಅದೇ ಆಗಿರುವುದು" ಎಂದನು. ಇದಾದ ಸ್ವಲ್ಪ ದಿವಸಗಳಲ್ಲಿಯೇ ವರಾಖನು ತೀರಿಕೊಂಡನು. ಈಗ ಹಜರತ ಮಹಮ್ಮದರು ಪೈಗಂಬರರಾದರು. ಅವರ ಉಪದೇಶವನ್ನು ಸ್ವೀಕರಿಸಿದವರಲ್ಲಿ ಬೀಬಿ ಖದಿಜೆ ಮೊದಲನೆಯವಳು ವರಾಖನು ಎರಡನೆಯವನು, ಎಲ್ಲ ಜನರ ವಿಶ್ವಾಸಕ್ಕೂ ಪಾತ್ರನಾದ ಮತ್ತು ಪೈಗಂಬರರಲ್ಲಿ ವಿಶ್ವಾಸವುಳ್ಳ ಅಬುಬಕರನು ಮೂರನೆಯವನು, ಹಜರತ ಮಹಮ್ಮದರ ಕಕ್ಕಂದಿರಾದ ಅಬೂತಾಲೀಬರ ಮಗ ಮತ್ತು ಪೈಗಂಬರರ ಮೇಲೆ ಬಹಳ ನಂಬುಗೆಯುಳ್ಳ ಆಲಿ ನಾಲ್ಕನೆಯವನು, ಪೈಗಂಬರರಿಗೆ ವಿಶ್ವಾಸದ ಆಳು ಮಗ ಝಹಾಯುದ್ ಬಿನ್ ಹ್ಯಾರಿಸನು ಐದನೆಯವನು. ಪೈಗಂಬರರಿಗೆ ಜ್ಞಾನೋದಯವಾದ ಮೂರು ವರ್ಷಗಳಲ್ಲಿ ನಲ್ವತ್ತು ಜನರು ಅವರ ಮತವನ್ನು ಸ್ವೀಕರಿಸಿದರು. ಖುರೇಷವಂಶದ ಪ್ರಮುಖರಲ್ಲಿ ಕೆಲವರು ಈ ಮತಕ್ಕೆ ಒಲಿದರು. ಬಲು ಗಟ್ಟಿಗನೂ ಹಜರತ ಮಹಮ್ಮದರ ಕಕ್ಕನೂ ಆದ ಹಂಝಾನೂ, ಶೂರನೂ ಬಲಿಷ್ಠನೂ ಆದ ಉಮರನೂ ಇಸ್ಲಾಮ ಧರ್ಮದ ದೀಕ್ಷೆಯನ್ನು ತೆಗೆದುಕೊಂಡರು. ಈ ಮತಕ್ಕೆ ಬಡವರೂ ದಾಸರೂ ಹೆಚ್ಚಾಗಿ ಸೇರಹತ್ತಿದರು. ಅಬುಬಕರನು ತನ್ನ ದುಡ್ಡಿನಿಂದ ದಾಸರನ್ನು ಕೊಂಡು ಅವರನ್ನು ಮುಕ್ತರನ್ನಾಗಿ ಮಾಡುತ್ತಿದ್ದನು. ಮೇಲಿನ ತರಗತಿಯ ಜನರು ಮುಸಲ್ಮಾನರನ್ನು ಬಹಳವಾಗಿ ಕಾಡುತ್ತಿದ್ದರು. ಇಸ್ಲಾಮ ಧರ್ಮದ ಪ್ರಸಾರ ಬೆಳೆದಂತೆ ಅರಬರು ಅವರಿಗೆ ತೊಂದರೆ ಕೊಡುವುದೂ ಬೆಳೆಯಹತ್ತಿತು. ಸ್ವತಃ ಪೈಗಂಬರರೇ ಅನೇಕ ಪ್ರಕಾರದ ಹಿಂಸೆಗೆ ಗುರಿಯಾಗಬೇಕಾಯಿತು. ಅವರಿಗೆ ಅಣಕಿಸುವುದು. ಅವರ ಮಾರ್ಗದಲ್ಲಿ ಮುಳ್ಳು ಹರಡುವುದು; ಅವರು ಹೋಗುವಾಗ ಹಿಂದಿನಿಂದ ಬಂದು ಕಿಡಿಗೇಡಿತನ ಮಾಡುವುದು; ಮೊದಲಾದವು ನಡೆದೇ ಇದ್ದವು. ಆದರೆ ಬಡವರಾದ ಗುಲಾಮರು ಇಸ್ಲಾಮಧರ್ಮವನ್ನು ಸ್ವೀಕರಿಸಿದರೆ ಅವರಿಗಾಗುವ ಅಮಾನುಷ ಹಿಂಸೆಯನ್ನು ವರ್ಣಿಸುವುದು ಕಷ್ಟ. ಯಾಸೀರನೆಂಬ ಒಬ್ಬ ಗುಲಾಮನ ಒಂದು ಕಾಲನ್ನು ಒಂದು ಗಂಟೆಗೆ ಮತ್ತೊಂದು ಕಾಲನ್ನು ಮತ್ತೊಂದು ಒಂಟೆಗೆ ಕಟ್ಟಿ ಅದನ್ನು ವಿರುದ್ಧ ದಿಕಿಗೆ ಹೊಡೆದು ಅವನನ್ನು ಇಬ್ಭಾಗವಾಗಿ ಸೀಳಿದರಂತೆ. ಯಾಸೀರನು ಮಾಡಿದ ತಪ್ಪೆಂದರೆ ಆತನು ಮುಸಲ್ಮಾನನಾದುದು. ಅಬುಬಕರನಂಥ ದೊಡ್ಡಮನುಷ್ಯನೂ ಕೂಡ ಸುರಕ್ಷಿತನಾಗಿ ಉಳಿಯಲಿಲ್ಲ. ಈ ಹಿಂಸೆಯನ್ನು ನೋಡಲಾರದೆ ಪೈಗಂಬರರು ತಮ್ಮ ಅನುಯಾಯಿಗಳಿಗೆ ಎಲ್ಲಿಯಾದರೂ ಸುರಕ್ಷಿತ ಸ್ಥಳಕ್ಕೆ ಹೋಗಿರಲು ಅನುಮತಿಯನ್ನಿತ್ತರು. ಪೈಗಂಬರರ ಮಗಳಾದ ರಖಿಯ್ಯ

ಮತ್ತು ಆಕೆ ಗಂಡ ಉಸ್ಮಾನ ಇವರಿಂದೊಡಗೂಡಿದ ಹನ್ನೊಂದು ಜನರೂ ಅಬಸೀನಿಯಾ ದೇಶಕ್ಕೆ ಹೊರಟರು. ಇವರು ಹತ್ತಿದ ಹಡಗು ಅರಬಸ್ತಾನದ ದಡವನ್ನು ಬಿಟ್ಟ ನಂತರ ಅರಬರಿಗೆ ಗೊತ್ತಾಗಿ ಅಬ್ದುಲ್ಲ ಬಿನ್ ರಾಬಿ ಮತ್ತು ಅಮ್ರೂ ಬಿನ್ ಆಸ ಎಂಬುವರನ್ನು ಅಬಿಸೀನಿಯಾದ ಅರಸನ ಕಡೆಗೆ ಕಳಿಸಿ ಮುಸಲ್ಮಾನರಿಗೆ ಆಶ್ರಯ ಕೊಡಬಾರದೆಂದು ಕೇಳಿಕೊಂಡರು. ಅದರಿಂದ ಏನೂ ಉಪಯೋಗವಾಗಲಿಲ್ಲ. ಮುಂದೆ ಕೆಲವು ದಿವಸಗಳ ನಂತರ ಸುಮಾರು ನೂರೊಂದುಮಂದಿ ಮುಸಲ್ಮಾನರು ಅರಬಸ್ತಾನವನ್ನು ಬಿಟ್ಟು ಅಬಿಸೀನಿಯ ದೇಶಕ್ಕೆ ಹೋದರು. ಇದರಿಂದ ಮಕ್ಕೆಯೊಳಗಿನ ಖುರೇಷ ಜನರಿಗೆ ಮತ್ತಷ್ಟು ಸಂತಾಪವಾಗಿ ಪೈಗಂಬರನನ್ನೂ ಅವರ ಅನುಯಾಯಿಗಳನ್ನೂ ಪೀಡಿಸುವುದು ಹೆಚ್ಚಾಯಿತು. ಪೈಗಂಬರರ ಪ್ರಾಣವನ್ನು ತೆಗೆದುಕೊಳ್ಳಬೇಕೆಂದು ಯತ್ನಿಸಿದರು. ಅದು ಸಾಧ್ಯವಾಗಿರಲಿಲ್ಲ. ಅಬೂತಾಲೀಬರ ಮತ್ತು ಬೀಬಿ ಖದಿಜೆಯ ವರ್ಚಸ್ಸು ಅರಬರ ಮೇಲೆ ಬಹಳವಾಗಿತ್ತು. ಪೈಗಂಬರರಿಗೆ ಏನಾದರೂ ಅಪಾಯವಾದರೆ ಅರಬರಲ್ಲಿ ವಿಶೇಷವಾಗಿ ಖುರೇಷವಂಶದಲ್ಲಿ ಆಂತರಿಕ ಜಗಳ ಉತ್ಪನ್ನವಾಗುವ ಸಂಭವವಿತ್ತು. ಪೈಗಂಬರರಿಗೆ ಬಲಗೈಯಂತಿದ್ದ ಬನುಹಾಷೀಮನ ಮನೆತನದವರಿಗೆ ಬಹಿಷ್ಕಾರ ಹಾಕಿದರು. ಮುಂದೆ ಕೆಲವು ದಿವಸಗಳ ನಂತರ ಈ ಬಹಿಷ್ಕಾರ ತೆಗೆದರು. ಹಜರತ ಮಹಮ್ಮದರಿಗೆ ಜ್ಞಾನೋದಯವಾದ ಏಳನೆಯ ವರ್ಷದಿಂದ ಹತ್ತನೆಯ ವರ್ಷದವರೆಗೆ ಅವರನ್ನು ಅನೇಕ ಪ್ರಕಾರದಿಂದ ಕಾಡಿದರು. ಈ ಅವಧಿಯಲ್ಲಿ ಅಬುತಾಲೀಬ ಮತ್ತು ಬೀಬಿ ಖದೀಜ ಇವರು ತೀರಿಕೊಂಡರು. ಆಗ ಪೈಗಂಬರರಿಗೆ ಆಶ್ರಯವಿಲ್ಲದಂತಾಗಿ ಹಸಿದ ಹುಲಿಗಳಂತಿರುವ ಅರಬರ ಮಧ್ಯದಲ್ಲಿರುವುದು ಬಲು ಕಠಿಣವಾಯಿತು. ಒಂದು ದಿವಸ ಪೈಗಂಬರರು ಮನೆಗೆ ಬರುವಾಗ ಯಾರೊ ಕಿಡಿಗೇಡಿಗಳು ಅವರ ಮೇಲೆ ಮಣ್ಣು ಎಸೆದರು. ಅದೇ ಸ್ಥಿತಿಯಲ್ಲಿ ಅವರು ಮನೆಗೆ ಬಂದರು. ಅವರ ಮಗಳು ಅವರ ಸ್ಥಿತಿಯನ್ನು ನೋಡಿ ಅಳಹತ್ತಿದಳು. ಪೈಗಂಬರರು "ಮಗು, ಅಳಬೇಡ. ಅಲ್ಲಾ ನನ್ನ ತಂದೆಗೆ ಸಹಾಯ ಮಾಡುವನು" ಎಂದು ಆಕೆಯನ್ನು ಸಮಾಧಾನಪಡಿಸಿದರು.

ಒಮ್ಮೆ ತಾಯಿಫ ಎಂಬ ಸ್ಥಳಕ್ಕೆ ಹೋಗಿ ಅಲ್ಲಿಯ ಪ್ರಮುಖರಿಗೆ ಇಸ್ಲಾಮದ ತತ್ವಗಳನ್ನು ಉಪದೇಶ ಮಾಡಿದರು. ಅವು ಅವರಿಗೆ ಒಪ್ಪಿಗೆಯಾಗಲಿಲ್ಲ. ಅಲ್ಲಿಂದ ತಿರುಗಿ ಬರುವಾಗ ಕೆಲವು ನೀಚರು ಕೂಡಿ ಅವರನ್ನು ಬಯ್ಯುವುದು, ಅವರಿಗೆ ಒಯ್ಲೊಗೆಯುವುದು, ಅವರು ದಣಿವಾರಿಸಲು ನೆರಳೊಳಗೆ ಕುಳಿತುಕೊಳ್ಳಬಾರದಂತೆ ಮಾಡುವುದು– ಈ ಪ್ರಕಾರ ನಾನಾ ಪ್ರಕಾರದ ತೊಂದರೆಗಳನ್ನು ಕೊಟ್ಟರು. ಅವರ ಕೈಯೊಳಗಿನಿಂದ ದಾಟಿದಾಗ ಪೈಗಂಬರರ ಶರೀರ ರಕ್ತಮಯವಾಗಿತ್ತು. ಇದನ್ನೆಲ್ಲ ಸಹಿಸಿಕೊಂಡು ಮಕ್ಕೆಗೆ ಬಂದರು. ಆಗ ಮುತಿಂ ಬಿನ್ ಅಡಿ ಎಂಬುವನು ಪೈಗಂಬರನನ್ನು ರಕ್ಷಿಸುವ ಹೊಣೆಯನ್ನು ಹೊತ್ತನಾದುದರಿಂದ ಅವರು ಮಕ್ಕೆಯಲ್ಲಿ ಇರುವುದು ಸಾಧ್ಯವಾಯಿತು.

ಯಾತ್ರೆಯ ಕಾಲಕ್ಕೆ ಮಕ್ಕೆಗೆ ಬಂದ ಅರಬರ ಗುಂಪುಗಳಿಗೆ ಹೋಗಿ ಅವರಿಗೆ ದೈವಿಕ ಸಂದೇಶವನ್ನು ತಿಳಿಸಹತ್ತಿದರು. ಆದರೆ ಇವರು ಹೋದಲ್ಲೆಲ್ಲ ಇವರ ವಿರೋಧಿ ಕಕ್ಕ ಅಬುಲಹಾಬನು "ಈತನ ಮಾತನ್ನು ಕೇಳಬೇಡಿರಿ. ಈತನು ನಾಸ್ತಿಕನಿರುವನು. ನಾವು ಬಹುಕಾಲದಿಂದ ಪೂಜೆಮಾಡುವ ಲಾಟ, ಉಜ್ಜು ಮೊದಲಾದ ದೇವತೆಗಳನ್ನು ಅಲ್ಲಗಳೆಯುವನು" ಎಂದು ಹೇಳಿ ಜನರ ಮನಸ್ಸನ್ನು ತಿರುಗಿಸುತ್ತಿದ್ದನು. ಪೈಗಂಬರರು ಮದಿನಾ ಪಟ್ಟಣದ ಖಜರಾಜ ಮನೆತನದ ಕೆಲವರನ್ನು ಕಂಡು ಅವರಿಗೆ ಇಸ್ಲಾಂ ಧರ್ಮದ ದೀಕ್ಷೆಯನ್ನು ಕೊಟ್ಟರು. ಅವರು ತಮ್ಮ ಊರಿಗೆ ಹೋಗಿ ಅಲ್ಲಿ ಇಸ್ಲಾಂ ಧರ್ಮದ ಬಗ್ಗೆ ಜನರಲ್ಲಿ ಆದರವನ್ನು ಹುಟ್ಟಿಸಿದರು. ಮರುವರುಷ ಪೈಗಂಬರರಿಗೆ ಜ್ಞಾನೋದಯವಾದ ಹನ್ನೊಂದನೆಯ ವರ್ಷ. ಯಾತ್ರೆಗೆ ಬಂದ ಮದಿನಾದ ಜನರಲ್ಲಿ ಬಹಳ ಜನರು ಮುಸಲ್ಮಾನರಾದರು. ಅವರ ಬಿನ್ನಹದ ಮೇರೆಗೆ ಮುಸಾಬ ಬಿನ್ ಉಮ್ಮೈರ ಎಂಬುವನನ್ನು ಮದಿನಾ ಪಟ್ಟಣಕ್ಕೆ ಪೈಗಂಬರರು ಕಳಿಸಿದರು. ಅವನು ಅಲ್ಲಿ ಇಸ್ಲಾಮದ ಬಗ್ಗೆ ಜನರಲ್ಲಿ ಒಳ್ಳೆಯ ಉತ್ಸಾಹವನ್ನುಂಟು ಮಾಡಿದನು. ಮದಿನಾದ ಪ್ರಸಿದ್ಧ ಮನೆತನಗಳಾದ ಖಜರಾಜ ಮತ್ತು ಔಷ ಎಂಬವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದವು. ಮರುವರುಷ ಮಕ್ಕಾಯಾತ್ರೆಗೆ ಅಲ್ಲಿಂದ ಸುಮಾರು ೭೫ ಜನರು ಬಂದರು. ಅವರು ಪೈಗಂಬರನನ್ನು ಕಂಡು, ಅವರಿಗೆ ಮದಿನಾ ಪಟ್ಟಣಕ್ಕೆ ಬರಲು ಬಿನ್ನೈಸಿಕೊಂಡರು. ಪೈಗಂಬರರ ಕಕ್ಕನಾದ ಅಬ್ಬಾಸ ಎಂಬುವವನು ಎಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಪೈಗಂಬರರನ್ನು ರಕ್ಷಿಸುವುದಾಗಿ ಮದಿನಾದ ಜನರ ಕಡೆಯಿಂದ ಕೈಮೇಲೆ ಕೈಹಾಕಿಸಿಕೊಂಡು ಪೈಗಂಬರರಿಗೆ ಅಲ್ಲಿಗೆ ಹೋಗಲು ಅನುಮತಿ ಇತ್ತನು. ಪೈಗಂಬರರನ್ನು ರಕ್ಷಿಸಲು ಪ್ರತಿಜ್ಞೆ ಮಾಡಿದ ಮುಸಲ್ಮಾನರಿಗೆ ಅನ್ಸಾರರೆಂದು ಹೆಸರು. ಇದು ಸಂಭವಿಸಿದುದು ಪೈಗಂಬರರಿಗೆ ಜ್ಞಾನೋದಯವಾದ ೧೩ನೆಯ ವರುಷ.

ಮಕ್ಕೆಯಲ್ಲಿದ್ದ ಮುಸಲ್ಮಾನರು ಸಣ್ಣ ಸಣ್ಣ ಗುಂಪಾಗಿ ಮದಿನಾಪಟ್ಟಣಕ್ಕೆ ಹೋದರು. ಮಕ್ಕೆಯಲ್ಲಿ ಪೈಗಂಬರರು, ಅಬುಬಕರ, ಆಲಿ, ಈ ಮೂವರೇ ಉಳಿದರು. ಸಹಾಯರಹಿತರಾದ ಪೈಗಂಬರರ ಮೇಲೆ ಒಂದು ರಾತ್ರಿ ಬಿದ್ದು ಅವರನ್ನು ಕೊಂದು ಹಾಕಬೇಕೆಂದು ಪೈಗಂಬರರ ಬಂಧುವೂ, ವೈರಿಯೂ ಆದ ಅಬುಜಹಾಲನು ನಿಶ್ಚಯಿಸಿದನು. ಅದು ಪೈಗಂಬರರಿಗೆ ಗೊತ್ತಾಗಿ ಆಲಿಯ ಸಹಾಯದಿಂದ ಅಬುಬಕರೊಡನೆ ಮಕ್ಕೆಯಿಂದ ಮೂರು ಮೈಲು ದೂರವಿರುವ ಗುಡ್ಡದ ಸೌರ ಎಂಬ ಗವಿಯಲ್ಲಿ ಅಡಗಿಕೊಂಡರು. ವೈರಿಗಳು ಆ ರಾತ್ರಿ ಪೈಗಂಬರರು ಮನೆಯಲ್ಲಿ ಇಲ್ಲದಿರುವುದನ್ನು ಕಂಡು ಸುತ್ತಲೂ ಅವರ ಶೋಧವನ್ನು ನಡೆಸಿದರು. ಆವರು ಅಡಗಿಕೊಂಡ ಗವಿಯವರೆಗೆ ಬಂದು ಅಲ್ಲಿ ಜನರ ಸುಳಿವು ಇಲ್ಲದುದನ್ನು ಕಂಡು

ತಿರುಗಿ ಹೋದರು. ಈ ಗವಿಯಲ್ಲಿ ಪೈಗಂಬರರೂ ಅಬುಬಕರನು ಮೂರು ದಿವಸ ಅಡಗಿಕೊಂಡಿದ್ದು, ಅಬುಬಕರನು ಗೊತ್ತುಮಾಡಿದ ಮೇಲೆ. ಒಂಟೆಗಳ ಮೇಲೆ ಹತ್ತಿ ಕ್ರಿ.ಶ. ೬೨೨ ಜೂನ್ ೨ನೆಯ ತಾರೀಖಿನ ದಿನ ಮದಿನಾಪಟ್ಟಣಕ್ಕೆ ಮುಟ್ಟಿದರು. ಪೈಗಂಬರರು ಮಕ್ಕೆಯನ್ನು ಬಿಟ್ಟು ಮದೀನಾ ಪಟ್ಟಣಕ್ಕೆ ಹೊರಟ ದಿವಸದಿಂದ ಅರಬಸ್ತಾನದಲ್ಲಿ ಹೊಸ ಶಕ ಪ್ರಾರಂಭವಾಯಿತು. ಇದಕ್ಕೆ ಹಿಜರೀ ಶಕವೆಂದು ಹೆಸರು. ಮದಿನಾದ ಮುಸಲ್ಮಾನರು ಪೈಗಂಬರರ ಮಾರ್ಗವನ್ನು ಒಳ್ಳೆ ಆತುರದಿಂದ ನೋಡುತ್ತಿದ್ದರು. ಅವರು ಪಟ್ಟಣದ ಸಮೀಪಕ್ಕೆ ಬಂದ ಕೂಡಲೆ ಅವರನ್ನು ಉತ್ಸಾಹದಿಂದ ಸ್ವಾಗತಿಸಿ ಪಟ್ಟಣದ ಹೊರಗಿರುವ ಕೂಬಾ ಎಂಬ ಸ್ಥಳದಲ್ಲಿ ಅಮು ಜಿನ್ ಅವುಫ್ ಎಂಬುವನ ಮನೆಯಲ್ಲಿ ಇಳಿಸಿದರು. ಮಕ್ಕೆಯಿಂದ ಬಂದ ಮುಸಲ್ಮಾನರೆಲ್ಲ ಇಲ್ಲಿ ಕೂಡಿದರು. ಮಕ್ಕೆಯಿಂದ ಆಲಿ ಬಂದನು. ಎಲ್ಲರೂ ಕೂಡಿ, ಸ್ವತಃ ದುಡಿದು ಒಂದು ಮಸೀದಿಯನ್ನು ಕಟ್ಟಿದರು. ಮುಸಲ್ಮಾನ ಧರ್ಮದ ಇತಿಹಾಸದಲ್ಲಿ ಇದು ಮೊದಲನೆಯ ಮಸೀದಿ. ಆಮೇಲೆ ಒಳ್ಳೆಯ ಉತ್ಸವದಿಂದ ಪೈಗಂಬರರು ಮದಿನಾ ಪಟ್ಟಣವನ್ನು ಪ್ರವೇಶಿಸಿ ಅಬು ಅಯ್ಯುಬ ಎಂಬವನ ಮನೆಯ ಹತ್ತಿರವಿದ್ದ ಪಟಾಂಗಣವನ್ನು ಕೊಂಡು. ಅಲ್ಲಿ ಒಂದು ಮಸೀದಿಯನ್ನು ಕಟ್ಟಿ, ಇರಹತ್ತಿದರು. ಮಕ್ಕೆಯಲ್ಲಿ ಎಲರೂ ಕೂಡಿ ಪ್ರಾರ್ಥನೆ ಮಾಡುವುದು ಸಾಧ್ಯವಿಲ್ಲ. ಮದಿನಾದ ಶಾಂತ ವಾತಾವರಣದಲ್ಲಿ ಮುಸಲ್ಮಾನರೆಲ್ಲ ಮಸೀದಿಯಲ್ಲಿ ಪ್ರಾರ್ಥನೆ ಮಾಡಲು ಅನುಕೂಲವಾಯಿತು. ಮಕ್ಕೆಯಿಂದ ಬಂದ ಮುಸಲ್ಮಾನರ ವ್ಯವಸ್ಥೆಯನ್ನು ಮಾಡಿ, ಜೀವನದ ವೃತ್ತಿಯನ್ನು ಕಲ್ಪಿಸಿಕೊಟ್ಟು, ಎಲ್ಲರಲ್ಲಿಯೂ ಪ್ರೇಮ, ಬಂಧುಪ್ರೀತಿ, ವಿಶ್ವಾಸಗಳನ್ನು ಹುಟ್ಟಿಸಿ ಮುಸಲ್ಮಾನರೆಲ್ಲ ಒಂದೇ ಕುಟುಂಬದವರೆಂಬ ಭಾವನೆಯನ್ನುಂಟು ಮಾಡಿದರು. ಮದಿನಾಪಟ್ಟಣದಲ್ಲಿದ್ದ ಜ್ಯೂ (ಯಹೂದಿ) ಜನರ ಸಂಗಡ ಸಖ್ಯತ್ವವನ್ನು ಬೆಳೆಸಿದರು. ಮುಸಲ್ಮಾನರು ಶಾಂತರೀತಿಯಿಂದಲೂ ಸುಖದಿಂದಲೂ ಕಾಲಕಳೆಯಹತ್ತಿದರು. ಇಸ್ಲಾಮ ಧರ್ಮ ಪ್ರಸಾರ ಒತ್ತರದಿಂದ ಸಾಗಹತ್ತಿತು.

ಮುಸಲ್ಮಾನರ ಅಭ್ಯುದಯ ಮಕ್ಕೆಯ ಖುರೇಷ ಜನರಿಗೆ ಸಹನವಾಗಲಿಲ್ಲ. ಮದಿನಾದ ಪಟ್ಟಣದ ಮೇಲೆ ಬಿದ್ದು ಮುಸಲ್ಮಾನರನ್ನು ನಾಶಮಾಡಬೇಕೆಂದು ಅವರು ಹಂಚಿಕೆ ಹಾಕಹತ್ತಿದರು. ಇದು ಪೈಗಂಬರರಿಗೆ ತಿಳಿದು ಅವರು ಮದಿನಾದ ಸುತ್ತಲಿರುವ ಊರುಗಳ ಜನರ ಸಂಗಡ ಗೆಳೆತನವನ್ನು ಬೆಳೆಸಿ ಅವರ ಸಂಗಡ ಒಪ್ಪಂದ ಮಾಡಿಕೊಳ್ಳಹತ್ತಿದರು. ಖುರೇಷ ಜನರು ಆಕಸ್ಮಿಕವಾಗಿ ತಮ್ಮ ಮೇಲೆ ಬೀಳಬಹುದೆಂದು ಬಹುದೂರದವರಗೆ ಗಸ್ತಿಯ ವ್ಯವಸ್ಥೆ ಮಾಡಿದರು. ಒಮ್ಮೆ ಗಸ್ತಿಯ ಜನರು ಮಕ್ಕೆಯ ದಾರಿಯಲ್ಲಿರುವ ನಖಿಲ ಎಂಬ ಸ್ಥಳದಲ್ಲಿ ಸಿರಿಯಾ ದೇಶದಿಂದ ವ್ಯಾಪಾರ ಮಾಡಿಕೊಂಡು ಬಂದ ಖುರೇಷ ಜನರ ತಂಡದ ಮೇಲೆ ಬಿದ್ದು ಅಬ್ದುಲ್ಲಾ ಜಿನ್ ಹದ್ರುಘ್ರಾಮು ಎಂಬುವವನನ್ನು ಕೊಂದು ಮತ್ತಿಬ್ಬರನ್ನು ಸೆರೆಹಿಡಿದುಕೊಂಡರು.

ಪೈಗಂಬರರು ಗಸ್ತಿಯ ಮುಖ್ಯಸ್ಥನಾದ ಅಬ್ದುಲ್ಲಾ ಬಿನ್ ಜಹಸನಿಗೆ ಸಿಟ್ಟು ಮಾಡಿದರು. ಆದರೂ ಖುರೇಷ ಜನರು ಇದನ್ನೇ ನೆಪಮಾಡಿಕೊಂಡು, ಒಂದು ಸಾವಿರ ದಂಡನ್ನು ತೆಗೆದುಕೊಂಡು ಮದಿನಾ ಪಟ್ಟನವನ್ನು ಮುತ್ತಲು ಬಂದರು. ಪೈಗಂಬರರು ತಮ್ಮ ಅನುಯಾಯಿಗಳನ್ನು ಕೂಡಿಕೊಂಡು ಬದ್ಧರ ಎಂಬ ಸ್ಥಳದಲ್ಲಿ ಅವರನ್ನು ಹಿಜರಿ ಶಕ ಜಮಾದಿ ತಿಂಗಳಲ್ಲಿ ಎದುರಿಸಿ ಸೋಲಿಸಿದರು. ಮೊದಲಿನಿಂದಲೂ ಪೈಗಂಬರರನ್ನು ದ್ವೇಷಿಸುತ್ತಿದ್ದ ಅಬುಜಹಾಲ ಮೊದಲಾದ ಖುರೇಷ ಜನರ ಪ್ರಮುಖರನೇಕರು ಈ ಯುದ್ಧದಲ್ಲಿ ಮರಣ ಹೊಂದಿದರು. ಈ ಜಯದಿಂದ ರಬಸ್ಥಾನದ ಜನರ ಮೇಲೆ ಒಳ್ಳೆಯ ಪರಿಣಾಮವಾಗಿ ಪೈಗಂಬರರ ಬಲ ಹೆಚ್ಚಾಗ ಹತ್ತಿತು: ಆದರೆ ಖುರೇಷ ಜನರಿಗೆ ಸಂತಾಪವಾಗಿ ಈ ಅಪಜಯದ ಪ್ರತಿಕಾರವನ್ನು ಮಾಡಬೇಕೆಂದು ನಿಶ್ಚಯಿಸಿದರು. ಅಬು ಸುಫಾಯನ್ನೆಂಬವನನ್ನು ಮುಂದೆ ಮಾಡಿಕೊಂಡು ಮೂರು ಸಾವಿರ ಸೈನ್ಯವನ್ನು ಕೂಡಿಸಿ ಮದಿನಾ ಪಟ್ಟಣದ ಮೇಲೆ ಏರಿಹೋಗಿ ಪಟ್ಟಣದಿಂದ ಉತ್ತರಕ್ಕೆ ಮೂರು ಮೈಲಿ ದೂರವಿರುವ ಗುಡ್ಡದ ಅಡಿಯಲ್ಲಿ ಉಹುದವೆಂಬ ಸ್ಥಳದಲ್ಲಿ ಹಿಜರಿ ಶಕ ೩ ಶವ್ವಾಲ ತಿಂಗಳ ೯ನೆಯ ಗುರುವಾರದ ದಿನ ತಳ ಊರಿದರು. ಪೈಗಂಬರರು ತಮ್ಮ ಅನುಯಾಯಿಗಳನ್ನು ಕೂಡಿಸಿ ವಿಚಾರವಿನಿಮಯ ಮಾಡಿ, ಬಹುಜನರ ಅಪೇಕ್ಷೆಯಂತೆ ವೈರಿಗಳನ್ನು ಎದುರಿಸಬೇಕೆಂದು ನಿರ್ಣಯಿಸಿ ಒಂದು ಸಾವಿರ ದಂಡನ್ನು ತೆಗೆದುಕೊಂಡು ಯುದ್ಧಕ್ಕೆ ಹೊರಟರು. ಈ ಯುದ್ಧದಲ್ಲಿ ವೈರಿಗಳ ಕೈ ಮೇಲಾಗುವುದನ್ನು ಕಂಡು ಪೈಗಂಬರರು ತಮ್ಮ ಗುಡ್ಡದಲ್ಲಿ ಸುರಕ್ಷಿತವಾದ ಸ್ಥಳಕ್ಕೆ ಒಯ್ದರು. ಮಕ್ಕಾದ ದಂಡು ತಮಗೆ ವಿಜಯವಾಯಿತೆಂದು ಉಬ್ಬಿ ಮಕ್ಕಗೆ ಮರಳಿತು. ಪೈಗಂಬರರು ತಮ್ಮ ದಂಡನ್ನು ಸಜ್ಜುಗೊಳಿಸಿ ಮದಿನಾ ಪಟ್ಟಣದಿಂದ ಎಂಟು ಮೈಲಿ ದೂರದಲ್ಲಿರುವ ಹಮ್ರುಲ್ ಅಸದ ಎಂಬ ಸ್ಥಳದವರೆಗೆ ಹೋಗಿ ವೈರಿಗಳು ಸುಳಿವನ್ನು ಕಾಣದೆ ತಿರುಗಿ ಬಂದರು. ಈ ಯುದ್ಧದಲ್ಲಿ ಮುಸಲ್ಮಾನರು ಸೋತರೆಂದು ಸುತ್ತಲೂ ಸುದ್ದಿ ಹಬ್ಬಿಸಿದುದರಿಂದ ಮುಸಲ್ಮಾನರಿಗೆ ವೈರಿಗಳು ಹೆಚ್ಚಾದರು. ಮದಿನಾ ಪಟ್ಟಣದಲ್ಲಿದ್ದ ಜ್ಯೂ ಜನರು ಕೂಡ ಮುಸಲ್ಮಾನರಿಗೆ ವಿರೋಧ ಮಾಡಹತ್ತಿದರು. ಪೈಗಂಬರರು ಧರ್ಮಪ್ರಸಾರಕ್ಕಾಗಿ ಉಪದೇಶಕರನ್ನು ಅರಬರ ವಸತಿ ಸ್ಥಳಗಳಿಗೆ ಕಳಿಸುತ್ತಿದ್ದರು. ಕೆಲವು ಅರಬರು ತಮ್ಮ ಕೈಯಲ್ಲಿ ಸಿಕ್ಕಿದ ಉಪದೇಶಕರನ್ನು ಅತಿ ಕ್ರೂರತನದಿಂದ ನಡೆಸಿಕೊಳ್ಳುತ್ತಿದ್ದರು. ಅವರ ಪ್ರಾಣವನ್ನು ಕೂಡ ತೆಗೆದುಕೊಳ್ಳುತ್ತಿದ್ದರು. ಬನು ಅಮೀದ ಬನು ಸುಲೈಮ ಎಂಬ ಮನೆತನಗಳ ಮುಖ್ಯಸ್ಥನಾದ ಅಬುಬಾರಾ ಎಂಬುವನು ಹಿಜರೀ ಶಕ ೪ ರ ಸಫರ ತಿಂಗಳಲ್ಲಿ ಪೈಗಂಬರರೆಡೆಗೆ ಬಂದು. ಕಾಣಿಕೆಯನ್ನು ಕೊಟ್ಟು, ಹಲವು ಉಪದೇಶಕರನ್ನು ತನ್ನ ಸಂಗಡ ಕಳಿಸಬೇಕೆಂದು ಕೇಳಿಕೊಂಡನು. ಪೈಗಂಬರರು ಆತನ ಜನರು ವಿಶ್ವಾಸಕ್ಕೆ ಪಾತ್ರರಲ್ಲವೆಂದು ಉಪದೇಶಕರನ್ನು ಕಳಿಸಿಕೊಡಲು ಒಪ್ಪಲಿಲ್ಲ. ಅಬು ಬಾರಾ ಅವರ ರಕ್ಷಣೆಯ ಭಾರವನ್ನು ಹೊತ್ತುಕೊಂಡುದರಿಂದ ಪೈಗಂಬರರು ೨೦ ಜನರನ್ನು ಆತನ ಸಂಗಡ

ಕಳಿಸಿದರು. ಎಲ್ಲರು ಬೀರ ಇ ಮೌನ ಎಂಬ ಸ್ಥಳಕ್ಕೆ ಮುಟ್ಟಿದ ನಂತರ ಅಮ್ರು ಉಮಯ್ಯ ಎಂಬುವನನ್ನು ಬಿಟ್ಟು ಎಲ್ಲ ಉಪದೇಶಿಕರನ್ನು ಕೊಂದು ಹಾಕಿದರು. ಮತ್ತೊಮ್ಮೆ ಕೆಲವು ಅರಬರು ತಾವು ಇಸ್ಲಾಮ ಧರ್ಮವನ್ನು ಸ್ವೀಕರಿಸಿರುವುದರಿಂದ ತಮ್ಮ ಕಡೆಗೆ ಕೆಲವು ಉಪದೇಶಕರನ್ನು ಕಳಿಸಿಕೊಡಬೇಕೆಂದು ಪೈಗಂಬರರಿಗೆ ಕೇಳಿಕೊಳ್ಳಲು ಅವರು ಹತ್ತು ಜನರನ್ನು ಕಳಿಸಿದರು. ಅವರಲ್ಲಿ ಎಂಟು ಜನರು ಖಡ್ಗದ ಬಾಯಿಗೆ ತುತ್ತಾದರು. ಉಳಿದ ತುಬಾಬ ಮತ್ತು ಝೂಯಿದ ಎಂಬ ಇಬ್ಬರನ್ನು ಖುರೇಷ ಜನರಿಗೆ ಮಾರಿಕೊಂಡರು. ಅವರು ಅವರಿಬ್ಬರ ತಲೆ ಹೊಡೆದರು. ಇಂತಹ ಸುದ್ದಿಗಳನ್ನು ಕೇಳಿದ ಪೈಗಂಬರರಿಗೆ ಬಹಳ ವ್ಯಸನವಾಯಿತು. ಅವರು ಇವುಗಳ ಪ್ರತೀಕಾರಕ್ಕಾಗಿ ಸುತ್ತಲಿನ ಅರಬರ ಸಂಗಡ ಸಣ್ಣ ದೊಡ್ಡ ಕಾಳಗಗಳನ್ನು ಮಾಡಬೇಕಾಯಿತು.

ಮದಿನಾ ಪಟ್ಟಣದಿಂದ ಸುಮಾರು ೯ ದಿನ ಪ್ರವಾಸದ ಅಂತರದ ಮೇಲಿರುವ ಮುರೈಷಿ ಎಂಬ ಸ್ಥಳದಲ್ಲಿ ಖುರೇಷ ಜನರ ಮಿತ್ರರಿದ್ದರು. ಅವರ ಮುಖ್ಯಸ್ಥನಾದ ಹ್ಯಾಸ ಬಿನ್ ಝಿರಾರನೆಂಬವನು ಮದಿನಾ ಪಟ್ಟಣವನ್ನು ಮುತ್ತಬೇಕೆಂದು ಯೋಚಿಸಿದನು. ಪೈಗಂಬರರಿಗೆ ಇದು ಗೊತ್ತಾದ ಕೂಡಲೇ ಹಿಜರಿ ಶಕ ೬ರಲ್ಲಿ ಹ್ಯಾರಿಸನ ದಂಡನ್ನು ಮುತ್ತಿ ಅದನ್ನು ಚದುರಿಸಲು ಆಜ್ಞೆ ಮಾಡಿದರು. ಹ್ಯಾರಿಸನು ಸೋತು ಓಡಿಹೋದನು. ಆತನ ಮಗಳಾದ ಜುವಾರಿಯಾ ಮತ್ತು ೬೦೦ ಜನ ಸೆರೆಸಿಕ್ಕಿದರು. ಹ್ಯಾರಿಸನು ತನ್ನ ಮಗಳನ್ನು ಬಿಡಿಸಿಕೊಳ್ಳಲು ಬರಲು ಪೈಗಂಬರರು ಆಕೆಯನ್ನು ಮದುವೆ ಮಾಡಿಕೊಂಡು ಉಳಿದವರನ್ನು ಮುಕ್ತ ಮಾಡಿದರು.

ಮುಸಲ್ಮಾನರ ಬೆಳವಣಿಗೆಯಿಂದ ಖುರೇಷ ಜನರಿಗೂ ಇತರ ಅರಬರಿಗೂ ಹೆಚ್ಚು ಹೆಚ್ಚಾಗಿ ಸಂತಾಪವಾಗಹತ್ತಿತು. ಅವರೆಲ್ಲರು ಕೂಡಿ ಜ್ಯೂ ಜನರ ಸಹಾಯವನ್ನು ತೆಗೆದುಕೊಂಡು ಮುಸಲ್ಮಾನರನ್ನು ನಿರ್ಮೂಲ ಮಾಡಬೇಕೆಂದು ನಿಶ್ಚೈಸಿ. ಹಿಜರಿ ಶಖ ೫ ರಲ್ಲಿ ಸುಮಾರು ೨೪,೦೦೦ ಸೈನ್ಯವನ್ನು ಕೂಡಿಸಿ ಮದಿನಾ ಪಟ್ಟಣ ಮುತ್ತುವ ಹವಣಿಕೆಯಲ್ಲಿದ್ದರು. ಪೈಗಂಬರರು ಸ್ವತಃ ಕೂಲಿಯವರಂತೆ ದುಡಿದು ಪಟ್ಟಣದ ಸುತ್ತಲು ಕಂದಕವನ್ನು ಕಡಿದು ಅದನ್ನು ಭದ್ರಪಡಿಸಿದರು. ವೈರಿಗಳು ಪಟ್ಟಣವನು ಮುತ್ತಿ ಒಳಗೆ ಪ್ರವೇಶ ಮಾಡಲು ಯತ್ನಿಸಿದರು. ಸಾಧ್ಯವಾಗಲಿಲ್ಲ. ಬಹಳ ದಿವಸಗಳವರೆಗೆ ಮುತ್ತಿಗೆ ಹಾಕಿಕೊಂಡು ಕುಳಿತರು. ಒಂದು ದಿವಸ ರಾತ್ರಿ ದೊಡ್ಡ ಬಿರುಗಾಳಿ ಬೀಸಿ ಮಳೆ ಬಂದು ಅವರಿಗೆ ಬಹಳ ಹಾನಿಯಾಯಿತು. ಇದು ದೇವರ ಕ್ಷೋಭವೆಂದು ಅಂಜಿ ಮುತ್ತಿಗೆಯನ್ನು ತೆಗೆದು ಓಡಿಹೋದರು. ಒಳಗಿದ್ದ ಮುಸಲ್ಮಾನರಿಗೆ ಬಹಳ ಸಂತೋಷವಾಗಿ ಅವರು ದೇವರ ಪ್ರಾರ್ಥನೆ ಮಾಡಿದರು. ಈ ಯುದ್ಧಕ್ಕೆ ಅಹಝಾದ ಎಂದು ಹೆಸರು. ಈ ಯುದ್ಧದ ಬಗ್ಗೆ ಕುರಾನದಲ್ಲಿ "ಆಮೇಲೆ ಬಲವಾದ ಬಿರುಗಾಳಿಯನ್ನೂ ನಿನ್ನ ಕಣ್ಣಿಗೆ ಕಾಣದಂತೆ ಸೈನ್ಯವನ್ನೂ ಕಳಿಸಿದೆವು"[1] ಎಂದು ಉಲ್ಲೇಖವಿದೆ.

---

1. ಕುರಾನ್: 39–9

ಈ ಯುದ್ಧವಾದ ಒಂದು ವರ್ಷದ ಮೇಲೆ ಪೈಗಂಬರರು ೧೪೦೦ ಜನರನ್ನು ಕರೆದುಕೊಂಡು ಮಕ್ಕಾಯಾತ್ರೆಗೆ ಹೊರಟರು. ಮಕ್ಕಾಯಾತ್ರೆ ಮತ್ತು ಕಾಅಬಾದ ದರ್ಶನ ಇವನ್ನು ಎಂತಹ ವೈರಿಗಳಿಗೂ ಕೂಡ ಅರಬರು ಪ್ರತಿಬಂಧ ಮಾಡುತ್ತಿದ್ದಿಲ್ಲ. ಮಕ್ಕೆಯ ಜನರಿಗೆ ತಾವು ಕೇವಲ ಯಾತ್ರೆಗಾಗಿ ಬರುವುದಾಗಿ ಮೊದಲೇ ತಿಳಿಸಿ, ಮಕ್ಕೆಯಿಂದ ಸುಮಾರು ಒಂದು ದಿವಸ ಪ್ರಯಾಣದ ಅಂತರದಲ್ಲಿರುವ ಹುದೈಬಿಯ ಎಂಬ ಸ್ಥಳದಲ್ಲಿ ಇಳಿದರು. ಮಕ್ಕೆಯ ಅರಬರು ಮಕ್ಕೆಯ ಸೀಮೆಯಲ್ಲಿ ಪೈಗಂಬರರನ್ನು ಕಾಲಿಡಗೊಡಲಿಕ್ಕಿಲ್ಲವೆಂದು ಹಟ ಹಿಡಿದರು. ಯುದ್ಧ ಮಾಡದ ಹೊರತು ಗತ್ಯಂತರ ಉಳಿಯಲಿಲ್ಲ. ಎರಡೂ ಪಕ್ಷಗಳು ಯುದ್ಧಕ್ಕೆ ಸನ್ನದ್ಧರಾದರು. ಆಗ ಕೆಲವು ವಿಚಾರವಂತರು ಪೈಗಂಬರರ ಸಂಗಡ ಒಪ್ಪಂದ ಮಾಡಿಕೊಳ್ಳುವುದು ವಿಹಿತವೆಂದು ತಿಳಿದು ಒಪ್ಪಂದದ ಸಂಧಾನ ನಡೆಸಿದರು. ಅದಕ್ಕೆ ಪೈಗಂಬರರು ಒಪ್ಪಿದರು. ಎರಡೂ ಪಕ್ಷಗಳ ನಡುವೆ ಆದ ಕರಾರುಗಳು:

೧) ಆ ವರ್ಷದಲ್ಲಿ ಪೂರ್ತಿ ಮುಸಲ್ಮಾನರು ಯಾತ್ರೆಯನ್ನು ಮಾಡದೆ ತಿರುಗಿ ಹೋಗತಕ್ಕದ್ದು. ೨) ಮುಂದಿನ ವರ್ಷದಿಂದ ಯಾತ್ರೆಗೆ ಬರಬಹುದು. ಆದರೆ ಮೂರು ದಿವಸಗಳಿಗಿಂತ ಹೆಚ್ಚಿಗೆ ಇರಕೂಡದು. ೩) ಮಕ್ಕೆಯಲ್ಲಿರುವ ಜನರನ್ನು ತಮ್ಮ ಸಂಗಡ ಒಯ್ಯತಕ್ಕದ್ದಲ್ಲ ಮತ್ತು ಮುಸಲ್ಮಾನರು ಮಕ್ಕೆಯಲ್ಲಿ ಇರಲು ಇಚ್ಛಿಸಿದರೆ ಅಡ್ಡಿ ಮಾಡತಕ್ಕದ್ದಲ್ಲ. ೪) ಮಕ್ಕಾದಿಂದ ಯಾರಾದರೂ ಮದಿನಾಕ್ಕೆ ಹೋದರೆ ಅವರನ್ನು ತಿರುಗಿ ಮಕ್ಕಾದವರಿಗೆ ಒಪ್ಪಿಸತಕ್ಕದ್ದು ; ಆದರೆ ಮದಿನಾದಿಂದ ಮಕ್ಕೆಗೆ ಹೋದ ಮುಸಲ್ಮಾನರನ್ನು ತಿರುಗಿ ಕಳಿಸಲು ಮಕ್ಕಾದವರು ಬದ್ಧರಲ್ಲ. ೫) ಅರಬಸ್ತಾನದ ಜನರು ಇವೆರಡು ಪಕ್ಷಗಳಲ್ಲಿ ತಮ್ಮ ಮನಸ್ಸಿಗೆ ಬಂದವರ ಸಂಗಡ ಕೂಡಿಕೊಳ್ಳಬಹುದು. ೬) ಈ ಒಪ್ಪಂದವನ್ನು ಎರಡು ಪಕ್ಷಗಳು ಹತ್ತು ವರುಷ ಪಾಲಿಸತಕ್ಕದ್ದು.

ಈ ಒಪ್ಪಂದಕ್ಕೆ ಹುದೈಬಿಯಾದ ಒಪ್ಪಂದವೆಂದು ಹೆಸರು. ತೋರಿಕೆಯಲ್ಲಿ ಈ ಕರಾರುಗಳು ಮುಸಲ್ಮಾನರಿಗೆ ಪ್ರತಿಕೂಲವೆಂದು ಕಂಡರೂ ಇವುಗಳ ಪರಿಣಾಮ ಅವರಿಗೆ ಹಿತಕರವಾಯಿತು. ಇವು ತಮಗೆ ಅಪಮಾನಕರವೆಂದು ಅನ್ನಿಸಿದರೂ ಪೈಗಂಬರರ ಮೇಲಿನ ಭಕ್ತಿಯಿಂದ ಸುಮ್ಮನಾದರು. ಮರುವರುಷ ಪೈಗಂಬರರು ೧೦೦೦೦ (ಹತ್ತು ಸಾವಿರ) ಅನುಯಾಯಿಗಳೊಡನೆ ಮಕ್ಕಾಯಾತ್ರೆ ಮಾಡಿದರು. ಮುಸಲ್ಮಾನರು ಯಾತ್ರೆಗೆ ಬಂದ ಅರಬರ ಸಂಗಡ ಕೂಡಿ ಮಹಮ್ಮದೀಯ ಧರ್ಮದ ತತ್ವಗಳನ್ನು ಅವರಿಗೆ ತಿಳಿಸಿ, ಅವರಲ್ಲಿದ್ದ ಅನೇಕ ತಪ್ಪು ತಿಳುವಳಿಕೆಗಳನ್ನು ದೂರ ಮಾಡಿ, ಮಹಮ್ಮದೀಯ ಧರ್ಮದ ಬಗ್ಗೆ ಸಹಾನುಭೂತಿಯನ್ನು ಹುಟ್ಟಿಸಿ, ಧರ್ಮ ಪ್ರಸಾರಕ್ಕೆ ಅನುಕೂಲ ಮಾಡಿದರು. ಪೈಗಂಬರರು ಈ ಒಪ್ಪಂದದಿಂದ ತಮಗೆ

ನಿಜವಾದ ಜಯವಾಗಿದೆಯೆಂದೂ, ಅದು ದೇವರ ಆಜ್ಞೆಯೆಂದೂ ತಮ್ಮ ಅನುಯಾಯಿಗಳಿಗೆ ಮನಗಾಣಿಸಿಕೊಟ್ಟರು. "ನಿಮಗೇ ಜಯವಾದುದು ನಿಜ. ನೀವು ಹಿಂದೆ ಮಾಡಿದ ಮತ್ತು ಮುಂದೆ ನಿಮ್ಮಿಂದಾಗಬಹುದಾದ ತಪ್ಪುಗಳನ್ನು ಅಲ್ಲಾ ಮನ್ನಿಸಿರುವನು. ಅಲ್ಲಾವಿನ ದಯ ನಿಮ್ಮ ಮೇಲೆ ಪೂರ್ಣವಾಗಿದೆ. ಅಲ್ಲಾ ನಿಮಗೆ ದಾರಿ ತೋರಿಸುವನು. ನಿಮಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡುವನು."[1] ಎಂದು ಈ ಒಪ್ಪಂದದ ಬಗ್ಗೆ ಕುರಾನಿನಲ್ಲಿ ಉಲ್ಲೇಖವಿದೆ. ಈ ಒಪ್ಪಂದ ಪೈಗಂಬರರ ದೂರದರ್ಶಿತ್ವದ ಸಾಕ್ಷಿಯಾಗಿದೆ. ಇದು ಸುಮಾರು ಎರಡು ವರ್ಷಗಳವರೆಗೆ ಪಾಲಿಸಲ್ಪಟ್ಟಿತು. ಈ ಅವಧಿಯಲ್ಲಿ ಇಸ್ಲಾಮ ಧರ್ಮಪ್ರಸಾರ ಅರಬಸ್ತಾನದಲ್ಲಿ ಒತ್ತರದಿಂದ ಸಾಗಿತು. ಈ ಒಪ್ಪಂದ ಮುರಿದ ಕೂಡಲೆ ಪೈಗಂಬರರು ಸೈನ್ಯವನ್ನು ಕೂಡಿಸಿ ಹಿಜರಿ ಶಕ ೮ ರಮಜಾನ ತಿಂಗಳ ೧೦ನೆಯ ದಿವಸ ಹತ್ತು ಸಾವಿರ ದಂಡನ್ನು ತೆಗೆದುಕೊಂಡು ಮಕ್ಕೆಯ ಮೇಲೆ ದಾಳಿ ಮಾಡಿದರು. ಮಕ್ಕಾದ ದಂಡು ಸೋತು, ಅದರ ಅಧಿಪತಿ ಅಬು ಸುಫಾಯನ್ನನು ಶರಣಾಗತನಾದನು. ಪೈಗಂಬರರು ಆತನನ್ನು ಕ್ಷಮಿಸಿದರು. ಮಕ್ಕಾ ಪಟ್ಟಣವೂ ಕಾಅಬಾ ದೇವಾಲಯವೂ ಮುಸಲ್ಮಾನರ ವಶವಾದವು. ಮಕ್ಕೆಯಲ್ಲಿ ನಡೆದ ಮುಸಲ್ಮಾನರ ಆಳ್ವಿಕೆಯಿಂದ ಎಲ್ಲರಿಗೂ ಸಮಾಧಾನವಾಗಿ, ಅರಬರೊಳಗಿನ ಜಗಳ ಶಾಂತವಾಯಿತು.

ಜ್ಯೂ ಜನರು ಮದಿನಾಪಟ್ಟಣದ ನಿವಾಸಿಗಳಲ್ಲಿ ಬಹಳ ಮಹತ್ವದ ಸ್ಥಾನದಲ್ಲಿದ್ದರು. ವ್ಯಾಪಾರ ಮತ್ತು ಸಾಹುಕಾರಿಕೆಯಿಂದ ಬಹಳ ದುಡ್ಡನ್ನು ಸಂಪಾದಿಸಿ ಜನರನ್ನೆಲ್ಲ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು. ಅರಬರು ಇವರಿಂದ ಸಾಲವನ್ನು ತರುತ್ತಿದ್ದರಾದುದರಿಂದ ಅರಬರ ದೊಡ್ಡ ದೊಡ್ಡ ಮನೆತನಗಳು ಕೂಡ ಜ್ಯೂ ಜನರ ಮಾತನ್ನು ಮೀರುತ್ತಿದ್ದಿಲ್ಲ. ವಿದ್ಯೆಯಲ್ಲಿ ಇವರು ಅರಬರಿಗಿಂತ ಬಹಳ ಮುಂದಾಗಿದ್ದರೂ ಪೈಗಂಬರರು ಮದಿನಾಪಟ್ಟಣಕ್ಕೆ ಬಂದ ಕೂಡಲೆ ಜ್ಯೂ ಜನರ ಸಂಗಡ ಒಪ್ಪಂದ ಮಾಡಿಕೊಂಡರು. ಆದರೆ ಮುಸಲ್ಮಾನರ ವರ್ಚಸ್ಸು ಬರಬರುತ್ತ ಬೆಳೆಯ ಹತ್ತಿದುದನ್ನು ಕಂಡು ಅವರಿಗೆ ಸಹನವಾಗಲಿಲ್ಲ, ಅವರನ್ನು ವೈರಿಗಳಂತೆ ಕಾಣಹತ್ತಿದರು. ಬದ್ಧರ ಯುದ್ಧವಾದ ಒಂದು ತಿಂಗಳ ಮೇಲೆ ಮುಸಲ್ಮಾನರಿಗೂ ಬನುಕ್ವೆನುಕಾ ಎಂಬ ಜ್ಯೂ ಜನರಿಗೂ ಕದನವಾಗಿ ಅವರು ಸೋತು ಮದಿನಾಪಟ್ಟಣವನ್ನು ಬಿಟ್ಟು ಸಿರಿಯಾ ದೇಶಕ್ಕೆ ಹೋದರು. ಬನು ನಾಝಿರ ಎಂಬುದು ಮತ್ತೊಂದು ಜ್ಯೂ ಜನರ ಪಂಗಡ. ಮಕ್ಕೆಯ ಖುರೇಷ ಜನರು ಪೈಗಂಬರನನ್ನು ಕೊಲ್ಲಬೇಕೆಂದು ಇವರಿಗೆ ಹೇಳಿಕಳಿಸಿದ್ದರು. ಇವರು ಸಂಧಿಯನ್ನು ಸಾಧಿಸಹತ್ತಿದರು. ಉಹುದ ಯುದ್ಧದಲ್ಲಿ ಇವರು ಮುಸಲ್ಮಾನರ ವಿರೋಧಿಗಳಾಗಿದ್ದು, ಅವರ ವೈರಿಗಳಿಗೆ ಸಹಾಯ ಮಾಡಿದುದರಿಂದ ಇವರನ್ನು ಮದಿನಾಪಟ್ಟಣದಿಂದ ಹೊರಗೆ ಹಾಕಲಾಯಿತು. ಬನುಖುರೈಝಾ ಎಂಬುದು ಮತ್ತೊಂದು ಜ್ಯೂ ಜನರ ಪಂಗಡ. ಇವರು ಪೈಗಂಬರರಿಗೆ ವಿರೋಧಿಗಳಾಗಲು

1. ಕುರಾನ್: ೪೮ -I-೨

ಇವರನ್ನು ಕದನದಲ್ಲಿ ಸೋಲಿಸಿ. ಸಾದ್–ಬಿನ್–ಮುಆಝುನೆಂಬುವನು ಮೂರುನೂರು ಜನರನ್ನು ಕೊಂದು. ಅವರ ಆಸ್ತಿಯನ್ನೆಲ್ಲ ಕಸಿದುಕೊಂಡು. ಅವರ ಹೆಂಡಿರು ಮಕ್ಕಳನ್ನು ದಾಸರನ್ನಾಗಿ ಮಾಡಿದನು. ಖೈಬರ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದ ಜ್ಯೂ ಜನರು ಪೈಗಂಬರರ ವಿರುದ್ಧ ಮತ್ತೊಂದು ಯುದ್ಧವನ್ನು ಹೂಡಬೇಕೆಂದು ಮಕ್ಕೆಯ ಖುರೇಷ ಜನರ ಸಂಗಡ ಮತ್ತು ಮದೀನಾದ ಅಬ್ದುಲ್ಲಾ–ಬಿನ್–ಉಭಯ್ಯ ಘಟಘಾನ ಮೊದಲಾದವರ ಸಂಗಡ ಗುಪ್ತರೀತಿಯಿಂದ ವಿಚಾರ ವಿನಿಮಯ ನಡೆಸಿದರು. ಇದು ಪೈಗಂಬರರಿಗೆ ಗೊತ್ತಾಗಿ ಹಿಜರಿ ೬ನೆಯ ವರ್ಷ ಖೈಬರವನ್ನು ಮುತ್ತಿ ಜ್ಯೂಗಳನ್ನು ಸೋಲಿಸಿದರು. ಅವರು ತಮ್ಮ ಗಳಿಕೆಯಲ್ಲಿಯ ಅರ್ಧಭಾಗವನ್ನು ಕೊಟ್ಟು ಪೈಗಂಬರರ ಕ್ಷಮೆಯನ್ನು ಬೇಡಿದರು. ಪೈಗಂಬರರು ಅವರನ್ನು ಕ್ಷಮಿಸಿದರು. ಆಗರೆ ಜ್ಯೂ ಜನರ ಮುಖ್ಯಸ್ಥನಾದ ಹ್ಯಾರಿಸ ಎಂಬುವನ ಹೆಂಡತಿ ಜೈನಾಬ ಎಂಬುವಳು ಪೈಗಂಬರರಿಗೆ ವಿಷ ಹಾಕಿದಳು. ಆದುದರಿಂದ ಅವರನ್ನೆಲ್ಲ ಗಡಿಪಾರು ಮಾಡಿ. ಅವರ ಒಬ್ಬ ಪ್ರಮುಖನ ಮಗಳಾದ ಸಫಿಯಾ ಎಂಬವಳನ್ನು ಪೈಗಂಬರರು ಹೆಂಡತಿಯನ್ನಾಗಿ ಮಾಡಿಕೊಂಡರು. "ನಿಜವಾಗಿ ಇವರ ಬಾಯಿಂದ ದ್ವೇಷವೇ ಹೊರಬೀಳುತ್ತಿತ್ತು. ಇವರು ಹೃದಯದಲ್ಲಿ ಇದಕ್ಕೂ ಕೆಟ್ಟ ಪಾಪವನ್ನು ಅಡಗಿಸಿಕೊಂಡಿದ್ದರು"[1] ಎಂದು ಜ್ಯೂಜನರ ಬಗ್ಗೆ ಕುರಾನ್‌ದಲ್ಲಿ ಹೇಳಿದೆ.

ಪೈಗಂಬರರು ದೊಡ್ಡದೊಡ್ಡ ರಾಜರಿಗೆ ಪತ್ರಗಳನ್ನು ಬರೆದು ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕೆಂದು ಹೇಳಿದರು. ಇಜಿಪ್ತದ ರಾಜನಾದ ಮುಕೋವ್ರ ಕಾಸನು ಪೈಗಂಬರರ ರಾಯಭಾರಿಯನ್ನು ಮನ್ನಿಸಿ ಅವರಿಗೆ ಒಂದು ಕುದುರೆಯನ್ನೂ ಇಬ್ಬರು ದಾಸಿಯರನ್ನೂ ಕಾಣಿಕೆಯಾಗಿ ಕಳಿಸಿದನು. ಪೈಗಂಬರರು ಕುದುರೆಯನ್ನೂ ಮೇರಿಯೆಂಬ ದಾಸಿಯನ್ನೂ ತಾವು ಸ್ವೀಕರಿಸಿದರು. ಮತ್ತೊಬ್ಬ ದಾಸಿ ಕವಿಯಾದ ಹಸನನೆಂಬುವನಿಗೆ ಹೆಂಡತಿಯಾದಳು. ಪೈಗಂಬರರು ಕಳಿಸಿದ ಪತ್ರವನ್ನು ಇಜಿಪ್ತದಲ್ಲಿ ಇನ್ನೂ ಕಾಯ್ದಿಡಲಾಗಿದೆ. ಇದೇ ಪ್ರಕಾರ ರೋಮದ ಕೈಸರನಿಗೂ, ಪರ್ಶಿಯಾದ ಖುಸ್ರೂವಿಗೂ, ಅಬಿಸೀನಿಯಾದ ನೆಗೂಸನಿಗೂ ಪತ್ರಗಳನ್ನು ಬರೆದು ಇಸ್ಲಾಮ ಧರ್ಮವನ್ನು ಸ್ವೀಕರಿಸಲು ಹೇಳಿದರು. ಬಸರಾದ ಅಧಿಕಾರಿಯಾದ ಶುರಾಹ್ಬಿಲ್ ಬಿನ್ ಅಮ್ರು ಎಂಬುವನು ಪೈಗಂಬರರು ಕಳಿಸಿದ ಮನುಷ್ಯನನ್ನು ಕೊಂದು ಮುಸಲ್ಮಾನರ ವಿರುದ್ಧ ಯುದ್ಧ ಸಾರಿದನು. ಪೈಗಂಬರರು ಮೂರು ಸಾವಿರ ಸೈನ್ಯವನ್ನು ಕಳಿಸಿ ಅವನ ಪಾರುಪತ್ಯ ಮಾಡಿದರು.

ಮಕ್ಕೆಯ ಪೂರ್ವದಿಕ್ಕಿನಲ್ಲಿದ್ದ ಹುವಾಝಿನ ಎಂಬ ಅರಬರು ಮುಸಲ್ಮಾನರ ಮೇಲೆ ದಾಳಿಮಾಡುವ ವ್ಯವಸ್ಥೆಯನ್ನು ನಡೆಸಿರುವರೆಂಬ ಸುದ್ದಿ ಪೈಗಂಬರರಿಗೆ ತಲುಪಿತು. ಪೈಗಂಬರರು ಒಬ್ಬ ಅಧಿಕಾರಿಯನ್ನು ಕಳಿಸಿ ಪರಿಸ್ಥಿತಿಯನ್ನು ತಿಳಿದುಕೊಂಡು

---

1. ಕುರಾನ್: ೩ –೧೧೭

ಹನ್ನೆರಡು ಸಾವಿರ ಸೈನ್ಯವನ್ನು ತೆಗೆದುಕೊಂಡು ಹೋಗಿ ಹುನ್ನೈನ ಕೊಳ್ಳದಲ್ಲಿ ಗುಂಪುಗೂಡಿದ ಹುವಾಝಿನ ಜನರ ಮೇಲೆ ಹಿಜರಿ ಶಖ ೮ ಝಾಬಾದ ತಿಂಗಳಲ್ಲಿ ಬಿದ್ದು ನಿಕರದ ಕಾಳಗವಾಗಿ, ಅವರನ್ನು ಸೋಲಿಸಿದರು. ೨೪೦೦೦ ಕುರಿಗಳನ್ನು, ೪೦೦೦೦ ಔಂಸ ಬೆಳ್ಳಿಯನ್ನು, ೬೦೦೦ ಜನ ಖೈದಿಗಳನ್ನು ಮುಸಲ್ಮಾನರು ಕೈವಶಮಾಡಿಕೊಂಡರು. ಈ ವಿಜಯದಿಂದ ಮುಸಲ್ಮಾನರು ಬಲವಂತರಾದರು. ಪೈಗಂಬರರು ಈ ಯುದ್ಧದಲ್ಲಿ ದೊರೆತ ವಸ್ತುಗಳನ್ನು ಐದು ಪಾಲು ಮಾಡಿ ಒಂದನ್ನು ಸಾಮಾನ್ಯ ವಿನಿಯೋಗಕ್ಕಾಗಿ ಇಟ್ಟುಕೊಂಡು ಉಳಿದ ನಾಲ್ಕು ಪಾಲುಗಳನ್ನು ಮುಸಲ್ಮಾನರಲ್ಲಿ ಹಂಚಿಕೊಟ್ಟರು. ಮುಂದೆ ಒಂದೆರಡು ವರ್ಷಗಳಲ್ಲಿ ಅರಬರ ಪಂಗಡಗಳು ಒಂದರ ಹಿಂದೊಂದು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದವು. ಅರಬಸ್ತಾನದ ದೂರಪ್ರದೇಶಗಳಿಂದ ದೂತರು ಮದಿನಾ ಪಟ್ಟಣಕ್ಕೆ ಬಂದು ಪೈಗಂಬರರ ಒಡೆತನವನ್ನು ಒಪ್ಪಿಸಿಕೊಂಡು ಮಹಮ್ಮದೀಯ ಧರ್ಮಾನುಯಾಯಿಗಳಾಗಹತ್ತಿದರು. ಹಿಜರೀ ಶಕ ೧೦ ರ ಸುಮಾರಕ್ಕೆ ಅರಬಸ್ತಾನವೆಲ್ಲ ಮುಸಲ್ಮಾನಮಯವಾಯಿತು.

ಅರಬಸ್ತಾನದಲ್ಲೆಲ್ಲ ಒತ್ತರದಿಂದ ಹರಡಹತ್ತಿದ್ದ ಇಸ್ಲಾಂ ಧರ್ಮದ ಪ್ರಭಾವವನ್ನು ಕಂಡು ನೆರೆಯ ಕ್ರೈಸ್ತರಾಜ್ಯಗಳಾದ ಸಿರಿಯಾ ಪಾಲಿಸ್ತಾನ ಮೊದಲಾದವು ಅಂಜಿರುವುವೆಂದೂ, ಅವುಗಳನ್ನಾಳುತ್ತಿದ್ದ ರೋಮದ ಕೈಸರನು ದೊಡ್ಡ ಸೈನ್ಯವನ್ನು ಕೂಡಿಸಿ ಅರಬಸ್ತಾನದ ಮೇಲೆ ದಾಳಿ ಮಾಡುವ ಸಿದ್ಧತೆಯಲ್ಲಿರುವನೆಂದೂ, ಅರಬ ಸ್ತಾನದಲ್ಲಿರುವ ಕ್ರೈಸ್ತ ಜನಾಂಗ ಅವನನ್ನು ಅಂತರಂಗದಲ್ಲಿ ಕೂಡಿರುವರೆಂದೂ ಪೈಗಂಬರರಿಗೆ ತಿಳಿಯಿತು. ಸ್ವದೇಶವನ್ನು ರಕ್ಷಿಸಿಕೊಳ್ಳಬೇಕೆಂದು ಎಲ್ಲ ಅರಬರಿಗೆ ತಿಳಿಸಿ, ಅವರನ್ನು ಹುರುಪುಗೊಳಿಸಿ, ೩೦,೦೦೦ ಸೈನ್ಯವನ್ನು ಕೂಡಿಸಿ ಹಿಜರಿ ಶಕ ೯ನೆಯ ರಜಬ ತಿಂಗಳಲ್ಲಿ ಮದಿನಾ ಪಟ್ಟಣದಿಂದ ಹೊರಬಿದ್ದರು. ಮಾರ್ಗದಲ್ಲಿ ಹತ್ತಿರದ ಹಿಜರ ಎಂಬ ಸ್ಥಳದಲ್ಲಿ ಸಾಮೂದ ಎಂಬ ಜನರನ್ನು ದಂಡಿಸಿ. ದಮಸ್ಕ ಸದ ದಾರಿಯಲ್ಲಿರುವ ತಾಬೂಕ ಎಂಬಲ್ಲಿಗೆ ಮುಟ್ಟಿದರು. ಆಗ ಅಲ್ಲಿ ವಾಸಿಸುತ್ತಿದ್ದ ಘಸ್ಸಮ ಲಖಮ, ಜಝಮ ಮೊದಲಾದ ಜನರು ಧೈರ್ಯಗುಂದಿ ಪೈಗಂಬರರ ಸಂಗಡ ಒಪ್ಪಂದ ಮಾಡಿಕೊಂಡರು. ಕೈಸರನ ದಂಡು ಸಮೀಪದಲ್ಲಿ ಎಲ್ಲಿಯೂ ಕಾಣಲಿಲ್ಲ. ಅಲ್ಲಿ ವ್ಯವಸ್ಥೆಯನ್ನುಂಟುಮಾಡಿ ಪೈಗಂಬರರು ಹಿಂದಿರುಗಿದರು. ಅರಬಸ್ತಾನದಲ್ಲಿ ಎಲ್ಲ ಕಡೆಗೂ ಶಾಂತತೆಯುಂಟಾಗಿ, ಇಸ್ಲಾಂ ಅರಬಸ್ತಾನದ ಮುಖ್ಯ ಧರ್ಮವಾಗಿ "ಅಲ್ಲಾಹೋ ಅಕಬರ" (ದೇವರು ದೊಡ್ಡವನು) ಎಂಬ ಧ್ವನಿ ಸರ್ವತ್ರ ವ್ಯಾಪಿಸಿತು. ಹಿಜರಿ ಶಕ ೧೦ರಲ್ಲಿ ಪೈಗಂಬರರು ಮಕ್ಕಾಯಾತ್ರೆಗೆ ಸ್ವತಃ ಹೋದರು. ಆಗ ಮಕ್ಕೆಯಲ್ಲಿ ೧,೨೪,೦೦೦ ಜನರು ನೆರೆದಿದ್ದರು. ಪೈಗಂಬರರಿಗೆ ತಮ್ಮ ಅವತಾರ ಕಾರ್ಯ ಮುಗಿಯಿತೆಂದು ಅನ್ನಿಸಹತ್ತಿತಾದುದರಿಂದ ಮೀನಾ ಎಂಬ ಬಯಲಿನಲ್ಲಿ ಎಲ್ಲರನ್ನು ಕರೆಸಿ ತಾವು ಕುದುರೆಯ ಮೇಲೆ ಕುಳಿತುಕೊಂಡು. ತಾವು ಆಡಿದ ಪ್ರತಿಯೊಂದು ವಾಕ್ಯವೂ ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಸಾರುವ ವ್ಯವಸ್ಥೆ

ಮಾಡಿ, ಕಡೆಯ ಉಪದೇಶವನ್ನು ಮಾಡಿದರು. "ನಿಮ್ಮೆಲ್ಲರನ್ನು ನಾನು ಪುನಃ ಕಾಣುವ ಸಂಭವವಿಲ್ಲ. ಆದುದರಿಂದ ಲಕ್ಷ್ಯಗೊಟ್ಟು ಕೇಳಿರಿ. ಈ ಸ್ಥಾನ, ಈ ತಿಂಗಳು, ಈ ದಿವಸ, ನಿಮ್ಮೆಲ್ಲರಿಗೆ ಹೇಗೆ ಪವಿತ್ರವಾಗಿದೆಯೋ ಹಾಗೆ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ನಿಮ್ಮ ಶರೀರ, ಆಸ್ತಿ ಮತ್ತು ಮರ್ಯಾದೆಗಳು ಪವಿತ್ರವಾಗಿವೆ. ಇದನ್ನು ನೀವು ಇಲ್ಲಿ ಇಲ್ಲದವರಿಗೆ ತಿಳಿಸಬೇಕು. ನೀವು ಮಾಡಿದ ಕೃತಿಗಳ ವಿಚಾರಣೆಯನ್ನು ದೇವರು ಮಾಡುವನು. ಎಲ್ಲರೂ ದೇವರ ಮುಂದೆ ನಿಲ್ಲಲೇಬೇಕು. ಅಬ್ಬಸಬಿನ್ ಅಬ್ದುಲಾಹ ಮುತ್ತಾಲಿಬನೂ ಕೂಡ ವಿಚಾರಣೆಗೆ ನಿಲ್ಲಬೇಕು. ಅಜ್ಞಾನದಿಂದ ತಿಳಿಯದೆ, ನೀವು ಮಾಡಿದ ತಪ್ಪುಗಳನ್ನೆಲ್ಲ ದೇವರು ಕ್ಷಮಿಸಿರುವನು. ಈ ಹೊತ್ತು ಸೈತಾನನಿಗೆ ತನ್ನ ಸತ್ತೆ ಹೋಯಿತೆಂದು ನಿರಾಶೆಯಾಗಿರುವುದು. ನೀವು ಅವನಿಗೆ ಯಾವ ರೀತಿಯಿಂದಲೂ ಆಸ್ಪದ ಕೊಡಬೇಡಿರಿ. ನಿಮ್ಮ ಹೆಂಡಿರನ್ನೂ ದಾಸರನ್ನೂ ದಯೆಗಿಂದ ನಡೆಸಿಕೊಳ್ಳಿರಿ, ನಿಮ್ಮ ಹೆಂಡಿರಿಗೆ ನಿಮ್ಮ ಮೇಲೆ ಕೆಲವು ಹಕ್ಕುಗಳಿವೆ. ನೀವು ಅವರನ್ನು ಜೋಪಾನ ಮಾಡಲೇಬೇಕು. ನಿಮ್ಮ ದಾಸರನ್ನು ಮಕ್ಕಳಂತೆ ನೋಡಿರಿ. ಎಲ್ಲ ಮುಸಲ್ಮಾನರು ಒಂದೇ ಕುಟುಂಬದವರೆಂದು ತಿಳಿಯಿರಿ. ನೀವೆಲ್ಲರೂ ಸಮಾನರು. ನಿಮ್ಮಲ್ಲಿ ಹೆಚ್ಚು ಕಡಮೆ ಭೇದವಿರತಕ್ಕದಲ್ಲ" ಎಂಬುದು ಅವರ ಉಪದೇಶದ ಸಾರಾಂಶ. ಮಕ್ಕಾಯಾತ್ರೆಯಿಂದ ಮರಳಿ ಬಂದಮೇಲೆ ಪೈಗಂಬರರ ಪ್ರಕೃತಿ ಬರಬರುತ್ತ ಕ್ಷೀಣವಾಗಹತ್ತಿತು. ಹಿಜರಿ ಶಕ ೧೧ನೆಯ ಸಫರ ತಿಂಗಳ ಕೊನೆಯಲ್ಲಿ ಅವರು ಹಾಸಿಗೆಯನ್ನು ಹಿಡಿದರು. ಅವರ ಚಿಕ್ಕ ಹೆಂಡತಿಯಾದ ಬೇಬಿ ಆಯೇಷಾ ಅವರು ಶೂಶ್ರೂಷೆ ಮಾಡುತ್ತಿದ್ದಳು. ಬೇನೆ ಹೆಚ್ಚಾಗಿ ಸೋಮವಾರ ರಬಿ ಉಲ್ ಅವ್ವಲ ತಿಂಗಳ ಎರಡನೆಯ ದಿನ ತಮ್ಮ ವಯಸ್ಸಿನ ೬೩ನೆಯ ವರ್ಷ ಇಹಲೋಕದಿಂದ ತೆರಳಿದರು. ಅಬುಬಕರನು ಪ್ರಾರ್ಥನೆಗಾಗಿ ಮಸೀದಿಯಲ್ಲಿ ನೆರೆದ ಜನರಿಗೆ ಈ ಸುದ್ದಿಯನ್ನು ತಿಳಿಸಿದನು. ಅವರೆಲ್ಲರು ದುಃಖದಲ್ಲಿ ಮುಳುಗಿದರು.

ಪೈಗಂಬರರಿಗೆ ಹನ್ನೊಂದು ಜನ ಹೆಂಡಂದಿರಾಗಿದ್ದರು. ಅವರಲ್ಲಿ ಇಬ್ಬರು ಜೀವಿಸಿರುವಾಗ ತೀರಿಕೊಂಡಿದ್ದರು. ಅವರ ಮರಣ ಕಾಲದಲ್ಲಿ ಒಂಭತ್ತುಜನರು ಜೀವಿಸಿದ್ದರು. ಯುರೋಪದ ಪಂಡಿತರು ಪೈಗಂಬರರ ಮೇಲೆ ಮಾಡುವ ಆರೋಪಗಳಲ್ಲಿ ಅವರು ಬಹುಪತ್ನೀಕರಿದ್ದರೆಂಬುದೊಂದು. ಮುಸಲ್ಮಾನ ಪಂಡಿತರು ಆ ಕಾಲಮಾನಕ್ಕನುಸರಿಸಿ, ತಾವು ಕೈಗೊಂಡ ಮಹತ್ಕಾರ್ಯದ ಅನುಕೂಲತೆಗಾಗಿ, ನಿರಾಶ್ರಿತರಾದ ಹೆಂಗಸರನ್ನು ಇವರ ಇಚ್ಛೆಯ ಪ್ರಕಾರ ಸ್ವೀಕರಿಸಿರುವರು; ಕಾಮತೃಪ್ತಿಗಾಗಿ ಅಲ್ಲ; ಎಂದು ಹೇಳುವರು.

ಪೈಗಂಬರರು ತೀರಾ ಸಾದವೃತ್ತಿಯವರಿದ್ದರು. ತಮಗೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ತಾವೇ ಮಾಡುತ್ತಿದ್ದರು. ಕೆಲಸದ ಉಚ್ಚ ನೀಚ ಭೇದ ಮಾಡಬಾರದೆಂಬುದು ಇವರ ತತ್ವ. ಆಡುಗಳನ್ನು ಹಿಂಡುವುದು, ತಮ್ಮ ಅರಿವೆಗಳನ್ನು ಹೊಲಿದುಕೊಳ್ಳುವುದು, ತಮ್ಮ ಸ್ಥಳವನ್ನು ಉಡುಗುವುದು, ಒಂಟೆಯನ್ನು ಮೇಯಿಸುವುದು ಮೊದಲಾದ

ಎಲ್ಲ ಕೆಲಸಗಳನ್ನು ತಾವೇ ಮಾಡುತ್ತಿದ್ದರು. ಸಲಿಕೆ, ಗುದ್ದಲಿಯನ್ನು ಹಿಡಿದು ಮದಿನಾ ಪಟ್ಟಣದ ಕಂದಕವನ್ನು ಸಿದ್ಧಮಾಡಿದರು. ಆದುದರಿಂದ ಈ ಧರ್ಮದಲ್ಲಿ ಕೂಲಿಕಾರನೂ ರಾಜನೂ ಸಮಾನರು ಎಂದು ಈಗಲೂ ಗಣಿಸಲ್ಪಡುವರು. ಅವರು ಮಾತನಾಡುವಾಗ ಬಲು ಸಾವಕಾಶವಾಗಿ ಮಾತನಾಡುತ್ತಿದ್ದರು. ಊಟಕ್ಕೆ ಕುಳಿತಾಗ ನೀಡಿದ ಎಲ್ಲಾ ಪದಾರ್ಥಗಳನ್ನು ಸಂತೋಷದಿಂದ ತಿನ್ನುತ್ತಿದ್ದರು. ಉತ್ತುತ್ತಿ, ಗೋಧಿ, ಮಾಂಸ, ಹಾಲು, ಕಾಯಿಪಲ್ಲೆ, ಜೇನುತುಪ್ಪ ಇವು ಅವರ ಪ್ರೀತಿಯ ಆಹಾರ ಪದಾರ್ಥಗಳು. ಉಳ್ಳೆಗಡ್ಡಿ, ಅವರಿಗೆ ಸೇರುತ್ತಿದ್ದಿಲ್ಲ. ಸ್ವಚ್ಛತೆ ಅವರಿಗೆ ಯಾವಾಗಲೂ ಬೇಕಾಗುತ್ತಿತ್ತು. ಅವರ ಪೋಷಾಕು ತೀರ ಸಾದಾ ಇರುತ್ತಿತ್ತು. ಗಂಡಸರು ರೇಸಿಮೆಯ ವಸ್ತ್ರಗಳನ್ನು ಧರಿಸುವುದು ಅವರಿಗೆ ಸೇರುತ್ತಿದ್ದಿಲ್ಲ. ಅವರು ಆಭರಣಗಳನ್ನು ಧರಿಸುತ್ತಿದ್ದಿಲ್ಲ. ಇರುವ ಮನೆ ತೀರಾ ಸಾದಾ. ಅವರ ಮನೆಯಲ್ಲಿ ಅವರು ಮಲಗುವ ಮಂಚ ಮತ್ತು ನೀರಿನ ಹೂಜೆ ಇಷ್ಟೆ ಸಾಮಾನುಗಳಿರುತ್ತಿದ್ದವು. ದೊಡ್ಡ ದೊಡ್ಡ ಯುದ್ಧಗಳಲ್ಲಿ ವಿಜಯವನ್ನು ಸಂಪಾದಿಸಿ ಸಂಪೂರ್ಣ ಅರಬಸ್ತಾನದ ಒಡೆಯರಾದಾಗ ಅವರು ತಮ್ಮ ಇರುವಿಕೆಯನ್ನು ಅರಸರಿಗೆ ತಕ್ಕಂತೆ ಏರ್ಪಡಿಸಲಿಲ್ಲ. "ದಾರಿಕಾರನು ಮಧ್ಯಾಹ್ನದ ಬಿಸಿಲಿನಲ್ಲಿ ಗಿಡದ ನೆರಳಿನಲ್ಲಿ ವಿಶ್ರಮಿಸಿ ಮಾರ್ಗವನ್ನು ಸಾಗಿಸುವಂತೆ ನಮ್ಮ ಸಂಸಾರವಿರತಕ್ಕದ್ದು" ಎಂದು ಅವರು ಹೇಳುತ್ತಿದ್ದರು. ಇಹದ ವಸ್ತುಗಳು, ಸಮಪತ್ತು, ಶರೀರ ಸುಖ ಇವುಗಳ ಕಡೆಗೆ ಲಕ್ಷ್ಯವಿದ್ದಿಲ್ಲ. ಮಿತ್ರರನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅವರ ಸಂಗಡ ಯಾವಾಗಲೂ ಮುಗುಳುನಗೆಯಿಂದ ಮಾತನಾಡುತ್ತಿದ್ದರು. ಒಮ್ಮೊಮ್ಮೆ ಪ್ರೀತಿದ್ಯೋತಕವಾದ ಹಾಸ್ಯವನ್ನು ಮಾತಿನಲ್ಲಿ ಬೆರೆಸುತ್ತಿದ್ದರು. ಯಾರು ಕೂಡ ಮಾತಾಡುವಾಗಲೂ ತಾವು ದೊಡ್ಡವರೆಂಬ ಕಲ್ಪನೆ ಅವರಿಗೆ ಬರದಂತೆ ನಡೆಯುತ್ತಿದ್ದರು. ಸಣ್ಣಮಕ್ಕಳ ಮೇಲೆ ಅವರ ಪ್ರೀತಿ ಬಹಳ. ಸುಳ್ಳು ಸೇರುತ್ತಿದ್ದಿಲ್ಲ. ಕ್ಷಮಾಗುಣ ವರ್ಣನೀಯವಾಗಿತ್ತು. ಅನೇಕ ಪ್ರಸಂಗಗಳಲ್ಲಿ ಕಡುವೈರಿಗಳನ್ನು ಕೂಡ ಕ್ಷಮಿಸಿರುವರು. ನಿಷ್ಪಕ್ಷಪಾತತನದಿಂದ ನ್ಯಾಯವನ್ನು, ನಿರ್ಣಯಿಸುತ್ತಿದ್ದರು. "ಮಹಮ್ಮದನ ಮಗಳಾದ ಫಾತಿಮಾ ತುಡುಗು ಮಾಡಿದರೆ ಆಕೆಯ ಕೈಯನ್ನು ಕಡಿಸುವೆನು" ಎಂದು ಅಂದಿರುವರು. ಆಳುಗಳನ್ನು ಮನೆಯವರಂತೆ ನಡೆಸಿಕೊಳ್ಳುತ್ತಿದ್ದರು. ಅವರು ಯಾರಿಗೂ ಎಂದೂ ಬಿರುಸು ಮಾಡುತ್ತಿದ್ದಿಲ್ಲ. "ತಾಯಿಯ ಅಡಿಗಳಲ್ಲಿ ಸ್ವರ್ಗವಡಗಿದೆ" ಎಂದು ಆಗಾಗ ಹೇಳುತ್ತಿದ್ದರು.

ಪೈಗಂಬರರ ಪೂರ್ವದಲ್ಲಿ ಅರಬಸ್ತಾನ ತೀರ ಹೀನಾವಸ್ಥೆಯಲ್ಲಿತ್ತು. ಜನರಲ್ಲಿ ಐಕ್ಯವಿದ್ದಿಲ್ಲ. ನಿಜವಾದ ಧರ್ಮದ ಗುಟ್ಟು ಅವರಿಗೆ ತಿಳಿದಿದ್ದಿಲ್ಲ. ಅವರಲ್ಲಿ ಹೇಳಿಕೊಳ್ಳುವಂತಹ ಸಂಸ್ಕೃತಿಯಿದ್ದಿಲ್ಲ, ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳು ಗೊತ್ತಿದ್ದಿಲ್ಲ. ದೇಶದ ಪ್ರಾಕೃತ ಸ್ವರೂಪಕ್ಕನುಸರಿಸಿ ಅನ್ಯದೇಶಗಳ ಸಂಪರ್ಕವಿದ್ದಿಲ್ಲ. ಅಲ್ಲಲ್ಲಿ ವಾಸಿಸುವ ಅರಬರ ಗುಂಪುಗಳು ಸ್ವತಂತ್ರವಾಗಿದ್ದು, ತಮ್ಮತಮ್ಮೊಳಗೆ

ಹೊಡೆದಾಡುತ್ತಿದ್ದರು. ಇಂತಹ ಜನಾಂಗವನ್ನು ಉಚ್ಚಸ್ಥಾನಕ್ಕೆ ಒಯ್ದು, ಅವರಿಗೆ ಒಂದೇ ಧರ್ಮವನ್ನು ಬೋಧಿಸಿ. ಅವರಲ್ಲಿ ಐಕ್ಯವನ್ನುಂಟು ಮಾಡಿ, ನೆರೆಹೊರೆಯ ದೊಡ್ಡ ನಾಡುಗಳನ್ನು ಗೆದ್ದು, ಅಲ್ಲಿ ತಮ್ಮ ಸತ್ತೆಯನ್ನೂ ಸಂಸ್ಕೃತಿಯನ್ನೂ ನೆಲೆಗೊಳಿಸುವ ಶಕ್ತಿಯನ್ನೂ, ತಂದುಕೊಟ್ಟು ಜಗತ್ತಿನೊಳಗಿನ ಒಂದು ಬಲಾಢ್ಯ ಜನಾಂಗವನ್ನಾಗಿ ಮಾಡಿದುದೇ ಪೈಗಂಬರರ ಘನತೆಯನ್ನು ಘೋಷಿಸುವುದು.

ಇಸ್ಲಾಂ ಧರ್ಮದ ತತ್ವಗಳು

ಈ ಧರ್ಮಕ್ಕೆ ಕುರಾನದಲ್ಲಿ ಇಸ್ಲಾಂ ಎಂದು ಹೆಸರು.[1] ಇಸ್ಲಾಂ ಎಂದರೆ ಶಾಂತಿ. ಶಾಂತಿಯನ್ನುಂಟುಮಾಡುವ ಧರ್ಮ. ದೇವರಲ್ಲಿ ಅತುಲವಾದ ಶ್ರದ್ಧೆಯನ್ನಿಟ್ಟು ದೇವರ ಅಧೀನನಾಗಿರುವವನೂ, ದೇವನಿಂದ ನಿರ್ಮಿತವಾದ ಪ್ರಾಣಿಗಳಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡುವವನು ಮುಸಲ್ಮಾನನೆಂದೂ, ಈತನಿಗೆ ಯಾತರಿಂದಲೂ ದುಃಖವಾಗಲಿ ಭಯವಾಗಲಿ ಉಂಟಾಗಲಾರದೆಂದೂ ಕುರಾನ ಹೇಳುವುದು.[2] ಇಸ್ಲಾಂ ಧರ್ಮದ ಗುರಿ ಸ್ವರ್ಗ. ಅದಕ್ಕೆ ಶಾಂತಿಯ ನೆಲೆಯೆಂದು ಹೆಸರು. "ಅಲ್ಲಿ (ಸ್ವರ್ಗದಲ್ಲಿ) ಅವರು (ಸ್ವರ್ಗವಾಸಿಗಳು) ಬೇರೆ ಸಂಭಾಷಣೆಯನ್ನಾಗಲಿ ಬೇರೆ ಶಬ್ದಗಳನ್ನಾಗಲಿ ಕೇಳುವುದಿಲ್ಲ. ಕೇವಲ ಶಾಂತಿ ಶಾಂತಿ ಎಂಬ ಶಬ್ದಗಳನ್ನಷ್ಟೇ ಕೇಳುವರು."[3] ದೇವರಿಗೆ ಶಾಂತಿ ಮತ್ತು ರಕ್ಷಣೆಯ ಕರ್ತೃವೆಂದು ಕರೆಯುವರು. ಇಸ್ಲಾಂ ಧರ್ಮದ ತತ್ವಗಳು ತೀರ ಸುಲಭ ಮತ್ತು ಸಾಮಾನ್ಯರಿಗೂ ಅರಿಕೆ ಯಾಗುವಂತಹವಿವೆ. ಅವು :-

೧. ದೇವರಲ್ಲಿ ಅಚಲವಾದ ಶ್ರದ್ಧೆ : ಇಸ್ಲಾಂ ಏಕೇಶ್ವರೀ ಪಂಥ. ದೇವರು ಒಬ್ಬನೆ. ಆತನ ಹೊರತು ಬೇರೆ ದೇವರಿಲ್ಲ. ಹಜರತ ಮಹಮ್ಮದರು ದೇವರ ಆಜ್ಞೆಗಳನ್ನು ಭೂಮಿಯಲ್ಲಿ ಸಾರಿದವರು (ಲಾ ಇಲಾಹಾ ಇಲ್ಲಿಲ್ಲಾ ಮಹಮದ್ ದರ್ ರಸೂಲುಲ್ಲಾ). ದೇವರಿಗೆ 'ಅಲ್ಲಾ' ಎಂದು ಹೆಸರು. ದೇವರು ಎಲ್ಲವನ್ನೂ ಕೇಳಬಲ್ಲನು, ಎಲ್ಲವನ್ನೂ ನೋಡಬಲ್ಲನು, ಎಲ್ಲ ದುಃಖಗಳಿಂದ ಪಾರುಮಾಡಬಲ್ಲನು, ಉದಾರನೂ ಕಾರುಣ್ಯಮಯನೂ, ಎಲ್ಲ ತಪ್ಪುಗಳನ್ನು ಕ್ಷಮಿಸುವವನೂ, ದಯಾವಂತನೂ, ಯಾವಾಗಲೂ ಸಮೀಪದಲ್ಲಿರುವವನೂ, ಉತ್ತಮವಾದುದನ್ನು ಪ್ರೀತಿಸುವವನೂ, ಕೆಡುಕನ್ನು ತಿರಸ್ಕರಿಸುವವನೂ, ಮನುಷ್ಯರ ಕೃತಿಗಳ ಲೆಕ್ಕ ತೆಗೆದುಕೊಳ್ಳುವವನೂ ಆಗಿರುವನು. ಈತನ ಹೊರತು ಪೂಜೆಗೆ ಯಾರೂ ಅರ್ಹರಲ್ಲ. ಈತನು ದೃಶ್ಯಾದೃಶ್ಯ ವಸ್ತುಗಳನ್ನು ಬಲ್ಲವನು, ಕಲ್ಯಾಣಕಾರಕನೂ ಮತ್ತು ದಯಾಘನನು. ಅಲ್ಲಾವಿನ ಹೊರತು ಬೇರೆ ದೇವತೆಯಿಲ್ಲ. ಈತನು ರಾಜನು, ಪವಿತ್ರನು, ಶಾಂತಿಯ ಕರ್ತೃ, ರಕ್ಷಕನು, ಸರ್ವಶಕ್ತನು, ಎಲ್ಲ ಹಾನಿಯನ್ನು ತುಂಬಿಕೊಡುವನು, ಎಲ್ಲ ಘನತೆಯ

1. ಕುರಾನ್ : ೫:೫. 2 ಅದೇ ೨ : ೧೧೭. ೩. ಅದೇ ೫೬:೨೬.

ಆಗರನು, ಎಲ್ಲಿಕ್ಕೂ ಮಿಗಿಲಾದವನು. ಅಲ್ಲಾ ಎಲ್ಲ ವಸ್ತುಗಳನ್ನು ನಿರ್ಮಿಸಿದವನು. ಎಲ್ಲ ಸತ್ತತೆಯು ಕರ್ತೃ. ಆತನ ಗುಣಗಳು ಮನುಷ್ಯನ ಕಲ್ಪನೆಗೆ ಮೀರಿ ಉತ್ತಮವಾಗಿರುವುವು. ಭೂಮ್ಯಾಕಾಶಗಳಲ್ಲಿರುವ ಪ್ರತಿಯೊಂದು ವಸ್ತು ಆತನ ಘನತೆಯನ್ನೂ ಪೂರ್ಣತೆಯನ್ನೂ ಘೋಷಿಸುವುದು. ಆತನು ಬಲವಂತ, ಜ್ಞಾನವಂತ."[1]

೨. ಕುರಾನ ದೇವರ ವಾಕ್ಯವೆಂದು ನಂಬುವುದು :- ಕುರಾನ (ಅರಬೀ ಶಬ್ದ) ಪಠನ ಅಥವಾ ಪ್ರವಚನ, ಇಸ್ಲಾಮ ಧರ್ಮದ ಪವಿತ್ರ ಗ್ರಂಥ. ಮುಸಲ್ಮಾನರು ಇದು ಸಾಕ್ಷಾತ್ ದೇವರ ವಾಕ್ಯವೆಂದು ನಂಬುವರು. ಇದರಲ್ಲಿಯ ಸ್ವಲ್ಪ ಭಾಗವನ್ನು ಬಿಟ್ಟರೆ ಗ್ರಂಥವೆಲ್ಲ ದೇವರಿಂದಲೇ ಕಥಿತವಾಗಿದೆಯೆಂಬುದರ ದ್ಯೋತಕವಾಗಿ ವಾಕ್ಯಗಳೆಲ್ಲ ಪ್ರಥಮಪುರುಷದಲ್ಲಿವೆ. ಸ್ವರ್ಗದಲ್ಲಿ ಇದರ ಪ್ರತಿಯೊಂದುಂಟೆಂದೂ, ಅದರ ಭಾಗಗಳನ್ನು ದೇವದೂತನು ಕಾಲಕಾಲಕ್ಕೆ ಹಜರತ ಮಹಮ್ಮದರಿಗೆ ತಿಳಿಸಿದನೆಂದೂ ಈ ದೇವದೂತನ ಹೆಸರು "ಪವಿತ್ರಾತ್ಮ" ಅಥವಾ "ಗೇಬ್ರಿಯಿಲ್" ಎಂದಿರುವುದೆಂದೂ ಕುರಾನದಲ್ಲಿ ಹೇಳಿದೆ. ಇದರಲ್ಲಿಯ ಭಾಗಗಳಿಗೆ ಕುರಾನಪಠನ, ಅಥವಾ ಕಿತಾಬ-ಬರವಣಿಗೆ, ಅಥವಾ ಸೂರಾ-ಅಧ್ಯಾಯವೆಂದು ಕರೆಯುವರು. ಎಲ್ಲ ಸೂರಗಳು ಒಂದೇ ಪ್ರಮಾಣದಲ್ಲಿಲ್ಲ. ಕೆಲವು ತೀರ ದೊಡ್ಡವು. ಕೆಲವು ತೀರ ಸಣ್ಣವು ಆಗಿರುವುವು. ವಿಷಯವಾದರೂ ಕ್ರಮಬದ್ಧವಾಗಿರುವುದಿಲ್ಲ. ಎಲ್ಲ ವಿಷಯಗಳು ಇದರಲ್ಲಿ ಅಡಕವಾಗಿವೆ. ಪೈಗಂಬರರ ಆಯುಷ್ಯಮಾನದಲ್ಲಿ ಕುರಾನವನ್ನು ಬರೆಯಲಾಯಿತು. ಅವರ ತರುವಾಯ ಇದರ ಅಧ್ಯಾಯಗಳನ್ನು ಈಗಿನ ಕ್ರಮದಲ್ಲಿ ಕೂಡಿಸಲಾಯಿತು. ಪೈಗಂಬರರ ಮರಣಾನಂತರ ಅವರ ಅನುಯಾಯಿಗಳು ಬರೆದುಕೊಂಡ ಮತ್ತು ಅವರಿಗೆ ಮುಖಪಾಠವಾದ ಭಾಗಗಳನ್ನೆಲ್ಲ ಸಂಗ್ರಹಿಸಿ ಒಂದು ಪುಸ್ತಕವನ್ನು ಮಾಡಬೇಕೆಂದು ಅಬುಬಕರನು ಪೈಗಂಬರರ ಕಾರ್ಯದರ್ಶಿಯಾದ ಝೆಯದ ಇಬ್ನ ಥಾಬಿತ್ ಎಂಬವನಿಗೆ ಆಜ್ಞೆ ಮಾಡಿದನು. ಅದರಂತೆ ಝೆಯದನು ಗ್ರಂಥದ ಪ್ರತಿಗಳನ್ನು ಸಿದ್ಧಮಾಡಿದನು. ಅದರ ಒಂದು ಪ್ರತಿ ಉಮರನ ಕಡೆಗಿತ್ತು. ಅವನ ಮರಣದ ನಂತರ ಅದು ಅವನ ಮಗಳಾದ ಹಫ್‌ಷಾ ಎಂಬುವಳ ಕಡೆಗೆ ಉಳಿಯಿತು. ಮುಂದೆ ಉತ್ಥಮಾನನ ಆಳ್ವಿಕೆಯಲ್ಲಿ ಕುರಾನದ ವಾಕ್ಯಗಳ ಬಗ್ಗೆ ಸೈನ್ಯದಲ್ಲಿ ವಿವಾದವುಂಟಾದಾಗ ಖಲೀಫನು ಪುನಃ ಝೆಯದನನ್ನು ಕರೆದು ಖುರೇಷವಂಶದ ಮೂವರು ಪ್ರಮುಖರನ್ನು ಕೂಡಿಕೊಂಡು ಒಂದು ಪ್ರಮಾಣಬದ್ಧವಾದ ಕುರಾನವನ್ನು ಸಿದ್ಧಮಾಡಲು ಆಜ್ಞೆ ಮಾಡಿದನು. ಆ ಪ್ರಕಾರ ಝೆಯದನು ಪುನಃ ಸಿದ್ಧಮಾಡಿದ

---

1. ಕುರಾನ್ : ೫೯ : ೨೨-೨೪.

2. ಅದೇ ೪೩ : ೩ ; ೫೫ ; ೭೭ ; ೨೫ ; ೩೪. ೨೬ ; ೧೯೩ ; ೨೬ ; ೧೦೪ ; ೨ : ೯೭-೯೮.

ಗ್ರಂಥದ ಪ್ರತಿಗಳನ್ನು ಮಾಡಿಸಿ ಮುಸಲ್ಮಾನ ರಾಜ್ಯದ ಮುಖ್ಯಪಟ್ಟಣಗಳಿಗೆ ಅವನ್ನು ಕಳಿಸಿಕೊಡಲಾಯಿತು. ಹಫ್‌ಷಾನ ಹತ್ತಿರವಿದ್ದ ಪ್ರತಿಯೊಂದನ್ನುಳಿದು ಮೊದಲಿನ ಎಲ್ಲ ಪ್ರತಿಗಳನ್ನು ಸುಡಿಸಲಾಯಿತು. ಈಗ ಉಪಲಬ್ಧವಿದ್ದ ಕುರಾನ ಉತ್ಥಮಾನನ ಕಾಲದಲ್ಲಿ ತಯಾರು ಮಾಡಿದ ಗ್ರಂಥತ ಪ್ರತಿ. ಇದರಲ್ಲಿ ೧೧೪ ಸೂರಗಳಿವೆ. ಅವುಗಳಲ್ಲಿ ದೊಡ್ಡವು ಮೊದಲು, ಸಣ್ಣವು ಅನಂತರ, ಈ ಕ್ರಮದಲ್ಲಿ ಇವೆ. ಪ್ರತಿಯೊಂದು ಸೂರದ ಆದಿಯಲ್ಲಿ ಸೂರದ ಹೆಸರು, ಸ್ಥಳ, ಎಲ್ಲಿ ಪೈಗಂಬರರು ಸೂರವನ್ನು ಹೇಳಿದರೋ ಆ ಸ್ಥಳ – ಮಕ್ಕಾ ಅಥವಾ ಮದೀನಾ. ಆಯಾತ (ಪದ್ಯ)ಗಳ ಸಂಖ್ಯಾ ಮತ್ತು "ಪರಮ ಕರುಣಾಳೂ ದಯಾವಂತನಾದ ಹೆಸರಿನಲ್ಲಿ" (ಬಿಸ್ಮಿಲ್ಲಾ ಹರ್ ರಹಮನ್ ನಿರ್ ರಹೀಮ) ಎಂಬ ವಾಕ್ಯವೂ ಉಂಟು. ಕುರಾನದಲ್ಲಿಯ ಸುಮಾರು ೫೦೦ ಪದ್ಯಗಳನ್ನು ಪೈಗಂಬರರು ತೆಗೆದುಹಾಕಿರುವರೆಂದು ತಿಳಿಯುತ್ತದೆ.

ಕುರಾನದಲ್ಲಿ ಒಬ್ಬನೇ ದೇವರುಂಟೆಂದೂ ಆತನು ಸರ್ವಶಕ್ತನೂ ನೀತಿವಂತನೂ, ಆಗಿರುವನೆಂದು ಹೇಳಿದೆ. ಮೂರ್ತಿಪೂಜೆಯಾಗಲಿ ಮನುಷ್ಯರನ್ನು ದೇವರೆಂದು ಭಾವಿಸುವುದಾಗಲಿ ತಿರಸ್ಕೃತವಾಗಿದೆ. ಸ್ವರ್ಗದಲ್ಲಿಯ ಸುಖ ನರಕದಲ್ಲಿಯ ದುಃಖ ಇವನ್ನು ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಸ್ಪಷ್ಟವಾಗಿ ಬಣ್ಣಿಸಲಾಗಿದೆ. ವಿಶ್ವದ ಅಂತ್ಯಸಮೀಪಿಸಿದೆಯೆಂದೂ ಆಗ ಒಂದು ಕಡೆಯ ದಿವಸ ಎಲ್ಲರ ನ್ಯಾಯ ನಿರ್ಣಯವಾಗುವುದೆಂದು ಎಚ್ಚರ ಕೊಡಲಾಗಿದೆ. ನಂಬುಗೆಯುಳ್ಳವನು (ಮುಸಲ್ಮಾನ) ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ತಿಳಿಸಲಾಗಿದೆ. ಪ್ರಾರ್ಥನೆ, ಉಪವಾಸ. ದಾನ, ತೀರ್ಥಯಾತ್ರೆ ಮೊದಲಾದವುಗಳನ್ನು ಮಾಡಬೇಕೆಂದು ಹೇಳಿದೆ. ಮದುವೆ, ದಾಯಭಾಗ, ಸ್ತೇಯ, ಪ್ರಾಣಘಾತ ಮೊದಲಾದುವುಗಳ ಬಗ್ಗೆ ನಿಯಮಗಳಿವೆ. ಕುರಾನದಲ್ಲಿ ಮುಸಲ್ಮಾನರ ಜೀವಿತಕ್ಕೆ ಬೇಕಾಗುವ ಎಲ್ಲ ವಿಷಯಗಳ ಬಗ್ಗೆ ಹೇಳಿದೆಯೆಂದೂ, ಅದನ್ನು ತಪ್ಪದೆ ಪ್ರತಿಯೊಬ್ಬ ಮುಸಲ್ಮಾನನು ಪಾಲಿಸಬೇಕೆಂದೂ ಅಜ್ಞೆಯಿದೆ. ಪೈಗಂಬರರು ಈ ಭೂಮಿಯ ಮೇಲೆ ದೇವರ ಆಜ್ಞೆಗಳನ್ನು ಬೀರಿರುವರಾದ್ದರಿಂದ ಅವರ ಆಚರಣೆ ಅನುಕರಣೀಯ. ಮುಸಲ್ಮಾನರು ಪೈಗಂಬರರ ಚರಿತ್ರೆ ಪವಿತ್ರವೆಂದು ತಿಳಿಯಬೇಕು ಮತ್ತು ಅವರು ನಡೆದಂತೆ ನಡೆಯಬೇಕು.

೩. ಮರಣಾನಂತರ ಸ್ಥಿತಿ :– ಮುಸಲ್ಮಾನರು ಪುನರ್ಜನ್ಮವನ್ನು ಒಪ್ಪುವುದಿಲ್ಲ. ಆದುದರಿಂದ ಮೃತರು ಪುನಃ ಶರೀರಧಾರಿಗಳಾಗುವುದಿಲ್ಲ. ಅವರು ಕಡೆಯ ದಿವಸ ನ್ಯಾಯನಿರ್ಣಯವಾಗುವವರೆಗೆ ತಮ್ಮ ಕರ್ಮಗಳ ಫಲಗಳಿಗನುಸರಿಸಿ ಉಂಟಾದ ಸ್ಥಿತಿಯಲ್ಲಿರುವರು. ಇದಕ್ಕೆ ಬರ್ಜಾಖವೆಂದು ಹೆಸರು. ಮೃತನ ಜೀವನ ಮರಣಾನಂತರ

ಇಲ್ಲದಂತಾಗುವುದಿಲ್ಲ. ಅದು ಜೀವಿಸಿದ್ದಾಗಿನಂತೆ ಮುಂದೆ ಸಾಗುವುದು. ಆದರೆ ಆತ್ಮ ಪುಣ್ಯವನ್ನಾಗಲಿ, ಪಾಪವನ್ನಾಗಲಿ ಮಾಡಲು ಶಕ್ತವಿರುವುದಿಲ್ಲ. ಅದು ತನ್ನ ಶುದ್ಧತೆಯನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಲು ಶಕ್ತವಿರುವುದಿಲ್ಲ. "ಈ ಜನ್ಮದಲ್ಲಿ ಮನುಷ್ಯನು ಮಾಡುವ ಕರ್ಮಗಳ ಫಲವನ್ನು ಅವನ ಕೊರಳೊಳಗೆ ಕಟ್ಟಿದ್ದೇವೆ. ಅಪ್ರತ್ಯಕ್ಷವಾದ ಕರ್ಮಗಳನ್ನು ತೆರೆದ ಪುಸ್ತಕದ ರೂಪದಿಂದ ಪುನರುತ್ಥಾನ ಕಾಲದಲ್ಲಿ (Resurrection day) ಬೆಳಕಿಗೆ ತರುವೆವು."[1]

"ಈ ಜನ್ಮದಲ್ಲಿ ಯಾವನು ಕುರುಡನಾಗಿರುವನೋ ಅವನು ಮುಂದೆಯೂ ಕುರುಡನಾಗಿ ಉಳಿಯುವನು. ಅವನು ಮಾರ್ಗದಿಂದ ದೂರವಾಗಿ ಹೋಗುವನು"[2] "ವಿಶ್ರಾಂತಿಯಲ್ಲಿದ್ದ ಆತ್ಮವೇ! ನಿನ್ನ ಪ್ರಭುವಿನ ಸನ್ನಿಧಿಗೆ ಹೋಗು. ನಿನ್ನ ಬಗ್ಗೆ ಆತನಲ್ಲಿ ತುಷ್ಟಿಯುಂಟಾಗಿದೆ. ನಿನಗೆ ಆತನಲ್ಲಿ ಪ್ರೀತಿಯಿದೆ. ನನ್ನ ಸೇವಕರಲ್ಲಿ ಕೂಡು. ನನ್ನ ಸ್ವರ್ಗದಲ್ಲಿ ಪ್ರವೇಶ ಮಾಡು"[3] ಮುಸಲ್ಮಾನರು ಸ್ವರ್ಗ ನರಕಗಳ ಅಸ್ತಿತ್ವವನ್ನು ಒಪ್ಪುವರು. ಸಜ್ಜನರು ಸ್ವರ್ಗದಲ್ಲಿ ಸುಖವನ್ನೂ ದುರ್ಜನರು ನರಕದಲ್ಲಿ ದುಃಖವನ್ನೂ ಭೋಗಿಸುವರು. ಶರೀರದಿಂದ ಜೀವ ಬೇರೆಯಾಗಿರುವುದು. ಸ್ಥೂಲ ಶರೀರದಿಂದ ಜೀವ ಬೇರೆಯಾದ ಮೇಲೆ ಪ್ರಕಾಶಮಾನವಾದ ಅಥವಾ ಕಪ್ಪು ಬಣ್ಣದ ಶರೀರವನ್ನು ಧರಿಸಿ ತನ್ನ ಕರ್ಮಫಲವನ್ನು ಭೋಗಿಸಿ ಶುದ್ಧವಾಗುವುದು.

೪. ದೇವದೂತ ಮತ್ತು ಸೈತಾನ :- ದೇವರ ಮತ್ತು ಮಾನವರ ಮಧ್ಯದಲ್ಲಿ ಉಚ್ಚ ಮತ್ತು ನೀಚ ವ್ಯಕ್ತಿಗಳ ಅಸ್ತಿತ್ವವನ್ನು ಮುಸಲ್ಮಾನರು ಒಪ್ಪುವರು. ಉಚ್ಚ ವ್ಯಕ್ತಿಗಳಿಗೆ ಪವಿತ್ರಾತ್ಮರೆಂದೂ ನೀಚ ವ್ಯಕ್ತಿಗಳಿಗೆ ದೈತ್ಯ ಅಥವಾ ಸೈತಾನರೆಂದೂ ಹೆಸರು. ಪವಿತ್ರಾತ್ಮರು ಜನರನ್ನು ಸನ್ಮಾರ್ಗಕ್ಕೆ ಹಚ್ಚಿ ಸ್ವರ್ಗಕ್ಕೆ ಒಯ್ಯುವರು. ಇದಕ್ಕೆ ವಿರೋಧವಾಗಿ ಸೈತಾನರು ಜನರನ್ನು ದುರ್ಮಾರ್ಗಕ್ಕೆಳೆದು ನರಕಕ್ಕೆ ದೂಡುವರು.

೫. ಪ್ರಾರ್ಥನೆ : ಪ್ರಾರ್ಥನೆ ಹೃದಯವನ್ನು ಶುದ್ಧಮಾಡುವುದು. ಅದರಿಂದ ದೇವರ ಪ್ರೀತಿಯುಂಟಾಗುವುದು. ಆತ್ಮನು ಶುದ್ಧನಿದ್ದರೆ ಶಾಂತಿ ದೊರೆಯುವುದು. "ಪುಸ್ತಕದಲ್ಲಿ ಹೇಳಿದ ಪ್ರಾರ್ಥನೆಯನ್ನು ಪುನಃ ಪುನಃ ಪಠಿಸು. ಸತತ ದೇವರನ್ನು ಭಜಿಸು. ದೇವರ ಭಜನೆ ಮನುಷ್ಯನನ್ನು ಹೇಯವಾದ ಮತ್ತು ದುಷ್ಟವೃತ್ತಿಯಿಂದ ದೂರವಾಗಿಡುವನು. ಅಲ್ಲಾವಿನ ಘನತೆಯನ್ನು ಸಾರುವುದು ನಿಜವಾಗಿಯೂ

---

1. ಕುರಾನ್ ೧೭ : ೧೪ .

2. ಅದೇ ೧೭ : ೧೪.

3. ಅದೇ ೮೯ : ೨೭.

ದೊಡ್ಡದು"[1] ಮನುಷ್ಯನ ನೀತಿಯ ಆಚರಣೆಯನ್ನು ಪ್ರಾರ್ಥನೆ ಸರಿಪಡಿಸುವುದೆಂದು ಮುಸಲ್ಮಾನರ ನಂಬುಗೆ. ಈ ಪ್ರಾರ್ಥನೆಯನ್ನು ಶುದ್ಧ ಮನಸ್ಸಿನಿಂದ ಮತ್ತು ತಲ್ಲೀನತೆಯಿಂದ ಮಾಡಬೇಕು. "ಯಾರು ಕೇವಲ ತೋರಿಕೆಗಾಗಿ ಮನಸ್ಸಿಲ್ಲದೆ ಪ್ರಾರ್ಥನೆ ಮಾಡುವರೊ ಅವರಿಗೆ ಧಿಃಕಾರ"[2]

೬. ಉಪವಾಸ : ಉಪವಾಸದಿಂದ ಮನುಷ್ಯನಲ್ಲಿ ಶುದ್ಧಿಯುಂಟಾಗುವುದೆಂದೂ ಅದರಿಂದ ಪವಿತ್ರತೆ ಬೆಳೆಯುವುದೆಂದೂ ನಂಬುಗೆ. ಉಪವಾಸವೆಂದರೆ ಊಟಮಾಡುವುದನ್ನು ಬಿಡುವುದಷ್ಟೇ ಅಲ್ಲ, ಇಂದ್ರಿಯನಿಗ್ರಹ ಮಾಡುವುದು. ನೀನು ಉಪವಾಸ ಮಾಡಲೇಬೇಕು. ಅದರಿಂದ ಪಾಪದಿಂದ ದೂರವಾಗಿರುವೆ."[3]

೭. ತೀರ್ಥಯಾತ್ರೆ :– ಮಕ್ಕಾಯಾತ್ರೆ ಮಾಡುವುದು ಮುಸಲ್ಮಾನರ ಆಯುಷ್ಯದಲ್ಲಿ ಒಂದು ಮಹತ್ವದ ಕೆಲಸ. ಇದರಿಂದ ಆಧ್ಯಾತ್ಮಿಕ ಉನ್ನತಿಯಾಗುವುದೆಂದೂ ಪುಣ್ಯಬರುವುದೆಂದೂ ಅವರ ನಂಬುಗೆ. ಇಹಲೋಕದ ಸಂಬಂಧಗಳನ್ನು ಹರಿದೊಗೆದು ದೇವರಿಗೆ ಅನನ್ಯಭಾವದಿಂದ ಶರಣುಹೋಗಿ ಕಾಬಾದ ಪ್ರದಕ್ಷಿಣೆ ಮಾಡಿದವನು ದೇವರ ಮಹಿಮೆಯ ಜ್ಞಾನವನ್ನು ಮಾಡಿಕೊಂಡವನೆಂದು ಗಣಿಸಲ್ಪಡುವನು.

೮. ಇಸ್ಲಾಮು ಧರ್ಮದ ಅನುಯಾಯಿಗಳಲ್ಲಿ ಪರಸ್ಪರ ಬಾಂಧವ್ಯ :– ಮುಸಲ್ಮಾನರೆಲ್ಲ ಒಂದೇ ಕುಟುಂಬದವರೆಂದು ತಿಳಿಯತಕ್ಕದ್ದು. ಪ್ರತಿದಿವಸ ಕೂಲಿ ಮಾಡಿ ಹೊಟ್ಟೆ ತುಂಬಿಕೊಳ್ಳುವವನೂ ರಾಜನೂ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಸಮಾನರಾಗಿರುವರು. ಮುಸಲ್ಮಾನರಲ್ಲಿ ಉಚ್ಚನೀತಿಭೇದವನ್ನೆಣಿಸಕೂಡದು. "ಎಲೆ ಮಾನವರೇ, ನಿಮ್ಮೆಲ್ಲರನ್ನು – ಗಂಡಸರನ್ನು ಹೆಂಗಸರನ್ನು ನಾವೇ ನಿರ್ಮಿಸಿರುವೆವು. ನಿಮ್ಮೊಳಗೆ ಸಂಬಂಧ ಬೆಳೆಯಲೆಂದು ಕುಟುಂಬಗಳನ್ನೂ ಕುಲಗಳನ್ನೂ ನಾವೇ ಮಾಡಿರುವೆವು. ತನ್ನ ಕರ್ತವ್ಯ ಕರ್ಮವನ್ನು ಒಳ್ಳೆಯ ನಿಷ್ಠೆಯಿಂದ ಮಾಡುವವನು ಅಲ್ಲಾವಿನ ದೃಷ್ಟಿಯಲ್ಲಿ ನಿಮ್ಮೊಳಗೆ ಎಲ್ಲರಿಗೂ ಮಿಗಿಲಾದವನು."[4] ಈ ಧರ್ಮಬಾಂಧವ್ಯ ಇಸ್ಲಾಮುದ ಐಕ್ಯತೆಗೆ ಬಹಳವಾಗಿ ಕಾರಣವಾಗಿರುವುದು. ಸಮಾನತ್ವವನ್ನು ಮುಸ್ಲಲ್ಮಾನರು ಕೃತಿಯಲ್ಲಿ ತಂದಿರುವರು. ಪೈಗಂಬರರು ಸ್ವತಃ ಆಚರಿಸಿ ತಮ್ಮ ಅನುಯಾಯಿಗಳಿಗೆ ಮಾರ್ಗದರ್ಶಕರಾಗಿರುವರು. "ನಿಮ್ಮ ಆತ್ಮವನ್ನು ಪ್ರೀತಿಸುವಂತೆ ನಿಮ್ಮ ಧರ್ಮಬಂಧುಗಳನ್ನು ಪ್ರೀತಿಸದಿದ್ದರೆ ನೀವು ದೇವರನ್ನು ನಂಬಿದವರೆಂದು ಗಣಿಸಲಾಗುವುದಿಲ್ಲ" ಎಂದು ಅವರು ಒಂದೆಡೆ ಅಂದಿರುವರು.

---

1. ಕುರಾನ್ : ೨೯ : ೪೫

2. ಅದೇ ೧೦೭ : ೪–೬

3. ಅದೇ ೨ : ೧೮

4. ಕುರಾನ್ ೪೯ : ೧೩.

ವೃದ್ಧ ತಂದೆತಾಯಿಗಳನ್ನು ಗೌರವದಿಂದ ಕಾಣಬೇಕು. ಅಧಿಕಾರದಲ್ಲಿದ್ದ ಜನರ ಆಜ್ಞೆಯನ್ನು ಪಾಲಿಸಬೇಕು. "ಮತ್ತು ಅಲ್ಲಾವಿನ ಹೊರತು ಅನ್ಯದೇವರನ್ನು ಭಜಿಸಕೂಡದೆಂದೂ, ನಿಮ್ಮ ತಂದೆತಾಯಿಗಳಿಗೆ ಹಿತವನ್ನು ಮಾಡಬೇಕೆಂದೂ ಅವರು ಮುಪ್ಪಿನವರಾದಾಗ, ಉಫ್ ಎನ್ನದೆ, ಅವರಿಗೆ ತಿರಸ್ಕಾರ ಶಬ್ದವನ್ನುಚ್ಚರಿಸದೆ, ಅವರ ಸಂಗಡ ಪ್ರೀತಿಯಿಂದ ನಡೆದುಕೊಳ್ಳಬೇಕೆಂದೂ, ಪ್ರತಿದಿವಸ ಪ್ರಭುವೆ! ನಾನು ಚಿಕ್ಕವನಿರುವಾಗ ನನ್ನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಿದ ನನ್ನ ಮಾತಾಪಿತರಿಗೆ ಕರುಣೆಯನ್ನು ನೀಡು' ಎಂದು ಪ್ರಾರ್ಥಿಸಬೇಕೆಂದೂ ನಿಮ್ಮ ಪ್ರಭು ಆಜ್ಞೆ ಮಾಡಿರುವವನು"[1] ಅಲ್ಲಾವಿನ ಭಕ್ತಿಗೆ ವಿರೋಧಿಸದಿದ್ದರೆ ಹಿರಿಯರ ಮೇಲಿನ ಭಕ್ತಿ ಸರಿ. ವಿರೋಧ ಮಾಡುವ ಹಿರಿಯರನ್ನು ಮನ್ನಿಸಲಾಗದೆಂದು ಕುರಾನ್ ಹೇಳುವುದು. ಅಧಿಕಾರದಲ್ಲಿದ್ದವರೆಂದರೆ ರಾಜನು ಅಥವಾ ಅವನ ಪ್ರತಿನಿಧಿಗಳು. ಅವರ ಆಜ್ಞೆಯನ್ನು ಉಲ್ಲಂಘಿಸಿಕೂಡದೆಂದು ಕುರಾನದ ಆಜ್ಞೆ. ಅವರು ಎಂತಹವರಿರಬೇಕೆಂಬುದನ್ನು ಮೊದಲನೆಯ ಖಲೀಫನಾದ ಅಬುಬಕರನು ತಿಳಿಸಿರುವನು. "ನಿಮ್ಮಲ್ಲಿ ನಾನು ಎಲ್ಲರಿಗೂ ಮಿಗಿಲಾದವನಲ್ಲ. ಆದುದರಿಂದ ನಾನು ಮಾಡುವುದು ಸರಿಯಾಗಿದ್ದಾಗ ನೀವೆಲ್ಲರು ನನಗೆ ಸಹಾಯ ಮಾಡಿರಿ. ತಪ್ಪು ಮಾಡಿದಾಗ ತಿದ್ದಿರಿ. ಅಲ್ಲಾವಿನ ಮತ್ತು ಆತನ ರಸೂಲನ ಕಟ್ಟಳೆಗಳನ್ನು ನಾನು ಪಾಲಿಸುವವರೆಗೆ ನನ್ನ ಮಾತನ್ನು ಕೇಳಿರಿ. ತಪ್ಪಿದರೆ ನನ್ನ ಆಜ್ಞೆಯನ್ನು ಪಾಲಿಸತಕ್ಕದ್ದಲ್ಲ." ಸ್ವೇಚ್ಛಾಚಾರಿಂಹದ ರಾಜನಿಗೆ ಬುದ್ಧಿ ಹೇಳಿ ಹಾದಿಗೆ ತರುವುದು ಬಲು ಪುಣ್ಯದ ಕೆಲಸವೆಂದು ಪೈಗಂಬರರು ಒಂದೆಡೆ ಹೇಳಿರುವರು.

೯. ದಾನಧರ್ಮ ಮಾಡುವುದು :- ಪ್ರತಿಯೊಬ್ಬ ಶಕ್ತನಾದ ಮುಸಲ್ಮಾನನು ದಾನಧರ್ಮಕ್ಕಾಗಿ ತನ್ನ ಪ್ರಾಪ್ತಿಯಲ್ಲಿಯ ಕೆಲಭಾಗವನ್ನು ತೆಗೆದಿಡಬೇಕು. ಈ ಹಣವನ್ನು ಸರಕಾರ ಅಥವಾ ಇಮಾಮನು ವಸೂಲು ಮಾಡಿ ದಾನಧರ್ಮಕ್ಕಾಗಿ ಖರ್ಚುಮಾಡಬೇಕು. "ಬಡವರು ಗತಿಯಿಲ್ಲದವರು, ದೇವಭಕ್ತರು, ಸಾಧುಗಳು, ಫಕೀರರು, ದಾರಿಕಾರರು ಮೊದಲಾದವರಿಗೆ ಈ ಹಣದ ವಿನಿಯೋಗವಾಗಬೇಕು. ದಾಸರನ್ನು ದಾಸ್ಯದಿಂದ, ಸಾಲಗಾರರನ್ನು ಸಾಲದಿಂದ ಮುಕ್ತಮಾಡಲು ಇದನ್ನು ಉಪಯೋಗಿಸಿಕೊಳ್ಳಬಹುದು. ಇದರ ವ್ಯವಸ್ಥೆ ಮಾಡುವವರು ಸಂಬಳವನ್ನು ಇದರೊಳಗಿಂದ ಕೊಡಬಹುದು."[2] ನಮಾಜ (ಪ್ರಾರ್ಥನೆ) ಮಾಡುವುದು ಪ್ರತಿಯೊಬ್ಬ ಮುಸಲ್ಮಾನನಿಗೆ ಹೇಗೆ ಅಗತ್ಯವಾದುದೋ ಹಾಗೆ ದಾನಧರ್ಮ ಮಾಡುವುದು ಕೂಡ ಅಗತ್ಯವಾದುದೆಂದೂ ಅದಕ್ಕಾಗಿ ತನ್ನ ಪ್ರಾಪ್ತಿಯೊಳಗಿಂದ ಕೆಲಭಾಗವನ್ನು ತೆಗೆದಿಡಲೇಬೇಕೆಂದೂ ಕುರಾನದ ಕಟ್ಟಪ್ಪಣೆಯಿದೆ. ಇದರಿಂದ ಮುಸಲ್ಮಾನ ಸಮಾಜದ ಕಟ್ಟುಭದ್ರವಾಗಲು ಬಹಳ ಅನುಕೂಲವಾಗಿದೆ.

---

1. ಅದೇ ೧೭ : ೨೩-೨೪ 2.. ಕುರಾನ್: ೯:೬೦

ಮುಸಲ್ಮಾನ ಧರ್ಮದಲ್ಲಿ ನೈತಿಕ ಆಚರಣೆಗೆ ಬಹಳ ಮಹತ್ವ ಕೊಡಲಾಗಿದೆ. ಪ್ರಪಂಚವನ್ನು ತ್ಯಜಿಸಿ ಸನ್ಯಾಸಿಯಾಗಿ ಪಾರಮಾರ್ಥವನ್ನು ದೊರಕಿಸುವುದು ಮುಸಲ್ಮಾನ ಧರ್ಮದಲ್ಲಿ ಹೇಳಿಲ್ಲ. ಮನುಷ್ಯರು ಶುದ್ಧರಾಗಬೇಕು; ದೇವರ ಭಕ್ತರಾಗಬೇಕು. ಸ್ವತಃ ವೃತ್ತಿಯನ್ನು ಕಲ್ಪಿಸಿಕೊಂಡು, ಸಂಪಾದಿಸಿದುದರಲ್ಲಿ ಕೆಲಭಾಗವನ್ನು ಧರ್ಮಕ್ಕಾಗಿ ಖರ್ಚುಮಾಡಲು ಶಕ್ತರಾಗಬೇಕು. ವಿನೀತರಾಗಿರಬೇಕು, ಆದರೆ ನಿರಭಿಮಾನಿಗಳಾಗಿರ ಕೂಡದು. ಕ್ಷಮಾಗುಣವಿರಬೇಕು, ಆದರೆ ಅದರಿಂದ ಸಮಾಜಕ್ಕೆ ಅಪಾಯ ಸಂಭವಿಸದಂತಿರಬೇಕು, ಅಂದರೆ ಸನ್ಮಾರ್ಗಕ್ಕೆ ತರಲು ಸಾಧ್ಯವಿಲ್ಲದ ದುರ್ಜನರನ್ನು ದಂಡಿಸಲೇಬೇಕು. ಪ್ರತಿಯೊಬ್ಬರು ತಮ್ಮ ಹಕ್ಕುಗಳನ್ನು ಕಾಯ್ದುಕೊಳ್ಳಲುಬೇಕು. ಪರರ ಹಕ್ಕುಗಳಿಗೆ ಬಾಧೆ ತರಬಾರದು. ಇಸ್ಲಾಮ ಧರ್ಮವನ್ನು ಬೋಧಿಸಿ ಪ್ರಸಾರ ಮಾಡಬೇಕು. ಇವೇ ಮೊದಲಾದವು ಮಹಮ್ಮದೀಯ ಮತದ ತತ್ವಗಳು.

ಉಪಸಂಹಾರ

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಸಿದ ಪ್ರಮುಖ ಧರ್ಮಗಳ ಉಗಮ, ಇತಿಹಾಸ, ಸಾಹಿತ್ಯ, ತತ್ತ್ವಗಳನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಯಿತು. ಮೊದಲು ಇಲ್ಲಿ ಕಾಲೂರಿದುದು ವೈದಿಕ ಧರ್ಮ. ಮುಂದೆ ಅದರಲ್ಲಿ ಮಾರ್ಪಾಟಾಗಿ ಹಿಂದೂಧರ್ಮವಾದಾಗ ಅದರ ಶಾಖೆಗಳೆಲ್ಲ ಇಲ್ಲಿ ಉಂಟಾದವು. ಮುಂದೆ ಜೈನ ಬೌದ್ಧ ಮತಗಳುದ್ಭವಿಸಿದಾಗ ಅವನ್ನೂ ಕನ್ನಡಿಗರು ಬರಮಾಡಿಕೊಂಡು, ಸಾಕಿ ಸಲಹಿದರು. ಸಾವಿರಾರು ವರುಷ ಇಲ್ಲಿ ಶೈವರು, ವೈಷ್ಣವರು, ಜೈನರು, ಬೌದ್ಧರು ಮೊದಲಾದವರು ಸುಖದಿಂದ ಶಾಂತಿಯಿಂದ ಪರಸ್ಪರ ಪ್ರೇಮದಿಂದ ಬಾಳಿದರು. ಮುಂದೆ ಮಹಮ್ಮದೀಯ ಮತವೂ ಕ್ರೈಸ್ತಮತವೂ ಇಲ್ಲಿಗೆ ಬಂದು, ಆಶ್ರಯವನ್ನು ಹೊಂದಿ, ಕನ್ನಡಿಗರೊಡನೆ ಬೆರೆತುಹೋಗಿರುವುವು. ಇದು ಕನ್ನಡ ನಾಡಿನ ವೈಶಿಷ್ಟ್ಯ.

ವೈದಿಕ ಧರ್ಮ ಇಲ್ಲಿ ಕಾಲಿಡುವುದಕ್ಕೂ ಮೊದಲು ಇಲ್ಲಿ ಜನವಸತಿಯಿದ್ದು ನಿವಾಸಿಗಳು ದ್ರಾವಿಡ ವಂಶಕ್ಕೆ ಸೇರಿದ್ದರೆಂದೂ ಅವರಲ್ಲಿ ಧರ್ಮ ಸಮಾಜವ್ಯವಸ್ಥೆ ಮೊದಲಾದವುಗಳಿದ್ದವೆಂದೂ ಅವರ ಸಂಸ್ಕೃತಿ ಉಚ್ಚವರ್ಗಕ್ಕೆ ಸೇರಿತ್ತೆಂದೂ ಆರ್ಯರು ಅವರಿಂದ ಅನೇಕ ವಿಷಯುಗಳನ್ನು ಕಲಿತಿರುವರೆಂದೂ ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಕನ್ನಡ ನಾಡಿನಲ್ಲಿ ಈಗಲೂ ಅಲ್ಲಲ್ಲಿ ಪ್ರಚಾರದಲ್ಲಿರುವ ನಾಗಪೂಜೆ, ಭೂತಗಳ ಆರಾಧನೆ, ಅಮ್ಮಗಳ ಅಥವಾ ಗ್ರಾಮದೇವತೆಯ ಪೂಜೆ ಮೊದಲಾದವು ದ್ರಾವಿಡರ ಕುರುಹುಗಳಾಗಿವೆ. ಶೈವ ವೈಷ್ಣವ ಮತಗಳಲ್ಲಿ ದ್ರಾವಿಡರ ಅನೇಕ ವಿಷಯಗಳು ಅಡಕವಾಗಿವೆ. ಆಚಾರ ವಿಚಾರಗಳಲ್ಲಿ ಪರಸ್ಪರ ಸಂಪರ್ಕದಲ್ಲಿ, ಭಾಷೆಯಲ್ಲಿ, ವೇಷದಲ್ಲಿ ಕನ್ನಡಿಗರೆಲ್ಲರು ಒಂದಾಗಿ, ಇದು ಆರ್ಯರದು ಇದು ಇತರರದು ಎಂದು ವಿಂಗಡಿಸಲು ಬಾರದಷ್ಟು ಬೆರಕೆಯಾಗಿರುವರು.

ಬೇರೆಬೇರೆ ಧರ್ಮಗಳ ಅನುಯಾಯಿಗಳು ಇಲ್ಲಿಗೆ ಬಂದು ನೆಲಸಿ ಇಲ್ಲಿಯ ಜನರೊಡನೆ ಬೆರೆತು, ಪರಸ್ಪರ ಬಳಕೆ ಹೆಚ್ಚಾದಂತೆ ಅವರವರ ಆಚಾರ ವಿಚಾರಗಳಲ್ಲಿ ಮಾರ್ಪಾಟಾಗುವುದು ಸ್ವಾಭಾವಿಕ. ಎಲ್ಲ ಧರ್ಮಗಳು ಒಂದೆಡೆ ಕಲೆತು ಬಹುಕಾಲವಿದ್ದುದರಿಂದ ಒಂದು ವಿಶಿಷ್ಟವಾದ ಭಾವನೆ ಜನರ ಮೇಲಾಗಿ, ಪರಧರ್ಮಗಳ ಶ್ರೇಷ್ಠವಾದ ಆಚಾರ ವಿಚಾರಗಳು ಸರ್ವಸಾಮಾನ್ಯವಾಗಿ, ಪರಸ್ಪರ ಧರ್ಮ ತತ್ತ್ವಗಳನ್ನು ಅರಿತು, ಪರಧರ್ಮಸಹಿಷ್ಣುತೆ ಬೆಳೆಯಲು ಅನುಕೂಲವಾಗುವುದು. ಅತಿ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಸರ್ವಧರ್ಮ ಸಮದೃಷ್ಟಿಯೂ ವಿಶ್ವಬಾಂಧವ್ಯವೂ

ಒಡೆದು ಕಾಣುವುವು. ಪರಧರ್ಮದಲ್ಲಿ ಮತ್ಸರವಿಲ್ಲದಿರುವುದೂ ಪರಧರ್ಮದವರನ್ನು ಪ್ರೇಮವಿಶ್ವಾಸಗಳಿಂದ ಕಾಣುವುದೂ ಇಲ್ಲಿಯ ಜನರ ಹುಟ್ಟುಗುಣವಾಗಿದೆ. ಈ ಉದಾರವಾದ ಭಾವನೆ ಅಲ್ಲಿ ನೂರಾರು ವರ್ಷಗಳಿಂದ ಬಾಳಿ ಬೆಳಗುತ್ತ ಬಂದಿರುವುದು. ಇದು ಕರ್ನಾಟಕ ಧರ್ಮದ ವೈಶಿಷ್ಟ್ಯ.

ಕನ್ನಡನಾಡನ್ನಾಳಿದ ದೊರೆಗಳಿಗೂ ಕನ್ನಡನಾಡಿನಲ್ಲಿ ಬಾಳಿದ ಜನರಿಗೂ ಧರ್ಮಗಳ ಈ ಗುಟ್ಟು ಮನವರಿಕೆಯಾಗಿತ್ತೆಂದು ತೋರಿಸಲು ಕನ್ನಡನಾಡಿನ ಶಾಸನಗಳಲ್ಲಿ ವಿಪುಲವಾಗಿ ಆಧಾರಗಳು ದೊರೆಯುತ್ತವೆ. ಕದಂಬರು ವೈದಿಕ ಧರ್ಮಾನುಯಾಯಿಗಳು. ಈ ವಂಶದ ಮೃಗೇಶವರ್ಮನು ಜೈನಧರ್ಮಕ್ಕೆ ಸಹಾಯ ಮಾಡಿರವನು.[1] ರಾಷ್ಟ್ರಕೂಟ ವಂಶದ ಮೊದಲನೆಯ ಅಮೋಘವರ್ಷನು ಜೈನ ಧರ್ಮಾನುಯಾಯಿ, ಆದರೂ ಲಕ್ಷ್ಮೀದೇವಿಯ ಭಕ್ತನು.[2] ಸೌಂದತ್ತಿಯ ರಟ್ಟರು ಪರಧರ್ಮ ಸಹಿಷ್ಣುತೆಗೆ ಆದರ್ಶಪ್ರಾಯರಾಗಿರುವರು. ಇವರು ಜೈನ ಮತ್ತು ವೈದಿಕ ಮತಗಳಲ್ಲಿ ಭೇದವನ್ನೆಣಿಸುತ್ತಿದ್ದಿಲ್ಲ.[3] ಚಾಲುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನ

---

1. Ind, Antiquary, Vol. VII p.37. Dr. Fleet : The Dynasties of Kanarese Districts : Bombay Gazetter, Vol. I Part II p. 288.

೨. ಸರ್ಪ್ಪಂ ಪಾತುಮಸೌ ವಡೌ ನಿಜತನುಂ ಜೀಮೂತಕೇತೋಸ್ಸುತಃ
ಶ್ಯೇನಾಯಾಥ ಶಿಬಿಃ ಕಪೋತ ಪರಿರಕ್ಷಾರ್ಥಂ ದಧೀಚೇರ್ಥಿನೇ
ತೇಪ್ಯೇಕೇಕಮತರ್ಪ್ಪಯನ್ ಕಿಲಮ ಮಹಾಲಕ್ಷ್ಮೈ ಸ್ವವಾಮಾಂಗುಲಿಮ್
ಲೋಕೋಪದ್ರವ ಶಾಂತಯೇಸ್ಮ ದದತಿ ಶ್ರೀ ಶ್ರೀ ವೀರಾನಾರಾಯಣಃ

Epi-Ind. Vol. XVIII, pp.248. Sanjana plates of Amoghavarsha I. lines 50-51.

3. The Journal of the Bombay Branch Royal Asiatic Society VOl. X Art. XVI. pp. 167-298. Inscriptions relating to the Ratta Chieftains of Saundatti and Belgaum. Bombay Gazetter Vol. I Part II. pp. 549-558.

ಕೈದಾಳದ ಬಾಚಿಯ ಬಗ್ಗೆ ಇದೇ ಭಾವ ವ್ಯಕ್ತವಾಗಿದೆ. ಕೆಳಗಿನ ಪದ್ಯಗಳನ್ನು ನೋಡಬೇಕು :

ಸೊಗಯಿಪ ಕಾಮಧೇನು ಜಿನಶಾಸನ ಲಕ್ಷ್ಮಿಗೆ ಕಲ್ಪಭೂರುಹಂ
ಮೃಗಧರ ಭೂಷಣಾಗಮತಪಸ್ವಿಗೆ ಸಿದ್ಧರಸ ಪ್ರವಾಹಮೇಂ
ನೆಗೆದುದು ಬದ್ಧ ಕೋಟಿಗೆನೆ ಚಿಂತಸದೀವ ಮಹಾಂಶು ರತ್ನವಾ
ನಗಧರನಾಗಮುಜ್ಜರಿಗವೆಂಬಿರದೊಡೆ ಬಾಚಿಯಿದೇಂ ಕೃತಾರ್ಥನೋ
ಧರೆಗೆಸವ ನಾಲ್ಕು ಸಮಯದ । ಸಿರಿಕಳಾವನಿರುಹಂ ಬುಧಜನಕೆ (ಮೆಂದೊಡೆ)
ದೊರೆವೆತ್ತ ಪೆಂಪಿನಿಂದಂ । ಪಿರಿಯ – ಧರ್ಮಾವತಾರ ಗಂಗನಪುತ್ರಂ
E - i. Carn XII Tumkur 9 lines 64-67

ಅಕ್ಕ. ಅಕ್ಕಾದೇವಿ ಜಿನಬುದ್ಧ ಅನಾತರುದ್ರರನ್ನು ಪೂಜಿಸುತ್ತಿದ್ದಳು.[1] ಹರಿಹರ, ಕಮಲಾಕ್ಷ, ವೀತರಾಗ, ಬುದ್ಧರಿಗಾಗಿ ಗುಡಿಗಳನ್ನು ಕಟ್ಟಿಸಿದ ಉಲ್ಲೇಖಿನ ಒಂದು ಶಾಸನದಲ್ಲಿ ಇದೆ.[2] ಶಿವ, ಧಾತೃ ಸುಗತ, ವಿಷ್ಣು, ಜಿನ, (ಶಿವಾಯ ಧಾತ್ರೀಸುಗ ತಾಯ ವಿಷತೀನನಾಯ ತಸ್ಮೈಸಕಾಳಾತ್ಮನೆನಮಃ) ಇವರೆಲ್ಲರೂ ಒಬ್ಬನೇ ದೇವರ ಬೇರೆ ಬೇರೆ ಹೆಸರುಗಳೆಂಬ ಭಾವ ಕೈದಾಳದ ಶಾಸನದಲ್ಲಿ ಧ್ವನಿತವಾಗಿದೆ.[3] ಬೇಲೂರ ಚನ್ನಕೇಶವನ ಗುಡಿಯಲ್ಲಿಯ ಒಂದು ಶಾಸನದಲ್ಲಿ ಒಬ್ಬನೇ ದೇವರನ್ನು ಬೇರೆ ಬೇರೆ ಮತದವರು ಬೇರೆ ಬೇರೆ ಹೆಸರಿನಿಂದ ಕರೆಯುವರೆಂದು ಸ್ಪಷ್ಟವಾಗಿ ಹೇಳಿದೆ.[4] ನಿಷ್ಠಾವಂತ ಜೈನನಾದ ಹೊಯ್ಸಳ ಗೋಯಿದಿ ಸೆಟ್ಟಿಯೆಂಬಾತನು ಕ್ರಿ.ಶ. ೧೧೮೦ರಲ್ಲಿ ಶಿವಧರ್ಮದ ಪ್ರವಚನಗಳನ್ನು ಕೇಳಿ ಮಂಡಲಿಯ ಸಿದ್ಧೇಶ್ವರನ ಪೂಜೆಗೋಸುಗ

---

1. Ind. Ant Vol. XVII p. 275.

[ಸಾಮಂತ ಬಾಚೆಯ ಬಗ್ಗೆ ಇವೇ ಭಾವನೆ ಕೆಳಗಿನ ಪದ್ಯದಲ್ಲಿ ವ್ಯಕ್ತವಾಗಿದೆ.]

ಜಿನಪತಿ ಕೂರ್ತುಬೇಳ್ದ ಸುಖಸಂಪದಮಂ ಹರನೊಲ್ದು ಕೀರ್ತಿಯಂ
ಕನಕಸರೋದ್ಭವಂ ವರಚಿರಾಯುವನಿಂಬಿನಲೀಪಗಳಚ್ಯುತಂ
ಮನಮೊಸೆದೊಪ್ಪುತಿರ್ಪ ಸಿರಿಯಂ ವರಬುದ್ಧಜಯಾಭಿವೃದ್ಧಿಯಂ
ಮನಸಿಜರೂಪ ಬಾಚಿ ನಿನಗೀಗೆ ಶಶಾಂಕ ಕುಳಾದ್ರಿಯುಳ್ಳಿನಂ

Epi-Carn, XII. Tumkur 9 lines 10-12

2. Epi-Carn. VII. Shikaripur 100. Also compare the following :-

ಉದ್ಧರಿಸಿ ಜೈನಭವನವ। ನುದ್ಧರಿಸಿ ಶಿವಾಲಯಂಗಳಂ ಮುದದಿಂದ ॥
ನ್ನುದ್ಧರಿಸಿ ವಿಷ್ಣುಗೇಹಮ। ನುದ್ಧರಿಸಿದೆನಲ್ತೆ ಬಾಚಿ ಜಸದುನ್ನತಿಯಿಂ ॥

Epi-carn.XII, Tumkur 9,line 63

೩. ಜಯಂತಿ ಯಸ್ಯಾ ವದತೋಪಿ ಭಾರತೀ ।
ವಿಭೂತಯಸ್ತೀರ್ಥ ಕೈ ತೋಪಿ ನೈಹ್ರೀತೇ ॥
ಶಿವಾಯ ಧಾತ್ರೇ ಸುಗತಾಯ ವಿಷ್ಣವೇ ।
ಜಿನಾಯ ತಸ್ಮೈ ಸಕಳಾತ್ಮನೇ ನಮಃ

Epi.Carn.XII Tm.9.II. 1-2

೪. ಯಂ ಶೈವಾಃ ಸಮುಲಾತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಂಶ್ಚೇತಿಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೋ ವಿಧಧಾತು ವಾಂಛಿತಫಲಂ ಶ್ರೀ ಕೇಶವಃ ಸರ್ವದಾ

Epi. Carn. V. Belur 3

ಭೂಮಿಯನ್ನು ದಾನ ಮಾಡಿದನು.[1] ನಾಗರಖಂಡದ ಐದು ಅಗ್ರಹಾರಗಳ ಬ್ರಾಹ್ಮಣರು, ಅಧಿಕಾರಿಗಳು, ಮಹಾಜನರು, ನಾಗರಿಕರ ಪ್ರತಿನಿಧಿಗಳು, ಒಕ್ಕಲಿಗರು, ಎಲ್ಲರೂ ಕೂಡಿ ಬದನಿಕೆಯ ಶಾಂತಿನಾಥ ದೇವರ ಪೂಜೆಗಾಗಿ ದತ್ತಿಯನ್ನು ಬಿಟ್ಟರು.[2] ಒಮ್ಮೊಮ್ಮೆ ಧಾರ್ಮಿಕ ಕಲಹಗಳು ತಲೆಯೆತ್ತುತ್ತಿದ್ದವು. ವೈದಿಕ ಧರ್ಮದವರಿಗೂ ಜೈನರಿಗೂ, ವೈದಿಕ ಧರ್ಮದಲ್ಲಿ ಶೈವರಿಗೂ ವೈಷ್ಣವರಿಗೂ ಜಗಳಗಳಾಗುತ್ತಿದ್ದವೆಂಬುದು ನಿಜ. ಆದರೆ ಅವು ತೀರ ವಿಕೋಪಕ್ಕೆ ಹೋಗುತ್ತಿದ್ದಿಲ್ಲ. ರಾಜನಾಗಲಿ ಹಿರಿಯರಾಗಲಿ ಪಕ್ಷಪಾತವಿಲ್ಲದೆ, ಎರಡೂ ಪಂಗಡದವರಿಗೆ ಬುದ್ಧಿಹೇಳಿ ಕೂಡಿಕೊಂಡಿರುವುದು, ಸುಖಕರವೆಂಬುದನ್ನು ಅವರಲ್ಲಿ ಬಿಂಬಿಸಿ, ಕಲಹವನ್ನು ನಂದಿಸುತ್ತಿದರು. ಇಂತಹ ಉದಾಹರಣೆಗಳು ಕನ್ನಡ ನಾಡಿನ ಇತಿಹಾಸದಲ್ಲಿ ವಿಪುಲವಾಗಿ ದೊರೆಯುವುವು. ಹರಿಹರದೊಳಗಿನ ಹರಿಹರೇಶ್ವರ ದೇವಾಲಯ ಶಿವ ಮತ್ತು ವಿಷ್ಣು ಇವರಲ್ಲಿರುವ ಭೇದವನ್ನು ತೆಗೆದುಹಾಕಿ ಶೈವ ವೈಷ್ಣವರನ್ನು ಒಂದುಗೂಡಿಸಲು ಮಾಡಿದ ಯತ್ನದ ಹೆಗ್ಗುರುತು. ಕ್ರಿ.ಶ. ೧೩೬೮ರಲ್ಲಿ ವೈಷ್ಣವರಿಗೂ ಜೈನರಿಗೂ ಜಗಳವುಂಟಾದಾಗ ವಿಜಯನಗರದ ಮೊದಲನೆಯ ವೀರಬುಕ್ಕರಾಯನು ವೈಷ್ಣವದರ್ಶನಕ್ಕೆಯೂ ಜೈನದರ್ಶನಕ್ಕೆಯೂ ಭೇದವಿಲ್ಲವೆಂದು ವೈಷ್ಣವರ ಕೈಯಲ್ಲಿ ಜೈನರ ಕೈವಿಡಿದುಕೊಟ್ಟು ಈ ಜೈನದರ್ಶನಕ್ಕೆ ಪೂರ್ವಮರ್ಯಾದೆಯು ಪಂಚಮಹಾಶಬ್ದಗಳು ಕಲಶಗಳು ಸಲ್ಲುವುದು. ಜೈನ ದರ್ಶನಕ್ಕೆ ಬಕ್ತರ ದೆಶೆಯಿಂದ ಹಾನಿ ವೃದ್ಧಿಯಾದರೂ ವೈಷ್ಣವರ ಹಾನಿ ವೃದ್ಧಿಯಾಗಿ ಪಾಲಿಸುವರು. "ಈ ಮರ್ಯಾದೆಯು ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವಷ್ಟು ಪಾಲಿಸುವರು"[3] ಎಂದು ವಿಧಿಸಿದನು. ರಾಜನು ಸ್ವತಃ ವೈದಿಕ ಧರ್ಮದವನಿದ್ದರೂ ಅಲ್ಪಸಂಖ್ಯಾತರ ಪಕ್ಷವಿದ್ದು, ಎಲ್ಲ ಧರ್ಮದವರೂ ಕೂಡಿಕೊಂಡಿರುವುದು ದೇಶಕ್ಕೆ ಹಿತಕರವೆಂಬ ಪಾಠವನ್ನು ನಮ್ಮೆಲ್ಲರಿಗೆ ಹಾಕಿಕೊಟ್ಟಿರುವನು. ಕ್ರಿ.ಶ. ೧೬೩೮ರಲ್ಲಿ ಹುಟ್ಟಿದ ಹಳೇಬೀಡದ ಒಂದು ಗುಡಿಯಲ್ಲಿರುವ ಶಾಸನದಲ್ಲಿ ಜೈನರೂ ವೀರಶೈವರೂ ಸಖ್ಯದಿಂದಿರಬೇಕೆಂದೂ ಜೈನಧರ್ಮಕ್ಕುಂಟಾದ ವಿಘ್ನ ಶಿವಧರ್ಮಕ್ಕಾದ ವಿಘ್ನವೆಂದು ಸ್ಪಷ್ಟಮಾಡಲಾಗಿದೆ. ಅದರಲ್ಲಿ "ಈ ಜಿನ ಧರ್ಮಕ್ಕೆ ಆವನಾನ್ ಓರ್ವನು ವಿಘ್ನವ ಮಾಡಿದರೆ ಆತನು ತಮ್ಮ ಮಹಾ ಮತ್ತಪದವ ಕೂಡಿದವನು ಅಲ್ಲ. ಶೀವದ್ರೋಹಿ, ಜಂಗಮದ್ರೋಹಿ, ವಿಭೂತಿ ರುದ್ರಾಕ್ಷಿಗೆ ತಪ್ಪಿದವನು. ಕಾಶಿ ರಾಮೇಶ್ವರಾದಿ ತೀರ್ಥಂಗಳ ಲಿಂಗಕ್ಕೆ ತಪ್ಪಿದರು. ಈ ಮಹಾಮತ್ತನ ಒಪಿತ"[4] ಎಂದಿದೆ.

---

1. Epi. Carn. VII. Shikaripur 50
2. Epi. Carn. VII. Shikaripur 225
3. Epi. Carn. VII. Sravanabelgola 334
4. Epi. Carn. VII. Belur 128

ಕರ್ನಾಟಕದಲ್ಲಿ ಮುಸಲ್ಮಾನ ಧರ್ಮ ಪ್ರವೇಶಿಸಿ ಬೆಳೆಯಹತ್ತಿದ ನಂತರ ಹಿಂದೂ ಜನರು ಅದನ್ನು ಕೂಡ ಸ್ವಾಗತಿಸಿ ಅವರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟ ಉದಾಹರಣೆಗಳು ಅನೇಕ ಈ ನಾಡಿನ ಇತಿಹಾಸದಲ್ಲಿ ದೊರೆಯುವುವು. ವಿಜಯನಗರದ ದೊರೆಗಳು ತಮ್ಮ ಮುಸಲ್ಮಾನ ಪ್ರಜೆಗಳಿಗೆ ಗೌರವ ತೋರಿಸುವುದ ಕ್ಕೋಸ್ಕರ ತಮ್ಮ ಸಿಂಹಾಸನದ ಹತ್ತಿರ ಕುರಾನದ ಪ್ರತಿಯನ್ನು ಇಡುತ್ತಿದ್ದರಂತೆ. ಬಹುಮನೀ ರಾಜ್ಯವನ್ನು ಕ್ರಿ.ಶ. ೧೩೪೭ರಲ್ಲಿ ಸ್ಥಾಪಿಸಿದ ಹಸನ ಜಾಫರಖಾನನೆಂಬವನು ತನ್ನ ಒಡೆಯನಾಗಿದ್ದ ಗಂಗೂ ಬ್ರಾಹ್ಮಣನಿಗೆ ತನ್ನ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಹಸನ ಗಂಗೂ ಬಹುಮನಿ ಎಂದು ತನ್ನ ಹೆಸರೊಡನೆ ಅವನ ಹೆಸರನ್ನು ಜೋಡಿಸಿದುದಲ್ಲದೆ ತನ್ನ ವಂಶಕ್ಕೆ ಬಹುಮನಿ (ಬ್ರಾಹ್ಮಣೀ) ವಂಶವೆಂದು ಹೆಸರಿಟ್ಟನೆಂದು ಮುಸಲ್ಮಾನ ಇತಿಹಾಸಕಾರನಾದ ಫೆರಿಸ್ತಾನು ಹೇಳುತ್ತಾನೆ. ವಿಜಯನಗರದ ರಾಮರಾಯನೂ ಆತನ ರಾಣಿಯೂ ತಮ್ಮ ಮಗು ಕ್ರಿ.ಶ. ೧೫೪೯ರ ಸುಮಾರಕ್ಕೆ ತೀರಿಕೊಂಡ ಮೇಲೆ ವಿಜಾಪುರದ ಸುಲ್ತಾನ ಆದಿಲಷಹನನ್ನು ತಮ್ಮ ಮಗನನ್ನಾಗಿ ಮಾಡಿಕೊಂಡಿದ್ದರಂತೆ[1]. ಅನೇಕ ಮುಸಲ್ಮಾನ ಧರ್ಮದ ಸಾಧುಗಳು (ಪೀರರು) ಹಿಂದೂಧರ್ಮದ ಸ್ವಾಮಿಗಳು ಪರಸ್ಪರ ಪ್ರೇಮದಿಂದ ಮತ್ತು ಸಖ್ಯದಿಂದ ನಡೆಯುತ್ತಿದ್ದರೆಂಬ ಚಿಹ್ನೆಗಳು ಈಗಲೂ ಸಿರಹಟ್ಟಿಯ ಫಕೀರ ಸ್ವಾಮಿಗಳ ಮತ್ತು ಸಾಗುವಳಿಗೆಯ ಶಿವಲಿಂಗೇಶ್ವರ ಸ್ವಾಮಿಗಳ ಮಠಗಳಲ್ಲಿ ಕಂಡುಬರುವುವು. ಶಿಶುನಾಳ ಶರೀಫಸಾಹೇಬನ ಅನುಭವದ ಪದಗಳು ಉತ್ತರಕರ್ನಾಟಕದಲ್ಲಿ ಬಹುಜನರಿಗೆ ಮುಖಪಾಠವಾಗಿವೆ. ಈತನನ್ನು ಉತ್ತರ ಹಿಂದೂಸ್ತಾನದಲ್ಲಿ ರಾಮ ರಹಿಮರಿಗೆ ಭೇದವಿಲ್ಲೆಂದು ಸಾರಿ ಹಿಂದೂ ಮುಸಲ್ಮಾನರಲ್ಲಿ ಐಕ್ಯತೆಯನ್ನುಂಟು ಮಾಡಲು ಯತ್ನಿಸಿದ ಮಹಾನುಭಾವ ಕಬೀರನಿಗೆ ಹೋಲಿಸಬಹುದು.

ಮಹಮ್ಮದೀಯ ಧರ್ಮದವರು ನಿರಾಕಾರನಾದ ಒಬ್ಬನೇ ದೇವರಿರುವನೆಂದೂ ಆತನ ಸ್ವರೂಪವನ್ನು ಸೂಚಿಸುವುದು ಸಾಧ್ಯವಿಲ್ಲೆಂದೂ ಮೂರ್ತಿಗಳಿಂದ ಆತನನ್ನು ರೂಪಿಸಲಾಗದೆಂದೂ, ಆತನನ್ನು ಅನನ್ಯಭಾವದಿಂದ ಭಜಿಸಿ ಆತನಿಗೆ ಶರಣಾಗತನಾಗಿ, ಮನುಷ್ಯನು ಸುಖಪಡೆಯುವನೆಂದು ನಂಬುವರು. ದೇವರ ಅಸ್ತಿತ್ವವನ್ನು ಒಪ್ಪಿಕೊಳ್ಳದ ಜೈನ ಬೌದ್ಧರು ಆತ್ಮನ ಅಸ್ತಿತ್ವವನ್ನು ಒಪ್ಪಿಕೊಂಡು ದುಃಖಮಯವಾದ ಸಂಸಾರದಿಂದ ಕರ್ಮದ ಬಂಧನದಿಂದ ಬಿಡುಗಡೆಯಾಗಬೇಕೆಂಬ ಧ್ಯೇಯವನ್ನಿಟ್ಟುಕೊಂಡಿರುವರು. ವೈದಿಕ ಧರ್ಮಾನುಯಾಯಿಗಳು ಸರ್ವಜ್ಞನೂ ಸರ್ವಶಕ್ತನೂ, ಸರ್ವಕರ್ತಾರನೂ, ಸರ್ವಾತೀತನೂ, ಸರ್ವಾಂತರ್ಯಾಮಿಯೂ, ಸರ್ವವ್ಯಾಪಕನೂ, ನಾಮರೂಪ ರಹಿತನೂ, ಇಂದ್ರಿಯಗಳಿಗೆ ಅಗಮ್ಯನೂ, ಅಗೋಚರನೂ ಆದ ಪರಬ್ರಹ್ಮನೊಬ್ಬನೇ

1. Ferista : The Rise of the Mohamedan Power: Vol.III P.118

ದೇವರೆಂದೂ, ಅವನೇ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನೆಂದೂ, ಆತನನ್ನು ಅನನ್ಯ ಭಾವದಿಂದ ಭಜಿಸಿ ಮಾನವನು ಸಂಸಾರದಿಂದ ಮುಕ್ತನಾಗುವನೆಂದೂ ನಂಬುವರು.

ವೈದಿಕ ಧರ್ಮದ ತಿರುಳು ತಿಳಿಯದ ಪರಕೀಯರು ಹಿಂದುಗಳು ಅನೇಕ ದೇವತೆಗಳನ್ನು ಪೂಜಿಸುವರೆಂದು ಆರೋಪಿಸುವರು. ಹಿಂದೂ ಪುರಾಣಗಳಲ್ಲಿ ಬಹಳ ದೇವತೆಗಳ ಪ್ರಶಸ್ತಿಯಿದೆಯಾದರೂ ಎಲ್ಲ ದೇವತೆಗಳು ಒಬ್ಬನೇ ದೇವರ ಸ್ವರೂಪಗಳೆಂಬ ಭಾವನೆ ಅತಿ ಪ್ರಾಚೀನಕಾಲದಿಂದ ರೂಢವಾಗಿದೆ. ಮಾನವ ಜನಾಂಗದ ಇತಿಹಾಸದಲ್ಲಿ ಆದಿಗ್ರಂಥವೆಂದು ಎಲ್ಲ ಧರ್ಮದ ವಿದ್ವಾಂಸರಿಂದ ಗಣಿಸಲ್ಪಡುವ ಋಗ್ವೇದದಲ್ಲಿ ಇಂದ್ರ, ವರುಣ, ಅಗ್ನಿ ಮೊದಲಾದ ದೇವತೆಗಳ ಪ್ರಶಸ್ತಿ ಪ್ರತ್ಯೇಕವಾಗಿದ್ದರೂ ಅವರೆಲ್ಲರೂ ಒಬ್ಬನೇ ದೇವರ ಬೇರೆ ಬೇರೆ ಸ್ವರೂಪದ್ಯೋತಕವಾದ ಹೆಸರುಗಳೆಂಬ ಭಾವ :

“ಇಂದ್ರ ಮಿತ್ರಂ ವರುಣಗ್ನಿ ಮಾಹರಥೋ ದಿವ್ಯಃ ಸ ಸುಪರ್ಣೋ ಗಮರುತ್ಮಾನ್
ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿ ಯಮಂ ಮಾತರಿಶ್ವಾ ನಮಾಹುಃ ॥[1]

ಎಂಬ ಮಂತ್ರದಲ್ಲಿ ಸ್ಪಷ್ಟವಾಗಿ ಒಡೆದುಮೂಡಿದೆ. ಈ ಹಿಂದೂಧರ್ಮದ ಗುಟ್ಟನ್ನು ಅರಿತು ಅದರಂತೆ ನಡೆದವರು ಕನ್ನಡನಾಡಿನ ಹಿರಿಯರು. ಈ ಅಮೂಲ್ಯವಾದ ಸಂಸ್ಕೃತಿಯನ್ನು ಮುಂದಿನವರಾದ ನಾವು ಮರೆಯಕೂಡದೆಂದು “ಯಂಶೈವಾಃ ಸಮುಪಾಸತೇ ಶಿವ ಇತಿ....”[2] ಎಂದು ಶಿಲಾನಿಕ್ಷಿಪ್ತಾಕ್ಷರಗಳಲ್ಲಿ ಬರೆದಿಟ್ಟಿರುವರು. ಕನ್ನಡಿಗರು ಇದನ್ನು ಗಮನಿಸಿ ಭರತಖಂಡದಲ್ಲೆಲ್ಲ ತಮ್ಮ ಹಿರಿಯರ ದಿವ್ಯ ತತ್ವವನ್ನು ಬೀರಿ, ವಿಶ್ವಬಾಂಧವ್ಯದ ಶ್ರೇಯಸ್ಸಿಗೆ ಪಾತ್ರರಾಗಲಿ.

---

1. ಋಗ್ವೇದ ಮಂಡಲ ೧ ಸೂಕ್ತ ೧೬೪ ಮಂತ್ರ ೪೬
2. ಪುಟ ೩೦೫ರ ಟಿಪ್ಪಣಿ ೨ನ್ನು ನೋಡಬೇಕು. Epi Carn. V. Belur 3 ಶಾಸನದಲ್ಲಿಯ ಪದ್ಯ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ
ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು
ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ
ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ
ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.
ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ
ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ
ಪ್ರಾಥಮಿಕ ಆಶಯ.

ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ
ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ
ಆರಾಧನೆ ಮಾಡುತ್ತಿದ್ದೇವೆಂದು ಭಾವಿಸುವುದರ
ಜೊತೆಗೆ ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ
ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು
ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮